ಬುಧವಾರ, ಏಪ್ರಿಲ್ 5, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 94 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಪೇಸ್ ಮೇಕರ್‌ಗೆ ಬೇಕಾದ ಬ್ಯಾಟರಿಯ ಶಕ್ತಿಗೆ ದೇಹದ ರಕ್ತವೇ ಮೂಲವಾಗಬಲ್ಲದಂತೆ!



ಆಳ-ಅಗಲ
ತೀವ್ರ ಹೃದಯಾಘಾತಕ್ಕೂ ಕೋವಿಡ್‌ಗೂ ಸಂಬಂಧವಿದೆಯೇ?

ಉತ್ತರ, ದಕ್ಷಿಣ ಒಳನಾಡಿನಲ್ಲಿ ಮಳೆ? 5

ಕೋವಿಡ್: ಸಕ್ರಿಯ ಪ್ರಕರಣಗಳ ಸಂಖ್ಯೆ 21,179ಕ್ಕೆ ಏರಿಕೆ 11

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹61,800 (ಬೆಂಗಳೂರು) ▲	₹73,600 (ಬೆಂಗಳೂರು) ▲

ಬಂಡಾಯ ಭಯ: ಪಟ್ಟಿ ವಿಳಂಬ

ವಿಧಾನಸಭೆ ಚುನಾವಣೆ ಅಧಿಸೂಚನೆಗೆ ದಿನಗಣನೆ ಆರಂಭವಾಗಿದ್ದು, ಅಭ್ಯರ್ಥಿಗಳ ಆಯ್ಕೆಗೆ ಕೊನೆ ಕ್ಷಣದ ಕಸರತ್ತು ಪ್ರಮುಖ ಮೂರು ಪಕ್ಷಗಳಲ್ಲಿ ಬಿರುಸುಗೊಂಡಿದೆ. ಮೊದಲ ಪಟ್ಟಿ ಪ್ರಕಟಿಸಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು, ಎರಡನೇ ಪಟ್ಟಿಗೆ ತಯಾರಿ ನಡೆಸಿದ್ದಾರಾದರೂ ಬಿಡುಗಡೆಯ ಧೈರ್ಯ ತೋರುತ್ತಿಲ್ಲ. ಮೊದಲ ಪಟ್ಟಿ ಸಿದ್ಧಪಡಿಸುವಲ್ಲಿ ಬಿಜೆಪಿ ಸಕ್ರಿಯವಾಗಿದೆ. ಪಟ್ಟಿ ಪ್ರಕಟಗೊಂಡರೆ ಟಿಕೆಟ್ ಸಿಗದಿದ್ದವರು ಅನ್ಯಪಕ್ಷಗಳಿಗೆ ಜಿಗಿಯಬಹುದು ಅಥವಾ ಬಂಡಾಯ ಭುಗಿಲೇಳಬಹುದೆಂಬ ಭಯ ಮೂರೂ ಪಕ್ಷದವರನ್ನು ಕಾಡತೊಡಗಿದೆ. ಹೀಗಾಗಿ, ಪಟ್ಟಿ ವಿಳಂಬವಾಗುವ ಸಾಧ್ಯತೆ ಇದೆ

ಬಿಜೆಪಿ:100ಕ್ಕೂ ಹೆಚ್ಚು ಕ್ಷೇತ್ರಗಳ ಪಟ್ಟಿ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ರಾಜ್ಯ ಚುನಾವಣಾ ಸಮಿತಿಯ ಮೊದಲ ದಿನದ ಸಭೆಯಲ್ಲಿ 100ಕ್ಕೂ ಹೆಚ್ಚು ಕ್ಷೇತ್ರಗಳ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿದ್ದು, ಬುಧವಾರ ಸಂಜೆಯ ವೇಳೆಗೆ 224 ಕ್ಷೇತ್ರಗಳ ಪಟ್ಟಿ ಪೂರ್ಣಗೊಳ್ಳಲಿದೆ.

ಕೆಲವು ಕ್ಷೇತ್ರಗಳನ್ನು ಬಿಟ್ಟು ಉಳಿದೆಲ್ಲ ಕ್ಷೇತ್ರಗಳಿಗೂ ತಲಾ ಎರಡು ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. 224 ಕ್ಷೇತ್ರಗಳ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಬುಧವಾರ ರಾತ್ರಿಯೇ ದೆಹಲಿಗೆ ಕಳುಹಿಸಲಾಗುವುದು. ಇದೇ 8ರಂದು ಮೊದಲ ಪಟ್ಟಿ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಈ ಬಾರಿ ಎರಡು ಅಥವಾ ಮೂರು ಕಂತುಗಳಲ್ಲಿ ಅಭ್ಯರ್ಥಿ ಪಟ್ಟಿ ಬಿಡುಗಡೆ ಮಾಡಬಹುದು ಎಂದು ಮೂಲಗಳು ಹೇಳಿವೆ.

ನಗರದ ಹೊರ ವಲಯದಲ್ಲಿರುವ ಗೋಲ್ಡನ್ ಪಾಮ್ ರೆಸಾರ್ಟ್‌ನಲ್ಲಿ ಈ ಸಭೆ ನಡೆಯಿತು. ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಮನ್ಸುಖ್ ಮಾಂಡವಿಯಾ, ಪ್ರಲ್ಹಾದ ಜೋಶಿ, ಅಣ್ಣಾಮಲೈ ಭಾಗವಹಿಸಿದ್ದರು.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಕಾಂಗ್ರೆಸ್: ಎರಡನೇ ಪಟ್ಟಿಗೆ ಇಲ್ಲ ಒಮ್ಮತ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ 99 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲು ಕಾಂಗ್ರೆಸ್ ನಾಯಕರು ದಿನವಿಡೀ ಕಸರತ್ತು ನಡೆಸಿದರು. ಕೆಲವು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಹಿರಿಯ ನಾಯಕರು ಒಮ್ಮತಕ್ಕೆ ಬಾರದ ಕಾರಣ ಕಗ್ಗಂಟು ಮುಂದುವರಿದಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸಭೆ (ಸಿಇಸಿ) ಮಂಗಳವಾರ ಸುಮಾರು ನಾಲ್ಕೂವರೆ ಗಂಟೆ ನಡೆಯಿತು.

ಆಕಾಂಕ್ಷಿಗಳ ಒಂದೇ ಹೆಸರು ಇರುವ 49 ಕ್ಷೇತ್ರಗಳ ಪಟ್ಟಿಗೆ ಚುನಾವಣಾ ಸಮಿತಿ ಒಪ್ಪಿಗೆ ಕೊಟ್ಟಿದೆ ಎಂದು ರಾಜ್ಯ ನಾಯಕರು ಹೇಳಿಕೊಂಡರು. 'ಚುನಾವಣಾ ನೀತಿ ಸಂಹಿತೆ ಘೋಷಣೆಯಾಗುವ ಮುನ್ನವೇ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ್ದೇವೆ. ಎರಡನೇ ಪಟ್ಟಿಯನ್ನು ಇಂದೇ ತಡ ರಾತ್ರಿ ಪ್ರಕಟಿಸಲಿದ್ದೇವೆ' ಎಂದು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸುದ್ದಿಗಾರರಿಗೆ ತಿಳಿಸಿದರು. 'ಶೇ 70ರಷ್ಟು ಕ್ಷೇತ್ರಗಳ ಪ್ರಕ್ರಿಯೆ ಮುಗಿದಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

6ನೇ ಪುಟ ನೋಡಿ

ಗುರುವಾರದೊಳಗೆ ಎರಡನೇ ಪಟ್ಟಿ: ಕುಮಾರಸ್ವಾಮಿ

ಬೆಂಗಳೂರು: ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಗುರುವಾರದೊಳಗೆ ಬಿಡುಗಡೆ ಮಾಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ದೇವೇಗೌಡರು ಬುಧವಾರ ಸಂಜೆ ದೆಹಲಿಯಿಂದ ವಾಪಸ್ ಬರುತ್ತಾರೆ. ಆ ಬಳಿಕ ಪಟ್ಟಿ ಬಿಡುಗಡೆ ಆಗಲಿದೆ' ಎಂದರು.

ಹಾಸನ ಕ್ಷೇತ್ರದ ಅಭ್ಯರ್ಥಿಯ ಹೆಸರೂ ಎರಡನೇ ಪಟ್ಟಿಯಲ್ಲಿ ಇರಲಿದೆ. ಆ ಕ್ಷೇತ್ರದ ಬಗ್ಗೆ ಮಾಧ್ಯಮದವರಿಗೇ ಹೆಚ್ಚಿನ ಆಸಕ್ತಿ ಇದೆ. ಅಲ್ಲಿನ ಅಭ್ಯರ್ಥಿಯ ಹೆಸರು ಪ್ರಕಟಿಸದಿದ್ದರೆ ಮತ್ತಷ್ಟು ಕತೆಗಳು ಹುಟ್ಟಿಕೊಳ್ಳುತ್ತವೆ. ಮೊದಲ ಪಟ್ಟಿ ಪ್ರಕಟವಾಗಿದ್ದ ಅವಧಿಯಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ಈಗ ಹಾಸನ ಕ್ಷೇತ್ರದ ಕಾರಣಕ್ಕಾಗಿ ಹೆಚ್ಚು ಪ್ರಚಾರ ಸಿಕ್ಕಿದೆ ಎಂದು ಹೇಳಿದರು.

6ನೇ ಪುಟ ನೋಡಿ

ಸೇನಾ ಸಿಬ್ಬಂದಿ ಮಂಗಳವಾರ ನಾಥೂ ಲಾ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆ ಕೈಗೊಂಡರು–ಪಿಟಿಐ ಚಿತ್ರ

ಸಿಕ್ಕಿಂ: ಚೀನಾ ಗಡಿ ಪ್ರದೇಶದ ಬಳಿ ನಡೆದಿರುವ ದುರಂತ

ಹಿಮಪಾತ: 7 ಮಂದಿ ಸಾವು

ಗ್ಯಾಂಗ್ಟಕ್ (ಸಿಕ್ಕಿಂ) (ಪಿಟಿಐ): 'ಪೂರ್ವ ಸಿಕ್ಕಿಂನ ನಾಥೂ ಲಾ ಪ್ರದೇಶದಲ್ಲಿ ಮಂಗಳವಾರ ಬೆಳಿಗ್ಗೆ ಭಾರಿ ಹಿಮಪಾತ ಉಂಟಾಗಿದ್ದು, ದುರಂತದಲ್ಲಿ ಏಳು ಮಂದಿ ಪ್ರವಾಸಿಗರು ಮೃತಪಟ್ಟಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇಲ್ಲಿಂದ ನಾಥೂ ಲಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಜವಾಹರಲಾಲ್ ನೆಹರೂ ಮಾರ್ಗದಲ್ಲಿ ಬೆಳಿಗ್ಗೆ 11.30ರ ಸುಮಾರಿಗೆ ಹಿಮಪಾತ ಉಂಟಾಗಿದೆ. ಐದರಿಂದ ಆರು ವಾಹನಗಳು ಹಿಮದಡಿ ಸಿಲುಕಿದ್ದವು. ಈ ವಾಹನಗಳಲ್ಲಿ 30 ಮಂದಿ ಇದ್ದರು. ಈ ಪೈಕಿ 23 ಜನರನ್ನು ರಕ್ಷಿಸಲಾಗಿದೆ. ಇವರಲ್ಲಿ ಆರು ಮಂದಿ ಪ್ರವಾಸಿಗರಿದ್ದು ಅವರು ಆಳವಾದ

ಕಂದಕಕ್ಕೆ ಉರುಳಿದ್ದರು' ಎಂದು ರಾಜ್ಯ ಸರ್ಕಾರದ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಗಾಯಗೊಂಡವರನ್ನು ಚಿಕಿತ್ಸೆಗಾಗಿ ಇಲ್ಲಿನ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಮೃತರಲ್ಲಿ ಒಬ್ಬ ಮಹಿಳೆ ಹಾಗೂ ಮಗು ಕೂಡ ಸೇರಿದ್ದಾರೆ' ಎಂದಿದ್ದಾರೆ.

'ಪ್ರತಿಕೂಲ ಹವಾಮಾನದಿಂದಾಗಿ ಮಂಗಳವಾರ ಸಂಜೆಯೇ ರಕ್ಷಣಾ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ' ಎಂದು ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ. ನಾಥೂ ಲಾ ಪ್ರದೇಶವು ಸಮುದ್ರ ಮಟ್ಟದಿಂದ 14,450 ಅಡಿ ಎತ್ತರದಲ್ಲಿದ್ದು, ಭಾರತ ಮತ್ತು ಚೀನಾ ನಡುವಣ ಮೂರು ಮುಕ್ತ ವ್ಯಾಪಾರ ಗಡಿಗಳಲ್ಲಿ ಒಂದಾಗಿದೆ.

11ನೇ ಪುಟ ನೋಡಿ

ಇಂಡಿಯಾ ಜಸ್ಟೀಸ್ ರಿಪೋರ್ಟ್ 2022

ನ್ಯಾಯದಾನ: ರಾಜ್ಯ ಪ್ರಥಮ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಾಂಗ, ಪೊಲೀಸ್ ಇಲಾಖೆ ಸುಧಾರಣೆ, ನ್ಯಾಯದಾನಕ್ಕೆ ಸಂಬಂಧಿಸಿ ಕರ್ನಾಟಕ ರಾಜ್ಯವು ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಅತ್ಯುತ್ತಮ ಐದು ರಾಜ್ಯಗಳ ಪಟ್ಟಿಯಲ್ಲಿ ದಕ್ಷಿಣದ ನಾಲ್ಕು ರಾಜ್ಯಗಳು ಸ್ಥಾನ ಪಡೆದಿವೆ.

ಮಂಗಳವಾರ ಬಿಡುಗಡೆಯಾದ 'ಇಂಡಿಯಾ ಜಸ್ಟೀಸ್ ರಿಪೋರ್ಟ್ 2022'ರಲ್ಲಿ ಈ ಉಲ್ಲೇಖವಿದೆ. 2019ರಲ್ಲಿ ಸ್ಥಾಪನೆ ಆಗಿರುವ ಟಾಟಾ ಟ್ರಸ್ಟ್ ವಿವಿಧ ಮಾನದಂಡಗಳನ್ನು ಆಧರಿಸಿ ವಾರ್ಷಿಕ ಸಮೀಕ್ಷೆಯನ್ನು ನಡೆಸುತ್ತಿದೆ.

ನ್ಯಾಯಾಲಯಗಳಲ್ಲಿನ ಹುದ್ದೆಗಳ ಭರ್ತಿ, ಅನುದಾನ ಬಿಡುಗಡೆ, ಮೂಲಸೌಕರ್ಯ, ಮಾನವ ಸಂಪನ್ಮೂಲ, ಕಾನೂನು ನೆರವು, ಕಾರಾಗೃಹಗಳ ಸ್ಥಿತಿಗತಿ, ಪೊಲೀಸ್ ಇಲಾಖೆ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯ ನಿರ್ವಹಣೆಯ ಮಾನದಂಡಗಳ ಆಧಾರದಲ್ಲಿ ಈ ವರದಿಯನ್ನು ರೂಪಿಸಲಾಗಿದೆ.

ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ 18 ದೊಡ್ಡ, ಮಧ್ಯಮ ಗಾತ್ರದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ತಮಿಳುನಾಡು, ತೆಲಂಗಾಣ, ಗುಜರಾತ್, ಆಂಧ್ರಪ್ರದೇಶ ರಾಜ್ಯಗಳಿವೆ.

ಪೊಲೀಸ್ ಅಧಿಕಾರಿಗಳು ಮತ್ತು ಕಾನ್‌ಸ್ಟೆಬಲ್‌ಗಳ ನೇಮಕದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಇತರೆ ಹಿಂದುಳಿದ ವರ್ಗಗಳ ಮೀಸಲನ್ನು ನಿರಂತರವಾಗಿ ಕಾಯ್ದುಕೊಂಡಿರುವ ರಾಜ್ಯ ಕರ್ನಾಟಕ ಎಂದು ವರದಿ ಉಲ್ಲೇಖಿಸಿದೆ.

ದೆಹಲಿ, ಚಂಡೀಗಢವನ್ನು ಬಿಟ್ಟು ಬೇರಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವು ನ್ಯಾಯಾಂಗ ಕ್ಷೇತ್ರದ ವಾರ್ಷಿಕ ಬಜೆಟ್ ಅನುದಾನದಲ್ಲಿ ಶೇ 1ಕ್ಕಿಂತ ಹೆಚ್ಚು ಮೊತ್ತವನ್ನು ವ್ಯಯಿಸಿಲ್ಲ. ಈ ರಾಜ್ಯಗಳ ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳ ಶೇ 30ರಷ್ಟು ಹುದ್ದೆಗಳು ಖಾಲಿ ಇವೆ.

ವರದಿಯಲ್ಲೇನಿದೆ?

- ಪೊಲೀಸ್ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪಂಗಡ, ಒಬಿಸಿ ಮೀಸಲಿಗೆ ಆದ್ಯತೆ
- ನ್ಯಾಯಾಂಗ ಬಜೆಟ್: ಬಹುತೇಕ ರಾಜ್ಯಗಳಲ್ಲಿ ಶೇ 1ರಷ್ಟೂ ವ್ಯಯವಾಗುತ್ತಿಲ್ಲ
- ಭರ್ತಿಯಾಗದ ಖಾಲಿ ಹುದ್ದೆಗಳು, ಕಾರ್ಯ ನಿರ್ವಹಣೆ ಮೇಲೆ ಪರಿಣಾಮ

11ನೇ ಪುಟ ನೋಡಿ

ದರಕ್ಕೆ ಮಿತಿ: 651 ಅಗತ್ಯ ಔಷಧ ಅಗ್ಗ

ನವದೆಹಲಿ (ಪಿಟಿಐ): ಬಹುತೇಕ ಅನುಸೂಚಿತ ಔಷಧಗಳ (ಶೆಡ್ಯೂಲ್ಡ್ ಡ್ರಗ್ಸ್) ಗರಿಷ್ಠ ದರಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ಮಿತಿ ನಿಗದಿಪಡಿಸಿದೆ. ಇದರ ಪರಿಣಾಮ, ಏಪ್ರಿಲ್‌ನಿಂದ ಅನ್ವಯವಾಗುವಂತೆ 651 ಅಗತ್ಯ ಔಷಧಗಳ ದರಗಳು ಸರಾಸರಿ ಶೇ 6.73ರಷ್ಟು ಕಡಿಮೆಯಾಗಿವೆ.

ಈ ಕುರಿತು ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರವು (ಎನ್‌ಪಿಪಿಎ) ಟ್ವೀಟ್ ಮಾಡಿದೆ.

'ರಾಷ್ಟ್ರೀಯ ಅಗತ್ಯ ಔಷಧಗಳ ಪಟ್ಟಿಯಲ್ಲಿರುವ (ಎನ್‌ಎಲ್‌ಇಎಂ) 870 ಅನುಸೂಚಿತ ಔಷಧಗಳ ಪೈಕಿ, ಈ ವರೆಗೆ 651 ಔಷಧಿಗಳ ಗರಿಷ್ಠ ದರಗಳ ಮೇಲೆ ಮಿತಿ ಹೇರಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ' ಎಂದೂ ಎನ್‌ಪಿಪಿಎ ಟ್ವೀಟ್‌ನಲ್ಲಿ ಹೇಳಿದೆ.

11ನೇ ಪುಟ ನೋಡಿ

ರಾಜ್ಯದ 865 ಗಡಿ ಗ್ರಾಮಗಳಿಗೆ ಮಹಾರಾಷ್ಟ್ರದಿಂದ ಆರೋಗ್ಯ ವಿಮೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕರ್ನಾಟಕ ಗಡಿಯೊಳಗಿರುವ 865 ಹಳ್ಳಿಗಳಿಗೂ ಅನ್ವಯ ಆಗುವಂತೆ 'ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ಯೋಜನೆ' ಜಾರಿ ಮಾಡಿ, ಮಹಾರಾಷ್ಟ್ರ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ಕರ್ನಾಟಕ ಸರ್ಕಾರದ ಆಕ್ಷೇಪವನ್ನು ನಿರ್ಲಕ್ಷ್ಯ ಮಾಡಿದ ಅಲ್ಲಿನ ಮುಖ್ಯಮಂತ್ರಿ ಏಕನಾಥ ಶಿಂಧೆ ಜಾರಿ ನಿರ್ಣಯ ಕೈಗೊಂಡಿದ್ದಾರೆ.

'ಗಡಿ ತಂಟೆ ತೀರ್ಪು ಹೊರಬೀಳುವವರೆಗೂ ಎರಡೂ ರಾಜ್ಯಗಳು ಯಾವುದೇ ರೀತಿಯ ಹಸ್ತಕ್ಷೇಪ ಮಾಡಕೂಡದು' ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಸಂಧಾನ ಸಭೆಯಲ್ಲಿ ಸೂಚಿಸಿದ್ದರು. ಕರ್ನಾಟಕ–ಮಹಾರಾಷ್ಟ್ರದ ತಲಾ ಮೂವರು ಸಚಿವರನ್ನು ಒಳಗೊಂಡ ಸಲಹಾ ಸಮಿತಿಯನ್ನೂ ರಚನೆ ಮಾಡಿದ್ದರು. ಯಾವುದೇ ನಿರ್ಣಯ ಕೈಗೊಳ್ಳುವ ಮುನ್ನ ಈ ಸಮಿತಿ ಮುಂದೆ ಇಡಬೇಕು ಎಂದೂ ಆದೇಶಿಸಿದ್ದರು. ಎಲ್ಲ ಸೂಚನೆಗಳನ್ನೂ ಮಹಾರಾಷ್ಟ್ರ ಸರ್ಕಾರ ಗಾಳಿಗೆ ತೂರಿ ಈ ನಿರ್ಧಾರ ಕೈಗೊಂಡಿದೆ.

ಎಲ್ಲೆಲ್ಲಿ ಪ್ರಯೋಜನ?: ಬೆಳಗಾವಿ, ಬೀದರ್, ಕಲಬುರಗಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ 12 ತಾಲ್ಲೂಕುಗಳಲ್ಲಿರುವ 865 ಹಳ್ಳಿಗಳ ಎಲ್ಲ ಭಾಷಿಕರೂ ಈ ವಿಮೆಯ ಫಲಾನುಭವಿ ಆಗಬಹುದು. ಸಣ್ಣ ಹಾಗೂ ಗಂಭೀರ ಆರೋಗ್ಯ ಸಮಸ್ಯೆಗಳನ್ನೂ ಒಳಗೊಂಡು ಒಟ್ಟು 996 ಕಾಯಿಲೆಗಳಿಗೆ ವಿಮೆ ಅನ್ವಯವಾಗುತ್ತದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ದೊಡ್ಡ ಆಸ್ಪತ್ರೆಗಳಲ್ಲೂ ಚಿಕಿತ್ಸೆಗೆ ಅವಕಾಶವಿದೆ. ವಾರ್ಷಿಕ ಗರಿಷ್ಠ ₹1.50 ಲಕ್ಷದವರೆಗೆ ವಿಮೆ ಸಿಗಲಿದೆ.

ಕರ್ನಾಟಕ ಸರ್ಕಾರ ನೀಡಿದ ಅಂತ್ಯೋದಯ ಪಡಿತರ ಚೀಟಿ, ಮಹಾರಾಷ್ಟ್ರ ಸರ್ಕಾರದ ಅನ್ನಪೂರ್ಣ ಪಡಿತರ ಚೀಟಿ ಅಥವಾ ವಾರ್ಷಿಕ ಆದಾಯದ ದಾಖಲೆ ನೀಡಿ ಈ ಸೌಲಭ್ಯದ ಫಲಾನುಭವಿಯಾಗಲು ಅವಕಾಶ ಕಲ್ಪಿಸಲಾಗಿದೆ.

ಕೇಶ ಸಂರಕ್ಷಣೆ
ಮಂಜುಶ್ರೀ ಹೇರ್ ಆಯಿಲ್
ಆಯುರ್ವೇದ ರೀತ್ಯಾ ತೈಲಪಾಕ ವಿಧಿಯಿಂದ ತಯಾರಿಸಲಾಗಿದೆ.
SDM AYURVEDA PHARMACY
ತಯಾರಕರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
sdmaph@sdmayurvedacollegeudupi.in

Union Bank of India
VYOM ಮೊಬೈಲ್ ಆ್ಯಪ್
ಯೂನಿಯನ್ ಕ್ಲಾಸಿಕ್ ಚಾಲ್ತಿ ಖಾತೆ
- ಉಚಿತ ಹಾಗೂ ಮಿತಿ ಇಲ್ಲದಷ್ಟು NEFT/RTGS
- ಮಾಸಿಕ 10 ಡಿಮ್ಯಾಂಡ ಡ್ರಾಫ್ಟ್ ಉಚಿತ
- ಪ್ರತಿ ತಿಂಗಳು ಸರಾಸರಿ ಕನಿಷ್ಠ ಉಳಿತಾಯದ 15 ಪಟ್ಟು ನಗದು ಜಮಾವಣೆ ಉಚಿತ
'ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ
ಒಳ್ಳೆಯ ಜನರು, ಉತ್ತಮ ಬ್ಯಾಂಕ್
www.unionbankofindia.co.in

All chicken products contain added monosodium glutamate not recommended for infants below 12 months and pregnant women. #Limited period offer. T&Cs apply. For details refer to online.kfc.co.in/promotions. Delivery available in select restaurants. Price exclusive of taxes. All images are for illustration purposes only, Actual product may vary. *vis-à-vis same a la carte order on delivery.

ಕ್ರಿಮಿನಲ್ ಪ್ರಕರಣ: ಟ್ರಂಪ್ ಬಂಧನ

ನ್ಯೂಯಾರ್ಕ್ (ಎಪಿ): ನೀಲಿಚಿತ್ರ ತಾರೆಗೆ ಹಣ ಸಂದಾಯ ಮಾಡಿದ್ದ ಕ್ರಿಮಿನಲ್ ಪ್ರಕರಣದ ಸಂಬಂಧ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಇದಕ್ಕೂ ಮುನ್ನ ಮ್ಯಾನ್‌ಹಾಟನ್ ಜಿಲ್ಲಾ ಅಟಾರ್ನಿಯ ಕೋರ್ಟ್ ಸಭಾಂಗಣದಲ್ಲಿ 76 ವರ್ಷ ವಯಸ್ಸಿನ ಟ್ರಂಪ್ ಶರಣಾದರು. ಬಳಿಕ ಅವರನ್ನು ಬಂಧಿಸಿ ಬಿಗಿ ಭದ್ರತೆಯಲ್ಲಿ ವಿಚಾರಣೆಗೆ ಕರೆದುಕೊಂಡು ಹೋಗಲಾಯಿತು ಎಂದು ಬಿಬಿಸಿ ವರದಿ ಮಾಡಿದೆ.

ಅಮೆರಿಕದ ಇತಿಹಾಸದಲ್ಲೇ

ಕ್ರಿಮಿನಲ್ ಆರೋಪ ಪ್ರಕರಣದ ವಿಚಾರಣೆ ಎದುರಿಸಿದ, ಬಂಧನಕ್ಕೆ ಒಳಗಾದ ಮೊದಲ ಅಧ್ಯಕ್ಷ ಟ್ರಂಪ್ ಆಗಿದ್ದಾರೆ.

'ನಮ್ಮ ನಡುವಿನ ಅನೈತಿಕ ಸಂಬಂಧ ಬಹಿರಂಗಪಡಿಸಬಾರದು' ಎಂದು ನೀಲಿಚಿತ್ರ ತಾರೆಯೊಬ್ಬರಿಗೆ ಹಣ ಸಂದಾಯ ಮಾಡಿದ್ದ ಕುರಿತಂತೆ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

3Bನೇ ಪುಟ ನೋಡಿ

ಅರುಣಾಚಲದಲ್ಲಿ ಹೆಸರು ಬದಲು ಚೀನಾ ಕ್ರಮ ತಿರಸ್ಕರಿಸಿದ ಭಾರತ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದ ಕೆಲವು ಸ್ಥಳಗಳ ಹೆಸರುಗಳನ್ನು ಚೀನಾ ಬದಲಾಯಿಸಿರುವುದನ್ನು ಭಾರತ ಮಂಗಳವಾರ ಸಾರಾಸಗಟಾಗಿ ತಿರಸ್ಕರಿಸಿದೆ.

ಅಲ್ಲದೇ, 'ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗ. ರಾಜ್ಯದ ಕೆಲವು ಸ್ಥಳಗಳಿಗೆ 'ಕಲ್ಪಿತ' ಹೆಸರುಗಳನ್ನು ಇಡುವುದರಿಂದ ವಾಸ್ತವ ಬದಲಾಗುವುದಿಲ್ಲ' ಎಂದೂ ತಿರುಗೇಟು ನೀಡಿದೆ.

ಅರುಣಾಚಲದ 11 ಸ್ಥಳಗಳಿಗೆ ಚೀನೀ ಹೆಸರು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಭಾರತವು ಈ ಪ್ರತಿಕ್ರಿಯೆ ನೀಡಿದೆ. ಅರುಣಾಚಲ ಪ್ರದೇಶವನ್ನು ತನ್ನ ವಶದಲ್ಲಿರುವ ಟಿಬೆಟ್‌ನ ದಕ್ಷಿಣ ಭಾಗ ಎಂದು ಚೀನಾ ಹೇಳಿಕೊಳ್ಳುತ್ತಿದೆ.

3ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರಜಾ ಮತ ಜನತಂತ್ರದ ಹಬ್ಬ

ದಳಕ್ಕೆ ಮುಳುವಾಗಲಿದೆಯೇ 'ಕುಟುಂಬ' ಸೂತ್ರ 7
ಚಿಕ್ಕಮಗಳೂರು ಕ್ಷೇತ್ರ; ಕಾಂಗ್ರೆಸ್‌ನಲ್ಲಿ ಒಳಬೇಗುದಿ 7
ಬಿಜೆಪಿ ನಕಲಿ ಪಟ್ಟಿ: ನಾಯಕರ ಗಾಬರಿ 6
ಅಸ್ತಿತ್ವಕ್ಕಾಗಿ ಸವದಿ, ಕುಮಠಳ್ಳಿ ಪೈಪೋಟಿ 6

RAMAIAH UNIVERSITY OF APPLIED SCIENCES
UGC U/S 2(F) OF UGC ACT 1956
Applied Brilliance Makes all the Difference
62 YEARS – Providing Quality Education – Excellence in Innovation – Ramaiah Group of Institutions

ADMISSIONS OPEN 2023-24

Faculty of Engineering & Technology
B.Tech. | M.Tech.
Faculty of Art & Design
B.Des. • Product Design • Fashion Design • Interaction Design
M.Des. • Product Design • Fashion Design
Faculty of Mathematical & Physical Sciences
B.Sc. (Hons.) • Physics, Chemistry, Mathematics
M.Sc. • Physics • Mathematics • Analytical Chemistry • Organic Chemistry • Industrial Chemistry
Faculty of Hospitality Management and Catering Technology
BHM Bachelor of Hotel Management
Faculty of Pharmacy
B.Pharm. Bachelor of Pharmacy
Pharm.D Doctor of Pharmacy
M.Pharm. • Pharmacognosy • Pharmacy Practice • Pharmaceutics • Pharmacology • Pharmaceutical Chemistry
Faculty of Dental Sciences
BDS Bachelor of Dental Surgery
MDS Master of Dental Surgery
Ramaiah Medical College
MBBS | MD/MS | DM/M.Ch
Ramaiah College of Physiotherapy
BPT | MPT
PG Diploma in Facility Management
Ph.D. Programs
Faculty of Life & Allied Health Sciences
B.Sc. (Hons.) • Biotechnology • Food Processing and Technology
B.Sc. (Hons.) • Cardiac Care Technology • Optometry • Dialysis Therapy Technology • Medical Radiology and Imaging Technology • Operation Theatre and Anaesthesia Technology
M.Sc. • Biotechnology • Molecular & Cellular Biology • Food Science & Technology • Food Nutrition and Dietetics
MHA Masters in Hospital Administration
MPH Master of Public Health
School of Social Sciences
B.Sc. (Hons.) • Economics • Psychology • Data Sciences & Analytics
BA (Hons.) in Sociology
M.A. in Public Policy
Faculty of Management and Commerce
B.Com. (Hons.) • Accounting & Finance
BBA
MBA • Marketing Management • Human Resource Management • Operations Management • Financial Management • Small Business & Entrepreneurship • Business Analytics • Banking & Financial Services • Hospitality Management • Pharma Business Management
School of Law
B.Sc. LL.B. (Hons.) | B.A. LL.B. (Hons.)
Ramaiah Institute of Nursing Education & Research
B.Sc. Nursing | M.Sc. Nursing
Post Basic B.Sc. Nursing
Other Programs B.Voc. in • Product Design & Modelling • Culinary Operation • Mechatronics • Retail Management

All UG,PG and Ph.D. Programs are approved by Statutory Bodies
Ranked As... ACCREDITED A+ Ramaiah Medical College | nirf ALL INDIA RANKING 2022: 38th Ramaiah Medical College, 14th Faculty of Dental Sciences, 62nd Faculty of Pharmacy | ARIIA ATAL RANKING OF INSTITUTIONS ON INNOVATION ACHIEVEMENTS
APPLY NOW RUAS AT ADMISSIONS TEST
UG & PG Programmes
For details and registration scan this QR Code (OR) visit website: https://admissions.msruas.ac.in/
Exam Dates : 10th - 15th April 2023 & 1st - 10th May 2023
Gnanagangothri Campus (GGC): University House, New BEL Road, MSR Nagar, Bengaluru - 560 054.
Ramaiah Technology Campus (RTC), Peenya : #470-P, Peenya Industrial Area, Peenya 4th Phase, Bengaluru - 560 058.
801 000 4444
admissions23@msruas.ac.in
www.msruas.ac.in

ವಾರ್ಷಿಕ ಸಭಾ ಬೈಠಕ್ 7ರಿಂದ

ಬೆಂಗಳೂರು: 'ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಣ ಸಂಸ್ಥಾನದ ವಾರ್ಷಿಕ ಸಭಾ ಬೈಠಕ್ ಇದೇ 7ರಿಂದ 9ರವರೆಗೆ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ನಡೆಯಲಿದೆ' ಎಂದು ಸಂಸ್ಥಾನದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅವನೀಶ್ ಭಟ್ನಾಗರ್ ತಿಳಿಸಿದರು.

'ರಾಷ್ಟ್ರೀಯ ಶಿಕ್ಷಣ ನೀತಿ-2020ಕ್ಕೆ ಪೂರಕವಾದ ಪ್ರಶಿಕ್ಷಣ ಅನುಷ್ಠಾನ ಮತ್ತು ತರಬೇತಿ ಕಾರ್ಯದಲ್ಲಿ ಸಂಸ್ಥಾನ ನಿರತವಾಗಿದೆ. ಭಾರತೀಯ ಜ್ಞಾನ, ಪರಂಪರೆಯ ಆಧಾರದಲ್ಲಿ ಶಿಕ್ಷಣ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರಿಗೆ ತರಬೇತಿ, ಪಠ್ಯಪುಸ್ತಕ ನಿರ್ಮಾಣ ಕಾರ್ಯಗಳಲ್ಲೂ ವಿದ್ಯಾಭಾರತಿ ನಿರತವಾಗಿದೆ. ಆಯಾ ರಾಜ್ಯಗಳ ಸ್ಥಳೀಯ ಭಾಷೆಗಳಲ್ಲಿ ಮಕ್ಕಳಿಗೆ ಶಿಕ್ಷಣ, ಬಾಲಿಕಾ ಶಿಕ್ಷಣ, ಪರಿಸರ ಶಿಕ್ಷಣ, ಶಾರೀರಿಕ, ಯೋಗ, ಸಂಗೀತ, ಸಂಸ್ಕೃತ, ಆಧ್ಯಾತ್ಮಿಕ ಶಿಕ್ಷಣ ನೀಡಲಾಗುತ್ತಿದೆ' ಎಂದರು.

'ಇಸ್ರೊ ಮಾಜಿ ಅಧ್ಯಕ್ಷ ಕೆ. ಕಸ್ತೂರಿ ರಂಗನ್ ಅವರು ಏ.7ರ ಬೆಳಿಗ್ಗೆ 9ಕ್ಕೆ ಬೈಠಕ್ ಉದ್ಘಾಟಿಸಲಿದ್ದಾರೆ. ವಿವಿಧ ರಾಜ್ಯಗಳಿಂದ 350ಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ' ಎಂದರು. ರಾಷ್ಟ್ರೀಯ ಸಹ ಕಾರ್ಯದರ್ಶಿ ನಂದಿನಿ ಲಕ್ಷ್ಮೀಕಾಂತ್, ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ರಾಜಶೇಖರ್ ರೆಡ್ಡಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ್ ಕುಮಾರ್ ಇದ್ದರು.

ನಗರದ ವಿವಿಧೆಡೆ ವಾಯು ಗುಣಮಟ್ಟ ದಿನೇದಿನೇ ಕುಸಿತ

ಉಷ್ಣಾಂಶ: ಗಾಳಿಯಲ್ಲಿ ದೂಳಿನ ಕಣ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಉಷ್ಣಾಂಶ ಹೆಚ್ಚಳ, ಮೆಟ್ರೊ, ರಸ್ತೆ ಹಾಗೂ ಕಟ್ಟಡಗಳ ನಿರ್ಮಾಣ ಕಾಮಗಾರಿಯಿಂದಾಗಿ ಹೊರಹೊಮ್ಮುವ ದೂಳಿನ ಕಣಗಳಿಂದ ವಾತಾವರಣದ ಗುಣಮಟ್ಟ ದಿನೇ ದಿನೇ ಕುಸಿತ ಕಾಣುತ್ತಿದೆ.

ನಗರದಲ್ಲಿ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 20 ಡಿಗ್ರಿ ಸೆಲ್ಸಿಯಸ್‌ವರೆಗೂ ದಾಖಲಾಗುತ್ತಿದೆ. ಭೂಮಿಯಲ್ಲಿಯೂ ತಾಪಮಾನ ಹೆಚ್ಚಳವಾಗಿ, ಎಲ್ಲೆಡೆ ದೂಳು ವ್ಯಾಪಿಸಿಕೊಳ್ಳುತ್ತಿದೆ. ಕೋವಿಡ್‌ನಿಂದ ಬಾಗಿಲು ಮುಚ್ಚಿದ್ದ ಐಟಿ–ಬಿಟಿ ಕಂಪನಿಗಳ ಪುನರಾರಂಭದಿಂದ ವಾಹನಗಳ ಸಂಚಾರ ಒಮ್ಮೆಲೇ ಹೆಚ್ಚಳವಾಗಿದೆ. ತುಮಕೂರು ರಸ್ತೆ, ಮೈಸೂರು ರಸ್ತೆ ಸೇರಿದಂತೆ ಕೆಲವೆಡೆ ಬೆಳಿಗ್ಗೆ ಮತ್ತು ಸಂಜೆಯ ಅವಧಿ ವಾಹನ ದಟ್ಟಣೆ ಉಂಟಾಗುತ್ತಿದೆ. ಇದರಿಂದ ವಾತಾವರಣದಲ್ಲಿ ಮಲಿನಕಾರಕ ಕಣಗಳೂ ಹೆಚ್ಚಳವಾಗುತ್ತಿವೆ.

ನಗರದ ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ, ಸ್ಮಾರ್ಟ್ ಸಿಟಿ ಯೋಜನೆಯಡಿ ವೈಟ್ ಟಾಪಿಂಗ್, ಪಾದಚಾರಿ ಮಾರ್ಗ ನಿರ್ಮಾಣ ಸೇರಿ ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ. ಅದೇ ರೀತಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ ರೈಲು ಮಾರ್ಗದ ಕಾಮಗಾರಿ ನಡೆಯುತ್ತಿದೆ. ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರ ತನಕ (ಹಂತ –2ಎ) ಮತ್ತು ಕೆ.ಆರ್. ಪುರದಿಂದ ವಿಮಾನ ನಿಲ್ದಾಣದ ತನಕ (ಹಂತ–2ಬಿ) ಮತ್ತೊಂದು ಹಂತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರ, ನಾಗಸಂದ್ರದಿಂದ ನಾಗವಾರ, ಕೆಂಗೇರಿಯಿಂದ ಚಲಘಟ್ಟ ಸೇರಿ ವಿವಿಧ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ.

ಇದರಿಂದ ದೂಳು ಹೊರಹೊಮ್ಮುವ ಜತೆಗೆ ವಾಹನ ದಟ್ಟಣೆಯೂ ಉಂಟಾಗುತ್ತಿದೆ.

ಎಕ್ಯುಐ ಹೆಚ್ಚಳ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪ್ರಕಾರ, ಸಿಲ್ಕ್ ಬೋರ್ಡ್ ನಗರ ರೈಲು ನಿಲ್ದಾಣ, ಬಿಟಿಎಂ ಲೇಔಟ್, ಜಯನಗರ, ಬಾಪೂಜಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶ ಕೆಲವು ಅವಧಿಯಲ್ಲಿ ಗಾಳಿಯ ಗುಣಮಟ್ಟದ ಸೂಚ್ಯಂಕ 'ಸಮಾಧಾನಕರ' ಹಂತದಲ್ಲಿದೆ. ಈ ಪ್ರಮಾಣ ಕೆಲ ದಿನಗಳ ಹಿಂದೆ 50ರ ಆಸುಪಾಸಿನಲ್ಲಿತ್ತು. ಮಾರ್ಚ್ ತಿಂಗಳ ಕೆಲ ದಿನ ಮಾಲಿನ್ಯಕಾರಕ ಪಿಎಂ-10 (ಸೂಕ್ಷ್ಮ) ಹಾಗೂ ಪಿಎಂ-2.5 (ಅತಿ ಸೂಕ್ಷ್ಮ) ದೂಳಿನ ಕಣಗಳು ಕಾಣಿಸಿಕೊಂಡಿವೆ.

1 ಸಾವಿರ ಲೀಟರ್ ಗಾಳಿಯಲ್ಲಿ ಪಿಎಂ-10 ಪ್ರಮಾಣ 100 ಮೈಕ್ರೊ ಗ್ರಾಂ ಹಾಗೂ ಪಿಎಂ-2.5 ಪ್ರಮಾಣ 60 ಮೈಕ್ರೊ ಗ್ರಾಂ ಮೀರಬಾರದು. ಆದರೆ, ಕೆಲ ಸಂದರ್ಭದಲ್ಲಿ ಈ ಕಣಗಳ ಪ್ರಮಾಣವು ನಿಗದಿತ ಮಿತಿಗಿಂತ ಹೆಚ್ಚು ಇರುವುದು ಮಾಲಿನ್ಯ ನಿಯಂತ್ರಣ ಮಂಡಳಿ ನಡೆಸಿದ ವಿಶ್ಲೇಷಣೆಯಿಂದ ತಿಳಿದುಬಂದಿದೆ.

'ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳದಿಂದ ಈ ಅವಧಿಯಲ್ಲಿ ಎಕ್ಯುಐ ಏರುಗತಿ ಪಡೆಯಲಿದೆ. ದೂಳಿನ ಕಣಗಳು ಗಾಳಿಯಲ್ಲಿ ಅಧಿಕ ಪ್ರಮಾಣದಲ್ಲಿ ಇರುತ್ತವೆ.

ಹುಲ್ಲಿನಂತಹ ಗಿಡಗಳು ಒಣಗುವುದರಿಂದ ದೂಳು ನೆಲದಲ್ಲಿ ಇರುವುದಿಲ್ಲ. ಮಳೆ ಬಂದಲ್ಲಿ ದೂಳು ನೀರಿನಲ್ಲಿ ತೊಳೆದು ಹೋಗುತ್ತದೆ' ಎಂದು ಕೆಎಸ್‌ಪಿಸಿಬಿ ಪರಿಸರ ಅಧಿಕಾರಿ ಶ್ರೀಧರ್ ನಾಯ್ಕ್ ಹೇಳಿದರು.

ಅನಾರೋಗ್ಯ ಸಮಸ್ಯೆ ಸಾಧ್ಯತೆ

'ಗಾಳಿ ಗುಣಮಟ್ಟದ ಸೂಚ್ಯಂಕವು 50ರ ಒಳಗಡೆ ಇದ್ದಲ್ಲಿ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳು ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. ಎಕ್ಯುಐ 51ರಿಂದ 100ರ ಒಳಗಡೆ ಇದ್ದಲ್ಲಿ ಉಸಿರಾಟದ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. 101ರಿಂದ 200ರ ಗಡಿಯ ನಡುವೆ ಇದ್ದಲ್ಲಿ ಶ್ವಾಸಕೋಶ, ಹೃದಯ ಕಾಯಿಲೆಗಳು ಕೂಡ ಬರಬಹುದು' ಎಂದು ಮಂಡಳಿಯ ಪರಿಸರ ಅಧಿಕಾರಿಯೊಬ್ಬರು ತಿಳಿಸಿದರು.

'ವಾಯುಮಾಲಿನ್ಯದಿಂದ ತ್ವಚೆಯ ಅಲರ್ಜಿ, ಉಸಿರಾಟದ ಸಮಸ್ಯೆ, ಕಣ್ಣಿನ ಉರಿ ಮತ್ತು ಹೃದಯ ಸಂಬಂಧಿ ತೊಂದರೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತವೆ. ಆದ್ದರಿಂದ ಪರಿಸರ ಉಳಿಸಲು ಕ್ರಮವಹಿಸಬೇಕು' ಎಂದು ಹೇಳಿದರು.

ಗಾಳಿ ಗುಣಮಟ್ಟದ ಸೂಚ್ಯಂಕ (ವಾರದ ಸರಾಸರಿ)

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ಪೀಣ್ಯ	84
ಬಿಟಿಎಂ ಬಡಾವಣೆ	60
ಹೆಬ್ಬಾಳ	80
ಹೊಂಬೇಗೌಡನಗರ	75
ನಗರದ ರೈಲು ನಿಲ್ದಾಣ	95
ಸಿಲ್ಕ್‌ಬೋರ್ಡ್	106
ಜಯನಗರ	85

ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ)

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀವ್ರ

ಸುದ್ದಿ 2 ನಿಮಿಷ

'ನಮ್ಮ ಬೆಂಗಳೂರು ಪ್ರಶಸ್ತಿ'ಗೆ ನಾಮನಿರ್ದೇಶನ ಪ್ರಾರಂಭ

ಬೆಂಗಳೂರು: ನಮ್ಮ ಬೆಂಗಳೂರು ಪ್ರತಿಷ್ಠಾನವು 'ನಮ್ಮ ಬೆಂಗಳೂರು ಪ್ರಶಸ್ತಿ 2022'ಕ್ಕೆ ನಾಮನಿರ್ದೇಶನ ಪ್ರಕ್ರಿಯೆ ಪ್ರಾರಂಭಿಸಿದ್ದು, ನಾಲ್ಕು ವಿಭಾಗದಲ್ಲಿ ನಾಮನಿರ್ದೇಶನಕ್ಕೆ ಇದೇ 30ರವರೆಗೆ ಅವಕಾಶ ನೀಡಲಾಗಿದೆ.

ವರ್ಷದ ನಾಗರಿಕ, ಉದಯೋನ್ಮುಖ ತಾರೆ, ಸಾಮಾಜಿಕ ಉದ್ಯಮಿ ಹಾಗೂ ಉತ್ತಮ ಸರ್ಕಾರಿ ಅಧಿಕಾರಿ ಎಂಬ ವಿಭಾಗದಲ್ಲಿ ಒಬ್ಬೊಬ್ಬರಿಗೆ ಪ್ರಶಸ್ತಿ ನೀಡಲಾಗುತ್ತದೆ. ನಗರಕ್ಕಾಗಿ ಜೀವನದುದ್ದಕ್ಕೂ ಶ್ರಮಿಸಿದ ವ್ಯಕ್ತಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತದೆ. 'ಪ್ರಶಸ್ತಿಗೆ ಸಾಧಕ–ಸಾಧಕಿಯರನ್ನು ಆನ್‌ಲೈನ್ ಮೂಲಕ ಸಾರ್ವಜನಿಕರು ನಾಮನಿರ್ದೇಶನ ಮಾಡಬಹುದು. ಪ್ರಶಸ್ತಿಯ ರಾಯಭಾರಿ ರಮೇಶ್ ಅರವಿಂದ್ ಒಳಗೊಂಡಂತೆ ವಿವಿಧ ಕ್ಷೇತ್ರಗಳ 13 ಮಂದಿಯ ತೀರ್ಪುಗಾರರ ಸಮಿತಿ ರಚಿಸಲಾಗಿದೆ. ಹೆಚ್ಚು ಜನರಿಂದ ನಾಮನಿರ್ದೇಶನರಾದವರನ್ನು ನಮ್ಮ ಪ್ರತಿಷ್ಠಾನದ ತೀರ್ಪುಗಾರರು ಸಂದರ್ಶನ ನಡೆಸಿ, ಅಂತಿಮವಾಗಿ ಐದು ಜನರನ್ನು ಆಯ್ಕೆ ಮಾಡುತ್ತಾರೆ. ಜೂನ್‌ನಲ್ಲಿ ನಡೆಯುವ ಸಮಾರಂಭದಲ್ಲಿ ವಿಜೇತರನ್ನು ಘೋಷಿಸಲಾಗುವುದು' ಎಂದು ಪ್ರತಿಷ್ಠಾನ ತಿಳಿಸಿದೆ.

'ಸಾರ್ವಜನಿಕರು ಸೂಚಿಸಿದ ವ್ಯಕ್ತಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಪ್ರತಿ ವರ್ಷದಂತೆ ನಾಮನಿರ್ದೇಶನ ಪ್ರಕ್ರಿಯೆ ಆರಂಭಿಸಲಾಗಿದ್ದು, www.nammabengaluruawards.org ಲಿಂಕ್ ಬಳಸಿ ನಾಮನಿರ್ದೇಶನ ಮಾಡಬಹುದು' ಎಂದು ತೀರ್ಪುಗಾರರ ಸಮಿತಿಯ ಅಧ್ಯಕ್ಷ ಪ್ರದೀಪ್ ಕರ್ ಹೇಳಿದ್ದಾರೆ.

ಯಲಹಂಕ: ಜಾಗೃತಿಗೆ ಜಾಥಾ

ಯಲಹಂಕ: ಸಂವಾದ್ ಫೌಂಡೇಷನ್ ಮತ್ತು ಇಂಡಿಯಾ ಕೇರ್ಸ್ ಫೌಂಡೇಷನ್ ಸಂಸ್ಥೆಗಳ ಸಹಯೋಗದಲ್ಲಿ ವಾಕಥಾನ್ ನಡೆಯಿತು.

ಯಲಹಂಕ ನಾಗರಿಕರ ತಂಡ, ರೋಟರಿ ಸಂಸ್ಥೆಯ ಸದಸ್ಯರು, ಡೆಲ್ಲಿ ಪಬ್ಲಿಕ್ ಶಾಲೆಯ ಮಕ್ಕಳು, ನಾಗರಿಕ ರಕ್ಷಣಾ ಪಡೆಯ ಸ್ವಯಂಸೇವಕರು ಸೇರಿ ಸುಮಾರು 300 ಜನರು ಈ ಜಾಗೃತಿ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಸಂವಾದ್ ಫೌಂಡೇಷನ್ ವ್ಯವಸ್ಥಾಪಕ ಟ್ರಸ್ಟಿ ರಾಧಿಕಾ ಪೂವಯ್ಯ, 30 ವರ್ಷಗಳಿಂದ ಮಕ್ಕಳಲ್ಲಿ ಆಟಿಸಂ (ಸ್ವಲೀನತೆ) ಹೆಚ್ಚಾಗಿ ಕಂಡುಬರುತ್ತಿದೆ. ಮಿದುಳಿನಲ್ಲಿ ಯಾವುದೋ ಸಮಸ್ಯೆಯಿಂದ ಈ ಸಮಸ್ಯೆ ಉಂಟಾಗಿರಬಹುದು. ಇದನ್ನು ಒಂದು ಕಾಯಿಲೆ ಎಂದು ಪರಿಗಣಿಸದೆ ಈ ವಿಚಾರದಲ್ಲಿ ತಾಯಿಯನ್ನು ದೂಷಿಸಿ, ಮನಸ್ಸಿಗೆ ನೋವುಮಾಡಬಾರದು. ಎಬಿಎ ಥೆರಪಿ ನೀಡುವುದರ ಜೊತೆಗೆ ಕರುಣೆ ಮತ್ತು ಕಾಳಜಿಯಿಂದ ಅಂತಹ ಮಕ್ಕಳ ಪೋಷಕರೊಂದಿಗೆ ಸಹಕರಿಸಿದರೆ ಅವರೂ ಸಹ ಎಲ್ಲ ಮಕ್ಕಳಂತೆ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇಂಡಿಯಾ ಕೇರ್ಸ್ ಫೌಂಡೇಷನ್ ನಾಗರಿಕ ಸಮುದಾಯ ವಿಭಾಗದ ಮುಖ್ಯಸ್ಥೆ ಆಯೆಶಾ ಮಾತನಾಡಿ, ಆಟಿಸಂನಿಂದ ಬಳಲುತ್ತಿರುವ ಮಕ್ಕಳು ತುಂಬಾ ಬುದ್ಧಿವಂತರಾಗಿರುತ್ತಾರೆ. ಆದರೆ ಅವರಿಗೆ ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲ. ಸ್ವಲ್ಪ ವ್ಯತ್ಯಾಸದಿಂದ ಕೂಡಿರುವ ಅಂತಹ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿರುವ ಇತರೆ ಜನರು ತಮ್ಮೊಟ್ಟಿಗೆ ಸೇರಿಸಿಕೊಂಡು ಪ್ರೋತ್ಸಾಹ ನೀಡಿದರೆ ಸಮಾಜ ಬಹಳ ಸುಂದರವಾಗಿರುತ್ತದೆ ಎಂದರು.

ಜಯರಾಮನ್, ರೇಖಾ ಮಂಡಲ್, ಉಷಾ ಅಪ್ಪಚ್ಚು ಉಪಸ್ಥಿತರಿದ್ದರು.



ನಗರದ ತಿಗಳರ ಪೇಟೆಯಲ್ಲಿ ಇರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯದಲ್ಲಿ ನಡೆಯುವ ಕರಗ ಮಹೋತ್ಸವ ಅಂಗವಾಗಿ ದೇವಸ್ಥಾನಕ್ಕೆ ವಿದ್ಯುತ್ ಅಲಂಕಾರ ಮಾಡಿದ್ದ ದೃಶ್ಯ –ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್ (ಎಡಚಿತ್ರ). ಕರಗ ಮಹೋತ್ಸವದ ಭಾಗವಾಗಿ ನಡೆದ ದೀಪೋತ್ಸವದಲ್ಲಿ ಮಹಿಳೆಯರು ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ್

ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್: ಆರೋಪಿ ಬಂಧನ

ಬೆಂಗಳೂರು: ಟಾಟಾ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿ ವಿಕ್ರಮ್ ಮೆಹ್ತಾ (54) ಎಂಬುವವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಠ್ಠಲ್ ಮಲ್ಯ ರಸ್ತೆಯ ಸೂರ್ಯಮುಖಿ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ ವಿಕ್ರಮ್, ಹಲವು ತಿಂಗಳಿನಿಂದ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ. ಈತನನ್ನು ಬಂಧಿಸಿ ₹47,950 ನಗದು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವಸಂತನಗರದ ಲೂಪ್ ರಸ್ತೆಯಲ್ಲಿ ಓಡಾಡುತ್ತಿದ್ದ ಆರೋಪಿ, ಕ್ರಿಕೆಟ್ ಪಂದ್ಯಗಳ ಸೋಲು– ಗೆಲುವು ಲೆಕ್ಕಾಚಾರದಲ್ಲಿ ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದ. ಬೆಟ್ಟಿಂಗ್‌ನಲ್ಲಿ ಯಾರಾದರೂ ಗೆದ್ದರೆ, ಅವರಿದ್ದ ಸ್ಥಳಕ್ಕೆ ಹೋಗಿ ಹಣ ತಲುಪಿಸುತ್ತಿದ್ದ' ಎಂದು ತಿಳಿಸಿದರು.

'ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ವಶಕ್ಕೆ ಪಡೆಯಲಾಯಿತು. ಮೊಬೈಲ್ ಆ್ಯಪ್ ಹಾಗೂ ಜಾಲತಾಣಗಳ ಮೂಲಕ ಪಂದ್ಯಗಳ ರೆಶ್ಯೂ ತಿಳಿದುಕೊಂಡು ಬೆಟ್ಟಿಂಗ್ ದಂಧೆ ನಡೆಸುತ್ತಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡ' ಎಂದು ಅವರು ಹೇಳಿದರು.

ದೇವಸ್ಥಾನದ ಸುತ್ತಮುತ್ತ 32 ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಕ್ರಮ

ಕರಗ ಶಕ್ತ್ಯೋತ್ಸವ: ದೀಪಾಲಂಕಾರದ ಮೆರುಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮರಾಯಸ್ವಾಮಿ ದೇವಸ್ಥಾನವು ಅದ್ದೂರಿಯಾಗಿ ಕರಗ ಶಕ್ತ್ಯೋತ್ಸವ ಆಚರಿಸಲು ದೀಪಾಲಂಕಾರಗಳೊಂದಿಗೆ ಸಿದ್ಧತೆ ಮಾಡಿಕೊಂಡಿದೆ. ಭದ್ರತೆಯ ದೃಷ್ಟಿಯಿಂದ ದೇವಸ್ಥಾನದ ಸುತ್ತಮುತ್ತ 32 ಸಿಸಿ ಟಿವಿ ಕ್ಯಾಮೆರಾ ಅಳವಡಿಕೆ ಮಾಡಲಾಗುತ್ತಿದೆ.

ಇದೇ ಗುರುವಾರ ರಾತ್ರಿ 12.30ರಿಂದ ಕರಗ ಶಕ್ತ್ಯೋತ್ಸವ ಹಾಗೂ ಧರ್ಮರಾಯಸ್ವಾಮಿ ಮಹಾರಥೋತ್ಸವ ನಡೆಯಲಿದೆ. ಈ ಬಾರಿಯೂ ಕರಗವನ್ನು ತಿಗಳ ಸಮುದಾಯದ ಅರ್ಚಕ ವಿ. ಜ್ಞಾನೇಂದ್ರ ಹೊರಲಿದ್ದಾರೆ. 11 ದಿನಗಳು ನಡೆಯುವ ಕರಗ ಮಹೋತ್ಸವವು ಮಾರ್ಚ್ 29ರಿಂದ ಪ್ರಾರಂಭವಾಗಿದ್ದು, ಇದೇ 8ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ವೀರಕುಮಾರರು, ತಿಗಳ ಸಮುದಾಯದ ಕೆಲವು ಭಕ್ತರು ಕರಗ ನಡೆಯುವ ಎಲ್ಲಾ ದಿನಗಳು ಉಪವಾಸ ಕೈಗೊಂಡಿದ್ದಾರೆ. ಅವರಿಗೆ ಕರಗ ಆಯೋಜಕರು ಉಚಿತವಾಗಿ ಹಣ್ಣುಗಳನ್ನು ವಿತರಿಸುತ್ತಿದ್ದಾರೆ.

ಮುಖ್ಯಾಂಶಗಳು

- 11 ದಿನಗಳು ನಡೆಯುವ ಕರಗ ಮಹೋತ್ಸವ
- ಇಂದು ರಾತ್ರಿ 12 ಗಂಟೆಗೆ 'ಭಾರತ ಕಥಾ ವಾಚನ'
- ಶುಕ್ರವಾರ ರಾತ್ರಿ 2 ಗಂಟೆಗೆ ಪುರಾಣ ಪ್ರವಚನ

ಗುರುವಾರ ಮಧ್ಯರಾತ್ರಿ 12.30ರ ವೇಳೆಗೆ ಧರ್ಮರಾಯಸ್ವಾಮಿ ದೇವಾಲಯದಿಂದ ಹೊರಡುವ ಕರಗ ಶಕ್ತ್ಯೋತ್ಸವ, ಹಲಸೂರು ಪೇಟೆಯ ಆಂಜನೇಯಸ್ವಾಮಿ, ರಾಮ ದೇವಾಲಯದಲ್ಲಿ ಪೂಜೆ ಸ್ವೀಕರಿಸಲಿದೆ. ಬಳಿಕ ನಗರ್ತಪೇಟೆ, ಸಿದ್ದಣ್ಣ ಗಲ್ಲಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಲಿದೆ. ಈ ಮಾರ್ಗಗಳಲ್ಲಿನ ಎಲ್ಲಾ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಿ, ನಂತರ ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ, ಅಲ್ಲಿಂದ ಬಳೇಪೇಟೆ ಹಳೇಗರಡಿ, ಅಣ್ಣಮ್ಮನ ದೇವಾಲಯಕ್ಕೆ ತೆರಳಲಿದೆ. ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರ ಪೇಟೆಗಳಲ್ಲಿ ಭಕ್ತರಿಂದ ಪೂಜೆ ಸ್ವೀಕರಿಸಿ, ಹಾಲುಬೀದಿ, ಕಬ್ಬನ್‌ಪೇಟೆ, ಸುಣ್ಣಕಲ್ ಪೇಟೆ ಮಾರ್ಗವಾಗಿ ಕುಲಪುರೋಹಿತರ ಮನೆಗಳಲ್ಲಿ ಪೂಜೆ ಸ್ವೀಕರಿಸಿ, ನರಸಿಂಹ ಜೋಯಿಸ್‌ಗಲ್ಲಿ ಮಾರ್ಗವಾಗಿ ಸೂರ್ಯೋದಯದ ವೇಳೆಗೆ ದೇವಾಲಯವನ್ನು ತಲುಪಲಿದೆ.

'ಕರಗ ಸಾಗುವ ವೇಳೆ ದಾರಿಯುದ್ದಕ್ಕೂ ಭಕ್ತರು ಬಿಡಿ ಮಲ್ಲಿಗೆ ಹೂ ಬಳಸಬೇಕು. ಗಂಧದ ಪುಡಿ, ಅರಿಶಿನ, ಕುಂಕುಮ, ಕಲ್ಯಾಣಸೇವೆ, ಬಾಳೆಹಣ್ಣು, ದವನ ಸೇರಿದಂತೆ ಯಾವುದೇ ಬಗೆಯ ಸಾಮಗ್ರಿಗಳನ್ನು ಕರಗದ ಮೇಲೆ ಎಸೆಯಬಾರದು. ಕರಗ ಶಕ್ತ್ಯೋತ್ಸವ ಸಾಗುವ ವೇಳೆ ದೂರದಿಂದಲೇ ನಮಿಸುವ ಮೂಲಕ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು. ಕರಗ ಸಂಚರಿಸುವ ರಸ್ತೆಗಳನ್ನು ಸ್ವಚ್ಛವಾಗಿಡಬೇಕು. ಯಾವುದೇ ತೊಂದರೆಯಾಗದ ರೀತಿಯಲ್ಲಿ ವಿದ್ಯುತ್ ದೀಪ ಹಾಗೂ ತೋರಣಗಳನ್ನು ಕಟ್ಟಬೇಕು' ಎಂದು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಸತೀಶ್ ಮನವಿ ಮಾಡಿದ್ದಾರೆ.

ಗಂಗೆ ಪೂಜೆ: ಉತ್ಸವದ ಆರನೇ ದಿನವಾದ ಸೋಮವಾರ ಮೆಜೆಸ್ಟಿಕ್‌ನ ಅಣ್ಣಮ್ಮ ದೇವಿ ದೇವಸ್ಥಾನದಲ್ಲಿ ಗಂಗೆ ಪೂಜೆ ನಡೆಯಿತು. ಅರ್ಚಕ ವಿ. ಜ್ಞಾನೇಂದ್ರ ಹಾಗೂ ವೀರಕುಮಾರರು ಸಂಪ್ರದಾಯದಂತೆ ಅಣ್ಣಮ್ಮ ದೇವಿ ದೇವಾಲಯಕ್ಕೆ ತೆರಳಿ, ವಿಶೇಷ ಪೂಜೆ ನಡೆಸಿದರು. ಮಹಿಳೆಯರು ಬಣ್ಣ ಬಣ್ಣದ ಹೂಗಳಿಂದ ಅಲಂಕೃತವಾಗಿರುವ ಹರಿವಾಣದಲ್ಲಿ ತಂಬಿಟ್ಟನ್ನು ಇರಿಸಿ, ಅದರ ನಡುವೆ ದೀಪಗಳನ್ನು ಹಚ್ಚಿ, ದ್ರೌಪದಿ ದೇವಿ ಹಾಗೂ ಧರ್ಮರಾಯಸ್ವಾಮಿ ಸಹಿತ ಪರಿವಾರ ದೇವರಿಗೆ ಆರತಿ ಬೆಳಗಿ ಪೂಜೆ ಸಲ್ಲಿಸಿದರು.

8ನೇ ದಿನವಾದ ಬುಧವಾರ ರಾತ್ರಿ 12 ಗಂಟೆಗೆ ಆದಿಶಕ್ತಿ ದ್ರೌಪದಿದೇವಿಯ ಮಹಿಮೆಯ ವರ್ಣನೆಯನ್ನುಳ್ಳ 'ಭಾರತ ಕಥಾ ವಾಚನ' ನಡೆಯುತ್ತದೆ. 10ನೇ ದಿನವಾದ ಶುಕ್ರವಾರ ರಾತ್ರಿ 2 ಗಂಟೆಗೆ ಪುರಾಣ ಪ್ರವಚನ ಹಾಗೂ 4 ಗಂಟೆಗೆ ಗಾವು ಸೇವೆ, 11ನೇ ದಿನವಾದ ಶನಿವಾರ ಸಂಜೆ 4 ಗಂಟೆಗೆ ವಸಂತೋತ್ಸವ ಹಾಗೂ ರಾತ್ರಿ 12 ಗಂಟೆಗೆ ಧ್ವಜಾರೋಹಣ ನಡೆಯಲಿದೆ.

150 ಜನರಿಂದ ಹೂವಿನ ಅಲಂಕಾರ

'ಇಷ್ಟು ವರ್ಷ ದೇವಸ್ಥಾನದ ಸುತ್ತಮುತ್ತ ತಾತ್ಕಾಲಿಕವಾಗಿ ಸಿಸಿಟಿವಿ ಕ್ಯಾಮರಾ ಅಳವಡಿಕೆ ಮಾಡಲಾಗುತ್ತಿತ್ತು. ಈಗ ದೇವಸ್ಥಾನದ ಸುತ್ತಮುತ್ತಲಿನ 500 ಮೀ. ಸಿಸಿ ಟಿವಿ ಕ್ಯಾಮರಾ ಅಳವಡಿಸಲಾಗುತ್ತಿದ್ದು, ಇದು ಕರಗ ಉತ್ಸವದ ನಂತರವೂ ಇರಲಿದೆ. ಕರಗ ಉತ್ಸವದ ಪ್ರಯುಕ್ತ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ನಡೆಸಲಾಗುತ್ತಿದೆ' ಎಂದು ಧರ್ಮರಾಯಸ್ವಾಮಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೆ. ಸತೀಶ್ ತಿಳಿಸಿದರು.

'ಅದ್ದೂರಿಯಾಗಿ ಹೂವಿನ ಅಲಂಕಾರ ಮಾಡಲಾಗುತ್ತಿದೆ. ಇದಕ್ಕಾಗಿ ತಮಿಳುನಾಡಿನಿಂದ 150 ಜನರು ಬಂದಿದ್ದಾರೆ. ಈ ಉತ್ಸವಕ್ಕೆ ಬಿಬಿಎಂಪಿ ₹75 ಲಕ್ಷ ನೀಡುವುದಾಗಿ ತಿಳಿಸಿದೆ. ಬಾಕಿ ಇದ್ದ ₹40 ಲಕ್ಷ ಬಿಡುಗಡೆಯಾಗಿದೆ. ಕರಗ ಉತ್ಸವ ಸಂಚರಿಸುವ ಪ್ರದೇಶದಲ್ಲಿ ಇ- ಶೌಚಾಲಯಕ್ಕೂ ವ್ಯವಸ್ಥೆ ಮಾಡಲಾಗುತ್ತದೆ' ಎಂದು ಹೇಳಿದರು.

8 ವಲಯಕ್ಕೆ ಕಾನೂನು ಮುಖ್ಯಸ್ಥರ ನೇಮಕ

ಕಾನೂನು ಸಹಕಾರ: ಹೈಕೋರ್ಟ್‌ಗೆ ಬಿಬಿಎಂಪಿ ಮಾಹಿತಿ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಎಂಟೂ ವಲಯಗಳಲ್ಲಿನ ವ್ಯಾಜ್ಯಗಳೂ ಸೇರಿದಂತೆ ಕಾನೂನು ಸಹಕಾರದ ಅಗತ್ಯತೆ ಕುರಿತಂತೆ ಗಮನಹರಿಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಲಾಗಿದೆ' ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

'ನಗರದ ಬನಶಂಕರಿ ಮೂರನೇ ಹಂತದಲ್ಲಿರುವ ನನ್ನ ನೆರೆಮನೆಯ ನಿವಾಸಿಯೊಬ್ಬರು ಕಟ್ಟಡ ಪರವಾನಗಿ ಉಲ್ಲಂಘಿಸಿ ನಿರ್ಮಾಣ ಚಟುವಟಿಕೆಯಲ್ಲಿ ತೊಡಗಿದ್ದಾರೆ' ಎಂದು ಆಕ್ಷೇಪಿಸಿ ವಿ.ವೆಂಕಟೇಶ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಕಾನೂನು ಕೋಶದ ಮುಖ್ಯಸ್ಥ ಚಂದ್ರಶೇಖರ ಪಾಟೀಲ ಹಾಜರಾಗಿ ಈ ಕುರಿತಂತೆ ನ್ಯಾಯಪೀಠಕ್ಕೆ ವಿವರಿಸಿದರು. 'ಬಿಬಿಎಂಪಿಯ ಎಂಟೂ ವಲಯಗಳಲ್ಲಿ ಈ ಹಿಂದೆ ಕೆಲವಾರು ಕೊರತೆಗಳಿದ್ದವು ಮತ್ತು ಇವುಗಳಿಂದಾಗಿ ಉಂಟಾಗಿರುವ ತಪ್ಪುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಾಗಿದೆ. ಸಂಬಂಧಿಸಿದ ಪಾಲಿಕೆ ಪರ ವಕೀಲರು ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡಲಾಗಿದೆ' ಎಂದರು.

'ಈ ನಿಟ್ಟಿನಲ್ಲಿ ಪಾಲಿಕೆಯ ಎಂಟೂ ವಲಯಗಳಲ್ಲಿನ ಕಾನೂನು ಅಗತ್ಯತೆ ಬಗ್ಗೆ ಗಮನಹರಿಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಲಾಗಿದೆ. ಅಂತೆಯೇ, ಬಿಬಿಎಂಪಿ ಅಧಿಕಾರಿಗಳು, ಕಾನೂನು ಅಧಿಕಾರಿಗಳು ಮತ್ತು ಬಿಬಿಎಂಪಿಯ ವಕೀಲರ ನಡುವೆ ಸುಲಭವಾಗಿ ಸಂವಹನ ಸಾಧ್ಯವಾಗಿಸುವ ನಿಟ್ಟಿನಲ್ಲಿ ಬಿಬಿಎಂಪಿಯಲ್ಲಿ ಸಿಸಿಎಂಎಸ್ (ಅಡಕಗೊಂಡ ವಿಷಯಗಳ ನಿರ್ವಹಣಾ ವ್ಯವಸ್ಥೆ) ವೇದಿಕೆ ಜಾರಿಗೆ ತರಲಾಗುವುದು. ಈ ಸಂಬಂಧ ಇ-ಆಡಳಿತ ಇಲಾಖೆಯ ಕಾರ್ಯದರ್ಶಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು' ಎಂದು ಚಂದ್ರಶೇಖರ್ ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಿದೆ. ಈ ಹಿಂದಿನ ವಿಚಾರಣೆ ವೇಳೆ ನ್ಯಾಯಪೀಠವು, ಕಾನೂನು ಕೋಶದ ಮುಖ್ಯಸ್ಥರೇ ಖುದ್ದು ಹಾಜರಿದ್ದು ಅರ್ಜಿದಾರರ ಆಕ್ಷೇಪಣೆಗೆ ಉತ್ತರಿಸುವಂತೆ ಆದೇಶಿಸಿತ್ತು. ಅರ್ಜಿದಾರರ ಪರ ವಕೀಲ ವಿ.ಟಿ. ಆಕಾಶ್ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?: 'ಬಿಬಿಎಂಪಿ ಜಾಗವನ್ನು ಒತ್ತುವರಿ ಮಾಡಿ ಮನೆ ನಿರ್ಮಿಸಲಾಗಿದೆ ಎಂಬ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಪ್ರತಿವಾದಿ ಡಿ.ಶಶಾಂಕ್ ದಾಖಲಿಸಿರುವ ಸಿವಿಲ್ ದಾವೆಯಲ್ಲಿ ಬಿಬಿಎಂಪಿ ಈತನಕ ಕೋರ್ಟ್‌ಗೆ ಯಾವುದೇ ಲಿಖಿತ ಆಕ್ಷೇಪಣೆ ಸಲ್ಲಿಸಿಲ್ಲ ಅಥವಾ ಒತ್ತುವರಿ ಆಗಿದೆ ಎಂದು ಹೇಳಿಲ್ಲ. ಪಾಲಿಕೆ ಅಧಿಕಾರಿಗಳು ಶಶಾಂಕ್ ಜೊತೆ ಶಾಮೀಲಾಗಿ ಕಟ್ಟಡ ನಿರ್ಮಾಣಗೊಳ್ಳಲು ಸಹಕರಿಸಿದ್ದಾರೆ ಎಂಬ ಅರ್ಜಿದಾರರ ವಾದ ಆಘಾತಕಾರಿಯಾಗಿದೆ. ಇದನ್ನು ಪುಷ್ಟೀಕರಿಸಲು ಅವರು ನೀಡಿರುವ ಛಾಯಾಚಿತ್ರಗಳೇ ಸಾಕ್ಷಿ' ಎಂದು ನ್ಯಾಯಪೀಠ ಕಳೆದ ವಿಚಾರಣೆ ವೇಳೆ ತಿಳಿಸಿತ್ತು.

ನೈರುತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/166/2023 ದಿನಾಂಕ : 28-03-2023

ಕೆಲಸದ ಹೆಸರು	ಅಂದಾಜು ಮೌಲ್ಯ
ಬಾಗಲಕೋಟೆ – ಕುಡಚಿ ಹೊಸ ಮಾರ್ಗ ಯೋಜನೆಯಲ್ಲಿ ಲೋಕಾಪುರ್ (ಹೊರತುಪಡಿಸಿ) ಮತ್ತು ಯಡವಾಡ (ಒಳಗೊಂಡು) ನಡುವೆ ಚೈನೇಜ್ 39/000 ಮತ್ತು ಚೈನೇಜ್ 60/000 ನಡುವೆ ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ ಆಧಾರದ ಮೇಲೆ ವಿದ್ಯುತ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿಗಳನ್ನು ಒಳಗೊಂಡಂತೆ ಹೊಸ ರೈಲ್ವೆ ಮಾರ್ಗದ ನಿರ್ಮಾಣಕ್ಕಾಗಿ ಯೋಜನಾ ನಿರ್ವಹಣಾ ಸೇವೆಗಳನ್ನು ಒದಗಿಸಲು ಅಧಿಕೃತ ಇಂಜಿನಿಯರ್ ನೇಮಕಾತಿಗಾಗಿ ಪ್ರಸ್ತಾವನೆಗಾಗಿ ಕೋರಿಕೆ. (ಟೆಂಡರ್ ಉಲ್ಲೇಖ ಸಂ. ಪಿಎಂಎಸ್–ಬಿಜಿಕೆ–ಕೆಯುಡಿ)	ರೂ. 2,09,39,965/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12–05–2023 ರಂದು 11:00 ಗಂಟೆವರೆಗೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/168/2023 ದಿನಾಂಕ : 30–03–2023

ಕೆಲಸದ ಹೆಸರು	ಅಂದಾಜು ಮೌಲ್ಯ
ತುಮಕೂರು – ರಾಯದುರ್ಗ ಹೊಸ ಮಾರ್ಗ : 1) ಆವುಲದಟ್ಲ, ಕಲ್ಯಾಣದುರ್ಗ, ಕದಿರಿದೇವರಪಲ್ಲಿ, ದೊಡ್ಡಹಳ್ಳಿಯಲ್ಲಿ ಸಾಮಾನ್ಯ ವಿದ್ಯುತ್ ಒಳಗೊಂಡು ಪಾದಚಾರಿ ಮೇಲ್ಸೇತುವೆ, ಪಿಎಫ್ ಶೆಲ್ಟರ್, ಹೈ ಲೆವೆಲ್ ಪ್ಲಾಟ್‌ಫಾರಂ ನಿರ್ಮಾಣ ಮತ್ತು ರಾಯದುರ್ಗ ಮತ್ತು ತುಮಕೂರು ನಿಲ್ದಾಣಗಳಲ್ಲಿ ಇತರ ವಿವಿಧ ಕಾಮಗಾರಿಗಳು. 2) ಮಲ್ಲಾಪುರಂ, ರಣಮೇಪಲ್ಲಿ ನಿಲ್ದಾಣಗಳಲ್ಲಿ ಸಾಮಾನ್ಯ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಭೂಮಿ ಕಾಮಗಾರಿ, ಸೇತುವೆ ಕಾಮಗಾರಿ, ನಿಲ್ದಾಣ ಕಟ್ಟಡ, ಪ್ಲಾಟ್‌ಫಾರಂ, ಪ್ಲಾಟ್‌ಫಾರಂ ಶೆಲ್ಟರ್, ಪಿ.ವೇ ಕಾಮಗಾರಿಗಳು, ಬಲ್ಲಾಸ್ಟ್ ಸರಬರಾಜನ್ನು ಒಳಗೊಂಡು ಯಾರ್ಡ್ ಮತ್ತು ಹೊಸ ನಿಲ್ದಾಣಗಳು ಹಾಗೂ ಇತರ ವಿವಿಧ ಕಾಮಗಾರಿಗಳು (ಸಮಗ್ರ ಕಾಮಗಾರಿ) (ಟೆಂಡರ್ ಉಲ್ಲೇಖ ಸಂ. ಟಿಕೆ–ಆರ್‌ಡಿಜಿ–090)	ರೂ. 75,25,78,555/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21–04–2023 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/02/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

S.W.Railways SWRRLY SWRRLY

ನಗರದಲ್ಲಿ ಇಂದು

ಶ್ರೀರಾಮೋತ್ಸವ: ಭಜನೆ– ವಾಗ್ದೇವಿ ಭಜನಾ ಮಂಡಳಿ, ಭಜನೆ ಮತ್ತು ದೇವರನಾಮ, ಸೀತಾಕಲ್ಯಾಣೋತ್ಸವ, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಬೆಳಿಗ್ಗೆ 10.15ರಿಂದ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಆದಿತ್ಯ ರವಿದಾಸ ಮತ್ತು ತಂಡ, ಸಂಗೀತ ಕಛೇರಿ: ಪಾಲಕಾಡ್ ರಾಮಪ್ರಸಾದ್, ಪಿಟೀಲು: ಸಾಯಿ ರಕ್ಷಿತ್, ಮೃದಂಗ: ಜೆ. ವೈದ್ಯನಾಥನ್, ಘಟ: ಸುಕನ್ಯ ರಾಮಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಸನ್ಮಾನ ಕಾರ್ಯಕ್ರಮ: ಅತಿಥಿಗಳು: ಶಂಕರ್ ಮಹಾದೇವ ಬಿದರಿ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಎಜುಕೇಷನಲ್ ಟ್ರಸ್ಟ್, ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜು, ಯಲಹಂಕ ನ್ಯೂಟೌನ್, ಸಂಜೆ 5

ಶ್ರೀರಾಮೋತ್ಸವ: ನೃತ್ಯ: ಅದಿತಿ ದೇವರಕೊಂಡ, ಗೀತಾ ಗಣೇಶ, ಸಂಗೀತ, ಗಾಯನ: ಎಂ.ಎಸ್. ಶೀಲಾ, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಎನ್. ವಾಸುದೇವ್, ಘಟ: ನಾರಾಯಣಮೂರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ

ರಾಮಾಯಣ ಸಪ್ತಾಹ: ಪ್ರವಚನ: ಸಾಯಿ ಗಿರಿಧರ್ ಸಾಯಿರಾಮ್, ಆಯೋಜನೆ ಮತ್ತು ಸ್ಥಳ: ಸತ್ಯ ಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 5ರಿಂದ

ಶ್ರೀರಾಮ ನವಮಿ ಉತ್ಸವ: ಭರತನಾಟ್ಯ ಪ್ರದರ್ಶನ: ಸುಮಾ ಐತಾಳ್ ಮತ್ತು ತಂಡ, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ರಾಮನವಮಿ ಕಾರ್ಯಕ್ರಮ: ಪಿಟೀಲು: ಶಂಕರ್ ರಾಜನ್, ಮೃದಂಗ: ಭಾರ್ಗವ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಮಲ್ಲಾಡಿ ಸಹೋದರರು, ರಾಮ್ ಪ್ರಸಾದ್, ರವಿ ಕುಮಾರ್, ಪಿಟೀಲು: ನಿಶಾಂತ್ ಚಂದ್ರನ್, ಮೃದಂಗ: ತುಮಕೂರು ಬಿ. ರವಿಶಂಕರ್, ಘಟ: ತುಮಕೂರು ಶಶಿ ಶಂಕರ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಶ್ರೀರಾಮೋತ್ಸವ: ಸಾಮೂಹಿಕ ಸತ್ಯನಾರಾಯಣ ಪೂಜೆ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಹೋಮ, ದೂಳೋತ್ಸವ ರಥೋತ್ಸವ, ಮಧ್ಯರಾತ್ರಿ ಹೂವಿನ ಪಲ್ಲಕ್ಕಿ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಬೆಳಿಗ್ಗೆ 5ರಿಂದ

ಡಾ. ಬಾಬು ಜಗಜೀವನರಾಮ್ ಜಯಂತಿ ಅಂಗವಾಗಿ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅನ್ವಿತಾ ಸಾವಿತ್ರಿ, ಜುಗಲಬಂದಿ, ವೀಣೆ: ಡಿ. ಬಾಲಕೃಷ್ಣ, ಕೊಳಲು: ವಂಶೀಧರ್, ಮೃದಂಗ: ಕೆ.ವಿ. ರವಿಶಂಕರ ಶರ್ಮ, ಘಟ: ರಾಘವೇಂದ್ರ ಪ್ರಕಾಶ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15 ರಿಂದ

ಅನ್ವಿತಾ ಸಾವಿತ್ರಿ

ಅವರ ಪತ್ರಿಮೆಗೆ ಮಾಲಾರ್ಪಣೆ: ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ: ಪಶ್ಚಿಮದ್ವಾರ, ವಿಧಾನಸೌಧ, ಬೆಳಿಗ್ಗೆ 10

'ಭಾರತದ ಸಮಕಾಲೀನ ಸವಾಲುಗಳು ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಚಿಂತನೆಗಳು' ಕುರಿತು ವಿಚಾರಸಂಕಿರಣ: ಉದ್ಘಾಟನೆ: ಕಾಂಚಾಲಯ್ಯ ಮೀನುಗಾರ, ಅತಿಥಿಗಳು: ಮಿಲಿಂದ್ ಇನಾಂದರ್, ಎನ್. ಮಹೇಶ್ ಬಾಬು, ಎನ್. ಸುಧಾಕರ್, ಎಂ. ಉದಯ್ ಕುಮಾರ್, ಅಧ್ಯಕ್ಷತೆ: ಜಯಕರ್ ಎಸ್.ಎಂ., ಆಯೋಜನೆ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಎಚ್. ಎನ್. ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30ರಿಂದ

ಡಾ. ಬಾಬು ಜಗಜೀವನರಾಮ್ ಜಯಂತಿ: ಉದ್ಘಾಟನೆ: ಜಯಕರ ಎಸ್.ಎಂ., ಉಪಸ್ಥಿತಿ: ಷಡಕ್ಷರಿಮುನಿ ಸ್ವಾಮೀಜಿ, ಪ್ರಾಸ್ತಾವಿಕ ನುಡಿ: ಎನ್. ಮಹೇಶ್ ಬಾಬು, ಉಪನ್ಯಾಸ: ಕೆ.ಆರ್. ದುರ್ಗಾದಾಸ್, ಆರ್. ರಾಜಪ್ಪ ದಳವಾಯಿ, ಆಯೋಜನೆ: ಡಾ.ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11.30

ಪ್ರಶಸ್ತಿ ಪ್ರದಾನ: ಎಂ.ಆರ್. ವೆಂಕಟೇಶ್, 'ಡಾ. ಸಿಸಿರಾ' ಪ್ರಶಸ್ತಿ ಪುರಸ್ಕೃತರು: ನೇ.ಭ. ರಾಮಲಿಂಗಶೆಟ್ಟಿ, 'ಹುಲಿಕಲ್ ಮಲ್ಲಮ್ಮ ಕಾಳಹೊನ್ನಯ್ಯ' ಪ್ರಶಸ್ತಿ ಪುರಸ್ಕೃತರು: ರಕ್ಷಿತಾ ರಾಮ್ ಎಂ.ಆರ್., ಉಪಸ್ಥಿತಿ: ಕೆ. ಗೋವಿಂದು ಹುಲಿಕಲ್ಲು, ಅಧ್ಯಕ್ಷತೆ: ಎಸ್. ರಾಮಲಿಂಗೇಶ್ವರ, ಆಯೋಜನೆ: ಡಾ.ಸಿಸಿರಾ ಅಭಿನಂದನಾ ಸಮಿತಿ, ಸ್ಥಳ: ಸನ್ಮಾನ್ ಹೋಟೆಲ್ ಸಭಾಂಗಣ, ಸುಬೇದಾರ್ ಛತ್ರಂ ರಸ್ತೆ, ಶೇಷಾದ್ರಿಪುರ, ಸಂಜೆ 4.30

ಭಜನೆ, ಪ್ರವಚನ, ಹರಿನಾಮ ಸಂಕೀರ್ತನೆ: ಭಜನೆ: ವಾರಿಧಿ ಭಜನಾ ಮಂಡಳಿ, ಪ್ರವಚನ: ಕಲ್ಲಾಪುರ ಪವಮಾನಾಚಾರ್, ಆಯೋಜನೆ ಮತ್ತು ಸ್ಥಳ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಸಂಜೆ 6ರಿಂದ

ಪ್ರವಚನ ವಾಹಿನಿ: ಸಾಮೂಹಿಕ ಸತ್ಯನಾರಾಯಣ ಪೂಜೆ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಗಿರೀಶ ಕಾರ್ನಾಡರ 'ತುಘಲಕ್' ನಾಟಕ ಪ್ರದರ್ಶನ: ವಿನ್ಯಾಸ: ಎಂ.ಎಸ್. ಸತ್ಯು, ನಿರ್ದೇಶನ: ಎಸ್. ಸುರೇಂದ್ರನಾಥ್, ಆಯೋಜನೆ: ಭೂಮಿಜಾ, ಸ್ಥಳ: ರಂಗಶಂಕರ, ಸಂಜೆ 7.30

ನಗರದಲ್ಲಿ ಅಭಿವ್ಯಕ್ತಿ ದಾವಣಗೆರೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಮಲ್ಲಿಕಾರ್ಜುನ ಕಡಕೋಳ ಅವರ 'ಮುಟ್ಟು' ಕಥಾ ಸಂಕಲನವನ್ನು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಂಗಳವಾರ ಬಿಡುಗಡೆ ಮಾಡಿದರು. ವಿಮರ್ಶಕಿ ಎಂ.ಎಸ್. ಆಶಾದೇವಿ ಹಾಗೂ ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

ಸಲಿಂಗ ವಿವಾಹ: 'ಆರ್ಗನೈಸರ್' ವಿರೋಧ

ನವದೆಹಲಿ (ಪಿಟಿಐ): ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡುವುದಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖವಾಣಿ 'ಆರ್ಗನೈಸರ್' ವಿರೋಧ ವ್ಯಕ್ತಪಡಿಸಿದೆ.

'ಸುಪ್ರೀಂ ಕೋರ್ಟ್‌ನಿಂದ ವಿಚಾರಣೆಗೆ ಒಳಪಟ್ಟಿರುವ ಈ ವಿಚಾರದ ಬಗೆಗಿನ ಮತ್ತು ವೈವಾಹಿಕ ವಿಷಯಗಳ ಕುರಿತ ಯಾವುದೇ ಚರ್ಚೆಗೆ ಭಾರತೀಯ ದೃಷ್ಟಿಕೋನವು ಕೇಂದ್ರವಾಗಿರಬೇಕು' ಎಂದು ಅದು ಪ್ರತಿಪಾದಿಸಿದೆ.

'ಸಲಿಂಗ ಸಂಬಂಧಗಳನ್ನು ಮದುವೆಯ ಜೊತೆಗೆ ಸಮೀಕರಿಸುವುದು ಸರಿಯಲ್ಲ. ಭಾರತೀಯ ಸಂಪ್ರದಾಯದಲ್ಲಿ ಮತ್ತು ಕಾನೂನುಗಳಲ್ಲಿ ಮದುವೆಯು ಒಪ್ಪಂದ ಅಥವಾ ಕಾನೂನಾತ್ಮಕ ನೋಂದಣಿಯನ್ನು ಮೀರಿದೆ' ಎಂದೂ ಪತ್ರಿಕೆಯ ಈಚಿನ ಸಂಚಿಕೆಯಲ್ಲಿ ಸಂಪಾದಕ ಪ್ರಫುಲ್ಲ ಕೇತ್ಕರ್ ಬರೆದಿದ್ದಾರೆ.

ವರ್ಷಾಂತ್ಯಕ್ಕೆ ಇನ್ನೂ 26 ಕಿ.ಮೀ. ಸೇರ್ಪಡೆ • ಎಲೆಕ್ಟ್ರಾನಿಕ್ ಸಿಟಿ ಟೆಕ್ ಹಬ್‌ಗೆ ಆಗಸ್ಟ್‌ನಲ್ಲಿ ಸಂಪರ್ಕ

ಮೆಟ್ರೊ ಜಾಲ: ಆಸ್ತಿಗೆ ಆನೆ ಬಲ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮೆಟ್ರೊ ರೈಲು ಮಾರ್ಗ ಯೋಜನೆಗಳು ಬೆಂಗಳೂರು ನಗರದ ಆಸ್ತಿ ಮೌಲ್ಯವನ್ನು ಗಗನಮುಖಿಯಾಗಿಸಿದೆ. ಪ್ರಗತಿಯಲ್ಲಿರುವ ಮೆಟ್ರೊ ಮಾರ್ಗದ ಕಾಮಗಾರಿ ಪೂರ್ಣಗೊಂಡರೆ ಮೆಟ್ರೊ ಜಾಲದ ಜತೆಗೆ ಆಸ್ತಿಗಳಿಗೂ ಇನ್ನಷ್ಟು ಬಲ ಬರಲಿದೆ.

ಸದ್ಯ 69.66 ಕಿಲೋ ಮೀಟರ್ ಇರುವ ಮೆಟ್ರೊ ರೈಲು ಮಾರ್ಗಕ್ಕೆ ಈ ವರ್ಷದ ಅಂತ್ಯಕ್ಕೆ ಇನ್ನೂ 26 ಕಿಲೋ ಮೀಟರ್ (ಆರ್.ವಿ.ರಸ್ತೆ–ಬೊಮ್ಮಸಂದ್ರ, ನಾಗಸಂದ್ರ–ಮಾದವಾರ, ಕೆಂಗೇರಿ–ಚಲ್ಲಘಟ್ಟ) ಸೇರ್ಪಡೆಯಾಗಲಿದೆ. ವೈಟ್‌ಫೀಲ್ಡ್ ಟೆಕ್ ಹಬ್ ಈಗಾಗಲೇ ಮೆಟ್ರೊ ಸಂಪರ್ಕ ಕಲ್ಪಿಸಲಾಗಿದ್ದು, ಎಲೆಕ್ಟ್ರಾನಿಕ್ ಸಿಟಿ ಟೆಕ್ ಹಬ್‌ಗೆ ಆಗಸ್ಟ್‌ನಲ್ಲಿ ದೊರೆಯಲಿದೆ.

ವೈಟ್‌ಫೀಲ್ಡ್ ಮೆಟ್ರೊ ಸಂಪರ್ಕ ಪರಿಪೂರ್ಣವಾಗಿ ಆರಂಭವಾಗದಿದ್ದರೂ ಕೆ.ಆರ್. ಪುರದಿಂದ ವೈಟ್‌ಫೀಲ್ಡ್‌ಗೆ ಸಂಪರ್ಕ ಕಲ್ಪಿಸಿದೆ. ಮೆಟ್ರೊ ರೈಲು ಹಾದು ಹೋಗಿರುವ ಸುತ್ತಮುತ್ತಲ ಬಡಾವಣೆಗಳಲ್ಲಿ ಆಸ್ತಿ ಮೌಲ್ಯ ಹೆಚ್ಚಾಗಿದೆ. ಐ.ಟಿ. ಕಂಪನಿಗಳ ತವರಾಗಿರುವ ಈ ಭಾಗದಲ್ಲಿ ಕೈಗೆಟಕದಷ್ಟು ಎತ್ತರದಲ್ಲಿ ಇದ್ದ ಆಸ್ತಿ ಮೌಲ್ಯ ಈಗ ಇನ್ನಷ್ಟು ಹೆಚ್ಚಳವಾಗಿದೆ ಎನ್ನುತ್ತಾರೆ ರಿಯಲ್ ಎಸ್ಟೇಟ್ ಉದ್ಯಮಿಗಳು.

ಕೆ.ಆರ್.ಪುರ ಮತ್ತು ಬೈಯಪ್ಪನಹಳ್ಳಿ ನಡುವೆ ಕಾಮಗಾರಿ ಬಾಕಿ ಇದೆ. ಕೆಂಗೇರಿಯಿಂದ ವೈಟ್‌ಫೀಲ್ಡ್‌ಗೆ ನೇರ ಮಾರ್ಗದ ಸಂಪರ್ಕ ದೊರೆತಿದ್ದರೆ ಆಸ್ತಿ ಮೌಲ್ಯ ಇನ್ನಷ್ಟು ಹೆಚ್ಚಾಗುತ್ತಿತ್ತು ಎಂದು ಅವರು ಹೇಳುತ್ತಾರೆ.

ಇದಲ್ಲದೇ ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್. ಪುರ, ಹೆಬ್ಬಾಳ ಮಾರ್ಗದಲ್ಲಿ ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಮಾರ್ಗ ಮತ್ತು ಗೊಟ್ಟಿಗೆರೆ–ನಾಗವಾರ ಮಾರ್ಗಗಳ ಕಾಮಗಾರಿ ಪೂರ್ಣಗೊಳ್ಳಲು 2024 ಅಂತ್ಯದ ಗುರಿಯನ್ನು ಬಿಎಂಆರ್‌ಸಿಎಲ್ ಹೊಂದಿದೆ. ಕಾಮಗಾರಿ ಕೂಡ ವೇಗವಾಗಿ ನಡೆಯುತ್ತಿದೆ. ಈ ಮಾರ್ಗದಲ್ಲೂ ಈಗ ಆಸ್ತಿ ಮೌಲ್ಯ ಬಡವರ ಕೈಗೆ ಸಿಗದಂತಾಗಿದೆ. ಮೆಟ್ರೊ ರೈಲುಗಳ ಓಡಾಟ ಆರಂಭವಾದರೆ ಸುತ್ತಮುತ್ತಲ ಹತ್ತು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಆಸ್ತಿ ಮೌಲ್ಯ ಆಕಾಶಕ್ಕೇ ಹೋಗಲಿದೆ.

ಮೆಟ್ರೊ ರೈಲುಗಳು ಕಾರ್ಯಾಚರಣೆ ನಂತರ ಸುತ್ತಮುತ್ತಲ ಭಾಗದಲ್ಲಿ ರಿಯಲ್ ಎಸ್ಟೇಟ್ ಬೇಡಿಕೆ ಹೆಚ್ಚವಾಗಲಿದ್ದು, ಅದಕ್ಕೆ ತಕ್ಕಂತೆ ದರವೂ ಹೆಚ್ಚಾಗಲಿದೆ. ಯೋಜನೆಯ ಪ್ರಸ್ತಾಪವಾದ ಕೂಡಲೇ ಆಸ್ತಿ ಮೌಲ್ಯ ಹೆಚ್ಚಾಗಿದೆ ಎಂದೂ ಹೇಳಲಾಗುವುದಿಲ್ಲ ಎಂದು ಕ್ರೆಡಾಯ್ ಬೆಂಗಳೂರು ಘಟಕದ ಭಾಸ್ಕರ್ ಟಿ.ನಾಗೇಂದ್ರಪ್ಪ ಅಭಿಪ್ರಾಯಪಡುತ್ತಾರೆ.



ಮೂರನೇ ಹಂತಕ್ಕೆ 2028ರ ಗುರಿ

ಮೂರನೇ ಹಂತದಲ್ಲಿ(ಕೆಂಪಾಪುರ–ಜೆ.ಪಿ. ನಗರ ನಾಲ್ಕನೇ ಹಂತ, ಮಾಗಡಿ ರಸ್ತೆ–ಕಡಬಗೆರೆ, ಸರ್ಜಾಪುರ–ಹೆಬ್ಬಾಳ) 81 ಕಿಲೋ ಮೀಟರ್ ಉದ್ದದ ಮಾರ್ಗ 2028ರ ವೇಳೆಗೆ ಸಾರ್ವಜನಿಕರಿಗೆ ಲಭ್ಯವಾಗುವ ಅಂದಾಜಿದೆ.

ಅದರ ಜತೆಗೆ ಈಗ ಸರ್ಕಾರ ಪ್ರಸ್ತಾಪಿಸಿರುವ ಹೊಸ ನಾಲ್ಕು ಯೋಜನೆಗಳು 56 ಕಿಲೋ ಮೀಟರ್ ಮಾರ್ಗವನ್ನು ಹೊಂದಿವೆ.

ಮುಂದಿನ 10 ವರ್ಷಗಳಲ್ಲಿ ನಗರದ ಎಲ್ಲಾ ಪ್ರದೇಶದಲ್ಲೂ ಎರಡು ಕಿಲೋ ಮೀಟರ್ ವ್ಯಾಪ್ತಿಗೆ ಮೆಟ್ರೊ ರೈಲು ಸಂಪರ್ಕ ಸಿಗುವಂತೆ ಮಾಡಲು ರಾಜ್ಯ ಸರ್ಕಾರ ಯೋಜನೆ ರೂಪಿಸಿದ್ದು, ಹೊಸ ನಾಲ್ಕು ಮೆಟ್ರೊ ರೈಲು ಮಾರ್ಗಗಳನ್ನು ಪ್ರಸ್ತಾಪಿಸಿದೆ. ಎಂ.ಜಿ. ರಸ್ತೆಯಿಂದ ಹಳೇ ವಿಮಾನ ನಿಲ್ದಾಣ ರಸ್ತೆ ಮೂಲಕ ಮಾರತಹಳ್ಳಿ ಮಾರ್ಗವಾಗಿ ವೈಟ್‌ಫೀಲ್ಡ್ ಸಂಪರ್ಕಿಸುವ ಮಾರ್ಗ, ನಾಗವಾರದಿಂದ ಥಣಿಸಂದ್ರ ಮಾರ್ಗವಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ಮತ್ತೊಂದು ಮಾರ್ಗವನ್ನು ಪ್ರಸ್ತಾಪಿಸಲಾಗಿದೆ. ವೈಟ್‌ಫೀಲ್ಡ್ ತನಕ ನಿರ್ಮಾಣವಾಗಿರುವ ಮಾರ್ಗವನ್ನು ಕಾಟನಲ್ಲೂರು ಮಾರ್ಗವಾಗಿ ಹೊಸಕೋಟೆಗೆ, ಬನ್ನೇರುಘಟ್ಟ ರಸ್ತೆಯ ಮಾರ್ಗವನ್ನು ಜಿಗಣಿಗೆ ವಿಸ್ತರಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಒಟ್ಟಾರೆ ಮೆಟ್ರೊ ರೈಲು ಯೋಜನೆ ಇಡೀ ನಗರದ ಹೊರ ವಲಯಗಳಿಗೂ ಸಂಪರ್ಕಿಸಲಿದ್ದು, ಬೆಂಗಳೂರು ನಗರ ಮತ್ತು ಹೊರ ವಲಯದ ಆಸ್ತಿ ಮೌಲ್ಯ ಹೆಚ್ಚಾಗುವಂತೆ ಮಾಡಿದೆ. ಎಲ್ಲೆಲ್ಲೂ ಹೊಸ ಬಡಾವಣೆಗಳು ತಲೆ ಎತ್ತುತ್ತಿದ್ದು, ಜಮೀನುಗಳು ಬಡಾವಣೆ ಸ್ವರೂಪ ಪಡೆದುಕೊಳ್ಳುತ್ತಿವೆ.



ಐಪಿಎಲ್ 2023 ರಲ್ಲಿ 'ಪ್ರಭಾವಶಾಲಿ ಆಟಗಾರ' ಪರಿಕಲ್ಪನೆ ಪರಿಚಯಿಸಲಾಗಿದೆ!

ಪಂಜಾಬ್ ಮಾದರಿಯಲ್ಲಿ ಟೋಲ್ ರದ್ದತಿಗೆ 'ಆಪ್' ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಂಜಾಬ್ ಮಾದರಿಯಲ್ಲಿ ರಾಜ್ಯದಲ್ಲೂ ಅವಧಿ ಮುಗಿದ ಟೋಲ್ ಕೇಂದ್ರಗಳನ್ನು ಬಂದ್ ಮಾಡಬೇಕು' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಂವಹನಾ ಉಸ್ತುವಾರಿ ಬ್ರಿಜೇಶ್ ಕಾಳಪ್ಪ ಆಗ್ರಹಿಸಿದರು.

'ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಟೋಲ್ ಸಂಗ್ರಹ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಪಂಜಾಬ್‌ನಲ್ಲಿ ಟೋಲ್ ಸಂಗ್ರಹದ ಅವಧಿ ಮುಗಿದ 8 ಕಡೆ ಟೋಲ್ ಕೇಂದ್ರಗಳನ್ನೇ ಬಂದ್ ಮಾಡಿಸಿದ್ದಾರೆ. ಆದರೆ, ಕರ್ನಾಟಕದಲ್ಲಿ ಕಮಿಷನ್ ಆಸೆಗಾಗಿ ಅವಧಿ ಮುಗಿದರೂ ಟೋಲ್ ಸಂಗ್ರಹಕ್ಕೆ ಅವಕಾಶ ಕಲ್ಪಿಸಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಅವರು ದೂರಿದರು.

'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯು ದಶಪಥ ಅಲ್ಲ. ಆರು ಪಥದ ರಸ್ತೆ. ಇದನ್ನು ಸರ್ಕಾರ ಸಹ ಒಪ್ಪಿಕೊಂಡಿದೆ. 2 ಪಥದಿಂದ 4 ಪಥ ನಿರ್ಮಿಸುವಾಗ ಟೋಲ್ ವಿಧಿಸಿರಲಿಲ್ಲ. ಅದರಂತೆಯೇ 6 ಪಥದ ರಸ್ತೆ ನಿರ್ಮಿಸುವಾಗಲೂ ಟೋಲ್ ವಿಧಿಸದೇ ಜನಸಾಮಾನ್ಯರಿಗೆ ನೆರವಾಗಬೇಕಿತ್ತು' ಎಂದು ಅವರು ಹೇಳಿದರು.

'2019-20ರಲ್ಲಿ ಐಎಎಸ್ ಅಧಿಕಾರಿಯೊಬ್ಬರು ಬಿಬಿಎಂಪಿ ಆಯುಕ್ತರಾಗಿದ್ದರು. ಆ ಅವಧಿಯಲ್ಲಿ ಹೂಳು ತೆಗೆಯುವ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ. 8 ವಲಯಗಳ ಗುತ್ತಿಗೆಯನ್ನು ₹36 ಕೋಟಿಗೆ ಒಂದೇ ಕಂಪನಿಗೆ ನೀಡಲಾಗಿತ್ತು. ಈ ಕಾಮಗಾರಿ ಸರಿಯಾಗಿ ನಡೆಯದಿರುವ ಕಾರಣಕ್ಕೆ ಪ್ರವಾಹ ಎದುರಿಸಬೇಕಾಯಿತು. ಅಗತ್ಯಕ್ಕಿಂತ ಹೆಚ್ಚು ಹಣ ಬಿಡುಗಡೆ ಮಾಡಿ, ಜನರ ತೆರಿಗೆ ಹಣ ಲೂಟಿ ಮಾಡಲಾಗಿದೆ' ಎಂದು ದೂರಿದರು.

'ಕೊಳವೆ ಬಾವಿಗಳ ಕಾಮಗಾರಿಗೆ ಬಿಬಿಎಂಪಿ ₹ 969 ಕೋಟಿ ಬಿಡುಗಡೆ ಮಾಡಿದೆ. ಈ ಹಣವನ್ನು ಹೇಗೆ ಬಳಕೆ ಮಾಡಲಾಗಿದೆ ಎಂಬುದರ ಕುರಿತೂ ತನಿಖೆಯಾಗಬೇಕು. ಒಂದೇ ಸ್ಥಳದಲ್ಲಿ ₹ 49 ಕೋಟಿ ಖರ್ಚಾಗಿದೆ. ಕೋವಿಡ್ ಚಿಕಿತ್ಸೆಗೆ ಚಿಕಿತ್ಸಾ ಕೇಂದ್ರ ತೆರೆಯಲಾಗಿತ್ತು. ಅಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿರುವುದರಲ್ಲಿ ಭಾರಿ ಪ್ರಮಾಣದ ಅಕ್ರಮ ನಡೆದಿದೆ. ಸುಮಾರು ₹ 1,300 ಕೋಟಿ ಮೊತ್ತದ ಅಕ್ರಮಗಳು ನಡೆದಿವೆ. ದಾಖಲೆ ಸಹಿತ ಲೋಕಾಯುಕ್ತಕ್ಕೆ ದೂರು ನೀಡುತ್ತೇವೆ' ಎಂದೂ ಬ್ರಿಜೇಶ್ ಕಾಳಪ್ಪ ಹೇಳಿದರು.

ಪಕ್ಷದ ರಾಜ್ಯ ಕಾರ್ಯಾಧ್ಯಕ್ಷರಾದ ಬಿ.ಟಿ. ನಾಗಣ್ಣ, ವಿಶ್ವನಾಥ್ ಹಾಗೂ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅರುಣಾಚಲದಲ್ಲಿ ಹೆಸರು ಬದಲು ಚೀನಾ ಕ್ರಮ ತಿರಸ್ಕರಿಸಿದ ಭಾರತ

ಒಂದನೇ ಪುಟದಿಂದ...

'ಸ್ಥಳಗಳ ಹೆಸರುಗಳನ್ನು ಬದಲಾವಣೆ ಮಾಡಿರುವ ಕುರಿತ ವರದಿಗಳನ್ನು ಗಮನಿಸಿದ್ದೇವೆ. ಚೀನಾ ಇಂಥ ದುಸ್ಸಾಹಸ ಮಾಡುತ್ತಿರುವುದು ಇದೇ ಮೊದಲ ಸಲವೇನಲ್ಲ. ಭಾರತವು ಇಂಥ ನಡೆಯನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತದೆ' ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದರು. ಅರುಣಾಚಲ ಪ್ರದೇಶದ ಕೆಲವು ಸ್ಥಳಗಳ ಹೆಸರುಗಳ ಬದಲಾವಣೆಗೆ ಸಂಬಂಧಿಸಿ ಚೀನಾ ಈಗ ಮೂರನೇ ಪಟ್ಟಿಯನ್ನು ಬಿಡುಗಡೆ ಮಾಡಿದಂತಾಗಿದೆ.

ಕಾಂಗ್ರೆಸ್ ಟೀಕೆ

'ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿದ್ದು, ಹಾಗೆಯೇ ಮುಂದುವರಿಯುವುದು. ಗಾಲ್ವಾನ್ ವಿದ್ಯಮಾನಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಚೀನಾಕ್ಕೆ 'ಕ್ಲೀನ್ ಚಿಟ್' ನೀಡಿದ್ದರ ಪರಿಣಾಮವನ್ನು ದೇಶ ಈಗ ಎದುರಿಸುವಂತಾಗಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ರಾಹುಲ್ ಗಾಂಧಿ ಅವರೂ ಈ ಕುರಿತು ಟ್ವೀಟ್ ಮಾಡಿದ್ದು, 'ಚೀನಾ ಈಗಾಗಲೇ ಭಾರತದ 2,000 ಚದರ ಕಿ.ಮೀ.ನಷ್ಟು ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ. ಸ್ಥಳಗಳ ಹೆಸರುಗಳನ್ನೂ ಬದಲಾಯಿಸುತ್ತಿದೆ. ಆದರೆ, ಪ್ರಧಾನಿ ಮೌನವಾಗಿದ್ದಾರೆ. ಪ್ರಧಾನಿಗಳೇ ಯಾಕಿಷ್ಟು ಹೆದರಿಕೆ' ಎಂದು ಪ್ರಶ್ನಿಸಿದ್ದಾರೆ.

ಮತ್ತೆ ಏಷ್ಯಾದ ಶ್ರೀಮಂತ ವ್ಯಕ್ತಿಯಾದ ಅಂಬಾನಿ

ನವದೆಹಲಿ(ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಅವರು ಏಷ್ಯಾದ ಶ್ರೀಮಂತ ವ್ಯಕ್ತಿ ಎಂದು ಫೋರ್ಬ್ಸ್ ನಿಯತಕಾಲಿಕೆಯು ಮಂಗಳವಾರ ಬಿಡುಗಡೆ ಮಾಡಿರುವ ಬಿಲಿಯನೇರ್-2023 ಪಟ್ಟಿಯಲ್ಲಿ ತಿಳಿಸಿದೆ.

ಅಂಬಾನಿ ಅವರು ಜಾಗತಿಕ ಬಿಲಿಯನೇರ್‌ಗಳ ಪಟ್ಟಿಯಲ್ಲಿ ಒಂಬನೇ ಸ್ಥಾನ ಪಡೆದುಕೊಂಡಿದ್ದು, ಅವರ ಆಸ್ತಿಯ ನಿವ್ವಳ ಮೌಲ್ಯ ₹6.84 ಲಕ್ಷ ಕೋಟಿ. ಅಂಬಾನಿ ಅವರ ಪ್ರತಿಸ್ಪರ್ಧಿ ಗೌತಮ್ ಅದಾನಿ 24ನೇ ಸ್ಥಾನಕ್ಕೆ ಕುಸಿದಿದ್ದಾರೆ. ಆದರೆ, ಅವರು ಭಾರತದಲ್ಲಿ 2ನೇ ಸ್ಥಾನದಲ್ಲಿದ್ದಾರೆ. ಅವರ ಆಸ್ತಿಯ ನಿವ್ವಳ ಮೌಲ್ಯ ₹ 3.87 ಲಕ್ಷ ಕೋಟಿ.

ಶ್ರೀರಾಮಸೇವಾ ಮಂಡಳಿಯು ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಮಂಗಳವಾರ ಮಲ್ಲಾಡಿ ಸಹೋದರರು ಸಂಗೀತ ಕಛೇರಿ ನಡೆಸಿಕೊಟ್ಟರು —ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ನಾಯಕರ ವಿರುದ್ಧ ಇ.ಡಿ. ದಾಳಿಗೆ ಸಜ್ಜು: ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ಕರ್ನಾಟಕದಲ್ಲಿ ಬುಧವಾರದಿಂದ ಜಾರಿ ನಿರ್ದೇಶನಾಲಯ (ಇ.ಡಿ.) ಹಾಗೂ ಆದಾಯ ತೆರಿಗೆ ಇಲಾಖೆಯಿಂದ (ಐಟಿ) ದಾಳಿ ನಡೆಸುವ ಸಾಧ್ಯತೆ ಇದೆ' ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದರು.

ರಣದೀಪ್ ಸಿಂಗ್ ಸುರ್ಜೇವಾಲಾ

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜತೆಗೂಡಿ ಮಂಗಳವಾರ ರಾತ್ರಿ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಅವರು, 'ಹಲವು ಶಾಸಕರು ಕಾಂಗ್ರೆಸ್ ಸೇರಲು ಸಜ್ಜಾಗಿದ್ದಾರೆ. ಈ ಬೆಳವಣಿಗೆಯಿಂದ ಬಿಜೆಪಿ ಹತಾಶೆಗೊಂಡಿದೆ. ಕಾಂಗ್ರೆಸ್ ನಾಯಕರ ವಿರುದ್ಧ ದಾಳಿ ನಡೆಸಲು ಅಧಿಕಾರಿಗಳು ರಾಜ್ಯಕ್ಕೆ ಬಂದಿದ್ದಾರೆ. ಇಂತಹ ಬೆದರಿಕೆಗಳಿಗೆ ನಾವು ಬಗ್ಗುವುದಿಲ್ಲ' ಎಂದು ಹೇಳಿದರು.

ಸಿದ್ದರಾಮಯ್ಯ ಮಾತನಾಡಿ, 'ದಾಳಿ ನಡೆಸಲು 1 ಸಾವಿರಕ್ಕೂ ಹೆಚ್ಚು ಅಧಿಕಾರಿಗಳನ್ನು ರಾಜ್ಯಕ್ಕೆ ಕಳುಹಿಸಿದ್ದಾರೆ. ಕಾಂಗ್ರೆಸ್‌ನವರಿಗೆ ಬೆದರಿಕೆ ಹಾಕುತ್ತಾ ಇದ್ದಾರೆ. ಆದರೆ, ನಮ್ಮ ಮುಖಂಡರು ಇದಕ್ಕೆ ಹೆದರುವುದಿಲ್ಲ ಎಂಬ ವಿಶ್ವಾಸ ಇದೆ' ಎಂದರು.

ಶಿವಕುಮಾರ್ ಮಾತನಾಡಿ, 'ನಮ್ಮ ಪಕ್ಷವನ್ನು ಬೆಂಬಲಿಸುವವರ ಮೇಲೂ ದಾಳಿ ನಡೆಸಲು ತನಿಖಾ ಸಂಸ್ಥೆಗಳು ಸಿದ್ಧತೆ ಮಾಡಿಕೊಂಡಿವೆ. ಬಿಜೆಪಿಯ ಚುನಾವಣಾ ಅಕ್ರಮಕ್ಕೆ ಅಧಿಕಾರಿಗಳು ಸಾಥ್ ನೀಡುತ್ತಿದ್ದಾರೆ. ನಮಗೂ ಕಾಲ ಬರುತ್ತದೆ. ನಾವು ಎದುರಿಸುತ್ತೇವೆ' ಎಂದು ತಿಳಿಸಿದರು.

ಮಾಧ್ಯಮ ಪ್ರತಿನಿಧಿ ಮೇಲೆ ಹಲ್ಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಲ್ಲಿನ ಹೋಟೆಲ್‌ನಲ್ಲಿ ತಂಗಿದ್ದ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಪ್ರತಿಕ್ರಿಯೆ ಪಡೆಯುತ್ತಿದ್ದ ವೇಳೆ ಪತ್ರಕರ್ತರೊಬ್ಬರ ಮೇಲೆ ಹೆಬ್ಬಾಳ ಶಾಸಕ ಬೈರತಿ ಸುರೇಶ್ ಹಲ್ಲೆಗೆ ಯತ್ನಿಸಿದರು. ಇದಕ್ಕೆ ಪತ್ರಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಮಾತನಾಡುತ್ತಿದ್ದ ವೇಳೆ ಪತ್ರಕರ್ತರು ಮೊಬೈಲ್‌ನಲ್ಲಿ ವಿಡಿಯೊ ಮಾಡಿಕೊಳ್ಳುತ್ತಿದ್ದರು. ಪತ್ರಕರ್ತರ ಮೊಬೈಲ್ ತನ್ನ ಕುತ್ತಿಗೆಗೆ ತಾಗಿತು ಎಂದು ಕುಪಿತಗೊಂಡ ಬೈರತಿ ಏಕವಚನದಲ್ಲಿ ನಿಂದಿಸಿದರು. ಇದಕ್ಕೆ ಪತ್ರಕರ್ತರು ಆಕ್ಷೇಪ ವ್ಯಕ್ತಪಡಿಸಿದರು. 'ನಿನಗೇನು ತಲೆ ಸರಿ ಇಲ್ವಾ. ನನ್ನನ್ನು ಏಕೆ ಎಳೆದಾಡುತ್ತಿದ್ದೀಯಾ' ಎಂದು ಬೈರತಿ ಪ್ರಶ್ನಿಸಿದರು. ಈ ವೇಳೆ, ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪತ್ರಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಆಗ ಮಧ್ಯಪ್ರವೇಶಿಸಿದ ಸಿದ್ದರಾಮಯ್ಯ, 'ಏಯ್ ಬೈರತಿ ಸುಮ್ಮನಿರಯ್ಯ' ಎಂದು ಹೇಳಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

'ಮೊಬೈಲ್ ಕುತ್ತಿಗೆಗೆ ತಾಗಿ ಸ್ವಲ್ಪ ನೋವಾಯಿತು. ಕಾರ್ಯಕರ್ತರೆಂದು ಭಾವಿಸಿ ಬೈದೆ. ಅವರು ಪತ್ರಕರ್ತರೆಂದು ಗೊತ್ತಿರಲಿಲ್ಲ' ಎಂದು ಬೈರತಿ ಸಮಜಾಯಿಷಿ ನೀಡಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS with B.A., B.Ed/ B.Sc B.Ed. COMPUTER TEACHER to teach High/ Middle School. Apply in person on or before 12th April 2023, To The Secretary, SGPTA HIGH SCHOOL, Netaji Road, Thyagaraja Nagar, Bangalore- 560070

SESHADRIPURAM INSTITUTIONS
27, Nagappa Street, Seshadripuram
Bengaluru-560 020. Phone: 22955350
Website: www.set.edu.in E-mail : info@set.edu.in

Require

LECTURERS in ENGLISH
for Pre-University Colleges

Eligibility: Master's Degree in the relevant subject with at least 55% marks in the aggregate and at least two years teaching experience.

WALK-IN-INTERVIEW ON
Sunday, 9th April 2023 @ 9:00 a. m.

Venue: Seshadripuram Educational Trust Office, 27, Nagappa Street, Seshadripuram, Bengaluru – 560 020

Eligible candidates should bring handwritten application along with resume, photos & copies of testimonials at the time of Interview

N. R. Pandith Aradhya, President
Dr. Wooday P. Krishna, Honorary General Secretary

SWAMY VIVEKANANDA INTERNATIONAL PUBLIC SCHOOL
#38, Near Housing Board Colony, Attur Layout, Yelahanka, Bengaluru - 560 064

PRINCIPAL REQUIRED

Swamy Vivekananda International Public School is looking for a professionally qualified dedicated and experienced female / male Principal with strong academic, administrative and communication skills

- **Qualification** - M.Phil / MA / M.Ed / M.Sc
- **Experience** - Minimum 10 years teaching and administrative
- **Age** - 35 - 50 years

Interested and eligible female / male candidates can send their CVs and complete testimonials by 07 April 2023 to the following email address. Dates for interview will be intimated later.

Phone : 9108221414 / 72044 37368
e-mail: svips.ynk@gmail.com Website: www.svips.in

HERITAGE PUBLIC SCHOOL,Srinidhi Layout, J.P.Nagar 8th Phase, Konanakunte Bengaluru-62, Requires:-HIGH SCHOOL CO-ORDINATOR. MSc,BEd with`minimum 5years`of Experience at`High School Level will be Preferred`Hindi Teachers For`High School,Maths, Science, Social,Kannada & English`Teachers For`Middle &.Primary School,PE Teachers. Attractive Salary`Call: 080-26322111, 9901733776.

VISHWABHARATHI PUBLIC HIGH SCHOOL No. 142, 1st A Main Road, Shakthi Garden Moodalpalya, Nagarbhavi 1st Stage, Bangalore-560072. REQUIRED TEACHERS for Kannada, Social Science, Mathematics Physical Education, BA, BSc, B.Ed for Primary and high school. Contact immediately: 7406535818/ 9739395399.

AVK GROUP OF INSTITUTIONS
(Recognized by Govt. of Karnataka AICTE & Affiliated to Bangalore City University)
Sy.No.69, Pipe Line Road, BWSSB Colony, Chikkagollarahatti, Magadi Main Road, Vishwaneedam Post, Bangalore-560091
Tel: 91-80-26719531, 26717520
E-mail-info@avkedu.com

REQUIRES

FOR AVK INSTITUTE OF MANAGEMENT
01. LECTURER IN COMMERCE & MANAGEMENT
02. ACCOUNTANT
03. COMPUTER OPERATOR
04. OFFICE BOY

FOR SCHOOL @ JEEVANBHEEMANAGAR
01. HEAD MASTER
02. TEACHERS FOR SCIENCE
03. P.T. TEACHER

WALK-IN-INTERVIEW @ THE ABOVE ADDRESS
on 08/04/2023 Saturday Between 10.00AM to 2.00PM
-Chairman

CAMLIN ENGLISH SCHOOL 6th 'C' Main 4th Cross Hampinagar Bangalore-104. WANTED TEACHERS for the year 2023-24 B.Sc., B.Ed. (Maths Science) B.A., B.Ed. (English, Kannada, Hindi, Social) N.T.T. TCH/ D.Ed. P.E. Computer, Drawing. Contact /Apply. 080-23301363

SREE RAMA VIDYALAYA
9th Main, 2nd Block, Jayanagar, Bangalore – 560011.
Phone: 080-26564250/26574250

Affiliated to ICSE and Recognized by Govt of Karnataka (High School)

VACANCY FOR

1. **MATHEMATICS**- M.Sc, B.Ed For High School
2. **CHEMISTRY**- M.Sc, B.Ed For High School
3. **ENGLISH** - B.A, B.Ed For Primary
4. **SOCIAL STUDIES**- B.A, B.Ed For Primary
5. **MATHEMATICS**- B.Sc, B.Ed For Primary
6. **COMPUTER APPLICATIONS**- B.E./ M.C.A For High School
7. **MONTESSORI TRAINED TEACHERS/ NURSERY TRAINED TEACHERS**

Good command over English is a must. Minimum 2 years experience required.
Interested candidates may please send their Bio-data/Resume through E-Mail at **sreeramavidyalayajayanagar@gmail.com** or can drop a hard copy at school before 12.04.2023.

ADMISSIONS OPEN FOR MONTESSORI AND I STD ICSE 2023-24

STATE BOARD SCHOOL In JP.Nagar Is Looking For HEADMISTRESS With MA.B.Ed. Candidate Should Have Experience In Similar Field Minimum 5Years. applyedujobs@gmail.com

TRILLIUM PUBLIC SCHOOL. RT.Nagar Bangalore Require PRIMARY and HIGH SCHOOL TEACHERS. ALL SUBJECTS ACADEMIC COORDINATORS 9740111313 72047 40112 trilliumschool3@gmail.com

EAST WEST INSTITUTIONS
BENGALURU & MYSURU

EAST WEST ACADEMY (S.V.N. ENGLISH SCHOOL)
(Permanently recognised by Government of Karnataka)
3542, 7th Cross, Maruthi Extension, Gayathrinagar, Near Malleshwaram Railway Station, Bengaluru-560021
Ph: 080-23321002, 23133963, 23131422 Mb: 8431085088
Email: eastwestacademy1968@gmail.com

WANTED TRAINED GRADUATE TEACHERS

Trained Graduate BA/ MA., B Ed /.M.Ed experienced teachers to teach ENGLISH and SOCIAL SCIENCE for English medium classes Grade I to Grade X.
WALK IN INTERVIEW
with your resume, copy of recent photographs, Aadhar card and original certificates on **Saturday the 8th April 2023 between 10 am and 1 pm at the above address.**
Attractive Package with all other benefits
SVM-23401

Do you want to work in a school that is revolutionizing how children learn?
Then we have a job for you.
We are a non profit school in R.T.NAGAR.
We believe in providing students with good subject knowledge as well as creative skills to move strongly in the ever-changing world. Our education model focuses on the talent of each child and nurtures their interests into passion.
We are seeking pleasant, innovative, trained, experienced B.Ed teachers, fluent in English, learn to design creative curriculum and collaborating with students, colleagues and parents.
Positions Open:
Primary School- Math, EVS and English
High School - Maths, Science, Social, English, Computer science and Library.
Send your CV to recruitment.sukrupa@gmail.com
Ph: +919036813712

GREEN COUNTRY PUBLIC SCHOOL (ICSE), requires Teachers for ALL SUBJECTS. Walk in for Interview 10.00 am to 3.00 pm /Apply through email: gcps2000@yahoo.co.in. Ph: 9535487053, 9482480397. Add: KIA Road, Kodigehalli gate, Hebbal, Bangalore-560092

"ST. MARTIN'S HIGH SCHOOL" 7th cross Behind Anjan Theatre, Magadi Road, Bengaluru-23. Requires: Head Mistress Academic Advisers, Accountant/ Clerk Qualified and Trained Teachers for Nursery, Primary and High School to teach all the subjects including Computer, PE, Drawing. PREFERABLY LADIES. Contact Office- Phone: 080- 23101999, 9449117716, 9591990199

NCIPS
NEW CAMBRIDGE INTERNATIONAL PUBLIC SCHOOL
CA Site No:6 (P), WOC Road, II Stage, Mahalakshmipuram, Bangalore- 560086.
Email ID: info@ncips.in
Contact : 9845087439
Required co-ordinator for pre primary with minimum 5 years experience and **NTT Trained Teachers for Nursery Classes.**
Required following Teachers to Teach Secondary, Primary Classes. BSc/ MSc/ MA/ BA/ BED with 5 years experience Information Technology, **Kannada, Hindi, Maths.**

REQUIRED TRAINED & Experience lady Teachers for High School Primary & Nursery for all Subjects, Kempapura Contact:22330003/ 9008981637 svsres21@gmail.com

REQUIRED ENGLISH Medium Lady TEACHERS MSC BED Chemistry, Biology for Carmel Garden High School, Nandini Layout, Bangalore-96. Phone: 9739437454/ 9945050690.

St. Joseph's University
#36, Lalbagh Road, Bengaluru - 560 027
invites applications for:

1. Associate/ Assistant Professors in:
*Environmental Science *Microbiology *Zoology *Biochemistry *Statistics *Social Work (HRM, Medical & Psychiatry) *Psychology *Political Science *International Relations, Peace Studies and Public Policy *History *Economics*Commerce *Management *English *Advanced Computing *Advertising and PR *Animation & Design *Communication and Media Studies (Assistant Professor cum Technical Faculty with experience in camera / editing)
Qualification: Ph.D. with NET, KSET with relevant teaching experience will be preferred. Apply with all your Research details.

2. Data Entry Operators:
Qualification: 10+2

To apply, use the Google Form on the University website: www.sju.edu.in (in the 'Announcements' section) on or before **Tuesday, 11th April 2023.**

3.Attenders: Maintenance / Assistance
Qualification: Matriculation
Candidates for this post must submit their CVs at the University Reception on or before **11th April 2023.**

Notice Board
A fast growing education hub invites applications for the following posts to be placed in various reputed institutions across Bangalore.
• Principal • Vice Principal • Academic Coordinator
Nursery / Primary / High School Teachers for all subjects.
Non Teaching Staffs (Admin, Accounts, Supporting Staffs)
NTT/Montessori Trained Teachers PG/Graduation with B.Ed/D.Ed. (Experienced and freshers.)
Candidates are requested to apply through email or WhatsApp
noticeboardhr@gmail.com
No calls, only WhatsApp 9606 48 48 48
500 + openings

WANTED: DYNAMIC Vice Principal & Lecturers in Kannada, English, Hindi, Mathematics, Physics, Chemistry, Computer Science, Accountancy, Business Studies, Economics, PG in relevant subject with minimum 55% and preferably B.Ed., Yoga instructor, Accounts Assistant, Lab attenders. Renumeration will not be a constraint for deserving candidates. Apply at: Diamond College, No.123 Maragondanahalli Main Road, T.C. Palya Post, K.R. Puram, Bengaluru-36, WALK-INs on 12th & 15th April 2023. Mobile: +919035637099 +918904195037 Website: www.diamondcollege.org

SREE VENKATESHWARA ENGLISH SCHOOL #1 VS Layout Krishnarajapuram Bangalore-560036. Wanted Teachers- B.Sc,B.Ed (Mathematics,Science) B.A.B.Ed (Social, English, Kannada, Hindi) NTT, TCH, D.Ed, B.PEd, M.PEd, Computer, Clerks Attractive Salary. Contact: 080-25611873, 7411135627. Email- svs.krp.bangalore@gmail.com

NEW FLORENCE English school, Shivanagar, Rajajinagar, Bengaluru- 10 Requires lady teachers for Nursery, Higher primary and High School: 9620396782 /9845346754

BG NATIONAL Public School,Jakkur Layout, Opp GKVK Campus. Requires TEACHERS for Nursery, Primary, High School:English, Hindi,Maths, Science, Social & Female Office Assistants. Contact: 9740619796/ 8050088907/ bgnps2015@gmail.com

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

ADVERTISING AGENCY Requires Graphic Designer/ DTP Operator (Corel Draw, Kannada & English Typing). Phone: 9845597155.

General

WANTED COMPUTER Typist Male/Female Supervisor/Helpers/ Delivery Boys Email: mundhralighting @gmail.com contact: 9986033339 /9611206161

ARCHITECTS OFFICE Ulsoor: Looking for FRONT OFFICE PERSON. Basic knowledge of Accounts, Tally and Admin is a must. Apply with resume to info@ngassociates.in

WANTED 1:APARTMENT Maintenance Supervisors Qualification Diploma In-Civil Exp:`5-10years Salary:30,000 2:Maintenance Supervisors Qualification any Graduates`Exp: 5-10years Salary 20,000 +`Incentive Call:7338084555 9845053636`Mail glprojects7889 @gmail.com

ARZU OVERSEAS, R.T NAGAR, BANGALORE, REQUIRE FEMALE TELECALLER- FLUENT IN MALAYALAM, CALL FOR APPOINTMENT 9496563224

WANTED EXPERIENCED Salesman /Counter Sales person with Basic Computer Knowledge Employee (12th Pass) Experienced tally Accountant for garments shop at Chickpet Main Road Bangalore Mob: 7795818527/ 9448121073/ 6362606730.

ADVERTISING AGENCY requires BACKEND EXECUTIVE (Good Computer Knowledge, MS-office). Phone: 9845597155. enquiry@spoorthiads.com

Placement Bureaus/Consultants

REQUIRE ACCOUNTANTS, Marketing Coordinators, Commercial Execuitves, ANZ Consultants, 23443555, anzconsultants@yahoo.co.in

Security & Detectives

URGENTLY REQUIRED SECURITY SUPERVISORS, SECURITY GUARDS AND LADY GUARDS to work in and around Horamavu Area. Also Required SECURITY SUPERVISOR to work in M.G. Road. Contact: 9902098251

Wanted

WANTED IMMEDIATELY, RECEPTIONIST, ARCHITECT, STRUCTURAL ENGINEER, QUALITY and QUANTITY SURVEYOR, HIGHWAY ENGINEER and SITE ENGINEERS. Qualified Civil Diploma/ B.E/ RETIRED ENGINEERS 2- 3 years experience. Whatsup:- 9986037715, 9513116013. Email: ramesh_rjdp@yahoo.co.in

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

WANTED ADVOCATE Fresher/ experienced for Senior Advocate Law Firm at Hennur Cross, Bangalore-43 (non litigation matters) 9845846428, 9880458935

RENTAL PROPERTIES

Accommodation Available

Flats

3 BHK semi furnished flat available for rent @ Vishweshwaraiah layout Bangalore. Contact: 9242299427.

REAL ESTATE BUYING

Commerical

General

REQUIRED CBSE Affiliated School for Rent or lease in Bangalore city Contact Email: lookingtorentschools@gmail.com

REAL ESTATE SELLING

Flat

Mathikere

2 BHK 1020 sqft super Built Flat- Sale/ Rent near MSR Hospital- Car Parking. Owner 9448558947

Malleshwaram

1443 SQFT, 3 BHK, East-facing Apartment in pristine condition with modern fittings and covered car park for sale. Rs 1.6 crores. Contact 7619479736.

Sites

Bannerghatta Road

DOLLARS LAYOUT, N.S.Palya 50x80 BDA site South facing Residential class location (Agents sorry) Gupta- 9845232711

BUSINESS

Business Offers

Finance

NPA SECURED, Unsecured, Projects, Business, Hospitals, Hotels Cheque basis Loans Available. Agents Welcome 9843830066.

Distributors

WANTED AREA Distributors & Sales Representatives for Dhramasthala Siri Brand Organic Millet Products in Bangalore City. Contact 9448017478/ 8310590306

EDUCATIONAL

Special Courses

EMOTIONAL FIRST Aid Courses for 3 months Internationally Certified Help people manage their Emotions better by using new Tools and Techniques Excellent Opportunity for Retired Teachers Bank Officials and Housewives. Attractive ReturnsAssured. Courses starts Immediately Contact- 9448067296

PERSONAL

Change of Name

I, SHAHID UL HAQUE Residing at No- 359/18, 2nd Floor, Outer Circle, Whitefield, Bengaluru-560066, have changed my Name to SHAHID UL HAQUE BANDAY, vide Affidavit dated 03/04/2023, sworn before NOTARY VEENA. J BANGALORE

S SUGUNA, Wife/o, JC-682183H, NB RIS, P MUTHU SAMY, Vill-Melarasur, Lalgudi, Trichy, Tamil Nadu changed name S SUGUNA to M SUGUNA, 04/04/2023, Notary K.V. Mani Bangalore

I, PRATHIBHA.G residing at Block A-404, Fortuna Krrish, 1st Pete Krishnappa Main Road, K.Channasandra, Bangalore-43 have changed my minor Son's name from AVISHAI MOSES A.V to AVISHAAI DAIWIK vide affidavit dated 01-04-2023 before Notary Y.R.Chandrasekar, Bangalore.

I, PRATHIBHA.G residing at Block A-404, Fortuna Krrish, 1st Pete Krishnappa Main Road, K.Channasandra, Bangalore-43 have changed my minor Daughter's name from ANDRAH HANNAH A.V to ANORAH DAANVIKA vide affidavit dated 01-04-2023 before Notary Y.R.Chandrasekar, Bangalore.

OTHERS

For Sale

VMC MACHINE Table Size 2300*900 *950 Make Dahlih 2007. Heavy duty gear head Lathe make. Balaji Center height 16' betweem Centre 1600 mm Bangalore. 9341236144, 9343044144

PUBLIC NOTICE

PUBLIC NOTICE

This is to inform the general public that the project namely **BENGALURU LIFESCIENCES PARK,** a Commercial Building with Labspace with a total built-up area of **143,534.87 Sq mtr at Survey Nos. 53/5P, 54, 55/2, 59/3A, 73, 74, 74/4, 74/5, 75/1, 76/1, 76/2, 76/3, 76/4, 77, 77/2P, 77/3, 77/4, 78, 78/1P, 78/2P, 78/3, 82/1, 82/2, 82/3, 83/1, 83/2 & 83/3** of Doddathoguru Village, Electronics City Phase 1, Begur Hobli, Bangalore South Taluk has been accorded Modification and Expansion of Environmental Clearance by the State Level Environment Impact Assessment Authority-Karnataka, vide Order **No. SEIAA 02 CON 2023 Dated 29.03.2023.** Copies of the clearance certificates are available on the website of the Environment & Ecology Department at **http:/ /seiaa.karnataka.gov.in**
Labzone – Electronics City Private Limited
Opp. Wipro Gate No.14, Electronics City Phase-1, Bangalore-560 100

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್

ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿ ಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆ ಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮೀ ಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.

ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.

ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್(ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ.ನಂ. 102, ನಂ. 30, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು-04
ಮನೆ ವಿಳಾಸ: ಮನೆ ನಂ. 2544, ನಂದಗೋಕುಲ ನಿಲಯ, ಅಂಬರ್ ಲಾಜಿಸ್ಟಿಕ್ ಹತ್ತಿರ, ಕೆಳಮಹಡಿ, 13ನೇ ಮುಖ್ಯ ರಸ್ತೆ, 'ಇ' ಬ್ಲಾಕ್ (ಮೋರ್ ಸೂಪರ್ ಮಾರ್ಕೆಟ್ ಹಿಂಭಾಗ), ಕೊಡಿಗೇಹಳ್ಳಿ ಗೇಟ್, ಸಹಕಾರ ನಗರ, ಬೆಂಗಳೂರು-560092
Mob.: 98441 06430 / 81579 14600
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

CONNECT ಕ್ಲಾಸಿಫೈಡ್ಸ್

First Time in BINNY MILL GROUND Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
Binny Mill Ground, Near ETA Mall, Tank Bund Road, Bengaluru -23

AQUA TUNNEL SHOW

VISIT TODAY | Daily : 4pm - 9pm | Call : 8904727123

KB Kutchi Bandhej
EXHIBITION CUM SALE
March 30th to April 5th, 2023
Ajrakh & Bandhani Saris, Salwar Suits Dupattas, Home-linen, Yardage & More
Safina Plaza - Bangalore
Mob & WhatsApp : 7760865706

INDIAN RAILWAYS - SOUTH STAR RAIL
SUMMER KASHMIR FAMILY SPL TRAIN

9015 500 200 RAILTOURISM.COM

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA

Per word	Ordinary	Bold	Ordinary Semi Display	Bold Semi Display
	Rs. 90/-	Rs. 120/-	Rs. 100/-	Rs. 160/-
Classified Display			Single Column	Multi Column
			Rs. 480/-	Rs. 500/-

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
conditions apply*

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಬ್ಯಾಟರಾಯನಪುರ: ಬಿಜೆಪಿಯಿಂದ ನಾಲ್ವರು ಆಕಾಂಕ್ಷಿಗಳು, ಅದೃಷ್ಟ ಯಾರಿಗೆ?

ಒಗ್ಗಟ್ಟು ತೋರಿದ್ದವರ ನಡೆ ಕುತೂಹಲ

• ಆದಿತ್ಯ ಕೆ.ಎ.

ಬೆಂಗಳೂರು: ಸಂಸದ ಡಿ.ವಿ.ಸದಾನಂದ ಗೌಡ, ಶಾಸಕ ಎಸ್.ಆರ್.ವಿಶ್ವನಾಥ್ ಅವರ ನೇತೃತ್ವದಲ್ಲಿ ನಡೆದಿದ್ದ ಸಂಧಾನ ಸಭೆಯಲ್ಲಿ ಒಗ್ಗಟ್ಟು ತೋರಿದ್ದ ಬ್ಯಾಟರಾಯಪುರ ಕ್ಷೇತ್ರದ ನಾಲ್ವರು ಬಿಜೆಪಿ ಟಿಕೆಟ್ ಆಕಾಂಕ್ಷಿಗಳು, ಟಿಕೆಟ್ ಘೋಷಣೆ ಕ್ಷಣದಲ್ಲಿ ಒಳಗೊಳಗೇ ಅಸಮಾಧಾನ ಹೊರಹಾಕುತ್ತಿದ್ದಾರೆ.

'ನಾಲ್ವರ ಪೈಕಿ ಯಾರಿಗೇ ಟಿಕೆಟ್ ನೀಡಿದರೂ ಒಂದಾಗಿ ಕೆಲಸ ಮಾಡುತ್ತೇವೆಂದು' ಮುಖಂಡರ ಸಮ್ಮುಖದಲ್ಲಿ ಶಪಥ ಮಾಡಿದ್ದ ಎ.ರವಿ, ಕೆ.ಎ. ಮುನೀಂದ್ರ ಕುಮಾರ್, ತಮ್ಮೇಶ್‌ಗೌಡ ಹಾಗೂ ಕೆ.ಎನ್.ಚಕ್ರಪಾಣಿ ಅವರ ನಡುವೆ ಮತ್ತೆ ಹೊಂದಾಣಿಕೆಯಿಲ್ಲ. ಟಿಕೆಟ್ ಪಡೆಯಲು ಪ್ರತ್ಯೇಕ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಪಕ್ಷದ ಮುಖಂಡರೊಬ್ಬರು ಹೇಳಿದ್ದಾರೆ.

'ಕೊಡಿಗೇಹಳ್ಳಿಯಲ್ಲಿ ನಡೆದಿದ್ದ ಸಭೆಯಲ್ಲಿ ಕೈಕೈ ಹಿಡಿದು ಒಂದಾಗಿ ಚುನಾವಣೆ ಎದುರಿಸುತ್ತೇವೆಂದು ಭರವಸೆ ನೀಡಿದ್ದ ನಾಲ್ವರು, ಮತ್ತೆ ಆ ರೀತಿಯ ಒಗ್ಗಟ್ಟು ತೋರಿಲ್ಲ. ಪ್ರಚಾರದ ವೇಳೆಯೂ ಆ ಒಗ್ಗಟ್ಟು ಕಾಣಿಸುತ್ತಿಲ್ಲ' ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್‌ನಿಂದ ಕೃಷ್ಣ ಬೈರೇಗೌಡ ರನ್ನೇ ಮತ್ತೆ ಕಣಕ್ಕೆ ಇಳಿಸಲಾಗಿದೆ. ಬಿಜೆಪಿಯ ಅಸಮಾಧಾನದ ಲಾಭ ಪಡೆಯುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಇದೆ.

ಸಚಿವ ಆರ್.ಅಶೋಕ ಸಂಬಂಧಿ ಎ.ರವಿ ಟಿಕೆಟ್ ಪಡೆಯುವ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ ಎನ್ನಲಾಗಿದೆ. ರವಿ ಅವರು ವಿಮಾನ ನಿಲ್ದಾಣದ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ರವಿ ಮೂರು ಬಾರಿ ಬ್ಯಾಟರಾಯನಪುರ ಕ್ಷೇತ್ರದಿಂದ ಸ್ಪರ್ಧಿಸಿ ಸೋಲು ಕಂಡಿದ್ದಾರೆ. ನಾಲ್ವರು ಆಕಾಂಕ್ಷಿಗಳು ಒಂದು ವರ್ಷದಿಂದ ಕ್ಷೇತ್ರದಲ್ಲಿ ಓಡಾಟ ನಡೆಸಿ ಮತದಾರರ ಮನಗೆಲ್ಲುವ ಪ್ರಯತ್ನ ಮಾಡಿದ್ದರು. 'ಸಾಕಷ್ಟು ಖರ್ಚು ಮಾಡಿದ್ದೇವೆ. ಟಿಕೆಟ್ ನೀಡುವಲ್ಲಿ ನಮ್ಮನ್ನೂ ಪರಿಗಣಿಸಿ' ಎಂದು ಪ್ರತ್ಯೇಕವಾಗಿ ಹೈಕಮಾಂಡ್ ಎದುರು ಮನದ ಇಂಗಿತ ಹೇಳಿಕೊಂಡಿದ್ದಾರೆ. ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಸಿಗಲಿದೆ, ಟಿಕೆಟ್ ಸಿಗದವರ ನಡೆ ಕುತೂಹಲ ಮೂಡಿಸಿದೆ.

ಎ.ರವಿ ಅವರು 'ಗುಡ್ ಮಾರ್ನಿಂಗ್ ಬ್ಯಾಟರಾಯನಪುರ' ಎಂಬ 150 ದಿನಗಳ ಕಾರ್ಯಕ್ರಮ ನಡೆಸಿದ್ದರು. ಅಲ್ಲದೇ ಮಹಾಶಿವರಾತ್ರಿ ವೇಳೆ ಹರಿದ್ವಾರಕ್ಕೆ ತೆರಳಿ ಗಂಗಾಜಲ ತಂದು ಕ್ಷೇತ್ರದಲ್ಲಿ ಮನೆಮನೆಗೆ ವಿತರಿಸಿದ್ದರು. ತಮ್ಮೇಶ್‌ಗೌಡ ದಸರಾ ಮಹೋತ್ಸವ, ಶ್ರೀನಿವಾಸ ಕಲ್ಯಾಣೋತ್ಸವ ನಡೆಸಿ ಕ್ಷೇತ್ರದ ಜನರ ಮನಗೆಲ್ಲಲು ಪ್ರಯತ್ನಿಸಿದ್ದರು. ಮುನೀಂದ್ರಕುಮಾರ್ ಸಾಮೂಹಿಕವಾಗಿ ಸತ್ಯನಾರಾಯಣಸ್ವಾಮಿ ಪೂಜೆ, ಹೋಳಿ ಸಂಭ್ರಮ ಆಯೋಜಿಸಿದ್ದರು. ಚಕ್ರಪಾಣಿ ಅವರು ಹಲವು ಕಾರ್ಯಕ್ರಮ ಸಂಘಟಿಸಿದ್ದರು. ಹೀಗಾಗಿ ಬಿಜೆಪಿ ಅಳೆದುತೂಗಿ ಟಿಕೆಟ್ ನೀಡಲು ಮುಂದಾಗಿದೆ. 'ವರಿಷ್ಠರ ತೀರ್ಮಾನವೇ ಅಂತಿಮ' ಎಂದು ಹೇಳುತ್ತಿದ್ದರೂ ಟಿಕೆಟ್ ಸಿಗದವರ ನಡೆ ಕುತೂಹಲ ಮೂಡಿಸಿದೆ.

ಎಷ್ಟುಬಾರಿ ಮನವಿ ಮಾಡಿದ್ದರೂ ಹೆಬ್ಬಾಳ ರಸ್ತೆ ವಿಸ್ತರಣೆ ನನೆಗುದಿಗೆ ಬಿದ್ದಿರುವ ವಿಷಯವನ್ನೇ ಕಾಂಗ್ರೆಸ್ ಮುನ್ನೆಲೆಗೆ ತಂದಿದೆ. ಹೆಬ್ಬಾಳ–ಕೆ.ಆರ್.ಪುರ ಮೇಲ್ಸೇತುವೆ, ಸಿಲ್ಕ್ ಬೋರ್ಡ್ ಸೇರಿ ಹಲವು ಪ್ರಮುಖ ಸ್ಥಳಗಳಲ್ಲಿ ಸಂಚಾರ ಒತ್ತಡದ ಸಮಸ್ಯೆಯಿಂದ ಜನರು ಹೈರಾಣಾಗಿದ್ದಾರೆ. ರಸ್ತೆ ವಿಸ್ತರಣೆಗೆ ಸರ್ಕಾರ ಅನುದಾನ ನೀಡಲಿಲ್ಲ ಎಂಬ ವಿಷಯವನ್ನು ಹೆಚ್ಚು ಪ್ರಸ್ತಾಪಿಸುತ್ತಿದೆ ಎಂದು ಮೂಲಗಳು ಹೇಳಿವೆ.

ಆರ್.ಆರ್.ನಗರ, ಚಿಕ್ಕಪೇಟೆ ಸೂಕ್ಷ್ಮ ಕ್ಷೇತ್ರಗಳು

ರಾಜರಾಜೇಶ್ವರಿ ನಗರ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳನ್ನು ಸೂಕ್ಷ್ಮವೆಂದು ಪರಿಗಣಿಸಿರುವ ಚುನಾವಣಾ ಆಯೋಗವು ಕ್ಷೇತ್ರದ ಮೇಲೆ ನಿಗಾ ಇಟ್ಟಿದೆ.

ರಾಜರಾಜೇಶ್ವರಿ ನಗರದ ವಿಧಾನಸಭಾ ಕ್ಷೇತ್ರದ ಯಶವಂತಪುರ ವಾರ್ಡ್ ಎಚ್.ಎಂ.ಟಿ ಬಡಾವಣೆಯಲ್ಲಿ ಮತದಾರರೊಬ್ಬರ ಮನೆಗೆ ನುಗ್ಗಿ ಹಲ್ಲೆ ನಡೆಸಲಾಗಿದೆ ಎಂದು ಆರೋಪ ಕೇಳಿಬಂದ ಬಳಿಕ ಕ್ಷೇತ್ರದಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಆಯೋಗ ಸೂಚಿಸಿದೆ. ಚಿಕ್ಕಪೇಟೆಯಲ್ಲಿ ಮತದಾರರಿಗೆ ಆಕಾಂಕ್ಷಿತರೊಬ್ಬರು ಚೆಕ್ ಹಂಚಿಕೆ ಮಾಡುತ್ತಿದ್ದಾರೆ ಎಂಬ ಆರೋಪವಿದೆ. ಅಲ್ಲಿಯೂ ನಿಗಾ ವಹಿಸುವಂತೆ ಆಯೋಗವು ಸೂಚಿಸಿದೆ.

ಗದ್ದಲ... ಮೌನ... ನಗರದ ಕೆಪಿಸಿಸಿ ಕಚೇರಿಗೆ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಸಾವಿರಾರು ಸಂಖ್ಯೆಯಲ್ಲಿ ಬಂದು ರಂಪಾಟ ನಡೆಸಿದ್ದರಿಂದ ಸೋಮವಾರ ಗದ್ದಲ ವಾತಾವರಣವಿತ್ತು. ಆದರೆ, ಮಂಗಳವಾರ ಕೆಪಿಸಿಸಿ ಕಚೇರಿ ಎದುರು ಮೌನ ನೆಲೆಸಿತ್ತು.

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಮಾದರಿ ಕ್ಷೇತ್ರ: ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ವಿಧಾನಸಭೆ ಚುನಾವಣೆಗೆ ಮತದಾನದ ದಿನ ಹತ್ತಿರವಾಗುತ್ತಿದೆ. ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸಲಿದ್ದಾರೆ ಎಂಬುದನ್ನು **'ಪ್ರಜಾವಾಣಿ'** ಪ್ರಕಟಿಸಲಿದೆ. ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಏ.6ರ ಮಧ್ಯಾಹ್ನ 2ರೊಳಗೆ ಕಳುಹಿಸಿ.

ಕ್ಷೇತ್ರಗಳು: • ಮಹದೇವಪುರ • ಜಯನಗರ • ಚಿಕ್ಕಪೇಟೆ

96060 38256

ಶ್ರೀಪಾದ ರೇಣುಗೆ ಸಿಗದ 'ಕೈ' ಟಿಕೆಟ್: ಅಸಮಾಧಾನ

ಬೆಂಗಳೂರು: ಕೆಂಗಲ್ ಹನುಮಂತಯ್ಯ ಅವರ ಮೊಮ್ಮಗ, ಕಾಂಗ್ರೆಸ್ ಕಾರ್ಯಕರ್ತ ಶ್ರೀಪಾದ ರೇಣು ಅವರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿರುವುದರಿಂದ ಬೇಸರ ವ್ಯಕ್ತಪಡಿಸಿದ್ದಾರೆ.

'ಕಳೆದ ಚುನಾವಣೆಯಲ್ಲಿ ಮಲ್ಲೇಶ್ವರ ಕ್ಷೇತ್ರದಿಂದ ಟಿಕೆಟ್ ನೀಡಲಾಗಿತ್ತು. ಈ ಬಾರಿ ನನ್ನನ್ನು ಪರಿಗಣಿಸಿಲ್ಲ. ವಿಧಾನಸೌಧ ನಿರ್ಮಾತೃ, ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಹಿರಿಯ ಮೊಮ್ಮಗನಾದ ನಾನು ಬಾಲ್ಯದಲ್ಲಿಯೇ ಅಜ್ಜನೊಂದಿಗೆ ಬೆಳೆದವನು. ಅಜ್ಜನ ಒಡನಾಟದಲ್ಲಿ ಬೆಳೆದ ನನಗೆ ಸಹಜವಾಗಿಯೇ ಕಾಂಗ್ರೆಸ್ ತತ್ವ, ಸಿದ್ಧಾಂತದ ಮೇಲೆ ಚಿಕ್ಕ ವಯಸ್ಸಿನಿಂದಲೇ ನಂಬಿಕೆ ಬಂದಿದೆ. ನನ್ನ ಬದ್ಧತೆಯ ಬಗ್ಗೆ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಸಂಘಟನೆಯಲ್ಲೂ ತೊಡಗಿದ್ದೆ. ಆದರೂ, ಟಿಕೆಟ್ ನೀಡಿಲ್ಲ' ಎಂದು ಪ್ರಕಟಣೆಯಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

'ಕಾಂಗ್ರೆಸ್‌ನಲ್ಲಿ ಈಗ ಹಣವಿದ್ದವರಿಗೆ, ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಹಾಗೂ ಉದ್ದಿಮೆದಾರರಿಗೆ ಮಣೆ ಹಾಕಲಾಗುತ್ತಿದೆಯೇ? ಪಕ್ಷ ನಿಷ್ಠೆ, ಬದ್ಧತೆ ಹಾಗೂ ಸಿದ್ಧಾಂತಗಳು ಕೇವಲ ಹೇಳಿಕೆಗೆ ಅಷ್ಟೆಯೇ? ಪಕ್ಷಕ್ಕಾಗಿ ಹೋರಾಟ ಎನ್ನುವುದು ಲೆಕ್ಕಕ್ಕೇ ಇಲ್ಲವಾಗಿದೆಯೇ ಎಂಬ ಅನುಮಾನ ಕಾಡುತ್ತಿದೆ' ಎಂದಿದ್ದಾರೆ.

888 ಮತದಾರರ ಚೀಟಿ, 2,710 ಡಿ.ಡಿ ಜಪ್ತಿ

ಬೆಂಗಳೂರು: ಮತದಾರರಿಗೆ ಆಮಿಷವೊಡ್ಡಲು ಹಂಚುತ್ತಿದ್ದ 2,710 ಡಿ.ಡಿ.ಗಳನ್ನು 888 ಮತದಾನ ಗುರುತಿನ ಚೀಟಿ ಸಮೇತ ಸಿದ್ದಾಪುರ ಪೊಲೀಸರು ಜಪ್ತಿ ಮಾಡಿದ್ದಾರೆ.

ಚುನಾವಣೆ ಅಕ್ರಮ ಆರೋಪದಡಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಯೂಸುಫ್ ಷರೀಫ್ ಉರುಫ್ ಕೆಜಿಎಫ್ ಬಾಬು ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ಠಾಣೆ ವ್ಯಾಪ್ತಿಯ ಕೆ.ಎಂ. ಕಾಲೊನಿಯ ಗೌಸಿಯಾ ದರ್ಗಾ ಬಳಿ ಏಪ್ರಿಲ್ 2ರಂದು ಬೆಳಿಗ್ಗೆ ಜನರಿಗೆ ಡಿ.ಡಿ.ಗಳನ್ನು ಹಂಚುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಸ್ಥಳಕ್ಕೆ ಹೋಗಿ ತಪಾಸಣೆ ನಡೆಸಿದಾಗ, ಮತದಾರರಿಗೆ ಆಮಿಷವೊಡ್ಡುತ್ತಿದ್ದ ಸಂಗತಿ ತಿಳಿಯಿತು' ಎಂದು ಪೊಲೀಸರು ಹೇಳಿದರು.

'ಉಮ್ರಾ ಚಾರಿಟೇಬಲ್ ಫೌಂಡೇಷನ್ ಹೆಸರಿನಲ್ಲಿ ಕೆಜಿಎಫ್ ಬಾಬು ಕೊಟ್ಟಿದ್ದಾರೆಂದು ಹೇಳಿಕೊಂಡು ಅವರ ಬೆಂಬಲಿಗರು, ಜನರಿಗೆ ಡಿ.ಡಿ. ಹಂಚುತ್ತಿದ್ದರು. ಬೆಂಬಲಿಗರಿಂದ ₹ 29.94 ಲಕ್ಷ ಮೊತ್ತದ 2,710 ಡಿ.ಡಿ ಜಪ್ತಿ ಮಾಡಲಾಯಿತು. ಜೊತೆಗೆ, ಹೊಸದಾಗಿ ಮಾಡಿಸಿದ್ದ 53 ಪಡಿತರ ಚೀಟಿ ಹಾಗೂ 888 ಚುನಾವಣಾ ಗುರುತಿನ ಚೀಟಿಗಳೂ ಬೆಂಬಲಿಗರ ಬಳಿ ಇದ್ದವು. ಅವುಗಳನ್ನೂ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ಮನೆ ಮನೆಗೆ ಡಿ.ಡಿ ಹಂಚುವ ಮೂಲಕ ಕೆಜಿಎಫ್ ಬಾಬು ಮತದಾರರನ್ನು ತಮ್ಮತ್ತ ಸೆಳೆಯುತ್ತಿದ್ದಾರೆ. ಇದು ಚುನಾವಣಾ ಅಕ್ರಮವಾಗಿದ್ದು, ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದರು.

25 ಕ್ಷೇತ್ರಗಳಲ್ಲಿ ಎಐಎಂಐಎಂ ಸ್ಪರ್ಧೆ

ಬೆಂಗಳೂರು (ಪಿಟಿಐ): ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 25 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಮುಂದಾಗಿರುವ ಅಸಾದುದ್ದೀನ್ ಒವೈಸಿ ನೇತೃತ್ವದ ಎಐಎಂಐಎಂ ಪಕ್ಷವು ಜೆಡಿಎಸ್ ಜತೆ ಮೈತ್ರಿಗೆ ಪ್ರಯತ್ನಿಸುತ್ತಿದೆ.

ಸುದ್ದಿಸಂಸ್ಥೆ ಜತೆಗೆ ಮಾತನಾಡಿರುವ ಒವೈಸಿ, 'ಸದ್ಯ ಮೂರು ಕ್ಷೇತ್ರಗಳಿಗೆ ಅಭ್ಯರ್ಥಿ ಪ್ರಕಟಿಸಿದ್ದೇವೆ. 25 ಕ್ಷೇತ್ರಗಳಲ್ಲಿ ಸ್ಪರ್ಧೆ ನಿಶ್ಚಿತ. ಮೈತ್ರಿ ಮಾಡಿಕೊಳ್ಳುತ್ತೇವೆಯೋ? ಇಲ್ಲವೋ? ಎಂಬುದನ್ನು ಕಾಯ್ದು ನೋಡಬೇಕಿದೆ' ಎಂದರು.

ಮತದಾನ ಹೆಚ್ಚಳಕ್ಕೆ ಕಸರತ್ತು: ಜಾಗೃತಿಗೆ ಆಯೋಗ ಒತ್ತು

ಮತಗಟ್ಟೆವಾರು ಕಾರ್ಯಕ್ರಮ • ಜನರ ಬಳಿಗೆ ಅಧಿಕಾರಿಗಳ ವಿಶೇಷ ತಂಡ • ತಾರೆಯರ ಸಹಕಾರ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಿಧಾನಸಭೆ ಚುನಾವಣೆ ದಿನಾಂಕ ಘೋಷಣೆಯಾಗುತ್ತಿದ್ದಂತೆ ಮತದಾನ ಪ್ರಕ್ರಿಯೆಗೆ ಚುನಾವಣಾ ಆಯೋಗದಿಂದ ಭರದ ಸಿದ್ಧತೆ ಆರಂಭವಾಗಿದೆ. ಪ್ರತಿ ಚುನಾವಣೆಯಲ್ಲೂ ಬೆಂಗಳೂರಿನಲ್ಲಿ ಕಡಿಮೆ ಮತದಾನ ಪ್ರಮಾಣ ದಾಖಲಾಗುತ್ತಿದ್ದು, ಈ ಬಾರಿಯಾದರೂ ಹೆಚ್ಚಿನ ಮತದಾರರನ್ನು ಮತಗಟ್ಟೆಯತ್ತ ಸೆಳೆಯಲು ಆಯೋಗ ಕಸರತ್ತು ನಡೆಸುತ್ತಿದೆ.

ರಾಜಧಾನಿ ಬೆಂಗಳೂರಿನಲ್ಲಿ 28 ವಿಧಾನಸಭಾ ಕ್ಷೇತ್ರಗಳಿದ್ದು, ಮತದಾರರ ಸಂಖ್ಯೆ 95 ಲಕ್ಷ ಮೀರಿದೆ. ಆದರೆ, ಮತಗಟ್ಟೆಗೆ ಬಂದು ಮತದಾನ ಮಾಡುವ ಜಾಗೃತ ಮತದಾರರ ಕೊರತೆ ಎದ್ದು ಕಾಣುತ್ತಿದೆ. ಇದೇ ಕಾರಣಕ್ಕೆ 2008, 2013 ಹಾಗೂ 2018ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಡಿಮೆ ಮತದಾನ ಪ್ರಮಾಣ ದಾಖಲಾಗಿದೆ.

ಬೆಂಗಳೂರಿನಲ್ಲಿ ಮತದಾನ ಪ್ರಮಾಣ ತಗ್ಗುತ್ತಿರುವ ಬಗ್ಗೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಅವರು, 'ನಗರದ ಜನ ಮತ ಚಲಾಯಿಸಲು ನಿರಾಸಕ್ತಿ ವಹಿಸುತ್ತಿರುವುದು ಕಳವಳಕಾರಿ. ಸೋಮವಾರ ಅಥವಾ ಶುಕ್ರವಾರ ಮತದಾನದ ದಿನಾಂಕ ನಿಗದಿಪಡಿಸಿದರೆ ವಾರಾಂತ್ಯದ ರಜೆ ನೆಪದಲ್ಲಿ ಜನ ಪ್ರವಾಸಕ್ಕೆ ಹೋಗುತ್ತಾರೆ. ಮತದಾನದ ಪ್ರಮಾಣ ಕಡಿಮೆ ಆಗುತ್ತದೆ. ಇದೇ ಕಾರಣಕ್ಕೆ ಈ ಬಾರಿ ಬುಧವಾರ ಮತದಾನ ನಿಗದಿಪಡಿಸಿದ್ದೇವೆ' ಎಂದಿದ್ದರು.

'ಉದ್ಯೋಗಸ್ಥರು ಹಾಗೂ ಯುವ ಮತದಾರರ ಪಾಲ್ಗೊಳ್ಳುವಿಕೆ ಹೆಚ್ಚಿಸಲು ಐಐಎಸ್ಸಿ, ಐಐಟಿ ಹಾಗೂ ನವೋದ್ಯಮಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದೂ ತಿಳಿಸಿದ್ದರು. ಅವರ ಸೂಚನೆಯಂತೆ ನಗರದಲ್ಲಿ ಜಾಗೃತಿ ಕಾರ್ಯಕ್ರಮಗಳು ಈಗಾಗಲೇ ಆರಂಭಗೊಂಡಿವೆ.

ಜನರ ಬಳಿಗೆ ವಿಶೇಷ ತಂಡ: ಮತದಾನ ಹೆಚ್ಚಳ ಜವಾಬ್ದಾರಿ ನಿರ್ವಹಿಸಲು ಪ್ರತಿಯೊಂದು ಕ್ಷೇತ್ರದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿದೆ. ವಲಯವಾರು ಉಸ್ತುವಾರಿ ಅಧಿಕಾರಿಗಳನ್ನೂ ನೇಮಿಸಲಾಗಿದೆ. ತಂಡದಲ್ಲಿರುವ ಅಧಿಕಾರಿಗಳು, ಜನರ ಬಳಿ ತೆರಳಿ ಮತದಾನದ ಮಹತ್ವ ತಿಳಿಸಲಿದ್ದಾರೆ.

ಬಸ್ ನಿಲ್ದಾಣ, ಉದ್ಯಾನ, ಹೋಟೆಲ್‌ಗಳು ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಮತದಾನ ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ. ಮನೆ, ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಬಡಾವಣೆಗಳಲ್ಲಿಯೂ ಜನಜಾಗೃತಿಗೆ ತಂಡ ಸಿದ್ಧತೆ ಮಾಡಿಕೊಂಡಿದೆ.

'ಹಿಂದಿನ ಚುನಾವಣೆ ಸಂದರ್ಭದಲ್ಲಿ ಕಡಿಮೆ ಮತದಾನವಾದ ಮತಗಟ್ಟೆಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಅಂಥ ಮತಗಟ್ಟೆಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ಜನರಲ್ಲಿ ಮತದಾನ ಜಾಗೃತಿ ಮೂಡಿಸಲು ನಾನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಈ ಬಾರಿ ಮತದಾನ ಪ್ರಮಾಣ ಶೇ 75ರಷ್ಟು ಹೆಚ್ಚಿಸಲು ಗುರಿ ಇಟ್ಟುಕೊಳ್ಳಲಾಗಿದೆ' ಎಂದು ಬೆಂಗಳೂರು ನಗರ ಜಿಲ್ಲಾ ಚುನಾಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಸದಸ್ಯರಿಗಾಗಿ ಚುನಾವಣಾ ಆಯೋಗದಿಂದ ಮಂಗಳವಾರ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಬಿಎಂಟಿಸಿಕೆಎಸ್‌ಆರ್‌ಸಿ ಸಿಬ್ಬಂದಿ, 'ಮತದಾನ ಸಂಕಲ್ಪ' ಕಿರುನಾಟಕ ಪ್ರದರ್ಶಿಸಿದರು

95,13,830 ಬೆಂಗಳೂರಿನ ಒಟ್ಟು ಮತದಾರರು

49,26,270 ಪುರುಷರು

45,85,824 ಮಹಿಳೆಯರು

8,615 ಬೆಂಗಳೂರಿನ ಒಟ್ಟು ಮತಗಟ್ಟೆಗಳು

ಮತದಾನ ಪ್ರಮಾಣ

2013	57.82%
2018	55.12%

ಆಯೋಗಕ್ಕೆ ತಾರೆಯರ ಸಹಕಾರ

ಸಿನಿಮಾ, ಕ್ರೀಡೆ, ಉದ್ಯಮ ಸೇರಿದಂತೆ ಹಲವು ಕ್ಷೇತ್ರಗಳ ತಾರೆಯರ ಸಹಕಾರದಲ್ಲಿ ಆಯೋಗವು ಮತದಾನ ಜಾಗೃತಿ ಮೂಡಿಸುತ್ತಿದೆ. ವಿಡಿಯೊ, ಸಾಕ್ಷ್ಯಚಿತ್ರ, ಪೋಸ್ಟರ್, ಘೋಷಣಾ ಬರಹಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುತ್ತಿದೆ. ನಟರಾದ ರಿಷಬ್ ಶೆಟ್ಟಿ, ಡಾಲಿ ಧನಂಜಯ್, ನಟಿಯರಾದ ಧನ್ಯಾ ರಾಮ್‌ಕುಮಾರ್, ಅಮೃತಾ ಅಯ್ಯಂಗಾರ್, ಕಾರುಣ್ಯ ರಾಮ್ ಹಾಗೂ ಇತರರು ಆಯೋಗದ ಜೊತೆ ಕೈ ಜೋಡಿಸಿದ್ದಾರೆ.

ಮತದಾನ ಪ್ರಮಾಣದ ವಿವರ (ಶೇಕಡವಾರು)

ವಿಧಾನಸಭಾ ಕ್ಷೇತ್ರ	2008	2013	2018
ಯಲಹಂಕ	61.07	66.93	63.23
ಕೆ.ಆರ್.ಪುರ	43.06	58.91	54.56
ಬ್ಯಾಟರಾಯನಪುರ	53.22	63.06	57.61
ಯಶವಂತಪುರ	56.77	66.24	60.49
ರಾಜರಾಜೇಶ್ವರಿನಗರ	47.74	56.82	54.34
ದಾಸರಹಳ್ಳಿ	43.80	55.54	48.07
ಮಹಾಲಕ್ಷ್ಮಿ ಲೇಔಟ್	51.50	60.28	54.69
ಮಲ್ಲೇಶ್ವರ	52.23	62.33	56.49
ಹೆಬ್ಬಾಳ	44.88	54.89	55.29
ಪುಲಿಕೇಶಿನಗರ	42.30	56.37	53.28
ಸರ್ವಜ್ಞನಗರ	35.41	50.24	51.24
ಸಿ.ವಿ.ರಾಮನ ನಗರ	40.67	53.85	49.07
ಶಿವಾಜಿನಗರ	47.91	54.33	55.16
ಶಾಂತಿನಗರ	44.25	57.80	53.71
ಗಾಂಧಿನಗರ	44.19	57.47	55.19
ರಾಜಾಜಿನಗರ	52.67	61.23	56.88
ಗೋವಿಂದರಾಜನಗರ	42.39	54.82	53.67
ವಿಜಯನಗರ	43.28	56.47	50.06
ಚಾಮರಾಜಪೇಟೆ	40.90	58.92	54.41
ಚಿಕ್ಕಪೇಟೆ	47.06	57.98	57.63
ಬಸವನಗುಡಿ	42.58	52.33	53.01
ಪದ್ಮನಾಭನಗರ	52.99	58.44	58.09
ಬಿಟಿಎಂ ಲೇಔಟ್	46.76	53.43	50.25
ಜಯನಗರ	47.11	55.93	55
ಮಹದೇವಪುರ	53.17	61.54	56.32
ಬೊಮ್ಮನಹಳ್ಳಿ	44.35	54.09	47.22
ಬೆಂಗಳೂರು ದಕ್ಷಿಣ	43.99	56.03	52.86
ಆನೇಕಲ್	58.56	68.89	63.32

'ಒಂದು ಮತ; ಪ್ರಜೆಯ ಶಕ್ತಿ'

ಆಡಳಿತ ವರ್ಗಗಳ ಧೋರಣೆಯಿಂದಾಗಿ ಹಲವರಲ್ಲಿ ಮತದಾನದ ಆಸಕ್ತಿ ಕಡಿಮೆ ಆಗುತ್ತಿದೆ. ಕಡಿಮೆ ಮತದಾನವಾಗುವುದೇ ಒಳ್ಳೆಯದೆಂದು ರಾಜಕಾರಣಿಗಳು ಅಂದುಕೊಂಡಿದ್ದಾರೆ. ಆದರೆ, ಜನರು ತಮ್ಮ ಮತದಾನದ ಹಕ್ಕನ್ನು ಕಡ್ಡಾಯವಾಗಿ ಚಲಾಯಿಸಿ ಜನಪರ ನಿಲುವುಳ್ಳ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು. ಒಂದು ಮತಕ್ಕೆ ಆಡಳಿತದ ದಿಕ್ಕು ಬದಲಿಸುವ ಶಕ್ತಿ ಇದೆ.

ಪಿ.ಎಸ್. ಷಣ್ಮುಗಂ, ಶಾಲಾ ವಾಹನಗಳ ಸಂಘದ ಅಧ್ಯಕ್ಷ

'ಮತ ಚಲಾಯಿಸದಿದ್ದರೆ ನಮಗೇ ನಷ್ಟ'

ಮತದಾನ ನಮ್ಮ ಹಕ್ಕು. ಅದನ್ನು ಚಲಾಯಿಸದಿದ್ದರೆ ನಷ್ಟ ಹೆಚ್ಚು. ರಾಜಕೀಯ ಕೆಲವರಿಗೆ ಇಷ್ಟವಾಗುವುದಿಲ್ಲ. ನಾವೇಕೆ ಮತದಾನ ಮಾಡಬೇಕೆಂದು ಸುಮ್ಮನಾಗುತ್ತಿದ್ದಾರೆ. ಈ ಕ್ರಮ ಸರಿಯಲ್ಲ. ಪ್ರತಿಯೊಬ್ಬರು ಮತದಾನ ಮಾಡಬೇಕು. ಇದು ಸಹ ನಾವು ಸಮಾಜಕ್ಕೆ ನೀಡುವ ಕೊಡುಗೆ.

ಸವಿತಾ ಕುಶಾಲ್, ಯೋಗ ಶಿಕ್ಷಕಿ

'ನಮಗ್ಯಾಕೆಂಬ ಮನಸ್ಥಿತಿ ಬದಲಾಯಿಸಿ'

'ಅತೀ ಹೆಚ್ಚು ಜನಸಂಖ್ಯೆ ಇರುವ ನಗರದಲ್ಲಿ ಮತದಾನ ಪ್ರಮಾಣ ಕಡಿಮೆ ಆಗುತ್ತಿರುವುದು ಶೋಚನೀಯ. ಬಹುತೇಕ ಜನರಲ್ಲಿ ರಾಜಕೀಯ ನಮಗ್ಯಾಕೆ ಬೇಕೆಂಬ ಮನಸ್ಥಿತಿ ಇದೆ. ಇದನ್ನು ಬದಲಾಯಿಸಲು ಹೆಚ್ಚು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಹೊರ ರಾಜ್ಯದಿಂದ ಬಂದು ನೆಲೆಸಿರುವ ಜನ, ಮತಗಟ್ಟೆಯತ್ತ ಸುಳಿಯುತ್ತಿಲ್ಲ. ಇದು ಸಹ ಮತದಾನ ಕಡಿಮೆಯಾಗಲು ಕಾರಣ.

ಮುನಿರಾಜು, ಹೆಣ್ಣೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ

ಮಹಾವೀರ ಜಯಂತಿ ಪ್ರಯುಕ್ತ ಜೈನ್ ಯುವ ಸಂಘಟನೆ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಜೈನ ಸಮುದಾಯದ ಮಹಿಳೆಯರು ಮಹಾವೀರರ ಸಂದೇಶ ಸಾರುವ ಸ್ತಬ್ಧ ಚಿತ್ರಗಳೊಂದಿಗೆ ಹೆಜ್ಜೆ ಹಾಕಿದರು – ಪ್ರಜಾವಾಣಿ ಚಿತ್ರ

ಒಂದೇ ದಿನ ₹13.56 ಕೋಟಿ ಮೌಲ್ಯದ ನಗದು, ಸಾಮಗ್ರಿ ವಶ

ಬೆಂಗಳೂರು: ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಮಂಗಳವಾರ ಒಂದೇ ದಿನ ನಗದು ಸೇರಿದಂತೆ ₹ 13.56 ಕೋಟಿ ಮೌಲ್ಯದ ಮದ್ಯ, ವಿವಿಧ ವಸ್ತುಗಳು, ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ಪ್ರಕಟಣೆ ನೀಡಿರುವ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ, ನೀತಿ ಸಂಹಿತೆ ಜಾರಿಯಾದ ಇಲ್ಲಿಯವರೆಗೆ ₹ 17.36 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ. ₹22.35 ಕೋಟಿ ಮೌಲ್ಯದ 3.27 ಲಕ್ಷ ಲೀಟರ್ ಮದ್ಯ, ₹ 8.50 ಕೋಟಿ ಮೌಲ್ಯದ 22.69 ಕೆ.ಜಿ. ಚಿನ್ನ, ₹65.19 ಲಕ್ಷ ಮೌಲ್ಯದ 93.56 ಕೆ.ಜಿ. ಬೆಳ್ಳಿ, ₹42.66 ಲಕ್ಷ ಮೌಲ್ಯದ ಮಾದಕವಸ್ತು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ.

ಕ್ರಿಮಿನಲ್ ಆರೋಪ ಪ್ರಕರಣ ಕುರಿತು ವಿಚಾರಣೆಗೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ನ್ಯೂಯಾರ್ಕ್‌ನ ಮ್ಯಾನ್‌ಹಾಟನ್ ಕೋರ್ಟ್‌ಗೆ ಹಾಜರಾದರು —ಎಎಫ್‌ಪಿ ಚಿತ್ರ

ಐಷಾರಾಮಿ ಜೀವನಕ್ಕಾಗಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 10 ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮುಂಬೈನ ಸಲೀಂ ರಫೀಕ್ ಶೇಖ್ ಅಲಿಯಾಸ್ ಬಾಂಬೆ ಸಲೀಂ (46) ಹಾಗೂ ಯಾಸೀನ್ ಮಕ್ಬುಲ್ ಖಾನ್ ಅಲಿಯಾಸ್ ಅಸ್ಲಾಂ ಪಾಂಡೆ ಬಂಧಿತರು. ಇವರಿಂದ ₹ 67 ಲಕ್ಷ ಮೌಲ್ಯದ ಒಂದು ಕೆ.ಜಿ ಚಿನ್ನಾಭರಣ, ಆರೂವರೆ ಕೆ.ಜಿ ಬೆಳ್ಳಿ ಸಾಮಗ್ರಿ, ಮೂರು ದ್ವಿಚಕ್ರ ವಾಹನ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಕಟರ್, ರಾಡ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ಮನೆಯಲ್ಲಿ ಜ. 23ರಂದು ಕಳ್ಳತನವಾದ ಬಗ್ಗೆ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಯಾವುದೇ ಮೊಬೈಲ್ ಬಳಸುತ್ತಿರಲಿಲ್ಲ. ಹೀಗಾಗಿ, ಆರಂಭದಲ್ಲಿ ಸುಳಿವು ಸಿಕ್ಕಿರಲಿಲ್ಲ. ಇತ್ತೀಚೆಗೆ ಲಭ್ಯವಾದ ತಾಂತ್ರಿಕ ಪುರಾವೆ ಆಧರಿಸಿ ಹೊರ ರಾಜ್ಯಗಳಲ್ಲಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ತಿಳಿಸಿದರು.

'ಸಲೀಂ ರಫೀಕ್ ಶೇಖ್ ಹಾಗೂ ಯಾಸೀನ್ ಮಕ್ಬುಲ್ ಖಾನ್, ಅಪರಾಧ ಹಿನ್ನೆಲೆಯುಳ್ಳವರು. ಇವರಿಬ್ಬರಿಗೂ ಇಬ್ಬರು ಪತ್ನಿಯರಿದ್ದಾರೆ. ಐಷಾರಾಮಿ ಜೀವನ ನಡೆಸುವುದಕ್ಕಾಗಿ ಆರೋಪಿಗಳು ಕಳ್ಳತನಕ್ಕೆ ಇಳಿದಿದ್ದರು. ಆಗಾಗ ಬೆಂಗಳೂರಿಗೆ ಬಂದು, ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು' ಎಂದು ಹೇಳಿದರು.

ರೀಲ್ಸ್ ಮೂಲಕ ಪ್ರಸಿದ್ಧಿ: 'ಬಂಧಿತ ಸಲೀಂ ರಫೀಕ್ ಶೇಖ್, ರೀಲ್ಸ್ ಮೂಲಕ ಪ್ರಸಿದ್ಧಿ ಪಡೆದಿದ್ದ. ಮೈ ಮೇಲೆ ನಕಲಿ ಚಿನ್ನಾಭರಣ ಧರಿಸಿ ವಿಡಿಯೊ ಮಾಡುತ್ತಿದ್ದ. ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತಿದ್ದ. ತನ್ನದೇ ಅಭಿಮಾನಿಗಳನ್ನೂ ಹೊಂದಿದ್ದ' ಎಂದು ಪೊಲೀಸರು ತಿಳಿಸಿದರು.

'ಕಟರ್ ಹಾಗೂ ರಾಡ್‌ನಿಂದ ಮನೆಯ ಬಾಗಿಲು ಮುರಿದು ಆರೋಪಿಗಳು ಒಳನುಗ್ಗುತ್ತಿದ್ದರು. ಆಭರಣ ಹಾಗೂ ನಗದು ಕದ್ದೊಯ್ಯುತ್ತಿದ್ದರು. ಕಳ್ಳತನ ಪ್ರಕರಣದಲ್ಲಿ ಬಸವನಗುಡಿ ಠಾಣೆ ಪೊಲೀಸರು ಸಲೀಂ ರಫೀಕ್ ಶೇಖ್‌ನನ್ನು ಕಳೆದ ವರ್ಷ ಬಂಧಿಸಿದ್ದರು. ಇದೇ ಆರೋಪಿಗಳು ನಗರದ 10 ಮನೆಗಳಲ್ಲಿ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದರು.

ಪೋಕ್ಸೊ ಆರೋಪಿಗೆ ಜಾಮೀನು ನಿರಾಕರಣೆ

ಬೆಂಗಳೂರು: 'ಹದಿನೆಂಟು ವರ್ಷ ಮೀರದ ಬಾಲಕ–ಬಾಲಕಿಯರ ಪ್ರೀತಿಯ ವ್ಯವಹಾರದಲ್ಲಿ ಸಮ್ಮತಿ ಇದ್ದರೂ ಆ ಹಂತದಲ್ಲಿ ಅವರು ದೈಹಿಕ ಸಂಪರ್ಕ ಹೊಂದುವುದು ಪೋಕ್ಸೊ (ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣೆ) ಕಾಯ್ದೆಗೆ ವಿರುದ್ಧವಾದ ನಡವಳಿಕೆಯಾಗುತ್ತದೆ' ಎಂಬ ಹೈಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ.

ಆರೋಪಿ ಯುವಕನೊಬ್ಬನಿಗೆ ಜಾಮೀನು ನೀಡಲೂ ನಿರಾಕರಿಸಿದೆ. 23 ವರ್ಷದ ಆರೋಪಿ ಯುವಕ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಪ್ರಕರಣದಲ್ಲಿ ಸಾಕ್ಷ್ಯಗಳ ವಿಚಾರಣೆ ಪೂರ್ಣಗೊಂಡ ನಂತರ ಸಾಂದರ್ಭಿಕ ಸನ್ನಿವೇಶಗಳು ಸಕಾರಾತ್ಮಕವಾಗಿ ಬದಲಾವಣೆಯಾದರೆ ಅರ್ಜಿದಾರರು ಜಾಮೀನು ಕೋರಲು ಸ್ವತಂತ್ರರಿದ್ದಾರೆ' ಎಂದು ಆದೇಶಿಸಿದೆ.

'ಅಪ್ರಾಪ್ತರ ಮಧ್ಯದ ಪ್ರೇಮ ಪ್ರಕರಣದಲ್ಲಿ ದೈಹಿಕ ಸಂಪರ್ಕಕ್ಕೆ ಅವಕಾಶವೇ ಇಲ್ಲ. ಅನುಮತಿ ಇದೆ ಎಂದಾದರೆ ಪೋಕ್ಸೊ ಕಾಯ್ದೆಯ ಅನುಷ್ಠಾನವೇ ವಿಫಲವಾಗುತ್ತದೆ. ಈ ಉದ್ದೇಶವನ್ನು ವಿಫಲಗೊಳಿಸುವ ನಿಟ್ಟಿನಲ್ಲಿ ನ್ಯಾಯಾಲಯಗಳು ತೀರ್ಪು ಕೈಗೊಳ್ಳುವಂತಾಗಬಾರದು' ಎಂದು ನ್ಯಾಯಪೀಠ ಎಚ್ಚರಿಸಿದೆ.

'ಪೋಕ್ಸೊ ಕಾಯ್ದೆಯ ಪ್ರಕಾರ 18 ವರ್ಷದೊಳಗಿನವರು ಅಪ್ರಾಪ್ತರು. ಈ ಪ್ರಕರಣದಲ್ಲಿನ ಸಂತ್ರಸ್ತೆ 16 ವರ್ಷದ ಬಾಲಕಿ. ಆಕೆ ಆರೋಪಿ ಯುವಕನಿಗೆ ಲೈಂಗಿಕ ಕ್ರಿಯೆಗೆ ಸಮ್ಮತಿ ನೀಡಿದ್ದರೂ ಅದು ಸಮ್ಮತಿ ಎನಿಸುವುದಿಲ್ಲ. ಈ ಅಂಶವನ್ನು ಪೋಕ್ಸೊ ಕಾಯ್ದೆ ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ. ಹೀಗಾಗಿ, ಸಂತ್ರಸ್ತೆಯ ಸ್ವಯಂ ಹೇಳಿಕೆಯನ್ನೇ ಆಧರಿಸಿ ಜಾಮೀನು ಕೋರಿರುವ ಆರೋಪಿ ಪ್ರಯತ್ನವನ್ನು ಒಪ್ಪಲಾಗದು' ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಬಾಲಕಿಯ ಸ್ವಯಂ ಪ್ರಮಾಣೀಕೃತ ಹೇಳಿಕೆಯನ್ನು ವಿಚಾರಣೆ ವೇಳೆಯಲ್ಲೇ ಪರೀಕ್ಷೆಗೆ ಒಳಪಡಿಸಬೇಕು. ಪ್ರಕರಣದ ವಿಚಾರಣೆ ಮುಗಿದು ತೀರ್ಮಾನ ಕೈಗೊಳ್ಳುವವರೆಗೂ, ಯಾವುದೇ ನ್ಯಾಯಾಲಯಕ್ಕೆ ಪೋಕ್ಸೊ ಪ್ರಕರಣದಲ್ಲಿ ಅರ್ಜಿದಾರನ ಪಾತ್ರದ ಬಗ್ಗೆ ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶವಿಲ್ಲ' ಎಂದು ಹೇಳಿದೆ.

ಪ್ರಕರಣವೇನು?: 'ನನ್ನ 16 ವರ್ಷದ ಮಗಳು (ಸಂತ್ರಸ್ತೆ) 2022ರ ಏಪ್ರಿಲ್ 2ರಂದು ಚರ್ಚ್‌ಗೆ ಹೋಗಿದ್ದಾಗ ಅಪಹರಣ ಮಾಡಲಾಗಿದೆ' ಎಂದು ಆರೋಪಿಸಿ ಬಾಲಕಿಯ ತಾಯಿ ಸಲ್ಲಿಸಿದ್ದ ದೂರಿಗೆ ಸಂಬಂಧಿಸಿದಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ನಂತರ ತನಿಖೆ ನಡೆಸಿ ಐಪಿಸಿ ಮತ್ತು ಪೋಕ್ಸೊ ಕಾಯ್ದೆಯಡಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕ್ರಿಮಿನಲ್ ಪ್ರಕರಣ, ಡೊನಾಲ್ಡ್ ಟ್ರಂಪ್ ಬಂಧನ

ಒಂದನೇ ಪುಟದಿಂದ...

'ಕಾನೂನು ಸಲಹಾ ಸಿಬ್ಬಂದಿ ಜೊತೆ ಬಂದಿದ್ದ ಟ್ರಂಪ್ ಅವರು, ಕ್ರಿಮಿನಲ್ ಆರೋಪ ಪ್ರಕರಣದಲ್ಲಿ ನನ್ನ ತಪ್ಪಿಲ್ಲ. ನಾನು ನಿರ್ದೋಷಿ' ಎಂದು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜುವಾನ್ ಮರ್ಚನ್ ಅವರಿಗೆ ಮನವಿ ಸಲ್ಲಿಸಿದರು.

ಟ್ರಂಪ್ 2024ರ ಅಧ್ಯಕ್ಷೀಯ ಚುನಾವಣೆ ಸಿದ್ಧತೆಯಲ್ಲಿದ್ದು, ಎರಡನೇ ಬಾರಿಗೆ ಆಯ್ಕೆ ಬಯಸಿದ್ದಾರೆ. ಹೀಗಾಗಿ, ಈ ಬೆಳವಣಿಗೆ ಅಮೆರಿಕದಲ್ಲಿ ರಾಜಕೀಯವಾಗಿ ತೀವ್ರ ಚರ್ಚೆಗೆ ಗ್ರಾಸವಾಗುವ ಸಾಧ್ಯತೆಗಳಿವೆ.

ವಿಚಾರಣೆಗೆ ಮ್ಯಾನ್ ಹಾಟನ್‌ಗೆ ಬಂದ ಟ್ರಂಪ್ ಅವರನ್ನು ಪೊಲೀಸರು ವಶಕ್ಕೆ ಪಡೆದರು. ಈ ಸಂದರ್ಭದಲ್ಲಿ, 'ಇದು ಅವಾಸ್ತವಿಕ. ಬಹುಶಃ ಅವರು ನನ್ನನ್ನು ಬಂಧಿಸಬಹುದು. ಅಮೆರಿಕದಲ್ಲಿ ಇಂತಹದ್ದು ಘಟಿಸುತ್ತಿದೆ ಎನ್ನುವುದನ್ನು ನಂಬಲು ಆಗುತ್ತಿಲ್ಲ' ಎಂದು 'ಟ್ರೂತ್' ಜಾಲತಾಣದ ಖಾತೆಯಲ್ಲಿ ಟ್ರಂಪ್ ಪೋಸ್ಟ್ ಹಾಕಿದ್ದರು.

ಟ್ರಂಪ್ ಅವರ ವಿಚಾರಣೆಯು ಮಾಧ್ಯಮಗಳ ಗಮನಸೆಳೆದಿದೆ. ಕೋರ್ಟ್‌ನ ಬಳಿ ಮಾಧ್ಯಮಗಳ ಪ್ರತಿನಿಧಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದರು. ಅಲ್ಲದೆ, ಟ್ರಂಪ್ ವಿರೋಧಿಗಳು ಪ್ರತಿಭಟನ ರ‍್ಯಾಲಿಯನ್ನು ಕೈಗೊಂಡಿದ್ದು, ಬೆಂಬಲಿಗರು ಸೇರಿದ್ದರು. ಕೋರ್ಟ್ ಆವರಣಕ್ಕೆ ತೆರಳುವ ಮೊದಲು ಬೆಂಬಲಿಗರತ್ತ ಟ್ರಂಪ್ ಕೈಬೀಸಿದರು.

ವಶಕ್ಕೆ ಪಡೆದ ಹಿಂದೆಯೇ ಪೊಲೀಸರು, ಕೋರ್ಟ್ ಹಾಲ್‌ಗೆ ಕರೆದೊಯ್ಯುವ ಮೊದಲು ಟ್ರಂಪ್ ಅವರ ಬೆರಳಚ್ಚುಗಳ ಮಾದರಿ ಪಡೆದರು. ಹೆಸರು, ವಯಸ್ಸು, ಎತ್ತರ, ತೂಕ ಒಳಗೊಂಡಂತೆ ವ್ಯಕ್ತಿಗತ ಮಾಹಿತಿ ಪಡೆದರು. ಅವರ ವಿರುದ್ಧ ಯಾವುದಾದರೂ ವಾರಂಟ್ ಬಾಕಿ ಇದೆಯೇ ಎಂದು ಪರಿಶೀಲಿಸಿದರು.



ಸೋಲಾರ್ ಪ್ಯಾನೆಲ್ ತ್ಯಾಜ್ಯದ ಮುಕ್ತಿಮಾರ್ಗಗಳು

ಉದಯ ಶಂಕರ ಪುರಾಣಿಕ

ಪರಿಸರಸ್ನೇಹಿ ಎಂದು ಸೌರಶಕ್ತಿಯ ಬಳಕೆಯನ್ನು ಸರ್ಕಾರ ಹಾಗೂ ವಿವಿಧ ಸಂಘಸಂಸ್ಥೆಗಳು ಉತ್ತೇಜಿಸುತ್ತಿವೆ. ಆದರೆ ಮನೆ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಬಳಸುವ ಸೋಲಾರ್ ಪ್ಯಾನೆಲ್‌ಗಳು, ನಂತರ ನಿರುಪಯುಕ್ತವಾಗುವಾಗ, ಈ ತ್ಯಾಜ್ಯವನ್ನು ಹೇಗೆ ನಿರ್ವಹಿಸುವುದು ಎನ್ನುವುದು ಸಮಸ್ಯೆಯಾಗಿದೆ.

ಉತ್ತಮ ಗುಣಮಟ್ಟದ ಸೋಲಾರ್ ಪ್ಯಾನೆಲ್ ಸುಮಾರು ಮೂವತ್ತು ವರ್ಷಗಳವರೆಗೆ ಬಳಸಬಹುದು ಎಂದು ಹೇಳಲಾಗುತ್ತದೆ. ಆದರೆ ವರ್ಷದಿಂದ ವರ್ಷಕ್ಕೆ, ಪ್ಯಾನೆಲ್‌ಗೆ ಸೌರಶಕ್ತಿಯನ್ನು ವಿದ್ಯುತ್ ಆಗಿ ಪರಿವರ್ತಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಹೀಗಾಗಿ ಮೂವತ್ತು ವರ್ಷಗಳ ಮೊದಲು ಸೋಲಾರ್ ಪ್ಯಾನೆಲ್‌ಗಳನ್ನು ಬದಲಾಯಿಸುವವರ ಸಂಖ್ಯೆ ಸಾಕಷ್ಟಿದೆ ಎಂದು ಪರಿಸರತಜ್ಞರು ಅಭಿಪ್ರಾಯ ಪಡುತ್ತಾರೆ.

ಅಂತರರಾಷ್ಟ್ರೀಯ ಪುನರ್ಬಳಕೆಯ ಇಂಧನ ಏಜೆನ್ಸಿ (ಐಆರ್‌ಇಎನ್‌ಎ), ಸೋಲಾರ್ ಪ್ಯಾನೆಲ್‌ಗೆ 30 ವರ್ಷಗಳ ಕೆಲಸ ಮಾಡುವ ಅವಧಿಯ ಆಧಾರದ ಮೇಲೆ ಪ್ರಕಟಿಸಿರುವ ಅಂಕಿಅಂಶಗಳನ್ನು ಪರಿಗಣಿಸಿದರೆ, ವರ್ಷ 2050ರ ಹೊತ್ತಿಗೆ 78 ದಶಲಕ್ಷ ಟನ್‌ಗಳಷ್ಟು ಸೋಲಾರ್ ಪ್ಯಾನೆಲ್‌ಗಳ ತ್ಯಾಜ್ಯ ಸೃಷ್ಟಿಯಾಗಲಿದೆ. ಆದರೆ ಮೂವತ್ತು ವರ್ಷಗಳ ಮೊದಲು ಸೋಲಾರ್ ಪ್ಯಾನೆಲ್ ಬದಲಾಯಿಸುವವರ ಸಂಖ್ಯೆಯನ್ನು ಪರಿಗಣಿಸಿದರೆ, ಕೇವಲ ನಾಲ್ಕು ವರ್ಷಗಳ ಅವಧಿಯಲ್ಲಿ 3,15,000 ಟನ್ ಸೋಲಾರ್ ಪ್ಯಾನೆಲ್‌ಗಳ ತ್ಯಾಜ್ಯ ಸೃಷ್ಟಿಯಾಗಲಿದೆ.

ಅಮೆರಿಕದಲ್ಲಿರುವ ಸೋಲಾರ್ ಪ್ಯಾನೆಲ್ ತ್ಯಾಜ್ಯವನ್ನು ಸಂಸ್ಕರಿಸುವ ಘಟಕವೊಂದು, ವರ್ಷಕ್ಕೆ 20 ಲಕ್ಷ ಸೋಲಾರ್ ಪ್ಯಾನೆಲ್‌ಗಳನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಿದೆ. ಆದರೆ ಪ್ರತಿ ಸೋಲಾರ್ ಪ್ಯಾನೆಲನ್ನು ಸಂಸ್ಕರಿಸಲು 20ರಿಂದ 30 ಡಾಲರ್ ವೆಚ್ಚವಾಗುತ್ತಿದೆ. ಕಡಿಮೆ ವೆಚ್ಚದಲ್ಲಿ ಸೋಲಾರ್ ಪ್ಯಾನೆಲ್ ತ್ಯಾಜ್ಯವನ್ನು ಸಂಸ್ಕರಿಸುವ ವಿಧಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಯಾಗಬೇಕು ಮತ್ತು ಇಂತಹ ಸಂಸ್ಕರಣೆ ಘಟಕಗಳು ಹೆಚ್ಚಾಗಲು ಸರ್ಕಾರಗಳು ವಿಶೇಷ ಅನುದಾನ ನೀಡಬೇಕು. ಇಲ್ಲದಿದ್ದರೆ ಸೋಲಾರ್ ಪ್ಯಾನೆಲ್‌ಗಳನ್ನು ನಗರ ಅಥವಾ ಗ್ರಾಮೀಣ ಪ್ರದೇಶದ ತ್ಯಾಜ್ಯಕ್ಕೆ ಸೇರಿಸುವ ಅಥವಾ ನದಿ, ಸಮುದ್ರಗಳಿಗೆ ಎಸೆಯುವ ಪ್ರಕರಣಗಳು ಹೆಚ್ಚಾಗಲಿದೆ. ಹೀಗೆ ಮಾಡುವುದರಿಂದ ಮನುಷ್ಯನ ಆರೋಗ್ಯ ಹಾಗೂ ಪರಿಸರಕ್ಕೆ ಅಪಾರ ಹಾನಿಯುಂಟಾಗುತ್ತದೆ – ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ವಿಶ್ವದಾದ್ಯಂತ ಕ್ರಿಸ್ಟಲೈನ್-ಸಿಲಿಕಾನ್ ಸೋಲಾರ್ ಪ್ಯಾನೆಲ್‌ಗಳು ಅಧಿಕ ಸಂಖ್ಯೆಯಲ್ಲಿ ಬಳಸಲಾಗುತ್ತಿದೆ. ಈ ಪ್ಯಾನೆಲ್‌ಗಳನ್ನು ತಯಾರಿಸಲು ಅಲೂಮಿನಿಯಂ ಫ್ರೇಮ್, ಗಾಜು, ತಾಮ್ರದ ತಂತಿ, ಪಾಲಿಮರ್‌ಗಳು, ಕ್ರಿಸ್ಟಲ್ ಸಿಲಿಕಾನ್‌ನಿಂದ ಮಾಡಿರುವ ಸೋಲಾರ್ ಸೆಲ್‌ಗಳು ಮತ್ತು ಪ್ಲಾಸ್ಟಿಕ್ ಜಂಕ್ಷನ್ ಬಾಕ್ಸ್‌ಗಳನ್ನು ಬಳಸುತ್ತಾರೆ. ಇವುಗಳಲ್ಲಿ ಗಾಜು, ಅಲ್ಯೂಮಿನಿಯಂ ಫ್ರೇಮ್, ತಾಮ್ರದ ತಂತಿ ಮತ್ತು ಪ್ಲಾಸ್ಟಿಕ್ ಜಂಕ್ಷನ್ ಬಾಕ್ಸ್‌ನ್ನು ಸಂಸ್ಕರಿಸುವುದು ಸುಲಭವಾದರೆ, ಸೋಲಾರ್ ಸೆಲ್‌ಗಳು ಮತ್ತು ಅವುಗಳಲ್ಲಿ ಅಲ್ಪ ಪ್ರಮಾಣದಲ್ಲಿ ಬಳಕೆಯಾಗುವ ತಾಮ್ರ ಮತ್ತು ಬೆಳ್ಳಿಯನ್ನು ಸಂಸ್ಕರಿಸುವುದು ಸುಲಭವಾಗಿಲ್ಲ. ಕೆಲವು ಸೋಲಾರ್ ಪ್ಯಾನೆಲ್‌ಗಳಲ್ಲಿ ಕ್ಯಾಡಮಿಯಂ ಮತ್ತು ಸೀಸ್‌ವನ್ನು ಬಳಸಲಾಗುತ್ತಿರುವುದರಿಂದ ನಮ್ಮ ಆರೋಗ್ಯ ಹಾಗೂ ಪರಿಸರಕ್ಕೆ ಹಾನಿಯಾಗದಂತೆ ಇಂತಹ ಪ್ಯಾನೆಲ್‌ಗಳನ್ನು ಬಹಳ ಎಚ್ಚರಿಕೆಯಿಂದ ಸಂಸ್ಕರಿಸಬೇಕಾಗುತ್ತದೆ.

ಥಿನ್ ಫಿಲಂ ಸೋಲಾರ್ ಪ್ಯಾನೆಲ್‌ಗಳಲ್ಲಿ ಕ್ಯಾಡ್‌ಮಿಯಂ-ಟೆಲ್ಯೂರೈಡ್ ಬಳಸಲಾಗುತ್ತಿದ್ದು, ಇಂತಹ ಸೋಲಾರ್ ಪ್ಯಾನೆಲ್ ತ್ಯಾಜ್ಯವನ್ನು ಸಂಸ್ಕರಿಸಲು ವಿಶೇಷ ಘಟಕಗಳು ಬೇಕಾಗುತ್ತವೆ. ಸೋಲಾರ್ ಪ್ಯಾನೆಲ್‌ಗಳ ಜೊತೆ ಬಳಸುವ ಇನ್‌ವರ್ಟರ್, ಬ್ಯಾಟರಿ, ಇತ್ಯಾದಿಗಳನ್ನು ಸೂಕ್ತವಾದ ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಿಸಬೇಕಾಗುತ್ತದೆ.

ನಾವು ಬಳಸುವ ಸೋಲಾರ್ ಪ್ಯಾನೆಲ್‌ಗಳ ಉತ್ಪಾದನೆಯಲ್ಲಿ ಯಾವ ಅಪಾಯಕಾರಿ ವಸ್ತುಗಳನ್ನು ಬಳಸಲಾಗಿದೆ ಮತ್ತು ಸೋಲಾರ್ ತ್ಯಾಜ್ಯ ನಿರ್ವಹಿಸುವಾಗ, ಯಾವ ರೀತಿ ಮುನ್ನೆಚ್ಚರಿಕೆ ವಹಿಸಬೇಕು ಎಂದು ಜನಸಾಮಾನ್ಯರಿಗೆ ತಿಳಿಸಿಕೊಡುವ ಕೆಲಸವನ್ನು ಸೋಲಾರ್ ಕಂಪನಿಗಳು ಮಾಡಬೇಕು. ಎಷ್ಟು ವರ್ಷಗಳವರೆಗೆ ಸೋಲಾರ್ ಪ್ಯಾನೆಲ್‌ಗಳನ್ನು ಬಳಸಬಹುದು ಮತ್ತು ವರ್ಷದಿಂದ ವರ್ಷಕ್ಕೆ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಕಾರ್ಯಕ್ಷಮತೆ ಎಷ್ಟು ಕಡಿಮೆಯಾಗುತ್ತದೆ ಎಂದು ಜನಸಾಮಾನ್ಯರು ತಿಳಿದುಕೊಳ್ಳುವುದು ಅಗತ್ಯವಿದೆ. ಅದೇ ರೀತಿ ಸೋಲಾರ್ ಪ್ಯಾನೆಲ್ ತ್ಯಾಜ್ಯ ಸಂಗ್ರಹಣೆ ಹಾಗೂ ಸಂಸ್ಕರಣೆ ಘಟಕಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಸುರಕ್ಷತೆ ಕುರಿತು ಮನವರಿಕೆ ಮಾಡಿಕೊಡುವ ಕಾರ್ಯಕ್ರಮಗಳು ಹಾಗೂ ನಿಯಮಿತವಾಗಿ ಅವರ ಆರೋಗ್ಯ ತಪಾಸಣೆ ಶಿಬಿರಗಳ ಅಗತ್ಯವಿದೆ. ನಮ್ಮ ದೇಶದಲ್ಲಿ ಕೂಡ ದೇಶದಾದ್ಯಂತ ಸೋಲಾರ್ ಪ್ಯಾನೆಲ್ ತ್ಯಾಜ್ಯ ಸಂಗ್ರಹಣೆ, ಸಂಸ್ಕರಣೆ ಮತ್ತು ತ್ಯಾಜ್ಯದಿಂದ ದೊರೆಯುವ ಪುನರ್ ಬಳಕೆಗೆ ಸೂಕ್ತವಾದ ವಸ್ತುಗಳ ವಿಲೇವಾರಿ ಹಾಗೂ ಸಂಸ್ಕರಿಸಲಾಗದೆ ಉಳಿಯುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ವ್ಯವಸ್ಥೆಯ ಅಗತ್ಯವಿದೆ. ಇದರಿಂದ ಸ್ಥಳೀಯವಾಗಿ ನೇರವಾಗಿ ಮತ್ತು ಪರೋಕ್ಷವಾಗಿ ಸಾವಿರಾರು ಜನರಿಗೆ ಉದ್ಯೋಗ ದೊರೆಯಲು ಸಾಧ್ಯವಿದೆ.

ಕೆಲವು ದೇಶಗಳಲ್ಲಿ ಸೋಲಾರ್ ಪ್ಯಾನೆಲ್‌ಗಳನ್ನು ದುರಸ್ತಿ ಮಾಡಿ, ಕಡಿಮೆ ಬೆಲೆಗೆ ಬೇರೆ ದೇಶಗಳಲ್ಲಿ ಮಾರಾಟ ಮಾಡುವ ಸಂಸ್ಥೆಗಳಿವೆ. ಇಂತಹ ಕಳಪೆ ಗುಣಮಟ್ಟದ ಮತ್ತು ಅಪಾಯಕಾರಿ ಅಂಶಗಳನ್ನು ಒಳಗೊಂಡಿರುವ ಸೋಲಾರ್ ಪ್ಯಾನೆಲ್‌ಗಳು ನಮ್ಮ ದೇಶದಲ್ಲಿ ಮಾರಾಟವಾಗದಂತೆ ಸರ್ಕಾರ ಮತ್ತು ಜನಸಾಮಾನ್ಯರು ಜಾಗೃತರಾಗಿರಬೇಕು.

❖

ರಕ್ತವೇ ಬ್ಯಾಟರಿಗೆ ಶಕ್ತಿಮೂಲ!



ಇದೀಗ ದೇಹದ ರಕ್ತವನ್ನೇ ಮೂಲವಾಗಿರಿಸಿಕೊಂಡು ತನಗೆ ತಾನೇ ವಿದ್ಯುತ್ ಉತ್ಪಾದಿಸಿಕೊಳ್ಳಬಲ್ಲ, ದೇಹದೊಳಗೆ ಇರಿಸಬಹುದಾದ ವೈದ್ಯಕೀಯ ಸಾಧನಗಳ ಅನ್ವೇಷಣೆಯಾಗಿದೆ.

ನೇಸರ ಕಾಡನಕುಪ್ಪೆ

ಹೃದಯಕ್ಕೆ ಅಳವಡಿಸುವ ಪೇಸ್ ಮೇಕರ್‌ಗಳ ಬಗ್ಗೆ ನೀವು ಕೇಳಿರಬಹುದು. ಮಧುಮೇಹ ಇರುವ ವ್ಯಕ್ತಿಗಳಲ್ಲಿ ಇನ್ಸುಲಿನ್ ಉತ್ಪಾದನೆಗೆ ಇನ್ಸುಲಿನ್ ಪಂಪ್‌ಗಳನ್ನು ದೇಹದಲ್ಲಿ ಅಳವಡಿಸುವುದೂ ಇದೆ. ಈ ರೀತಿಯ ಸಾಧನಗಳು ಕಾರ್ಯನಿರ್ವಹಿಸಲು ಅವುಗಳಿಗೆ ವಿದ್ಯುತ್ ಅಗತ್ಯ. ಈಗ ಈ ಸಾಧನಗಳಲ್ಲಿ ಒಮ್ಮೆ ಬಳಸಬಹುದಾದ ಅಥವಾ ಮರುಬಳಸಬಹುದಾದ ಬ್ಯಾಟರಿಗಳನ್ನು ಇರಿಸಲಾಗಿರುತ್ತದೆ. ಈ ಸಾಧನಗಳ ಕಾಲ ಮಿತಿ ಕಡಿಮೆ. ಇದೀಗ ದೇಹದ ರಕ್ತವನ್ನೇ ಮೂಲವಾಗಿರಿಸಿಕೊಂಡು ತನಗೆ ತಾನೇ ವಿದ್ಯುತ್ ಉತ್ಪಾದಿಸಿಕೊಳ್ಳಬಲ್ಲ, ದೇಹದೊಳಗೆ ಇರಿಸಬಹುದಾದ ವೈದ್ಯಕೀಯ ಸಾಧನಗಳ ಅನ್ವೇಷಣೆಯಾಗಿದೆ.

ಸಾಮಾನ್ಯವಾಗಿ ಪೇಸ್ ಮೇಕರ್‌ಗಳಲ್ಲಿ ಲಿಥಿಯಂ ಅಯೋಡಿನ್ ಸೆಲ್‌ಗಳನ್ನು ಶಕ್ತಿಮೂಲವಾಗಿ ಅಳವಡಿಸಿರುತ್ತಾರೆ. ಇನ್ಸುಲಿನ್ ಪಂಪ್‌ಗಳಲ್ಲೂ ಇದೇ ಮಾದರಿಯ ಬ್ಯಾಟರಿ ಇರಿಸಲಾಗಿರುತ್ತದೆ. ಈ ಬಗೆಯ ಸಾಧನಗಳಿಗೆ ಎರಡು ಬಗೆಯ ಮಿತಿಗಳಿರುತ್ತವೆ. ಬ್ಯಾಟರಿ ಗರಿಷ್ಠ ಏಳು ವರ್ಷಗಳ ಕಾಲ ಬಾಳಿಕೆ ಬರಬಹುದು. ಬಳಿಕ ಆ ಬ್ಯಾಟರಿಯನ್ನು ಬದಲಿಸಬೇಕು. ಅಥವಾ ಆ ಬಗೆಯ ವೈದ್ಯಕೀಯ ಸಾಧನಗಳನ್ನೇ ಹೊಸತಾಗಿ ಅಳವಡಿಸಬೇಕು. ಇದರ ಪ್ರಮುಖ ಅನನುಕೂಲವೆಂದರೆ ಪುನಃ ಪುನಃಶಸ್ತ್ರಚಿಕಿತ್ಸೆಗೆ ಒಳಗಾಗಬೇಕು. ಈಗ ವೈದ್ಯಕೀಯ ವಿಧಾನಗಳು ಸುಧಾರಿಸಿದ್ದು, ಬಹು ಬೇಗನೇ ಶಸ್ತ್ರಚಿಕಿತ್ಸೆ ಮುಗಿಯುವ, ಗುಣವಾಗುವ ಅನುಕೂಲವಿದೆಯಾದರೂ, ಆಸ್ಪತ್ರೆಗೆ ದಾಖಲಾಗುವುದು ಹಾಗೂ ಅದಕ್ಕೆ ತಗುಲುವ ವೆಚ್ಚವನ್ನಂತೂ ತಪ್ಪಿಸಲಾಗದು.

ಈ ಸಮಸ್ಯೆಗೆ ಈಗ ಅನ್ವೇಷಣೆಗೊಂಡಿರುವ ಹೊಸ ತಂತ್ರಜ್ಞಾನ ಪೂರ್ಣ ವಿರಾಮ ಹಾಕಲಿದೆ. ಒಮ್ಮೆ ಈ ಸಾಧನಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ದೇಹಕ್ಕೆ ಅಳವಡಿಸಿಕೊಂಡರೆ ಪೂರ್ಣ ಜೀವಿತಾಧಿಯವರೆಗೂ ಅದರೊಳಗಿನ ವಿದ್ಯುತ್ ಮುಗಿಯುವುದೇ ಇಲ್ಲ. ವಾಸ್ತವದಲ್ಲಿ ಈ ಹೊಸ ತಂತ್ರಜ್ಞಾನದಲ್ಲಿ ಈ ಸಾಧನಗಳ ಒಳಗೆ ಬ್ಯಾಟರಿಯನ್ನೇ ಇರಿಸುವುದಿಲ್ಲ!

ಹೌದು, ಈ ಹೊಸ ತಂತ್ರಜ್ಞಾನದಲ್ಲಿ ಬ್ಯಾಟರಿಯ ಅಗತ್ಯವೇ ಬರುವುದಿಲ್ಲ. ಸ್ವಿಟ್ಸರ್‌ಲ್ಯಾಂಡಿನ ಜ್ಯೂರಿಚ್‌ನ ಬೇಸಲ್ ನಗರದಲ್ಲಿರುವ 'ಸ್ವಿಸ್ ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' (ಇಟಿಎಚ್) ಸಂಸ್ಥೆಯ ಜೀವವ್ಯವಸ್ಥೆ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದ ಮಾರ್ಟಿನ್ ಫಸನೆಗರ್ ಅವರ ತಂಡವು ಈ ಸಂಶೋಧನೆಯನ್ನು ನಡೆಸಿದೆ. ಈ ತಂತ್ರಜ್ಞಾನ ತೀರಾ ಸಂಕೀರ್ಣವೂ ಆಗಿಲ್ಲ. ಹೊಸತಾಗಿ ಸಂಶೋಧನೆಯೊಂದನ್ನು ಮಾಡದೇ ಹಾಲಿ ಇರುವ ವೈಜ್ಞಾನಿಕ ತತ್ವಗಳು ಹಾಗೂ ಸಿದ್ಧಾಂತಗಳನ್ನು ಬಳಸಿಕೊಂಡು ಈ ಆವಿಷ್ಕಾರವನ್ನು ಮಾಡಿದ್ದಾರೆ.

ಮಾನವದೇಹವು ಕಾರ್ಯನಿರ್ವಹಿಸುವ ವಿಧಾನವನ್ನು ಈ ವಿಜ್ಞಾನಿಗಳು ಅನುಸರಿಸಿದ್ದಾರೆ. ದೇಹವು ಆಮ್ಲಜನಕವನ್ನು ಬಳಸಿಕೊಂಡು ಪ್ರತಿ ಜೀವಕೋಶಗಳಿಗೂ ಶಕ್ತಿ ಒದಗಿಸುತ್ತದೆ. ಅಂತೆಯೇ ನಾವು ಸೇವಿಸುವ ಆಹಾರದಲ್ಲಿನ ಕಾರ್ಬೋಹೈಡ್ರೇಟ್ ಅನ್ನು ಗ್ಲೂಕೋಸ್ ಆಗಿ ಪರಿವರ್ತಿಸಿ ಶಕ್ತಿ ಉತ್ಪಾದಿಸುತ್ತದೆ. ಈ ಗ್ಲೂಕೋಸ್ ರಕ್ತದಲ್ಲಿ ಸಂಚರಿಸುತ್ತಿರುತ್ತದೆ. ಅಂದರೆ ಕಾರ್ಬೋಹೈಡ್ರೇಟ್ ನಮ್ಮ ಆಹಾರದಲ್ಲಿನ ಶಕ್ತಿಯ ಮೂಲ. ಇದೇ ಸರಳ ತತ್ವವನ್ನು ಬಳಸಿಕೊಂಡು ಕೃತಕವಾಗಿ ನ್ಯಾನೋ ಶಕ್ತಿಕೇಂದ್ರವೊಂದನ್ನು ವಿಜ್ಞಾನಿಗಳು ತಯಾರಿಸಿದ್ದಾರೆ.

ಈ ಶಕ್ತಿಕೇಂದ್ರವನ್ನು ಪೇಸ್ ಮೇಕರ್ ಅಥವಾ ಇನ್ಸುಲಿನ್ ಪಂಪ್ ಒಳಗೆ ಇರಿಸುತ್ತಾರೆ. ಈ ಸಾಧನವು ದೇಹದಲ್ಲಿನ ರಕ್ತದಲ್ಲಿನ ಹೆಚ್ಚುವರಿ ಗ್ಲೂಕೋಸ್ ಅನ್ನು ಮೊದಲು ಗುರುತಿಸುತ್ತದೆ. ಬಳಿಕ, ಅದನ್ನು ತನ್ನೊಳಗೆ ಆಪೋಷಿಸಿಕೊಂಡು ವಿದ್ಯುತ್ ಜನರೇಟರ್‌ನಂತೆ ವಿದ್ಯುತ್ ಉತ್ಪಾದಿಸುತ್ತದೆ. ಆ ವಿದ್ಯುತ್ ಅನ್ನು ಪೇಸ್ ಮೇಕರ್ ಕಾರ್ಯಾಚರಣೆಗೆ ಅಥವಾ ಇನ್ಸುಲಿನ್ ಉತ್ಪಾದನೆಗೆ ಬಳಸಿಕೊಳ್ಳುತ್ತದೆ. ಈ ಎಲ್ಲ ಪ್ರಕ್ರಿಯೆಗೆ ಬೇಕಾಗುವ ವಿದ್ಯುತ್ ಅತ್ಯಲ್ಪ. ಜೊತೆಗೆ, ಇಲ್ಲಿ ವಿದ್ಯುತ್ ಉತ್ಪಾದನೆ ನಿರಂತರ. ಹಾಗಾಗಿ, ಈ ಸಾಧನಗಳ ಒಳಗೆ ಬ್ಯಾಟರಿಯನ್ನು ಅಳವಡಿಸುವ ಅಗತ್ಯವೇ ಬರುವುದಿಲ್ಲ.

❖



ಅನುಕೂಲಗಳೇನು?

ಬ್ಯಾಟರಿಯನ್ನು ಇರಿಸದೇ ಇರುವ ಕಾರಣ, ಸಾಧನದ ಗಾತ್ರ ಕಡಿಮೆಯಾಗುತ್ತದೆ. ಜೊತೆಗೆ ತೂಕವೂ ಕಡಿಮೆಯಾಗುತ್ತದೆ. ಇದರಿಂದ ಶಸ್ತ್ರಚಿಕಿತ್ಸೆಯ ಸಂಕೀರ್ಣತೆ ಕಡಿಮೆಯಾಗುತ್ತದೆ ಎಂದು ಮಾರ್ಟಿನ್ ಫಸನೆಗರ್ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ, ಇಂದಿನ ದಿನಗಳಲ್ಲಿ ಬ್ಯಾಟರಿ ಹೆಚ್ಚೆಚ್ಚು ಸಂಕೀರ್ಣಗೊಳುತ್ತಿದ್ದು, ಅದರ ವೆಚ್ಚವೂ ಹೆಚ್ಚಿದೆ. ಮಾರ್ಟಿನ್ ಮತ್ತು ಅವರ ತಂಡವು ನಿರ್ಮಿಸಿರುವ ಈ ಸಾಧನಗಳಲ್ಲಿ ಬ್ಯಾಟರಿಯೇ ಇಲ್ಲದ ಕಾರಣ, ಉತ್ಪಾದನಾ ವೆಚ್ಚ ಬಹುತೇಕ ಅರ್ಧಕ್ಕಿಂತಲೂ ಕಡಿಮೆಯಾಗುತ್ತದೆ.

ಇದೆಲ್ಲದಕ್ಕೂ ಮುಖ್ಯವಾಗಿ ಒಮ್ಮೆ ಈ ಬಗೆಯ ಸಾಧನವನ್ನು ದೇಹದಲ್ಲಿ ಅಳವಡಿಸಿದರೆ ಮತ್ತೊಮ್ಮೆ ಬದಲಿಸುವ ಅಗತ್ಯ ಇರದಿರುವ ಕಾರಣ ಪುನಃ ಪುನಃ ಶಸ್ತ್ರಚಿಕಿತ್ಸೆಗೆ ಒಳಗಾಗುವುದು ತಪ್ಪುತ್ತದೆ; ಅದಕ್ಕೆ ತಗುಲುವ ವೆಚ್ಚವೂ ಕಡಿಮೆಯಾಗುತ್ತದೆ. ಅಲ್ಲದೇ, ಇವುಗಳ ವೈದ್ಯಕೀಯ ಕಾರ್ಯಕ್ಷಮತೆಯೂ ಹೆಚ್ಚು ಎಂದು ಮಾರ್ಟಿನ್ ಹೇಳುತ್ತಾರೆ. ಹೃದಯದ ಪೇಸ್ ಮೇಕರ್ ಕಾರ್ಯಾಚರಣೆಯ ಗತಿ ಏಕರೂಪವಾಗಿರುತ್ತದೆ. ಇನ್ನು ಇನ್ಸುಲಿನ್ ಪಂಪ್‌ಗಳ ಗತಿಯೂ ಇದೇ ಮಾದರಿಯಲ್ಲಿದ್ದು, ದೇಹದ ಆರೋಗ್ಯವು ಹೆಚ್ಚು ಸ್ಥಿರವಾಗಿರುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

21) Aqueous solution of a salt (A) forms a dense white precipitate with $BaCl_2$ solution. The precipitate dissolves in dilute HCl to produce a gas (B) which decolourises acidified $KMnO_4$ solution. A and B respectively are:

a) $BaSO_3$, H_2S b) $BaSO_4$, SO_2
c) $BaSO_3$, SO_2 d) $BaSO_4$, H_2S

Ans: (c)

Expln:- The corresponding reactions are

$$BaCl_2 + Na_2SO_3 \rightarrow BaSO_3 + 2NaCl$$
$$BaSO_3 + 2HCl \rightarrow BaCl_2 + SO_2 + H_2O$$

Salt A is Na_2SO_3 and the dense white precipitate is $BaSO_3$ (Barium sulfite).

Gas B is SO_2. It decolourises acidified $KMnO_4$ solution because of its reducing nature.

The corresponding reaction is:

$$2KMnO_4 + 5SO_2 + 2H_2O \rightarrow K_2SO_4 + 2MnSO_4 + 2H_2SO_4$$

22) : The orbital nearest to the nucleus is

a) 4f b) 5d
c) 4s d) 7p

Ans: (c) **(KCET=2018)**

Expln:- Penetration power of the electron describes how much it is closer to the nucleus. Penetration power of an electron follows:

1S > 2S > 2P > 3S > 3P > 4S > 3d > 4P > 5S > 4d > 5P > 6S

Sub shell penetration power follows:

S > P > D > F

So, 4S orbital is closer to the nucleus among the other 4f, 5d, 7p orbital.

23) Schottky defect is observed in crystals when ……………..

a) some cations move from their lattice site to interstitial sites.
b) equal number of cations and anions are missing from the lattice.
c) some lattice sites are occupied by electrons.
d) some impurity is present in the lattice.

Ans:-b

24) Which of the following is true about the charge acquired by *p*-type semiconductors?

a) positive b) neutral
c) negative
d) depends on concentration of *p* impurity

Ans:- C

25) The aqueous solution of the following salt will have the lowest pH:

a) $NaClO$ b) $NaClO_4$
c) $NaClO_3$ d) $NaClO_2$

Ans: **(B)** $NaClO_4$

Expln;- $NaClO_4 \rightarrow Na^+ + ClO_4^-$
$ClO_4^- + H^+ \rightarrow HClO_4$

Perchloric acid is the strongest acid, hence has lowest pH.

26) The total number of tetrahedral voids in the face centred unit cell is ……………..

a) 6 b) 8
c) 10 d) 12

Ans:-b

27) Which of the following point defects are shown by AgBr(s) crystals?

i) Schottky defect ii) Frenkel defect
iii) Metal excess defect
iv) Metal deficiency defect

a) (i) and (ii) b) (iii) and (iv)
c) (i) and (iii) d) (ii) and (iv)

Ans:-a

28) In which pair most efficient packing is present?

a) *hcp* and *bcc* b) *hcp* and *ccp*
c) *bcc* and *ccp*
d) *bcc* and simple cubic cell

Ans:-b

29) H_2O_2 is………..

a). An oxidizing agent b). A reducing agent
c). Both oxidizing and reducing agent
d) Neither oxidizing nor reducing agent

Answer: (c) **(KCET=2018)**

Expln:- H_2O_2 acts as both oxidizing and reducing agent oxygen of H_2O_2 (-1 oxidation state) is reduced to H_2O (–2 oxidation state) acts as an oxidizing agent. When the oxygen of H_2O_2 (-1 oxidation state) is oxidized to (0) oxidation state acts as a reducing agent.

30) The percentage of empty space in a body centered cubic arrangement is ……………

a) 74 b) 68
c) 32 d) 26

Ans:-C

31) Which of the following statement is *not* true about the hexagonal close packing?

a) The coordination number is 12.
b) It has 74% packing efficiency.
c) Tetrahedral voids of the second layer are covered by the spheres of the third layer.
d) In this arrangement spheres of the fourth layer are exactly aligned with those of the first layer.

Ans:-d

32) In which of the following structures coordination number for cations and anions in the packed structure will be same?

a) Cl^- ion form *fcc* lattice and Na^+ ions occupy all octahedral voids of the unit cell.
b) Ca^{2+} ions form *fcc* lattice and F^- ions occupy all the eight tetrahedral voids of the unit cell.
c) O^{2-} ions form *fcc* lattice and Na^+ ions occupy all the eight tetrahedral voids of the unit cell.
d) S^{2-} ions form *fcc* lattice and Zn^{2+} ions go into alternate tetrahedral voids of the unit cell.

Ans:-a

PHYSICS

15) A point charge +q, is placed at a distance d from an isolated conducting plane. The field at a point p on the other side of the plane is

a) Directed perpendicular to the plane and away from the plane.
b) Directed perpendicular to the plane but towards the plane.
c) Directed radially away from the point charge.
d) Directed radially towards the point charge.

Ans:- (a)

16) A particle shows the distance-time curve as shown in the figure. The maximum instantaneous velocity of the particle is around the point.



a) P b) S
c) R d) Q

Ans: (c)

Expln:- $V_max = dx/dt$ = maximum slope

From the figure, at point R the slope is maximum, hence at this point velocity is maximum.

∴ The maximum instantaneous velocity of the particle is around the point 'R'.

17) A solenoid length 0.4 cm, radius 1 cm and 400 turns of wire. If a current of 5 A is passed through this solenoid, what is the magnetic field inside the solenoid?

(a) 6.28×10^{-7} T (b) 6028×10^{-4} T
(c) 6.28×10^{-1} T (d) 6.28×10^{-3} T

Soln: (C): Here

Length, $l = 0.4$ cm $= 0.4 \times 10^{-2}$ m
Radius, $r = 1$ cm $= 10^{-2}$ m
Number of turns per unit length is

$$n = \frac{N}{1} = \frac{400}{0.4 \times 10^{-2}} = 10^5 \text{ turns/m}$$

Magnetic field inside the solenoid is

$$B = \mu_0 nI = 4\pi \times 10^{-7} \times 10^5 \times 5$$
$$= 62.8 \times 10^{-2} \text{ T} = 6.28 \times 10^{-1} \text{ T}$$

18) The fig given shows electric field lines in which an electric dipole p is placed. Which of the following statements is correct?

a) The dipole will not experience force.
b) The dipole will experience a force towards right.
c) The dipole will experience a force towards left.
d) The dipole will experience a force upwards.



Ans:- c

19) A gyromagnetic ratio of the electron revolving in a circular orbit of hydrogen atom is $8.8 \times 10^{10} Ckg^{-1}$. What is the mass of the electron? Given charge of the electron=1.6×10^{-19} C.

(a) 1.1×10^{-29} kg (b) 1×10^{-29} kg
(c) $\frac{1}{11} \times 10^{-29}$ kg (d) 0.1×10^{-29} kg

Soln: (c) Gyromagnetic ratio of an electron

20) What is the value of shunt resistance required to convert a galvanometer of resistance 100 Ω into an ammeter of range 1 A?

Given : Full scale deflection of the galvanometer is 5 m A.

a) 0.5 Ω (b) $\frac{5}{9.95}$ Ω
c) 0.05Ω (d) $\frac{9.95}{5}$ Ω

Soln: (b): Here,

Resistence of galvanometer, $G = 100\Omega$

Full scale deflection current, $I_8 = 5$ mA
$= 5 \times 10^{-3}$ A



To convert the galvanometer into an ammeter of range 1 A, a shunt resistance of value S is connected in parallel with it such that, $(I - I_8)S = I_8G$

$$S = \frac{I_gG}{I - I_g} = \frac{5 \times 10^{-3} \times 100}{1 - 5 \times 10^{-3}} = \frac{5 \times 10^{-1}}{1 - 0.005}$$
$$= \frac{0.5}{0.995} = \frac{5}{9.95}\Omega$$

21) Electric field intensity due to an infinitely long straight uniformly charged wire at a distance *r* from the wire varies as

a) r . b) r^{-1}
c) r^2 d) r^{-2}

Ans:-b

ಹಕ್ಕಿಯಲ್ಲ ನಾಯಿ!

ಟ್ವಿಟರ್ ತನ್ನ ಲಾಂಛನವನ್ನು ಬದಲಿಸಿಕೊಂಡಿದೆ. ಮಂಗಳವಾರ ಟ್ವಿಟರ್ ಖಾತೆ ತೆರೆದಾಗ ಬಳಕೆದಾರರು ನೀಲಿಹಕ್ಕಿಯ ಲಾಂಛನದ ಜಾಗದಲ್ಲಿ ನಾಯಿಯ ಮುಖ ಇರುವುದನ್ನು ನೋಡಿ ಗೊಂದಲದಲ್ಲಿ ಸಿಲುಕಿದ್ದರು. ಹಲವು ವರ್ಷಗಳಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಮೀಮ್ಸ್ ಮೂಲಕ ಹರಿದಾಡುತ್ತಿದ್ದ 'ಶಿಬಾ ಇನು' ಎಂಬ ನಾಯಿಯ ಮುಖವೇ ಈಗ ಟ್ವಿಟರ್ ಲೋಗೊ ಆಗಿಬಿಟ್ಟಿದೆ.

ಟ್ವಿಟರ್ ತಾಣವನ್ನು ಇತ್ತೀಚೆಗೆ ಖರೀದಿಸಿದ್ದ ಎಲಾನ್ ಮಸ್ಕ್ ಅವರು ತಮ್ಮದೇ ಆದ ಶೈಲಿಯಲ್ಲಿ ಈ ಬದಲಾವಣೆಯನ್ನು ತಮ್ಮ ಟ್ವಿಟರ್ ಖಾತೆಯ ಮೂಲಕ ಹಂಚಿಕೊಂಡಿದ್ದಾರೆ. ಈ ಲಾಂಛನವು ಜನಪ್ರಿಯ ಕ್ರಿಪ್ಟೋಕರೆನ್ಸಿ ಡೋಜ್‌ಕಾಯಿನ್ (Dogecoin) ಎಂಬ ಡಿಜಿಟಲ್ ಕರೆನ್ಸಿಯದು. ಈ ಹಿಂದೆ ಡೋಜ್‌ಕಾಯಿನ್ ಬೆಂಬಲಿಸಲು ಪಿರಮಿಡ್ ಸ್ಕೀಮ್ ಒಂದನ್ನು ನಡೆಸುತ್ತಿದ್ದಾರೆ ಎಂಬ ಆರೋಪದಲ್ಲಿ ಮಸ್ಕ್ ವಿರುದ್ಧ ಅಮೆರಿಕದಲ್ಲಿ 258 ಶತಕೋಟಿ ಡಾಲರ್ ಮೊತ್ತದ ಮೊಕದ್ದಮೆ ದಾಖಲಾಗಿತ್ತು. ಅಮೆರಿಕದಲ್ಲಿ ಈಗ ಟ್ವಿಟರ್ ಲೋಗೊವನ್ನು ಡೋಜ್ (doge)ಗೆ ಬದಲಾಯಿಸಿದ ತಕ್ಷಣ ಎರಡು ದಿನಗಳಲ್ಲಿ ಡೋಜ್‌ಕಾಯಿನ್‌ನ ಮಾರುಕಟ್ಟೆ ಮೌಲ್ಯವು ದಿಢೀರ್ ಏರಿಕೆ ಕಂಡಿದ್ದು, ಶೇ 30ರಷ್ಟು ಹೆಚ್ಚಾಗಿದೆ.

ಸದ್ಯ ವೆಬ್ ಬ್ರೌಸರ್‌ನಲ್ಲಿ ಮಾತ್ರ ಟ್ವಿಟರ್ ಲೋಗೊ ಬದಲಾಗಿದ್ದು, ಆ್ಯಪ್‌ನಲ್ಲಿ ಹಿಂದಿನಂತೆಯೇ ನೀಲಿಹಕ್ಕಿಯ ಲಾಂಛನ ಇದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಎಲಾನ್ ಮಸ್ಕ್ ಅವರು ಟ್ವಿಟರ್ ಖರೀದಿಸಿದ ಬಳಿಕ ಸಾಕಷ್ಟು ಬದಲಾವಣೆಗಳಾಗಿವೆ. ನೀಲಿ ಟಿಕ್ ಮಾರ್ಕ್ ಇರುವ ದೃಢೀಕರಣಕ್ಕಾಗಿ ಬಳಕೆದಾರರು ಹಣ ಪಾವತಿಸಬೇಕಾಗುತ್ತಿದೆ.

ಮುಖ್ಯ ಕಾರ್ಯದರ್ಶಿ ಅಭಿಪ್ರಾಯ ಮೀರಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

ಕೆಎಎಸ್ ಹುದ್ದೆ ಸೃಜಿಸಿ ಮೈತ್ರಿ ನೇಮಕ!

• ರಾಜೇಶ್ ರೈ ಚಟ್ಲ

ಬೆಂಗಳೂರು: 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ ಪರಿಶಿಷ್ಟ ಪಂಗಡ (ಎಸ್‌ಟಿ) ಮಹಿಳಾ ಮೀಸಲಾತಿಯಡಿ ಗ್ರೂಪ್ 'ಎ' ವೃಂದದ ಕೆಎಎಸ್ (ಕಿರಿಯ ಶ್ರೇಣಿ) ಹುದ್ದೆ ನೀಡಬೇಕೆಂಬ ಡಾ.ಮೈತ್ರಿ ಎಚ್.ಪಿ.ಎಸ್. ಅವರ ಮನವಿಯನ್ನು ಪುರಸ್ಕರಿಸಿರುವ ರಾಜ್ಯ ಸರ್ಕಾರ, ಅವರಿಗಾಗಿ ಒಂದು ಸೂಪರ್ ನ್ಯೂಮರರಿ ಹುದ್ದೆ (ಸಂಖ್ಯಾತಿರಿಕ್ತ) ಸೃಜಿಸಿ ನೇಮಕಾತಿ ಮಾಡಲು ನಿರ್ಧರಿಸಿದೆ.

'ಮೈತ್ರಿ ಅವರ ಮನವಿ ಪರಿಗಣಿಸಲು ಸಾಧ್ಯವೇ ಇಲ್ಲ' ಎಂದು ಮುಖ್ಯ ಕಾರ್ಯದರ್ಶಿ (ಸಿಎಸ್) ಸ್ಪಷ್ಟ ಅಭಿಪ್ರಾಯ ನೀಡಿದ್ದರೂ, ಫೆ.9ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಮೈತ್ರಿ ಅವರಿಗಾಗಿ ಸೃಜಿಸುವ ಹುದ್ದೆಗೆ, ಮುಂದಿನ ನೇಮಕಾತಿಯಲ್ಲಿ ಕೆಎಎಸ್ (ಕಿರಿಯ ಶ್ರೇಣಿ) ವೃಂದದಲ್ಲಿ ಒಂದು ಎಸ್‌ಟಿ ಮಹಿಳಾ ಮೀಸಲಾತಿ ಹುದ್ದೆ ಕಡಿತಗೊಳಿಸಲೂ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಕೆಪಿಎಸ್‌ಸಿ ನಡೆಸಿದ್ದ ನೇಮಕಾತಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ (ಆರ್‌ಡಿಪಿಆರ್) ಕಾರ್ಯನಿರ್ವಾಹಕ ಅಧಿಕಾರಿ (ಗ್ರೂಪ್ 'ಎ') ಹುದ್ದೆಗೆ ಆಯ್ಕೆಯಾಗಿದ್ದ ಮೈತ್ರಿ ಅವರಿಗೆ 2022 ಏ. 8ರಂದು ನೇಮಕಾತಿ ಆದೇಶ ನೀಡಲಾಗಿತ್ತು. ಏ.25ರಿಂದ ಅವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಸಾಲಿನ ಆಯ್ಕೆ ಪಟ್ಟಿಯಲ್ಲಿ ಎಸ್‌ಟಿ- ಮಹಿಳೆ ಮೀಸಲಾತಿಯಲ್ಲಿ ಕೆಎಎಸ್ (ಕಿರಿಯ ಶ್ರೇಣಿ) ಹುದ್ದೆಗೆ ಸುಪ್ರಿಯಾ ಬನಗರ್ ಆಯ್ಕೆಯಾಗಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಾರೆ.

'ಈ ಸಾಲಿನ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ' ಎಂದು ಆರೋಪಿಸಿದ್ದ ಮೈತ್ರಿ, ಇಡೀ ಪ್ರಕರಣ ಹೈಕೋರ್ಟ್, ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಕಾರಣರಾಗಿದ್ದರು. ಕೋರ್ಟ್‌ಗಳು ಇಡೀ ಪಟ್ಟಿ ರದ್ದುಪಡಿಸಿ ತೀರ್ಪು ನೀಡಿದ್ದರೂ, ಅದನ್ನು ಬದಿಗಿಟ್ಟು ಆಯ್ಕೆ ಆದವರಿಗೆ 'ಕರ್ನಾಟಕ ಸಿವಿಲ್ ಸೇವಾ (2011ನೇ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಹಾಗೂ ನೇಮಕಾತಿಯ ಸಿಂಧುಗೊಳಿಸುವಿಕೆ) ಕಾಯ್ದೆ-2022' ರೂಪಿಸಿ ಏಪ್ರಿಲ್‌ನಲ್ಲಿ ನೇಮಕಾತಿ ಆದೇಶ ನೀಡಿತ್ತು.

ಕಳೆದ ಜೂನ್ 29ರಂದು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದ ಮೈತ್ರಿ, 'ಮುಖ್ಯ ಪರೀಕ್ಷೆಯಲ್ಲಿ 1,009 ಅಂಕ ಗಳಿಸಿದ್ದರೂ ಕೆಪಿಎಸ್‌ಸಿ ಸದಸ್ಯರು ದುರುದ್ದೇಶದಿಂದ ಮೌಖಿಕ ಸಂದರ್ಶನದಲ್ಲಿ 75 ಅಂಕ ನೀಡಿದ್ದರು. ನನ್ನದೇ ವರ್ಗದ (ಎಸ್‌ಟಿ) ಮತ್ತೊಬ್ಬ ಮಹಿಳಾ ಅಭ್ಯರ್ಥಿ ಮುಖ್ಯ ಪರೀಕ್ಷೆಯಲ್ಲಿ 937.5 ಅಂಕ ಗಳಿಸಿದ್ದು, ಅವರಿಗೆ ಮೌಖಿಕ ಸಂದರ್ಶನದಲ್ಲಿ 150 ಅಂಕ ನೀಡಲಾಗಿದೆ. ಇದರಿಂದಾಗಿ ನಾನು ಕೆಎಎಸ್ ಹುದ್ದೆ ವಂಚಿತಳಾಗಿದ್ದೇನೆ. ಮುಖ್ಯ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದಿರುವುದರಿಂದ ನನಗೆ ಹುದ್ದೆ ನೀಡಬೇಕು' ಎಂದು ಕೋರಿದ್ದರು. ಈ ಮನವಿಯನ್ನು ಪರಿಗಣಿಸಿ ಕ್ರಮ ವಹಿಸುವಂತೆ ಎಂದು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚಿಸಿದ್ದರು.

ಈ ಬಗ್ಗೆ ಅಭಿಪ್ರಾಯ ನೀಡಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಕಾರ್ಯದರ್ಶಿ ಪಿ. ಹೇಮಲತಾ, 'ಕೆಪಿಎಸ್‌ಸಿ ಸಾಂವಿಧಾನಿಕ ಸಂಸ್ಥೆ. ಅಂಥ ಸಂಸ್ಥೆ ಪ್ರಕಟಿಸಿದ ಆಯ್ಕೆ ಪಟ್ಟಿಯನ್ನು ಕೋರ್ಟ್ ಆದೇಶದ ಹೊರತಾಗಿ ಬದಲಿಸಲಾಗದು. ಬದಲಿಸಿದರೆ ಕಾನೂನುಬಾಹಿರವಾಗುತ್ತದೆ. ಈ ಸಾಲಿನ ನೇಮಕಾತಿಗೆ ರೂಪಿಸಿದ ವಿಶೇಷ ಕಾಯ್ದೆಯಲ್ಲೂ ಅದಕ್ಕೆ ಅವಕಾಶ ಇಲ್ಲ. ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ನಿಯಮಗಳಲ್ಲೂ ಆಸ್ಪದವಿಲ್ಲ. ಅರ್ಜಿದಾರಳನ್ನು (ಮೈತ್ರಿ) ಸಹಾಯಕ ಆಯುಕ್ತ (ಎ.ಸಿ) ಹುದ್ದೆಗೆ ಪರಿಗಣಿಸಲು ಕಾನೂನು ಅವಕಾಶಗಳು ಇಲ್ಲದಿರುವುದರಿಂದ ಮತ್ತು ಒಂದೊಮ್ಮೆ ಹುದ್ದೆ ನೀಡಿದರೆ ಆಯ್ಕೆ ಪಟ್ಟಿಯಲ್ಲಿ ಆಕೆಗಿಂತ ಮೇಲಿರುವ ಅಭ್ಯರ್ಥಿಗಳು ಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ' ಎಂದು ಉಲ್ಲೇಖಿಸಿದ್ದರು.

ಮುಖ್ಯಮಂತ್ರಿಗೆ ಕಡತ ಮಂಡಿಸಿದ್ದ ಮುಖ್ಯ ಕಾರ್ಯದರ್ಶಿ, 'ಈ ಸಾಲಿನ ಆಯ್ಕೆ ಪಟ್ಟಿಯಲ್ಲಿ ಮೈತ್ರಿ ಅವರಿಗಿಂತ 161 ಅಭ್ಯರ್ಥಿಗಳು ಮೇಲಿನ ಸ್ಥಾನಗಳಲ್ಲಿ ಇದ್ದಾರೆ. ಅವರೆಲ್ಲರಿಗೂ ಕೆಎಎಸ್ ಅಲ್ಲದೆ, ಬೇರೆ ಬೇರೆ ಹುದ್ದೆಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. ಆಯ್ಕೆ ಪಟ್ಟಿಯಲ್ಲಿ ತುಂಬಾ ಕೆಳಗಿರುವ ಅಭ್ಯರ್ಥಿಯೊಬ್ಬರಿಗೆ (ಮೈತ್ರಿ) ಮನಬಂದಂತೆ ಕೆಎಎಸ್ ಹುದ್ದೆ ಹಂಚಿಕೆಗೆ ಅವಕಾಶವಿಲ್ಲ' ಎಂದು ಅಭಿಪ್ರಾಯ ನೀಡಿದ್ದರು.

ಆದರೆ, ಮೈತ್ರಿ ಅವರ ಮನವಿಯನ್ನು ತಿರಸ್ಕರಿಸಬೇಕು ಎಂದು ಡಿಪಿಎಆರ್ ಪ್ರಸ್ತಾವವನ್ನು ಒಪ್ಪದ ಸಚಿವ ಸಂಪುಟ ಸಭೆ, ಮೈತ್ರಿಗಾಗಿಯೇ ಒಂದು ಹುದ್ದೆ ಸೃಜಿಸಿ ನೇಮಕಾತಿ ಮಾಡಲು ತೀರ್ಮಾನಿಸಿದೆ!

ಮುಖ್ಯಾಂಶಗಳು

- 2011ನೇ ಸಾಲಿನ 362 ಹುದ್ದೆಗಳ ನೇಮಕಾತಿ ಪ್ರಕರಣ
- ಅಕ್ರಮ ನಡೆದಿದೆ ಎಂದು ಕೋರ್ಟ್ ಮೆಟ್ಟಿಲೇರಿದ್ದ ಮೈತ್ರಿ
- ಡಿಪಿಎಆರ್ ಪ್ರಸ್ತಾವವನ್ನೇ ತಿರಸ್ಕರಿಸಿ ತೀರ್ಮಾನ

ಪ್ರಜಾವಾಣಿ ವಿಶೇಷ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಪಶ್ಚಿಮ ಬಂಗಾಳದಲ್ಲಿ ರಾಮನವಮಿ ಮೆರವಣಿಗೆ ವೇಳೆ ನಡೆದ ಹಿಂಸಾಚಾರ ರಾಜಕೀಯ ವೈರತ್ವದ ಪ್ರತೀಕವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಪರೀಕ್ಷಾ ಕೇಂದ್ರದ ಶಿಕ್ಷಕರಿಗೆ ನೋಟಿಸ್

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ತಾವರಗೇರಾದಲ್ಲಿ ಸೋಮವಾರ ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಪರೀಕ್ಷೆ ವೇಳೆ ಸಾಮೂಹಿಕ ನಕಲು ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಅಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ ಶಿಕ್ಷಕರಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನೋಟಿಸ್ ಜಾರಿ ಮಾಡಿದೆ. ಕೆಲವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದೆ.

'ಸಾಮೂಹಿಕ ನಕಲಿಗೆ ಶಿಕ್ಷಕರೇ ಸಹಕರಿಸಿರುವ ವರದಿಗಳಿಗೆ ಸಂಬಂಧಿಸಿದಂತೆ ಆ ಕೇಂದ್ರದಲ್ಲಿದ್ದ ಶಿಕ್ಷಕರಿಗೆ ನೋಟಿಸ್ ನೀಡಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆಯ ಜೊತೆ ಪೊಲೀಸ್ ಬಂದೋಬಸ್ತ್‌ಗೆ ಪೊಲೀಸ್ ಇಲಾಖೆಗೆ ಪತ್ರ ಬರೆಯಲಾಗಿದೆ. ಆಯಾ ವಿಷಯದ ಪರೀಕ್ಷೆ ದಿನ ಸಂಬಂಧಪಟ್ಟ ವಿಷಯದ ಶಿಕ್ಷಕರು ಕೇಂದ್ರದಲ್ಲಿ ಕರ್ತವ್ಯಕ್ಕೆ ನಿಯೋಜಿಸದಿರಲು ತೀರ್ಮಾನಿಸಲಾಗಿದೆ' ಎಂದು ಬಿಇಒ ಸುರೇಂದ್ರ ಕಾಂಬಳೆ 'ಪ್ರಜಾವಾಣಿ'ಗೆ ತಿಳಿಸಿದರು.

'ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯಲೋಪ ಆಗಬಾರದು' ಎಂದು ಡಿಡಿಪಿಐ ಎಂ.ಎ.ರೆಡ್ಡೇರ್ ತಾಕೀತು ಮಾಡಿದರು.

ಒಳ ಮೀಸಲಾತಿ: ಮಾ ಜನ್ ಜಾಗೃತ್ ಸಮಿತಿ ರಾಜ್ಯ ಘಟಕ ಆಗ್ರಹ

'ಜಾತಿಗಳ ಗೊಂದಲ ನಿವಾರಿಸಿ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಒಳ ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಜಾತಿಗಳ ಗೊಂದಲ ನಿವಾರಿಸಬೇಕು ಎಂದು ಮಾ ಜನ್ ಜಾಗೃತ್ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಕೆ. ಶಿವಕುಮಾರ್ ಆಗ್ರಹಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರ ಒಳಮೀಸಲಾತಿ ವರ್ಗೀಕರಣದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡುತ್ತಿರುವುದು ಸ್ವಾಗತಾರ್ಹ. ಆದರೆ, ಜಾರಿಯ ಕ್ರಮದಲ್ಲಿ ಒಂದಷ್ಟು ಗೊಂದಲ, ನ್ಯೂನತೆಗಳಿವೆ' ಎಂದರು.

'ಒಳಮೀಸಲಾತಿ ವರ್ಗೀಕರಣದ ಪ್ರಕಾರ ಮಾದಿಗ (ಎಡಗೈ) ಜನಾಂಗವು ಆದಿಕರ್ನಾಟಕ ಅಥವಾ ಆದಿದ್ರಾವಿಡ ವರ್ಗಗಳಲ್ಲಿ ಯಾವ ವರ್ಗದಲ್ಲಿದೆ ಎಂಬ ಗೊಂದಲವಿದೆ. ಅದನ್ನು ನಿವಾರಿಸಬೇಕು. ಮಾದಿಗರು ಆದಿಕರ್ನಾಟಕ ವರ್ಗದಲ್ಲಿಯೇ ಗುರುತಿಸಿಕೊಳ್ಳಬೇಕಾಗಿದೆ. ಆದಿ ದ್ರಾವಿಡ ವರ್ಗವು ಮೈಸೂರು ಭಾಗದಲ್ಲಿ ಮಾತ್ರ ಇದೆ. ಹಾಗಾಗಿ, ಅನೇಕ ಕಡೆ ಗೊಂದಲ ಉಂಟಾಗಿದೆ. ಎಡಗೈ ಜನಾಂಗವನ್ನು ಆದಿಕರ್ನಾಟಕ ಎಂದೇ ಗುರುತಿಸಿ ಮೀಸಲಾತಿ ನೀಡಬೇಕು ಎಂಬುದು ನಮ್ಮ ಬೇಡಿಕೆ' ಎಂದರು.

'ಒಳಮೀಸಲಾತಿ ವರ್ಗೀಕರಣ ಸಮಿತಿಯು ಪರಿಶಿಷ್ಟ ಸಮುದಾಯದ 101 ಜಾತಿಗಳನ್ನು ನಾಲ್ಕು ವರ್ಗಗಳನ್ನಾಗಿ ವಿಭಾಗಿಸಿದೆ. ಗ್ರೂಪ್- 1ರಲ್ಲಿ ಆದಿ ದ್ರಾವಿಡದ ಸಮಗಾರ, ಮೋಚಿ, ಬಾಂಚಿ, ಹರಳಯ್ಯ, ಚಮ್ಮಾರ ಜಾತಿಗಳು ಇದ್ದರೆ, ಗ್ರೂಪ್- 3ರಲ್ಲಿ ಮಾದಿಗ ಎಂದು, 4ರಲ್ಲಿ ಸಮಗಾರ ಎಂದು ನಮೂದಿಸಲಾಗಿದೆ. ಈ ಗುಂಪಿಗೆ ಶೇ 6ರಷ್ಟು ಮೀಸಲಾತಿ ಇದೆ. ಆದರೆ, ಗ್ರೂಪ್-2ರಲ್ಲಿ ಆದಿಕರ್ನಾಟಕ ಎಂದಿದ್ದು, ಅದರಲ್ಲಿ ಚಲವಾದಿ, ಚೆಲುವಾದಿ, ಚೆನ್ನಯ್ಯ, ದಾಸನ್ ಮುಂತಾದ ಹೆಸರುಗಳನ್ನು ನಮೂದಿಸಲಾಗಿದೆ. ಈ ವರ್ಗಗಳಿಗೆ ಶೇ 5.5 ಮೀಸಲಾತಿ ಇದೆ. ಈ ಎಲ್ಲ ಜಾತಿಗಳೂ ಅಸ್ಪೃಶ್ಯ ವರ್ಗಕ್ಕೆ ಸೇರಿದ್ದು, ವಿವಿಧ ಜಿಲ್ಲೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡಿವೆ' ಎಂದರು. ಸಮಿತಿಯ ಸಂಸ್ಥಾಪಕ ಎಚ್.ಎನ್. ಚಂದ್ರಪ್ಪ, ಗೌರವ ಅಧ್ಯಕ್ಷ ಮನೋಹರ, ಎನ್. ಮಂಜುನಾಥ್, ಸುರೇಶ್ ಇದ್ದರು.

'ಒಕ್ಕಲಿಗರು ಬೇರೆಯವರ ಅನ್ನ ಕಿತ್ತವರಲ್ಲ'

ಶಿರಾ (ತುಮಕೂರು ಜಿಲ್ಲೆ): 'ಬೇರೆಯವರ ಮೀಸಲಾತಿ ಕಿತ್ತುಕೊಂಡು ಒಕ್ಕಲಿಗರಿಗೆ ಹಂಚಿಕೆ ಮಾಡಿರುವ ರಾಜ್ಯ ಸರ್ಕಾರದ ನೀತಿ ಸಮಂಜಸವಲ್ಲ. ಒಕ್ಕಲಿಗರು ಬೇರೆಯವರ ಅನ್ನ ಕಿತ್ತು ತಿನ್ನುವವರಲ್ಲ. ನಾವು ಕಾಯಕ ಮೂಲದಿಂದ ಬಂದವರು. ಶ್ರಮದಿಂದ ಫಸಲು ಬೆಳೆದು ಜಗತ್ತಿಗೆ ನೀಡುವ ಅನ್ನದಾತರು. ಮೀಸಲಾತಿ ಭಿಕ್ಷೆಯಲ್ಲ; ನಮ್ಮ ಹಕ್ಕು ಕೇಳುತ್ತಿದ್ದೇವೆ' ಎಂದು ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಸಂಸ್ಥಾನ ಮಠದ ಅಧ್ಯಕ್ಷ ನಂಜಾವಧೂತ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹುಲಿಕುಂಟೆ ಹೋಬಳಿಯ ವೀರ ಬೊಮ್ಮನಹಳ್ಳಿಯಲ್ಲಿ ಸೋಮವಾರ ಸಂಜೆ ನಡೆದ ದಿಬ್ಬದ ವೀರ ಬೊಮ್ಮಣ್ಣ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡ ಬಳಿಕ ಅವರು ಮಾತನಾಡಿದರು.

'ರಾಜ್ಯದಲ್ಲಿ ಒಕ್ಕಲಿಗ ಸಮುದಾಯ ಶೇ 16ರಷ್ಟಿದೆ. ನಮಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಶೇ 16ಕ್ಕೆ ಹೆಚ್ಚಿಸುವಂತೆ ರಾಜ್ಯ ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದೆವು. ಆದರೆ, ಸರ್ಕಾರ ಬೇರೆ ಸಮುದಾಯದವರ ಮೀಸಲಾತಿ ಕಿತ್ತು ಶೇ 2ರಷ್ಟು ಹೆಚ್ಚಿಸಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿಯಲ್ಲಿ ನೀಡಿರುವ ಒಳ ಮೀಸಲಾತಿಯ ಮಾದರಿಯಲ್ಲಿಯೇ ಒಕ್ಕಲಿಗ ಸಮುದಾಯಕ್ಕೂ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು. ರಾಜ್ಯದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಮೀಸಲಾತಿ ಬಗ್ಗೆ ಪ್ರಬುದ್ಧತೆ ಪ್ರದರ್ಶಿಸಬೇಕು ಎಂದರು. ಎಲ್ಲಾ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮೀಸಲಾತಿ ಹಂಚಿಕೆ ಮಾಡಬೇಕು. ಮೂರು ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಮೀಸಲಾತಿ ಬಗ್ಗೆ ಇರುವ ಬದ್ಧತೆ ತಿಳಿಸಬೇಕು ಎಂದು ಒತ್ತಾಯಿಸಿದರು.

'ಮುಂಡಾಲ ಸಮಾಜಕ್ಕೆ ಅನ್ಯಾಯ'

ಮಂಗಳೂರು: 'ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಒಳಮೀಸಲಾತಿಯಿಂದ ಪರಿಶಿಷ್ಟ ಜಾತಿಯ 89 ಉಪಜಾತಿಗಳಿಗೆ ಅನ್ಯಾಯವಾಗಿದೆ. ಕರಾವಳಿ ಪ್ರದೇಶವೂ ಸೇರಿದಂತೆ 7 ಜಿಲ್ಲೆಗಳಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಮುಂಡಾಲ ಸಮಾಜಕ್ಕೂ ಇದರಿಂದ ಧಕ್ಕೆ ಆಗಲಿದೆ' ಎಂದು ಅಖಿಲ ಭಾರತ ಮುಂಡಾಲ ಯುವ ವೇದಿಕೆ ಆರೋಪಿಸಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಯುವವೇದಿಕೆಯ ಸ್ಥಾಪಕಾಧ್ಯಕ್ಷ ಕಿರಣ್ ಕುಮಾರ್ ಕೊಡಿಯಾಲ್‌ಬೈಲ್, 'ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 89 ಜಾತಿಗಳಿಗೆ ಇನ್ನು ಶೇ 1ರಷ್ಟು ಮೀಸಲಾತಿ ಮಾತ್ರ ಸಿಗುತ್ತದೆ. ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಮುಂಡಾಲ ಸಮುದಾಯದವರು ರಾಜಕೀಯ ಹಾಗೂ ಶೈಕ್ಷಣಿಕ ಮೀಸಲಾತಿ ಪಡೆಯುವುದು ಕಷ್ಟವಾಗಲಿದೆ. ಹಾಗಾಗಿ ಸರ್ಕಾರ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆಯಬೇಕು. ಸರ್ಕಾರದ ವಿರುದ್ಧ ಜನಜಾಗೃತಿ ಮೂಡಿಸಿ ಬೀದಿಗಿಳಿದು ಹೋರಾಟ ನಡೆಸಲಿದ್ದೇವೆ' ಎಂದರು.

ಸುದ್ದಿಗೋಷ್ಠಿಯಲ್ಲಿ ಯುವ ವೇದಿಕೆಯ ಅಧ್ಯಕ್ಷ ಪ್ರಶಾಂತ್ ಕಾಟಿಪಳ್ಳ, ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕಾಪಿಕಾಡ್, ಸಾಂಸ್ಕೃತಿಕ ಕಾರ್ಯದರ್ಶಿ ಚಂದ್ರಹಾಸ ಮೇರಮಜಲು, ಮುಖಂಡ ಪ್ರವೀಣ್ ಕೋಡಿಕಲ್ ಇದ್ದರು.

'ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ಹೋರಾಟ'

ಕೊಪ್ಪಳ: ಒಳಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡ ಕ್ರಮ ವಿರೋಧಿಸಿ ಚುನಾವಣೆ ಬಹಿಷ್ಕರಿಸುವ ಬದಲು ತಾಂಡಾಗಳಿಂದ ಹೋರಾಟ ಮುಂದುವರಿಸಲು ಅಖಿಲ ಭಾರತ ಬಂಜಾರ ಸೇವಾ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಮಂಗಳವಾರ ನಿರ್ಧರಿಸಲಾಯಿತು.

ಬಹದ್ದೂರ್ ಬಂಡಿ ಗ್ರಾಮದಲ್ಲಿ ನಡೆದ ಸಭೆಯಲ್ಲಿ ಸಮಾಜದ ಮುಖಂಡರು ಹಾಗೂ ಪ್ರಮುಖರು ಹೋರಾಟ ಸೇರಿ ವಿವಿಧ ವಿಷಯಗಳನ್ನು ಚರ್ಚಿಸಿದರು.

'ಸಮಾಜವನ್ನು ವಿಭಜಿಸಿ ಒಳಮೀಸಲಾತಿ ಶಿಫಾರಸು ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಆದರೂ ಸಂವಿಧಾನ ಬಾಹಿರವಾಗಿ ನಡೆದುಕೊಂಡಿದೆ. ಸರ್ಕಾರದ ಈ ಕ್ರಮದ ವಿರುದ್ಧ ನಿರಂತರ ಹೋರಾಟದ ಜೊತೆಗೆ ಕಾನೂನು ಹೋರಾಟವನ್ನೂ ಕೈಗೊಳ್ಳುತ್ತೇವೆ' ಎಂದ ಸೇವಾ ಸಂಘದ ಬೆಂಗಳೂರು ಮೆಗಾ ಸಿಟಿ ಅಧ್ಯಕ್ಷ ರಾಜಾ ನಾಯ್ಕ 'ಪ್ರಜಾವಾಣಿ'ಗೆ ತಿಳಿಸಿದರು.

'ಶಿಫಾರಸು ಮಾಡಿದ ಬಗ್ಗೆ ನಮಗೆ ವಿರೋಧವಿದೆ. ಏಪ್ರಿಲ್ 14ರಂದು ಬೆಂಗಳೂರಿನಲ್ಲಿ ರಾಜ್ಯದ ಪ್ರಮುಖರ ಸಭೆ ಕರೆದು ಚುನಾವಣೆ ಬಹಿಷ್ಕರಿಸದಂತೆ ತಾಂಡಾಗಳಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತೇವೆ' ಎಂದು ಹೇಳಿದರು.

ಶಿಫಾರಸು ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಕೈಬಿಡಬೇಕು ಎಂದು ಸೇವಾ ಸಂಘದ ರಾಜ್ಯ ಉಪಾಧ್ಯಕ್ಷ ಭರತ ನಾಯ್ಕ ಆಗ್ರಹಿಸಿದರು.

ಕೊಪ್ಪಳ, ಬಳ್ಳಾರಿ, ಹಾವೇರಿ, ಧಾರವಾಡ, ಮೈಸೂರು, ಮಂಡ್ಯ, ಬೆಂಗಳೂರು, ಯಾದಗಿರಿ, ಕಲಬುರಗಿ, ಉತ್ತರ ಕನ್ನಡ ಮತ್ತು ಚಾಮರಾಜನಗರ ಜಿಲ್ಲೆಗಳ ಬಂಜಾರ ಸಮಾಜದ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಉತ್ತರ, ದಕ್ಷಿಣ ಒಳನಾಡಿನಲ್ಲಿ ಮಳೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಗಳ ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಕಲಬುರಗಿ, ವಿಜಯಪುರ, ಬೀದರ್ ಹಾಗೂ ದಕ್ಷಿಣ ಒಳನಾಡಿನ ಬೆಂಗಳೂರು ನಗರ ಮತ್ತು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಮಂಡ್ಯ, ಮೈಸೂರು, ಕೊಡಗು, ತುಮಕೂರು, ಹಾಸನದಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಕರಾವಳಿ ಹಾಗೂ ಒಳನಾಡಿನಲ್ಲಿ ಒಣಹವೆ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಮುಂದುವರಿಯಲಿದೆ. ಸಂಜೆ ಅಥವಾ ರಾತ್ರಿ ವೇಳೆ ಮಳೆಯಾಗುವ ಸಾಧ್ಯತೆಯಿದೆ ಎಂದು ಮಾಹಿತಿ ನೀಡಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಯ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ 9 ಸೆಂ.ಮೀ, ಮೈಸೂರು ಜಿಲ್ಲೆಯ ಟಿ.ನರಸೀಪುರದಲ್ಲಿ 2 ಸೆಂ.ಮೀ ಹಾಗೂ ಚಾಮರಾಜನಗರ, ಬಂಡೀಪುರದಲ್ಲಿ 1 ಸೆಂ.ಮೀ ಮಳೆಯಾಗಿದೆ.

ಬಿರುಗಾಳಿ, ಮಳೆ: ವಿಮಾನ ಸಂಚಾರ ಅಸ್ತವ್ಯಸ್ತ

ದೇವನಹಳ್ಳಿಯ ಹೆಣ್ಣುಮಕ್ಕಳ ಪ್ರೌಢಶಾಲೆಯ ರಸ್ತೆ ಜಲಾವೃತವಾಗಿತ್ತು

ದೇವನಹಳ್ಳಿ: ಬಿರುಗಾಳಿ ಸಹಿತ ಸುರಿದ ಮಳೆಯಿಂದಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಟೇಕಾಫ್ ಹಾಗೂ ಲ್ಯಾಂಡಿಂಗ್‌ನಲ್ಲಿ ಮಂಗಳವಾರ ಭಾರೀ ವ್ಯತ್ಯಯ ಉಂಟಾಗಿದ್ದು, ನೂರಾರು ಪ್ರಯಾಣಿಕರು ತೊಂದರೆ ಅನುಭವಿಸಿದರು.

ಸಂಜೆ ಇಲ್ಲಿಗೆ ಬಂದಿಳಿಯಬೇಕಿದ್ದ ಎಂಟು ವಿಮಾನಗಳನ್ನು ಪ್ರತಿಕೂಲ ಹವಾಮಾನದ ಕಾರಣ ಚೆನ್ನೈಗೆ ಕಳುಹಿಸಲಾಗಿತ್ತು. ಒಟ್ಟು 19 ವಿಮಾನಗಳ ಲ್ಯಾಂಡಿಂಗ್‌ನಲ್ಲಿ ವ್ಯತ್ಯಯವಾಗಿದೆ.

ಚೆನ್ನೈ, ಹೈದರಾಬಾದ್, ಕೋಲ್ಕತ್ತ, ಜೋಧ್‌ಪುರ, ಮುಂಬೈ, ರಾಜ್‌ಕೋಟ್, ದುಬೈ, ಪಾಟ್ನಾ, ಬರೇಲಿ ಹಾಗೂ ಇಂದೋರ್‌ನಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ವಿಮಾನಗಳನ್ನು ಬೇರೆ ವಿಮಾನ ನಿಲ್ದಾಣಕ್ಕೆ ಕಳುಹಿಸಲಾಯಿತು. ಚೆನ್ನೈ ಸೇರಿದಂತೆ ಇತರೆ ನಿಲ್ದಾಣಗಳಲ್ಲಿ ಇಳಿದ ವಿಮಾನಗಳು ಇಂಧನ ಭರ್ತಿ ಮಾಡಿಕೊಂಡು ತಡರಾತ್ರಿ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿಳಿದಿವೆ. ಹವಾಮಾನ ಇಲಾಖೆಯ ಪ್ರಕಾರ ವಿಮಾನ ನಿಲ್ದಾಣದಲ್ಲಿ ಸಂಜೆ 4 ಗಂಟೆಗೆ ಆರಂಭಗೊಂಡ ಮಳೆ ಒಂದು ಗಂಟೆ ಕಾಲ ಸುರಿಯಿತು. ಒಟ್ಟು 45.2 ಮಿ.ಮೀ ಮಳೆ ಸುರಿದಿದೆ.

ಕೊಳ್ಳೇಗಾಲ: 2 ಮನೆ ಕುಸಿತ

ಚಾಮರಾಜನಗರ: ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ತಾಲ್ಲೂಕಿನಲ್ಲಿ ಸೋಮವಾರ ತಡರಾತ್ರಿ ಧಾರಾಕಾರ ಮಳೆಯಾಗಿ ಎರಡು ಮನೆಗಳು ಕುಸಿದಿವೆ.

ಯಳಂದೂರು ತಾಲ್ಲೂಕಿನ ಕೋಮಾರನಪುರದಲ್ಲಿ ಮನೆಯೊಂದು ಸಂಪೂರ್ಣ ಕುಸಿದಿದ್ದು, ಕೊಳ್ಳೇಗಾಲದ ಮುಡಿಗುಂಡ ಬಡಾವಣೆಯಲ್ಲಿ ಮನೆಗೋಡೆ ಕುಸಿದು ಎರಡು ಬೈಕ್‌ಗಳು ಜಖಂಗೊಂಡಿವೆ. ನಿವಾಸಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸಿಡಿಲು ಬಡಿದು ರೈತ ಸಾವು

ಬಾಗೇಪಲ್ಲಿ (ಚಿಕ್ಕಬಳ್ಳಾಪುರ ಜಿಲ್ಲೆ): ತಾಲ್ಲೂಕಿನ ಮಿಟ್ಟೇಮರಿ ಹೋಬಳಿಯ ಕನ್ನಂಪಲ್ಲಿ ಗ್ರಾಮದಲ್ಲಿ ಮಂಗಳವಾರ ಸಂಜೆ ಸಿಡಿಲು ಬಡಿದು ರೈತ ಮೃತಪಟ್ಟಿದ್ದು, ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ.

ಗ್ರಾಮದ ವೆಂಕಟೇಶ್ (40) ಮೃತಪಟ್ಟವರು. ಆದಿಲಕ್ಷ್ಮಮ್ಮ ತೀವ್ರವಾಗಿ ಗಾಯಗೊಂಡಿದ್ದು, ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆತ್ಮಹತ್ಯೆಗೆ ಸ್ವಾಮೀಜಿ ಯತ್ನ

ಶಿಗ್ಗಾವಿ (ಹಾವೇರಿ): ನ್ಯಾ. ಸದಾಶಿವ ಆಯೋಗದ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಜಾರಿ ವಿರೋಧಿಸಿ ಬಂಜಾರ ಸಮಾಜದ ವತಿಯಿಂದ ಮಂಗಳವಾರ ಪಟ್ಟಣದಲ್ಲಿ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ಹಾನಗಲ್ ತಾಲ್ಲೂಕು ಗುಂಡೂರು ಗ್ರಾಮದ ಬಂಜಾರ ಗುರುಪೀಠದ ತಿಪ್ಪೇಶ್ವರ ಸ್ವಾಮೀಜಿ ಆತ್ಮಹತ್ಯೆಗೆ ಯತ್ನಿಸಿದರು.

ಪ್ರತಿಭಟನೆಗೂ ಮುನ್ನ ರಾಣಿ ಚೆನ್ನಮ್ಮ ಮೂರ್ತಿಗೆ ಮಾಲಾರ್ಪಣೆ ಮಾಡಿ, ನಂತರ ಹಳೇ ತಹಶೀಲ್ದಾರ್ ಕಚೇರಿ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಮೂರ್ತಿಗೆ ಮಾಲಾರ್ಪಣೆ ಮಾಡಿದರು. ಬಳಿಕ ಸ್ವಾಮೀಜಿ ಕಬ್ಬಿಣದ ಸರಳಿಗೆ ಹೆಗಲ ಮೇಲಿನ ಶಾಲನ್ನು ಕಟ್ಟಿ ಕೆಳಗೆ ಜಿಗಿಯಲು ಯತ್ನಿಸಿದರು. ಅಲ್ಲೇ ಇದ್ದ ಬಂಜಾರ ಸಮುದಾಯದ ಮುಖಂಡರು ಕೂಡಲೇ ಸ್ವಾಮೀಜಿಯನ್ನು ರಕ್ಷಿಸಿದರು.

ನಂತರ ಶಿಗ್ಗಾವಿ ಸರ್ಕಾರಿ ಆಸ್ಪತ್ರೆಗೆ ಸ್ವಾಮೀಜಿ ಯವರನ್ನು ಚಿಕಿತ್ಸೆಗಾಗಿ ದಾಖಲಿಸಲಾಯಿತು. ಸ್ವಾಮೀಜಿ ಪ್ರಾಣಾಪಾಯದಿಂದ ಪಾರಾಗಿದ್ದು, ಸುರಕ್ಷಿತವಾಗಿದ್ದಾರೆ ಎಂದು ಬಂಜಾರ ಸಮುದಾಯದ ಮುಖಂಡರು ತಿಳಿಸಿದ್ದಾರೆ.

ಶ್ರೀಕಂಠೇಶ್ವರನ ಶಾಪ ತಟ್ಟದೆ ಇರದು– ಎಚ್‌ಡಿಕೆ

ಬೆಂಗಳೂರು: 'ನಂಜನಗೂಡಿನ ಶ್ರೀಕಂಠೇಶ್ವರ ದೇವರ ಹುಂಡಿಗೆ ಬಿಜೆಪಿ ಶಾಸಕ ಬಿ. ಹರ್ಷವರ್ಧನ್ ಕೈ ಹಾಕಿರುವುದು ದೈವಕ್ಕೆ ಎಸಗಿದ ಅಪಮಾನ. ಇದು ಯೋಜನೆಗಳ ಹೆಸರಿನಲ್ಲಿ ದೇವರ ಹುಂಡಿಗೂ ಕನ್ನ ಕೊರೆಯುವ ಬಿಜೆಪಿಯ ನೈಜ ಜಾಯಮಾನ. ಕಮಲ ಪಕ್ಷ ಮತ್ತೊಮ್ಮೆ ಬೆತ್ತಲಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

'ಪ್ರಜಾವಾಣಿ'ಯ ಏಪ್ರಿಲ್ 3ರ ಸಂಚಿಕೆಯಲ್ಲಿ ಪ್ರಕಟಗೊಂಡ 'ಶ್ರೀಕಂಠೇಶ್ವರನ ಹುಂಡಿಗೆ ಶಾಸಕನ ಕೈ!' ವರದಿಯನ್ನು ಉಲ್ಲೇಖಿಸಿ ಅವರು ಸರಣಿ ಟ್ವೀಟ್ ಮಾಡಿದ್ದಾರೆ.

'ಮುಜರಾಯಿ ದೇವಾಲಯಗಳ ಆದಾಯ ಆಯಾ ದೇಗುಲದ ಅಭಿವೃದ್ಧಿಗೇ ಬಳಸಬೇಕು ಎನ್ನುವುದು ಕಾನೂನು. ಬಿಜೆಪಿ ಸರ್ಕಾರ ಕಾನೂನು ಬಿಟ್ಟು, ಶೇ 40 ಕಮಿಷನ್‌ಗಾಗಿ ದೇವರ ದುಡ್ಡನ್ನೇ ನುಂಗಿ ನೀರು ಕುಡಿದು, ಆ ಹಣವನ್ನೂ ಚುನಾವಣೆಗೆ ಸುರಿಯಲು ಹೊರಟಿದೆ. ಪಾಪದ ಪಕ್ಷಕ್ಕೆ ಪ್ರಾಯಶ್ಚಿತ್ತ ತಪ್ಪದು. ಶ್ರೀಕಂಠೇಶ್ವರನ ಶಾಪವೂ ತಟ್ಟದೆ ಇರದು' ಎಂದಿದ್ದಾರೆ.

'ಧರ್ಮ, ದೇವರು ಎನ್ನುವುದು ಬಿಜೆಪಿಗೆ ಮತ ಫಸಲು ಕೊಡುವ ಸಾಧನಗಳಷ್ಟೇ. ಶ್ರದ್ಧೆ, ಭಕ್ತಿ ಜನರದ್ದು; ಭುಕ್ತಿ ಮಾತ್ರ ಬಿಜೆಪಿಯದ್ದು. ನೀಚತನದ ಪರಮಾವಧಿ ಇದು. ಸಮುದಾಯ ಭವನಗಳ ನಿರ್ಮಾಣಕ್ಕೆ ದೇವರ ದುಡ್ಡೇ ಬೇಕೆ? ಕ್ಷೇತ್ರಕ್ಕೆ ಸರ್ಕಾರ ಕೊಟ್ಟ ಹಣ, ಶಾಸಕರ ವಿಶೇಷ ಅನುದಾನ ಇತ್ಯಾದಿಗಳೆಲ್ಲ ಎಲ್ಲಿ ಹೋದವು? ದೇವರ ಹುಂಡಿ ಎಗರಿಸುವ ಶಾಸಕರ ಧೂರ್ತ ಪ್ರಯತ್ನಕ್ಕೆ ತಡೆ ಹಾಕಬೇಕು. ಈ ಬಗ್ಗೆ ಹೊರಡಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

ಉದ್ಯೋಗ ವಾಣಿ

Bearys Pre-University College Mangalore

Academic Support SHAHEEN GROUP OF INSTITUTIONS

We invite applications from Passionate Academicians who are multifaceted self-driven, student centric, result oriented and enjoy working in Tech-Driven Environment.

ACADEMIC

Principal
- Ph.D. or master's degree with B.Ed. mandatory
- Minimum 10 years of experience in similar capacity

Lecturers
- Physics | Chemistry | Mathematics | Biology | Computer Science | Economics | Business Studies | Accountancy | Kannada | English | Hindi
- Master's degree in relevant stream & B.Ed.
- Minimum 7 years of experience in teaching.

Physical Education Director
M.P.Ed. with Min. 10 years of experience.

Student Counselor
MSW/ MSc. (Psychology) with Min. 5 years of experience.

NON-ACADEMIC
- Admission Manager
- Office Manager (Admin & HR)
- Multimedia Manager
- Accounts Executives
- Librarian
- Lab Assistants
- Graphic Designer

ADVANTAGE
Faculty with expertise in coaching/training students for multiple entrance examinations like CET, NEET, NATA, JEE, CA Foundation and IELTS & have delivered exemplary results will be given preference.

REMUNERATION
Salary as per best industry standards

Candidates may send their resume with recent photo within 7 days to education@bearysgroup.com

DH DECCAN HERALD ಪ್ರಜಾವಾಣಿ

ವೃತ್ತಿ ಭವಿಷ್ಯದ ಚಿಂತೆಯಾಗಿದ್ದಲ್ಲಿ, ಯಾರಲ್ಲಿ ನೀವು ವಿಚಾರಿಸಬೇಕು?

ಪರಿಣಿತರೇ ನಿಮಗೆ ಮಾರ್ಗದರ್ಶನ ನೀಡಬೇಕು...

ನಿಮ್ಮ ಸುತ್ತಲಿನ ಪರಿಸರದಲ್ಲಿ ಎಲ್ಲಾ ಕಡೆಗೂ ಒಂದೊಂದು ರೀತಿಯ ವಿಭಿನ್ನ ಅಭಿಪ್ರಾಯಗಳು ಕೇಳಿಬರುತ್ತವೆ, ವಿಶೇಷ ರೀತಿಯ ಪರಿಣಿತರು ಕಂಡುಬರುತ್ತಾರೆ, ಅಂತಿಮವಾಗಿ ನೀವು ಮಾತ್ರ ಗೊಂದಲದಲ್ಲೇ ಉಳಿಯುತ್ತೀರಿ! ಚಿಂತೆ ಬಿಡಿ... ನಿಮಗೆ ಲಭ್ಯವಿರುವ ಎಲ್ಲಾ ವೃತ್ತಿಭವಿಷ್ಯದ ಆಯ್ಕೆಗಳನ್ನು ನಮ್ಮಲ್ಲಿ ತಿಳಿಯಿರಿ.

ಎಡ್ಯುವರ್ಸ್™ ಸರ್ವರಿಗೂ ದಾರಿದೀಪ

ವಾಹಿನಿ ಪಾಲುದಾರರು NEWS 1st

ಬೆಂಬಲಿಸಿದವರು AD6 advertising A Unit of Sri Sairam Enterprises

ಬೆಂಗಳೂರು: 22-23 ಏಪ್ರಿಲ್, 2023 ತ್ರಿಪುರವಾಸಿನಿ, ಅರಮನೆ ಮೈದಾನ

ಹುಬ್ಬಳ್ಳಿ: 29-30 ಏಪ್ರಿಲ್, 2023 ರಾಯ್ಕರ್ ಪ್ರದರ್ಶನ ಮೈದಾನ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ನಿಮಗಾಗಿ ಸಮರ್ಪಿಸುತ್ತಿವೆ ಎಡ್ಯುವರ್ಸ್, ಅತ್ಯುತ್ತಮ ಶಿಕ್ಷಣ ಪ್ರದರ್ಶನ ಮತ್ತು ವೃತ್ತಿಭವಿಷ್ಯದ ಮಾರ್ಗಸೂಚಿ. ವಿವಿಧ ಸಂಸ್ಥೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ನಮ್ಮ ತಜ್ಞ ಪರಿಣಿತರು ನಿಮಗೆ ಉತ್ತಮ ಮಾರ್ಗದರ್ಶನ ನೀಡುತ್ತಾರೆ ಮತ್ತು ವೃತ್ತಿಭವಿಷ್ಯದಲ್ಲಿ ಲಭ್ಯವಿರುವ ವೈವಿಧ್ಯಮಯ ಅವಕಾಶಗಳ ಕುರಿತು ಮಾಹಿತಿ ಒದಗಿಸುತ್ತಾರೆ. ಹೀಗಿರುವಾಗ, ನೀವು ಕೂಡ ಬನ್ನಿರಿ ಮತ್ತು ಈ ಬೃಹತ್ ಪ್ರದರ್ಶನದಲ್ಲಿ ಪಾಲ್ಗೊಳ್ಳಿರಿ ಹಾಗೂ ನಿಮಗೆ ಸೂಕ್ತವಾದ ವೃತ್ತಿಭವಿಷ್ಯವನ್ನು ಆಯ್ಕೆ ಮಾಡಿಕೊಳ್ಳಿ.

- ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಏಕಮಾತ್ರ ಪರಿಹಾರ ವೇದಿಕೆ
- ಸಿಇಟಿ ಮತ್ತು ಕಾಮೆಡ್–ಕೆ ಅಧಿಕಾರಿಗಳಿಂದ ಉಚಿತ ಸಮಾಲೋಚನಾ ಉಪನ್ಯಾಸಗಳು

ಅಸ್ತಿತ್ವಕ್ಕಾಗಿ ಸವದಿ, ಕುಮಠಳ್ಳಿ ಪೈಪೋಟಿ

● ಸಂತೋಷ ಈ. ಚಿನಗುಡಿ

ಲಕ್ಷ್ಮಣ ಸವದಿ

ಮಹೇಶ ಕುಮಠಳ್ಳಿ

ಅಥಣಿ (ಬೆಳಗಾವಿ ಜಿಲ್ಲೆ): ಅಥಣಿ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಮಹೇಶ ಕುಮಠಳ್ಳಿ ಹಾಗೂ ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಟಕ್ಕೆ ಬಿದ್ದಿದ್ದಾರೆ. ಇದು ಬಿಜೆಪಿಗೆ ತಲೆನೋವಾಗಿ ಪರಿಣಮಿಸಿದ್ದು, ಬೆಳಗಾವಿ ಜಿಲ್ಲೆಯ ರಾಜಕೀಯದಲ್ಲಿ ಬಹು ಚರ್ಚೆಯ ವಿಷಯವಾಗಿದೆ.

'ಕುಮಠಳ್ಳಿ ಅವರಿಗೆ ಈ ಬಾರಿಯೂ ಟಿಕೆಟ್ ನೀಡಿದರೆ ತಮ್ಮ ಕುಟುಂಬದಿಂದ ಕ್ಷೇತ್ರ ಕೈಬಿಟ್ಟು ಹೋಗುತ್ತದೆ' ಎಂಬ ಆತಂಕ ಸವದಿ ಅವರದು. ಸವದಿ ಕುಟುಂಬಕ್ಕೆ ಟಿಕೆಟ್ ಕೊಟ್ಟರೆ ತಮ್ಮ ರಾಜಕೀಯ ಭವಿಷ್ಯ ಡೋಲಾಯಮಾನವಾಗುತ್ತದೆ ಎಂಬ ಭಯ ಕುಮಠಳ್ಳಿ ಅವರದು.

'ಬಿಜೆಪಿ ಸರ್ಕಾರ ರಚನೆಗೆ ಕೈ ಜೋಡಿಸಿದವರು ಮಹೇಶ ಕುಮಠಳ್ಳಿ. ಅವರನ್ನು ಈಗ ಕೈಬಿಟ್ಟರೆ ನಾನೂ ಗೋಕಾಕದಲ್ಲಿ ಸ್ಪರ್ಧಿಸುವುದಿಲ್ಲ' ಎಂದು ಬಹಿರಂಗವಾಗಿಯೇ ಸವಾಲು ಒಡ್ಡಿದ್ದಾರೆ ಶಾಸಕ ರಮೇಶ ಜಾರಕಿಹೊಳಿ.

'ನನಗೆ ಸ್ಪರ್ಧಿಸುವ ಇರಾದೆ ಇರಲಿಲ್ಲ. ಆದರೆ, ಕ್ಷೇತ್ರದಲ್ಲಿ ರಮೇಶ ಜಾರಕಿಹೊಳಿ ಹಸ್ತಕ್ಷೇಪದಿಂದ ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ಹೇಗಾದರೂ ಸರಿಯೇ ಟಿಕೆಟ್ ದಕ್ಕಿಸಿಕೊಳ್ಳುತ್ತೇನೆ' ಎಂದು ಶಪಥ ಮಾಡಿದ್ದಾರೆ ಲಕ್ಷ್ಮಣ ಸವದಿ. ಹೈಕಮಾಂಡ್ ಮೇಲೆ ಒತ್ತಡ ಹೇರಿದ್ದಾರೆ.

ಇಬ್ಬರ ಜಗಳ, ಕಾಂಗ್ರೆಸ್‌ಗೆ ಲಾಭ?

ಲಕ್ಷ್ಮಣ ಸವದಿ ಹಾಗೂ ಮಹೇಶ ಕುಮಠಳ್ಳಿ ಅವರ ಜಗಳ ಕಾಂಗ್ರೆಸ್‌ಗೆ ಲಾಭ ತರಲಿದೆ ಎಂಬ ಲೆಕ್ಕಾಚಾರ ಶುರುವಾಗಿದೆ. ಬಿಜೆಪಿ ಅಭ್ಯರ್ಥಿಯನ್ನು ಬಿಜೆಪಿಯವರೇ ಸೋಲಿಸುತ್ತಾರೆ ಎಂಬ ಮಾತು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ. ಇದೇ ಕಾರಣಕ್ಕೆ ಕಳೆದ ಚುನಾವಣೆಗಳಿಗಿಂತ ಈ ಬಾರಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ದೊಡ್ಡದಾಗಿದೆ.

ಕಟ್ಟಾ ಬಿಜೆಪಿ ಮತಗಳು, ಸವದಿ ಕುಟುಂಬದ ಸಾಂಪ್ರದಾಯಿಕ ಮತಗಳು ಹಾಗೂ ಕುಮಠಳ್ಳಿ ಅವರೊಂದಿಗೆ ಇರುವ ಲಿಂಗಾಯತ ಸಮುದಾಯದ ನಾಯಕರು; ಈ ಮೂವರ ಮಧ್ಯೆ ಕಾಂಗ್ರೆಸ್ ಲಾಭ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚು ಎನ್ನುವುದು ಕ್ಷೇತ್ರದ ಬಿಜೆಪಿ ಮುಖಂಡರ ಲೆಕ್ಕಾಚಾರ.

ಇಬ್ಬರೂ ನಾಯಕರ ತಿಕ್ಕಾಟ ಬಿಜೆಪಿ ಕಾರ್ಯಕರ್ತರಿಗೆ ತಲೆನೋವಾಗಿ ಪರಿಣಮಿಸಿದೆ. ಯಾರೊಂದಿಗೆ ಗುರುತಿಸಿಕೊಳ್ಳಬೇಕು ಎಂಬ ಗೊಂದಲ ಮೂಡಿದೆ. ತಾವು ಬೆಂಬಲಿಸುವ ನಾಯಕನಿಗೆ ಟಿಕೆಟ್ ತಪ್ಪಿಹೋದರೆ ತಮ್ಮ ಅಸ್ತಿತ್ವ ಏನು ಎಂಬ ಚಿಂತೆ ಕಾರ್ಯಕರ್ತರದೂ ಆಗಿದೆ.

'ಪಕ್ಷ ಯಾರಿಗೇ ಟಿಕೆಟ್ ಕೊಟ್ಟರೂ ಕಾರ್ಯಕರ್ತನಂತೆ ದುಡಿಯುತ್ತೇನೆ' ಎನ್ನುವುದು ಕುಮಠಳ್ಳಿ ಅವರ ಬಹಿರಂಗ ಹೇಳಿಕೆ. ಆದರೆ, ರಮೇಶ ಜಾರಕಿಹೊಳಿಯನ್ನು ಮುಂದಿಟ್ಟುಕೊಂಡು ತಮ್ಮ 'ಅಸ್ತಿತ್ವ' ಉಳಿಸಿಕೊಳ್ಳುವ ಯತ್ನ ನಡೆಸಿದ್ದಾರೆ.

2018ರಲ್ಲಿ ಲಕ್ಷ್ಮಣ ಸವದಿ ಅವರನ್ನು ಸೋಲಿಸಿ ಮಹೇಶ ಕುಮಠಳ್ಳಿ ಕಾಂಗ್ರೆಸ್‌ನಿಂದ ಗೆದ್ದಿದ್ದರು. ಆಗ ಕಾಂಗ್ರೆಸ್‌ನಲ್ಲೇ ಇದ್ದ ರಮೇಶ ಜಾರಕಿಹೊಳಿ, ಕುಮಠಳ್ಳಿ ಅವರ ಗೆಲುವಿಗೆ ಶ್ರಮಿಸಿದ್ದರು. 2019ರಲ್ಲಿ 'ಆಪರೇಷನ್ ಕಮಲ'ದ ಮೂಲಕ ಕುಮಠಳ್ಳಿ ಅವರನ್ನು ಬಿಜೆಪಿಗೆ ಕರೆ ತಂದಿದ್ದೂ ಅವರೇ.

ಬಾಯಿಗೆ ಬೀಗ: ಬೆಂಗಳೂರಿನಲ್ಲಿ ಈಚೆಗೆ ನಡೆದ ಬಿಜೆಪಿ ರಾಜ್ಯ ಕೋರ್ ಕಮಿಟಿ ಸಭೆಯಲ್ಲೂ ಈ ನಾಯಕರು ಏರುದನಿಯಲ್ಲಿ ಮಾತಾಡಿದ್ದರು ಎಂದು ಮೂಲಗಳು ಹೇಳಿವೆ. ಬೆಳಗಾವಿಯಲ್ಲಿ ಸೋಮವಾರ ನಡೆದ ಜಿಲ್ಲಾ ಕೋರ್ ಕಮಿಟಿ ಸಭೆಯಲ್ಲೂ ಈ 'ಸಾಹುಕಾರ'ರ ಜಗಳ ಬಗೆಹರಿಸಲು ಕಸರತ್ತು ನಡೆಸಲಾಗಿತ್ತು.

ಮತದಾನ ಜಾಗೃತಿ

ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮದಲ್ಲಿ ಮಂಗಳವಾರ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ 'ನಮ್ಮ ಮತ ನಮ್ಮ ಹಕ್ಕು' ಎಂದು ಮೇಣದ ಬತ್ತಿಯಲ್ಲಿ ಬೆಳಗಿ ಮತದಾನ ಜಾಗೃತಿ ಮೂಡಿಸಲಾಯಿತು

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಸಚಿವ ಚವಾಣ್ ಸೇರಿ ಇಬ್ಬರಿಗೆ ನೋಟಿಸ್

ಬೀದರ್: ಅಸಾಂವಿಧಾನಿಕ ಪದ ಬಳಸಿದ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ಪಶು ಸಂಗೋಪನೆ ಸಚಿವ ಪ್ರಭು ಚವಾಣ್ ಮತ್ತು ಔರಾದ್ ತಾಲ್ಲೂಕಿನ ಲಸ್ಕರ್ ನಾಯಕ ತಾಂಡಾದ ಪ್ರಕಾಶ ಜಾಧವ್ ಅವರಿಗೆ ಔರಾದ್ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ನೋಟಿಸ್ ಜಾರಿ ಮಾಡಿದ್ದಾರೆ.

ಇಬ್ಬರೂ ಲಿಖಿತ ಸಮಜಾಯಿಷಿ ನೀಡಬೇಕು ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ. ಅಸಾಂವಿಧಾನಿಕ ಪದಗಳು ಸಮಾಜದಲ್ಲಿ ಜಾತಿ ವೈಷಮ್ಯ, ಕೋಮು ಗಲಭೆ ಮತ್ತು ಅಶಾಂತಿ ಉಂಟು ಮಾಡುವ ಸಾಧ್ಯತೆ ಇದೆ ಎಂದೂ ಹೇಳಿದ್ದಾರೆ.

ನಡಹಳ್ಳಿ ಮನೆಯಿಂದ ಕಾರು ವಾಪಸ್

ವರದಿ ಪರಿಣಾಮ

ಬೆಂಗಳೂರು: ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷರೂ ಆಗಿರುವ ದೇವರ ಹಿಪ್ಪರಗಿ ಕ್ಷೇತ್ರದ ಬಿಜೆಪಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಅವರಿಗೆ ನಿಗಮದಿಂದ ನೀಡಿದ್ದ ಎರಡು ಸರ್ಕಾರಿ ಕಾರುಗಳನ್ನು ಭಾನುವಾರವೇ ವಾಪಸ್ ಪಡೆಯಲಾಗಿದೆ.

ನಡಹಳ್ಳಿ ಅವರಿಗೆ ನಿಗಮದಿಂದ ಒಂದು ಟೊಯೊಟಾ ಇನ್ನೋವಾ ಮತ್ತು ಒಂದು ಟೊಯೊಟಾ ಕೊರೊಲ್ಲಾ ಕಾರು ನೀಡಲಾಗಿತ್ತು. ಮಾರ್ಚ್ 29ರಿಂದ ಚುನಾವಣಾ ನೀತಿಸಂಹಿತೆ ಜಾರಿಯಾಗಿರುವ ಕಾರಣದಿಂದ ಸರ್ಕಾರಿ ಕಾರುಗಳನ್ನು ಹಿಂದಿರುಗಿಸುವಂತೆ ಸೂಚಿಸಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಪತ್ರ ಬರೆದಿದ್ದರು. ಆದರೆ, ಅಧ್ಯಕ್ಷರ ಅಧಿಕಾರದ ಅವಧಿ ಇನ್ನೂ ಇದೆ ಎಂಬ ಕಾರಣ ನೀಡಿ ಕಾರು ಮರಳಿಸಿರಲಿಲ್ಲ. ಅಧ್ಯಕ್ಷರ ಬೆಂಗಳೂರಿನ ಮನೆಯಲ್ಲಿ ಕಾರುಗಳನ್ನು ನಿಲುಗಡೆ ಮಾಡಲಾಗಿದೆ ಎಂದು ನಡಹಳ್ಳಿ ಅವರ ಆಪ್ತ ಸಹಾಯಕ ನಿಗಮದ ಅಧ್ಯಕ್ಷರಿಗೆ ಪತ್ರ ಬರೆದಿದ್ದರು.

'ಕಾರು ಹಿಂದಿರುಗಿಸದ ನಡಹಳ್ಳಿ!' ಶೀರ್ಷಿಕೆಯಡಿ 'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು. 'ನೀತಿಸಂಹಿತೆ ಜಾರಿಯಾದ ಬಳಿಕವೂ ಕಾರನ್ನು ತಮ್ಮ ಬಳಿ ಇರಿಸಿಕೊಳ್ಳುವುದಾಗಿ ಅಧ್ಯಕ್ಷರು ಹೇಳಿದ್ದರಿಂದ ಗೊಂದಲ ಉಂಟಾಗಿತ್ತು. ಭಾನುವಾರವೇ ಎರಡೂ ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿ ನಕಲಿ ಪಟ್ಟಿ: ನಾಯಕರ ಗಾಬರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಅಭ್ಯರ್ಥಿಗಳ ಪಟ್ಟಿಯೊಂದು ಮಂಗಳವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ಸಂಚಲನ ಸೃಷ್ಟಿಸಿದ್ದರಿಂದ, ಪಕ್ಷದ ನಾಯಕರು, ಟಿಕೆಟ್ ಆಕಾಂಕ್ಷಿಗಳು ಕೆಲಹೊತ್ತು ಗಾಬರಿಗೊಳಗಾದರು.

'ಪಕ್ಷ ಯಾವುದೇ ಪಟ್ಟಿಯನ್ನೂ ಬಿಡುಗಡೆ ಮಾಡಿಲ್ಲ, ಸಾಮಾಜಿಕ ಜಾಲತಾಣದಲ್ಲಿರುವ ಪಟ್ಟಿ ನಕಲಿ' ಎಂದು ಬಿಜೆಪಿ ಸ್ಪಷ್ಟಪಡಿಸಿದ ಬಳಿಕ ಪರಿಸ್ಥಿತಿ ತಿಳಿಯಾಯಿತು.

ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಕೇಂದ್ರ ಕಚೇರಿ, ನವದೆಹಲಿ ಲೆಟರ್ ಹೆಡ್ ಮಾದರಿಯಲ್ಲೇ ಸೃಷ್ಟಿಸಲಾಗಿದೆ. ಸಾಮಾನ್ಯವಾಗಿ ದೆಹಲಿಯಿಂದ ಬಿಜೆಪಿ ಪಟ್ಟಿ ಪ್ರಕಟಣೆ ಬಿಡುಗಡೆ ಮಾಡುವಾಗ ಹಿಂದಿ, ಇಂಗ್ಲಿಷ್ ಭಾಷೆಗಳನ್ನು ಬಳಸುತ್ತದೆ. ಆದರೆ, ಈ ಪಟ್ಟಿಯಲ್ಲಿ ಕೇವಲ ಇಂಗ್ಲಿಷ್ ಭಾಷೆ ಮಾತ್ರ ಇತ್ತು. ಪಕ್ಷದ ಸೀಲ್ ಕೂಡ ಬಳಸಲಾಗಿದೆ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರ ಸಹಿಯನ್ನೂ ನಕಲಿ ಮಾಡಲಾಗಿದೆ.

ಇದರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ದಾವಣಗೆರೆ ದಕ್ಷಿಣ ಕ್ಷೇತ್ರ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಷಿಗೆ ಹುಬ್ಬಳ್ಳಿ–ಧಾರವಾಡ ಕೇಂದ್ರ, ಭಗವಂತ ಖೂಬಾಗೆ ಬಸವಕಲ್ಯಾಣ, ಸಂಸದರಾದ ಅಣ್ಣಾಸಾಹೇಬ್ ಜೊಲ್ಲೆಗೆ ನಿಪ್ಪಾಣಿ, ನಳಿನ್ ಕುಮಾರ್ ಕಟೀಲ್‌ಗೆ ಮಂಗಳೂರು ಉತ್ತರ, ಸುಮಲತಾ ಅಂಬರೀಷ್‌ಗೆ ಮಂಡ್ಯ ಕ್ಷೇತ್ರದ ಟಿಕೆಟ್ ನೀಡಲಾಗುತ್ತದೆ ಎಂದಿದೆ.

ಸಚಿವರಾದ ಸಿ.ಎನ್. ಅಶ್ವತ್ಥನಾರಾಯಣಗೆ ರಾಮನಗರ, ಆರ್. ಅಶೋಕಗೆ ಬ್ಯಾಟರಾಯನಪುರ, ವಿ.ಸುನಿಲ್ ಕುಮಾರ್‌ಗೆ ಉಡುಪಿ, ಮುನಿರತ್ನಗೆ ಗಾಂಧಿನಗರ ಟಿಕೆಟ್ ನೀಡಲಾಗುತ್ತದೆ ಎಂದೂ ಉಲ್ಲೇಖಿಸಲಾಗಿತ್ತು.

ಶಿವಮೊಗ್ಗದಲ್ಲಿ ಈಶ್ವರಪ್ಪ ಅವರ ಪುತ್ರ ಕಾಂತೇಶ್, ಸೊರಬಕ್ಕೆ ಕುಡುಚಿ ಶಾಸಕ ಪಿ.ರಾಜೀವ್, ಕಾರ್ಕಳಕ್ಕೆ ಪ್ರಮೋದ್ ಮುತಾಲಿಕ್, ಆರ್.ಆರ್.ನಗರಕ್ಕೆ ಮುನಿರಾಜುಗೌಡ, ಚಾಮರಾಜಪೇಟೆಗೆ ಸೈಲೆಂಟ್ ಸುನಿಲ್, ಅರಸೀಕೆರೆಗೆ ಅರುಣ್ ಸೋಮಣ್ಣ ಅವರ ಹೆಸರನ್ನು ತೋರಿಸಲಾಗಿತ್ತು.

ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹರಿಬಿಡಲಾಗಿದೆ. ಸುಳ್ಳು ಸುದ್ದಿ ಪ್ರಕಟಿಸಿದವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಗುವುದು

ಅರುಣ್ ಸಿಂಗ್, ರಾಜ್ಯ ಬಿಜೆಪಿ ಉಸ್ತುವಾರಿ

ಕಾಂಗ್ರೆಸ್ ಫೇಕ್ ಫ್ಯಾಕ್ಟರಿಯಿಂದ ಇನ್ನೊಂದು ಫೇಕ್ ಸುದ್ದಿ ಹೊರ ಬಿದ್ದಿದೆ. ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವವಿದೆ

ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಕಾಂಗ್ರೆಸ್ ವಿರುದ್ಧ ದೂರು ದಾಖಲು

ಈ ನಕಲಿ ಪಟ್ಟಿ ಬಿಡುಗಡೆ ಹಿಂದೆ ಕಾಂಗ್ರೆಸ್ ಕೈವಾಡ ಇದೆ ಎಂದು ಆರೋಪಿಸಿರುವ ಬಿಜೆಪಿ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ.

ದೂರು ದಾಖಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣಗೌಡ ಅವರು, ಇಂತಹ ಕೃತ್ಯ ಯಾರಿಗೂ ಶೋಭೆ ತರದು. ಬಿಜೆಪಿ ಸೋಲಿಸಲು ಸಾಧ್ಯವಾಗದ ಕಾರಣ ಕಾಂಗ್ರೆಸ್ ಇಂತಹ ಕುತಂತ್ರ ಮಾಡುತ್ತಿದೆ ಎಂದು ಹೇಳಿದರು.

ಒಗ್ಗಟ್ಟು: ಸುರ್ಜೇವಾಲಾ ಕಸರತ್ತು

ನವದೆಹಲಿ: ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಯಾರು ಮುಖ್ಯಮಂತ್ರಿ ಎಂಬ ವಿಷಯ ಮಂಗಳವಾರ ಬೆಳಿಗ್ಗೆ ಮಾಧ್ಯಮಗಳಲ್ಲಿ ದೊಡ್ಡ ಮಟ್ಟದ ಸದ್ದು ಮಾಡಿತು. ಇದನ್ನು ಸರಿದೂಗಿಸಲು ಮುಂದಾದ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ಅಕ್ಕಪಕ್ಕದಲ್ಲಿ ನಿಲ್ಲಿಸಿಕೊಂಡು ಹೇಳಿಕೆ ಕೊಡಿಸಿದರು.

ಖಾಸಗಿ ಟಿ.ವಿಯೊಂದಕ್ಕೆ ಸಿದ್ದರಾಮಯ್ಯ ನೀಡಿದ ಸಂದರ್ಶನವೊಂದು ಈ ಗೊಂದಲಕ್ಕೆ ಕಾರಣವಾಗಿತ್ತು. ಬೆಳಿಗ್ಗೆಯೇ ಇದಕ್ಕೆ ಪ್ರತಿಕ್ರಿಯಿಸಿದ್ದ ಸಿದ್ದರಾಮಯ್ಯ, 'ನಮ್ಮ ಪಕ್ಷದ ಮುಂದಿನ ಮುಖ್ಯಮಂತ್ರಿಯನ್ನು ಶಾಸಕಾಂಗ ಪಕ್ಷ ಹಾಗೂ ಹೈಕಮಾಂಡ್ ಕೂಡಿ ಆಯ್ಕೆ ಮಾಡಲಿದೆ ಎಂಬುದನ್ನು ನೂರು ಸಲ ಹೇಳಿದ್ದೇನೆ. ನನ್ನ ಹೇಳಿಕೆಯನ್ನು ಎನ್‌ಡಿಟಿವಿಯವರು ತಪ್ಪಾಗಿ ವ್ಯಾಖ್ಯಾನ ಮಾಡಿದ್ದಾರೆ. ಅವರು ಕೂಡಲೇ ತಿದ್ದುಪಡಿ ಪ್ರಕಟಿಸಬೇಕು' ಎಂದು ಆಗ್ರಹಿಸಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, 'ಸಿದ್ದರಾಮಯ್ಯ ಹೃದಯ ಏನೆಂಬುದು ನನಗೆ ಗೊತ್ತಿದೆ. ನನ್ನ ಹೃದಯ ಏನೆಂಬುದು ಸಹ ನನಗೆ ಗೊತ್ತಿದೆ. ನನಗೆ ಯಾರ ಬಗ್ಗೆಯೂ ಅಸಮಾಧಾನ ಇಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ತರುವುದೇ ನಮ್ಮೆಲ್ಲರ ಗುರಿ' ಎಂದರು.

ಹೀಗೆ ಹೇಳಿಕೆ ಕೊಡಿಸಿದ ಸುರ್ಜೇವಾಲಾ, ಇಬ್ಬರ ನಾಯಕರ ಜತೆಗೆ ಜಿ.ಪರಮೇಶ್ವರ, ಬಿ.ಕೆ. ಹರಿಪ್ರಸಾದ್, ಎಂ.ಬಿ.ಪಾಟೀಲ ಸೇರಿಸಿಕೊಂಡು ಊಟಕ್ಕೆ ತೆರಳಿದರು.

ಕೆಆರ್‌ಪಿಪಿಗೆ ಆರ್‌.ಡಿ. ಪಾಟೀಲ ಸೇರ್ಪಡೆ

ಅಫಜಲಪುರ (ಕಲಬುರಗಿ ಜಿಲ್ಲೆ): 'ಪಿಎಸ್ಐ ಅಕ್ರಮ ನೇಮಕಾತಿ ಹಗರಣದಲ್ಲಿ ಸದ್ಯ ಜೈಲಲ್ಲಿರುವ ಪ್ರಮುಖ ಆರೋಪಿ ಆರ್.ಡಿ. ಪಾಟೀಲ, ಜನಾರ್ದನರೆಡ್ಡಿ ನೇತೃತ್ವದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಸೇರ್ಪಡೆಯಾಗಿ ಅಫಜಲಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವರು' ಎಂದು ಅವರ ಸಹೋದರ, ಕಾಂಗ್ರೆಸ್ ಮುಖಂಡರಾಗಿದ್ದ ಮಹಾಂತೇಶ ಪಾಟೀಲ ತಿಳಿಸಿದರು.

'ಏ.10ರಂದು ಇಲ್ಲಿನ ನ್ಯಾಷನಲ್ ಫಂಕ್ಷನ್ ಹಾಲ್‌ನಲ್ಲಿ ನಡೆಯುವ ಕೆಆರ್‌ಪಿಪಿ ಸಮಾವೇಶದಲ್ಲಿ ಸೇರ್ಪಡೆಯಾಗುವೆವು' ಎಂದರು.

ಕಾಂಗ್ರೆಸ್: ಎರಡನೇ ಪಟ್ಟಿಗೆ ಇಲ್ಲ ಒಮ್ಮತ

ಒಂದನೇ ಪುಟದಿಂದ...

ಸಂಸದ ಮೋಹನ್ ಪ್ರಕಾಶ್ ನೇತೃತ್ವದಲ್ಲಿ ಪರಿಶೀಲನಾ ಸಮಿತಿ ಸಂಜೆ ನಾಲ್ಕೂವರೆಯಿಂದ ರಾತ್ರಿ 9 ಗಂಟೆಯವರೆಗೆ ಸಭೆ ನಡೆಸಿ ಸಮಾಲೋಚನೆ ನಡೆಸಿತು. ತಲಾ ಇಬ್ಬರು ಆಕಾಂಕ್ಷಿಗಳು ಹಾಗೂ 3–4 ಆಕಾಂಕ್ಷಿಗಳು ಇರುವ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಪಕ್ಷಕ್ಕೆ ಸವಾಲಾಗಿದೆ. ಬುಧವಾರ ಬೆಳಿಗ್ಗೆ ಸಮಿತಿ ಮತ್ತೊಮ್ಮೆ ಸಭೆ ನಡೆಸಿ ಚರ್ಚೆ ನಡೆಸಲಿದೆ.

'ಸುಮಾರು 40 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಕುರಿತು ಕೇಂದ್ರ ಚುನಾವಣಾ ಸಮಿತಿಯ ಸದಸ್ಯರು ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದಾರೆ. ಉಳಿದ ಕ್ಷೇತ್ರಗಳ ಕುರಿತು ಇನ್ನಷ್ಟು ಚರ್ಚೆ ನಡೆಸಬೇಕಿದೆ. ಬುಧವಾರ ಸಂಜೆ 4.30ಕ್ಕೆ ಕೇಂದ್ರ ಚುನಾವಣಾ ಸಮಿತಿ ಸಭೆ ನಡೆಯಲಿದ್ದು, 99 ಕ್ಷೇತ್ರಗಳಿಗೂ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಾಗುತ್ತದೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದರು.

'ಬಿಜೆಪಿ ಮೊದಲ ಪಟ್ಟಿಯನ್ನು ಇನ್ನೂ ಪ್ರಕಟಿಸಿಲ್ಲ. ಕಾಂಗ್ರೆಸ್ ಈಗಲೇ ಎರಡನೇ ಪಟ್ಟಿಯನ್ನು ಪ್ರಕಟಿಸಿದರೆ ಬಿಜೆಪಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಕಳೆದ ಚುನಾವಣೆಯಲ್ಲಿ ಮೂರನೇ ಸ್ಥಾನ ಪಡೆದ 80ರಿಂದ 90 ಕ್ಷೇತ್ರಗಳಲ್ಲಿ ಬಿಜೆಪಿಯಲ್ಲಿ ಸಮರ್ಥ ಅಭ್ಯರ್ಥಿಗಳೇ ಇಲ್ಲ. ನಮ್ಮಲ್ಲಿ ಟಿಕೆಟ್ ಸಿಗದವರಿಗೆ ಬಿಜೆಪಿ ಗಾಳ ಹಾಕುತ್ತದೆ. ಬಂಡಾಯಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಬಿಜೆಪಿ ಮೊದಲ ಪಟ್ಟಿ ಪ್ರಕಟವಾದ ಬಳಿಕವೇ ನಮ್ಮ ಎರಡನೇ ಪಟ್ಟಿ ಪ್ರಕಟಿಸುವುದು ಲೇಸು ಎಂಬ ಚರ್ಚೆಯೂ ನಡೆದಿದೆ' ಎಂದು ಅವರು ಹೇಳಿದರು.

ಬಿಜೆಪಿ: 100ಕ್ಕೂ ಹೆಚ್ಚು ಕ್ಷೇತ್ರಗಳ ಪಟ್ಟಿ ಸಿದ್ಧ

ಒಂದನೇ ಪುಟದಿಂದ...

ಪಕ್ಷ ನಡೆಸಿರುವ ಕ್ಷೇತ್ರವಾರು ಸಮೀಕ್ಷೆ, ಜಿಲ್ಲಾ ಮಟ್ಟದಲ್ಲಿ ನಡೆದ ಅಭಿಪ್ರಾಯ ಸಂಗ್ರಹವನ್ನು ಗಮನದಲ್ಲಿಟ್ಟುಕೊಂಡು ಗೆಲ್ಲಬಲ್ಲ ಮಾನದಂಡವನ್ನು ಆಧರಿಸಿ ಪಟ್ಟಿಯನ್ನು ರೂಪಿಸಲಾಗಿದೆ. ಈ ಪ್ರಕ್ರಿಯೆಯನ್ನು ಅತ್ಯಂತ ಕಟ್ಟುನಿಟ್ಟಾಗಿ ನಡೆಸಲಾಗುತ್ತಿದೆ. ಹಿಮಾಚಲ ಪ್ರದೇಶದಲ್ಲಿ ಆದ ಹಿನ್ನಡೆಯನ್ನು ಗಮನದಲ್ಲಿಟ್ಟುಕೊಂಡು, ಹೆಚ್ಚು ಬಂಡಾಯಕ್ಕೆ ಕಾರಣವಾಗದಂತೆ ಎಚ್ಚರವಹಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಗೆಲ್ಲುವ ಅಭ್ಯರ್ಥಿಗಳ ಕೊರತೆ ಕೆಲವು ಕ್ಷೇತ್ರಗಳಲ್ಲಿ ಇರುವುದರಿಂದ ಪ್ರಬಲ ಅಭ್ಯರ್ಥಿಗಳಿಗಾಗಿ ಹುಡುಕಾಟ ನಡೆದಿದೆ. ವಯಸ್ಸಿನ ಕಾರಣ ಮತ್ತು ಸಕ್ರಿಯರಲ್ಲದವರನ್ನು ಕೈಬಿಡಬೇಕು ಎಂದು ಲೆಕ್ಕಾಚಾರ ಹಾಕಿದ್ದ ಕ್ಷೇತ್ರಗಳಲ್ಲೂ, ಗೆಲ್ಲಬಹುದಾದ ಕಾರಣಕ್ಕಾಗಿ ಹಾಲಿ ಶಾಸಕರನ್ನೇ ಉಳಿಸಿಕೊಳ್ಳುವ ಸಾಧ್ಯತೆ ಇದೆ. ಆ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ತಡವಾಗಿ ಬಿಡುಗಡೆ ಮಾಡಬಹುದು ಎಂದು ಹೇಳಲಾಗಿದೆ.

ಬಿಜೆಪಿ, ಕಾಂಗ್ರೆಸ್ ಮುಖಂಡರ ಭೇಟಿ

ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳಾಗಿರುವ ಕೆಲವರು ಕೊನೆ ಕ್ಷಣದಲ್ಲಿ ಜೆಡಿಎಸ್ ಅಭ್ಯರ್ಥಿಗಳಾಗಲು ಕಸರತ್ತು ಆರಂಭಿಸಿದ್ದಾರೆ. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಮಂಗಳವಾರ ಕೆಲವರು ಭೇಟಿ ಮಾಡಿ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ ಅಂತಿಮ ಹಂತ ತಲುಪಿದೆ. ಅಲ್ಲಿ ಟಿಕೆಟ್ ದೊರೆಯದು ಎಂಬುದು ಖಚಿತವಾಗಿರುವ ಕೆಲವರು ಜೆಡಿಎಸ್‌ನಿಂದ ಕಣಕ್ಕಿಳಿಯುವ ಕುರಿತು ಯೋಚಿಸುತ್ತಿದ್ದಾರೆ. ಆದರೆ, ಪಕ್ಷ ಸೇರ್ಪಡೆ ಕುರಿತು ಇನ್ನೂ ಖಚಿತಪಡಿಸಿಲ್ಲ ಎಂದೂ ಮೂಲಗಳು ಹೇಳಿವೆ.

'ಗುರುವಾರದೊಳಗೆ 2ನೇ ಪಟ್ಟಿ'

ಒಂದನೇ ಪುಟದಿಂದ...

ಕಾಂಗ್ರೆಸ್ ಪಟ್ಟಿ ಪ್ರಕಟಣೆಗೆ ಜೆಡಿಎಸ್ ಕಾಯುತ್ತಿದೆಯೇ ಎಂಬ ಪ್ರಶ್ನೆಗೆ ಅವರು, 'ನಾವು ನಮ್ಮದೇ ರೀತಿ ಕೆಲಸ ಮಾಡುತ್ತಿದ್ದೇವೆ. ಕಾಂಗ್ರೆಸ್ ಪಕ್ಷದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ' ಎಂದರು.

'ರಾಜೀನಾಮೆ ಕೊಡಬೇಕಾದೀತು': ಜೆಡಿಎಸ್ ಕುರಿತು ಸಚಿವ ಡಾ.ಕೆ.ಸುಧಾಕರ್ ಟೀಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅವರ ಅನಾಚಾರ ಜನರಿಗೆ ಗೊತ್ತಿದೆ. ರಾಜೀನಾಮೆ ಕೊಡುವ ಪರಿಸ್ಥಿತಿ ಎದುರಾದೀತು. ಮತ್ತೆ ಶಾಸಕ ಆಗೋದು ಕಷ್ಟವಾಗುತ್ತದೆ. ಈಗ ಜನರಿಗೆ ಸ್ಟವ್, ಫ್ರಿಡ್ಜ್ ಎಲ್ಲ ಹಂಚುತ್ತಿದ್ದಾರೆ. ದೊಡ್ಡ ಶ್ರೀಮಂತರು ಎಂದು ಜನರು ಮನೆಯಲ್ಲಿ ಕೂರಿಸಿದರೆ ಕಷ್ಟ' ಎಂದರು.

'ಅನಿತಾ ಪಕ್ಷ ಉಳಿಸಲು ಬಂದವರು'

'ನನ್ನ ಹೆಂಡತಿ ಅನಿತಾ ಸಂಕಷ್ಟದ ಕಾಲದಲ್ಲಿ ಪಕ್ಷ ಉಳಿಸಲು ರಾಜಕೀಯಕ್ಕೆ ಬಂದವರು. ಪಕ್ಷ ಬೇಡ ಎಂದಾಗ ಸ್ಪರ್ಧೆಯಿಂದ ದೂರ ಉಳಿದಿದ್ದಾರೆ' ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಹಾಸನದವರ ಬಗ್ಗೆ ನಾನು ಮಾತನಾಡುವುದಿಲ್ಲ. ಹಾಸನದ ರಾಜಕೀಯ ಬೇರೆ, ಅನಿತಾ ಬೇರೆ' ಎಂದರು.

ಬೇಲೂರಿನ ಚನ್ನಕೇಶವ ಸ್ವಾಮಿ ಬ್ರಹ್ಮರಥೋತ್ಸವ ಮಂಗಳವಾರ ಸಹಸ್ರಾರು ಭಕ್ತರ ಜೈಘೋಷಗಳ ಮಧ್ಯೆ ವಿಜೃಂಭಣೆಯಿಂದ ಜರುಗಿತು.
– ಪ್ರಜಾವಾಣಿ ಚಿತ್ರ/ಮಲ್ಲೇಶ್

ಕುರಾನ್ ಪಠಣವಿಲ್ಲದೇ ರಥೋತ್ಸವ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ): ಪಟ್ಟಣದಲ್ಲಿ ಮಂಗಳವಾರ ನಡೆದ ಚನ್ನಕೇಶವ ಸ್ವಾಮಿ ರಥೋತ್ಸವದ ಸಂದರ್ಭದಲ್ಲಿ ಸಂಪ್ರದಾಯದಂತೆ ದೊಡ್ಡಮೇದೂರಿನ ಖಾಜಿ ಸೈಯದ್ ಸಜ್ಜಾದ್ ಬಾಷಾ ಕುರಾನ್ ಪಠಣ ಮಾಡಲಿಲ್ಲ. ಆದರೆ, ಉರ್ದುವಿನಲ್ಲಿ ದೇವರಿಗೆ ಪ್ರಾರ್ಥನೆಯನ್ನಷ್ಟೇ ಸಲ್ಲಿಸಿದರು.

'ದೇಗುಲದ ಮೆಟ್ಟಿಲುಗಳ ಬಳಿ ಅವರು ವಂದನೆ ಸಲ್ಲಿಸಿದಾಗ, ಅದನ್ನು ವಿರೋಧಿಸಿ, ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಕೆಲ ಕಾಲ ಜೈಶ್ರೀರಾಮ ಘೋಷಣೆ ಕೂಗಿದ ಘಟನೆಯೂ ನಡೆಯಿತು.

ಈ ಸಂಬಂಧ ಅವರು ದೇವಸ್ಥಾನ ವ್ಯವಸ್ಥಾಪನಾ ಸಮಿತಿಗೆ ಪತ್ರ ಬರೆದಿದ್ದು, 'ಈ ದಿನ ನಾನು ದೇವಸ್ಥಾನದ ಮೆಟ್ಟಿಲುಗಳ ಬಳಿ ನಮ್ಮ ರೀತಿಯಂತೆ ದೇವರಿಗೆ ಶ್ಲೋಕ ಹೇಳಿ, ವಂದನೆ ಸಮರ್ಪಿಸಿದ್ದು, ದೇವಾಲಯದ ವತಿಯಿಂದ ನೀಡಿರುವ ಮರ್ಯಾದೆಯನ್ನು ಸ್ವೀಕರಿಸಿದ್ದೇನೆ. ಈ ದಿನ ಕುರಾನ್ ಪಠಣ ಮಾಡಿರುವುದಿಲ್ಲ' ಎಂದು ತಿಳಿಸಿದ್ದಾರೆ. ಅವರು ಪತ್ರ ಬರೆದಿರುವುದನ್ನು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ವಿದ್ಯುಲ್ಲತಾ ಖಚಿತಪಡಿಸಿದ್ದಾರೆ.

'ಖಾಜಿಯವರು ಈ ಬಾರಿ ಕುರಾನ್ ಪಠಿಸಿಲ್ಲ. ದೇವರಿಗೆ ವಂದನೆ ಸಲ್ಲಿಸಿದ್ದು, ಅವರಿಗೆ ಗೌರವ ಸಮರ್ಪಿಸಲಾಗಿದೆ' ಎಂದು ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಾರಾಯಣ ಸ್ವಾಮಿ ತಿಳಿಸಿದ್ದಾರೆ.

ಉತ್ಸವದಲ್ಲಿ ಕುರಾನ್ ಪಠಣ ಮಾಡಬಾರದು ಎಂದು ವಿಶ್ವ ಹಿಂದೂ ಪರಿಷತ್ ಕೆಲವು ದಿನಗಳ ಹಿಂದೆ ಆಗ್ರಹಿಸಿತ್ತು.

'ರಾಜಕಾರಣಿ ಹಂಚಿದ್ದ ಕುಕ್ಕರ್ ಸಿಡಿದು ಹಾರಿಬಿದ್ದ ಮುಚ್ಚಳ'

ಚಿಕ್ಕಮಗಳೂರು: 'ಕೊಪ್ಪ ತಾಲ್ಲೂಕಿನ ಅಗಲಿ ಗ್ರಾಮದಲ್ಲಿ ಆಟೊ ರಿಕ್ಷಾ ಚಾಲಕ ದೇವರಾಜ್ ಅವರ ಮನೆಯಲ್ಲಿ ಕುಕ್ಕರ್ ಸಿಡಿದು ಮುಚ್ಚಳ ಹಾರಿದೆ. ರಾಜಕೀಯ ಪಕ್ಷವೊಂದರ ಕಾರ್ಯಕರ್ತರು ಈಚೆಗೆ ಗ್ರಾಮದಲ್ಲಿ ಕುಕ್ಕರ್ ಹಂಚಿದ್ದರು' ಗ್ರಾಮಸ್ಥರೊಬ್ಬರು ತಿಳಿಸಿದ್ದಾರೆ.

'ಆಹಾರ ಬೇಯಿಸಲು ಸ್ಟೌ ಮೇಲೆ ಇಟ್ಟಿದ್ದ ಕುಕ್ಕರ್ ಸಿಡಿದು, ಮುಚ್ಚಳ ಹಾರಿತು. ಜೋರಾಗಿ ಶಬ್ದವಾಯಿತು. ಯಾರಿಗೂ ಯಾವುದೇ ಅಪಾಯವಾಗಿಲ್ಲ' ಎಂದು ಕುಟುಂಬದವರು 'ಪ್ರಜಾವಾಣಿ'ಗೆ ತಿಳಿಸಿದರು.

ಕೊಲೆಯಾದ ಇದ್ರೀಷ್ ಪಾಷ ಪತ್ನಿ ಫಾತಿಮಾ ಭಾನು ಕಣ್ಣೀರು

'ನನ್ನ ಮಕ್ಕಳಿಗೆ ಇನ್ನು ಯಾರು ಗತಿ?'

● ಎಂ.ಎನ್.ಯೋಗೇಶ್

ಮಂಡ್ಯ: 'ಮೃತದೇಹ ಮನೆಗೆ ಬರುವವರೆಗೂ ಗಂಡ ಕೊಲೆಯಾಗಿರುವ ವಿಷಯವನ್ನು ಯಾರೂ ತಿಳಿಸಿರಲಿಲ್ಲ. ಗಾಯದ ಗುರುತು ನೋಡಿ ಕೊಲೆಯಾಗಿರುವ ವಿಷಯ ತಿಳಿಯಿತು. ಸ್ನಾನ ಮಾಡಿಸುವಾಗ ಚರ್ಮ ಕಿತ್ತು ಬರುತ್ತಿತ್ತು. ಗಂಡನನ್ನು ಚಿತ್ರಹಿಂಸೆ ಮಾಡಿ ಕೊಂದಿದ್ದಾರೆ. ವಿದ್ಯುತ್ ಶಾಕ್ ಕೊಟ್ಟಿದ್ದಾರೆ, ಚುಚ್ಚಿಚುಚ್ಚಿ ಕೊಂದಿದ್ದಾರೆ. ಅನಾಥವಾದ ನನ್ನ ಸಣ್ಣ ಮಕ್ಕಳಿಗೆ ಇನ್ನು ಯಾರು ಗತಿ'

- ರಾಮನಗರ ಜಿಲ್ಲೆ, ಸಾತನೂರು ಬಳಿ ಕೊಲೆಯಾದ ಇದ್ರೀಷ್ ಪಾಷ ಅವರ ಪತ್ನಿ ಫಾತಿಮಾ ಭಾನು ಹೀಗೆ ಪ್ರಶ್ನಿಸುತ್ತಾ ಕಣ್ಣೀರಿಟ್ಟರು.

ನಗರದ ಗುತ್ತಲು ಬಡಾವಣೆಯ ಸಫ್ದಾರಿಯಾಬಾದ್‌ನಲ್ಲಿರುವ ಇದ್ರೀಷ್ ಪಾಷ ಕುಟುಂಬದ ಸದಸ್ಯರು ದುಃಖದ ಮಡುವಿನಲ್ಲಿದ್ದಾರೆ. ಸಂಬಂಧಿಕರು, ವಿವಿಧ ಸಂಘಟನೆಗಳ ಮುಖಂಡರು ಬಂದು ಸಂತೈಸುತ್ತಿದ್ದಾರೆ.

ಇದ್ರೀಷ್ ಪಾಷ ಅವರಿಗೆ ಇಬ್ಬರು ಪತ್ನಿಯರು, ಇಬ್ಬರಿಗೂ ತಲಾ ಇಬ್ಬರು ಮಕ್ಕಳಿದ್ದಾರೆ. ಎರಡನೇ ಪತ್ನಿ ಫಾತಿಮಾ ಭಾನು ಅವರಿಗೆ 2 ವರ್ಷದ ಹೆಣ್ಣು ಮಗು, 3 ತಿಂಗಳ ಗಂಡು ಮಗುವಿದೆ. 'ಮಕ್ಕಳಿಗಾಗಿ ಹಗಲಿರುಳೆನ್ನದೇ ಕೂಲಿ ಮಾಡುತ್ತಿದ್ದ ಗಂಡನನ್ನು ಹೊಡೆದು ಕೊಂದಿದ್ದಾರೆ. 3 ತಿಂಗಳ ಮಗು ಅಪ್ಪನ ಮುಖವನ್ನೇ ಸರಿಯಾಗಿ ನೋಡಿರಲಿಲ್ಲ. ಗಂಡನ ಸಾವಿಗೆ ನ್ಯಾಯ ಕೊಡಿಸಿ' ಎಂದು ಕೇಳಿದರು.

ಇದ್ರೀಷ್ ಪಾಷ ಚಾಲಕನಾಗಿದ್ದು, ಕೆ.ಆರ್.ಪೇಟೆ ತಾಲ್ಲೂಕಿನ ತೆಂಡೇಕೆರೆ ಸಂತೆಯಲ್ಲಿ ರೈತರಿಂದ ಖರೀದಿಸಿದ್ದ ಜಾನುವಾರುಗಳನ್ನು ರಾಮನಗರ ಬಳಿಯ ಇನ್ನೊಂದು ಸಂತೆಯಲ್ಲಿ ಮಾರಾಟ ಮಾಡಲು ಸಾಗಿಸುತ್ತಿದ್ದರು. 'ಸಂತೆಯಲ್ಲಿ ಸುಂಕ ಕಟ್ಟಿದ್ದ ರಸೀದಿ, ಸಾಗಣೆಗೆ ಬೇಕಾದ ದಾಖಲಾತಿಗಳಿದ್ದವು. ಚಾಲಕನನ್ನೇ ಅಕ್ರಮ ಜಾನುವಾರು ಸಾಗಣೆದಾರ ಎಂದು ತಿಳಿದು ಕೊಲ್ಲಲಾಗಿದೆ' ಎಂದು ಕುಟುಂಬದ ಸದಸ್ಯರು ಆರೋಪಿಸಿ, ರಸೀದಿಗಳನ್ನು ತೋರಿಸಿದರು.

'ಸಾತನೂರು ಪೊಲೀಸ್ ಠಾಣೆಯ ಮುಂದೆಯೇ ವಾಹನ ತಡೆಯಲಾಗಿದೆ. ಪ್ರಮುಖ ಆರೋಪಿಯಾಗಿರುವ ಪುನೀತ್ ಕೆರೆಹಳ್ಳಿ ಈ ಕುರಿತು ವಿಡಿಯೊ ಹಾಕಿದ್ದಾನೆ. ಅಕ್ರಮವಾಗಿ ಜಾನುವಾರು ಸಾಗಿಸುತ್ತಿದ್ದರೆ ಪೊಲೀಸರಿಗೆ ಹಿಡಿದು ಕೊಡದೆ ಅಮಾಯಕ ಚಾಲಕನನ್ನು ಏಕೆ ಕೊಂದರು? ಈಗ ಎರಡು ಕುಟುಂಬಗಳಿಗೆ ಗತಿ ಯಾರು' ಎಂದು ಇದ್ರೀಷ್ ಸಹೋದರ ಯೂನುಸ್ ಪಾಷ ಪ್ರಶ್ನಿಸಿದರು.

ಆಕ್ರೋಶ: 'ಕೊಲೆಯಾಗಿ ನಾಲ್ಕು ದಿನಗಳಾಗಿದ್ದು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದ್ದರೂ ರಾಮನಗರ, ಮಂಡ್ಯ ಪೊಲೀಸರು ಇದ್ರೀಷ್ ಮನೆಗೆ ಭೇಟಿ ನೀಡಿಲ್ಲ' ಎಂದು ಅವರ ಕುಟಂಬದ ಸದಸ್ಯರು ಆಕ್ರೋಶ ವ್ಯಕ್ತಪಡಿಸುತ್ತಾರೆ.

'ಕೊಲೆಯಾದವರು ಹಿಂದೂವಾಗಿದ್ದಿದ್ದರೆ ಮುಖ್ಯಮಂತ್ರಿಯೇ ಬರುತ್ತಿದ್ದರು. ರಾಜಕಾರಣಿಗಳು, ಅಧಿಕಾರಿಗಳ ದಂಡೇ ಬರುತ್ತಿತ್ತು. ಆದರೆ ನಮ್ಮ ಮನೆಗೆ ಯಾರೂ ಬಂದಿಲ್ಲ, ಮುಸ್ಲಿಮರ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ' ಎಂದು ಸಂಬಂಧಿ ತಬ್ರೀಸ್ ಖಾನ್ ಹೇಳಿದರು.

'ಒಕ್ಕಲಿಗರು– ಮುಸ್ಲಿಮರ ಸಂಬಂಧ ಕೆಡಿಸುವ ಯತ್ನ'

'ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರು–ಮುಸ್ಲಿಮರ ನಡುವೆ ಉತ್ತಮ ಬಾಂಧವ್ಯವಿದೆ. ಒಕ್ಕಲಿಗರ ಎತ್ತುಗಳಿಗೆ ಲಾಳ ಕಟ್ಟುವ, ಹೊಂಗೆ, ಹುಣಸೆ ಬೀಜ ಖರೀದಿಸುವ, ಹಬ್ಬಕ್ಕೆ ಆಡು, ಕುರಿ ಕೊಯ್ದಾಗ ಚರ್ಮ ಖರೀದಿಸುವವರು ಮುಸ್ಲಿಮರು. ಹೊರಗಿನಿಂದ ಬಂದ ಕೆಲ ಕಿಡಿಗೇಡಿಗಳು ಬಾಂಧವ್ಯ ಕೆಡಿಸಲು ಯತ್ನಿಸುತ್ತಿದ್ದಾರೆ. ಇದರ ಹಿಂದೆ ರಾಜಕಾರಣದ ಲೆಕ್ಕಾಚಾರವಿದೆ' ಎಂದು ವಕೀಲ ಬಿ.ಟಿ.ವಿಶ್ವನಾಥ್ ದೂರಿದರು.

'ಎಫ್‌ಐಆರ್ ದಾಖಲಾದರೂ ಪ್ರಮುಖ ಆರೋಪಿಯನ್ನು ಬಂಧಿಸಿಲ್ಲ. ಆತ ರಾಜಾರೋಷವಾಗಿ ವಿಡಿಯೊ ಮಾಡಿ ಜಾಲತಾಣಗಳಲ್ಲಿ ಹಾಕುವುದು ನಮ್ಮ ಪೊಲೀಸ್ ವ್ಯವಸ್ಥೆಯನ್ನು ವ್ಯಂಗ್ಯ ಮಾಡಿದಂತಿದೆ' ಎಂದರು.

ಥಳಿತ ಪ್ರಕರಣ ತನಿಖೆಗೆ ರಾಜಕೀಯ ಒತ್ತಡ ಇಲ್ಲ: ಎಸ್‌.ಪಿ ಸ್ಪಷ್ಟನೆ

ಆರೋಪಿಗಳ ಸೆರೆಗೆ 4 ತಂಡ ರಚನೆ

ಪ್ರಜಾವಾಣಿ ವಾರ್ತೆ

ರಾಮನಗರ: ಕನಕಪುರ ತಾಲ್ಲೂಕಿನ ಸಾತನೂರಿನಲ್ಲಿ ಇದ್ರೀಷ್ ಪಾಷ ಸಾವಿಗೀಡಾಗಿ ನಾಲ್ಕು ದಿನಗಳು ಕಳೆದರೂ ಪ್ರಕರಣದ ಪ್ರಮುಖ ಆರೋಪಿ ಪುನೀತ್ ಕೆರೆಹಳ್ಳಿ ಹಾಗೂ ಆತನ ಸಹಚರರು ಇನ್ನೂ ಪೊಲೀಸರಿಗೆ ಸಿಕ್ಕಿಲ್ಲ.

ಇದ್ರೀಷ್

ಕಳೆದ ಶುಕ್ರವಾರ ಮಧ್ಯರಾತ್ರಿ ಸಾತನೂರು ಪೊಲೀಸ್ ಠಾಣೆ ಮುಂಭಾಗ ಜಾನುವಾರುಗಳನ್ನು ತುಂಬಿದ್ದ ಕ್ಯಾಂಟರ್ ವಾಹನವನ್ನು ಅಡ್ಡಗಟ್ಟಿದ್ದ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಮುಖಂಡ ಪುನೀತ್ ಕೆರೆಹಳ್ಳಿ, ಇತರೆ ನಾಲ್ವರು ಆರೋಪಿಗಳೊಂದಿಗೆ ತಲೆಮರೆಸಿಕೊಂಡಿದ್ದಾರೆ. ಸೋಮವಾರ ರಾತ್ರಿ ವಿಡಿಯೊವೊಂದನ್ನು ಹರಿಬಿಟ್ಟಿದ್ದ ಪುನೀತ್, 'ನಾನೇ ವಿಚಾರಣೆಗೆ ಹಾಜರಾಗುತ್ತೇನೆ' ಎಂದು ಹೇಳಿಕೊಂಡಿದ್ದರು. ಆದರೆ, ಈವರೆಗೂ ಆರೋಪಿ ನಾಪತ್ತೆ ಆಗಿದ್ದು, ಹೊರರಾಜ್ಯಕ್ಕೆ ತೆರಳಿರುವ ಸಾಧ್ಯತೆ ಇದೆ. ಪೊಲೀಸ್ ತಂಡಗಳು ಸಹ ಅತ್ತ ಮುಖ ಮಾಡಿವೆ.

ಜಾಲತಾಣದಲ್ಲಿ ಹರಿದಾಡಿದ ಫೋಟೊ–ವಿಡಿಯೊ

'ಇದ್ರೀಷ್ ಪಾಷ ಅವರನ್ನು ಗುಂಪೊಂದು ಗಂಭೀರ ಸ್ವರೂಪದ ಹಲ್ಲೆ ನಡೆಸಿ ಹತ್ಯೆ ಮಾಡಿದೆ' ಎಂದು ಆರೋಪಿಸಿ ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕುತ್ತಿದ್ದು, ನ್ಯಾಯಸಮ್ಮತ ತನಿಖೆಗೆ ಒತ್ತಾಯಿಸಿದ್ದಾರೆ.

ಪಾಷ ಅವರ ಮೈ ಮೇಲೆ ಗಾಯದ ಕಲೆಗಳು ಇರುವ, ಮುಖ ಹಾಗೂ ಕಣ್ಣುಗಳು ಊದಿಕೊಂಡಿರುವ ಸ್ಥಿತಿಯಲ್ಲಿರುವ ಫೋಟೊ, ವಿಡಿಯೊಗಳನ್ನು ಹರಿಬಿಡಲಾಗಿದೆ.

ಮೂರು ಎಫ್‌ಐಆರ್

ಪ್ರಕರಣ ಸಂಬಂಧ ಸಾತನೂರು ಠಾಣೆಯಲ್ಲಿ ಮೂರು ಎಫ್‌ಐಆರ್‌ಗಳು ದಾಖಲಾಗಿವೆ.

'ಮೊದಲಿಗೆ ಅಕ್ರಮ ಗೋವು ಸಾಗಣೆಗೆ ಸಂಬಂಧಿಸಿದಂತೆ ಪುನೀತ್ ಕೆರೆಹಳ್ಳಿ ದೂರು ನೀಡಿದ್ದರು. ಗೋವುಗಳ ರಕ್ಷಣೆ ನೆಪದಲ್ಲಿ ನಮ್ಮ ಮೇಲೆ ದಾಳಿ ಮಾಡಿದ್ದಾರೆ ಎಂದು ಕ್ಯಾಂಟರ್ ಚಾಲಕ ಪ್ರತಿದೂರು ನೀಡಿದ್ದರು. ಮರುದಿನ ಬೆಳಿಗ್ಗೆ 8 ಗಂಟೆ ಸುಮಾರಿಗೆ ಘಟನೆ ನಡೆದ ಸ್ಥಳದ 100 ಮೀಟರ್ ದೂರದಲ್ಲಿ ಇದ್ರೀಷ್ ಅವರ ಶವ ಪತ್ತೆ ಆಗಿದೆ. ಅವರ ಸಹೋದರ ಯೂನುಸ್ ಪಾಷ ನೀಡಿದ ದೂರಿನ ಅನ್ವಯ ಮತ್ತೊಂದು ಎಫ್‌ಐಆರ್ ದಾಖಲಿಸಿದ್ದೇವೆ' ಎಂದು ಎಸ್‌.ಪಿ ಮಾಹಿತಿ ನೀಡಿದರು.

ಪಾಷ ಅವರ ಸಾವಿನ ನಿಖರ ಕಾರಣಕ್ಕಾಗಿ ಮರಣೋತ್ತರ ಪರೀಕ್ಷೆ ಹಾಗೂ ಎಫ್‌ಎಸ್‌ಎಲ್ ವರದಿಗಳಿಗೆ ಕಾಯುತ್ತಿದ್ದೇವೆ

ಕಾರ್ತೀಕ್ ರೆಡ್ಡಿ, ಎಸ್‌.ಪಿ., ರಾಮನಗರ

ಪ್ರಕರಣದ ಆರೋಪಿಯು ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಹಲವು ಬಿಜೆಪಿ ನಾಯಕರ ಜೊತೆ ಇರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಇದರಿಂದಾಗಿಯೇ ಪೊಲೀಸರು ಆರೋಪಿಗಳ ಬಂಧನಕ್ಕೆ ಹಿಂಜರಿಯುತ್ತಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಆದರೆ, ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತೀಕ್ ರೆಡ್ಡಿ ಈ ಆರೋಪಗಳನ್ನು ತಳ್ಳಿಹಾಕಿದ್ದು, 'ಪ್ರಕರಣ ಸಂಬಂಧ ಯಾವುದೇ ರಾಜಕೀಯ ಒತ್ತಡ ಇಲ್ಲ. ನಿಷ್ಪಕ್ಷಪಾತವಾಗಿ ತನಿಖೆ ನಡೆಸುತ್ತೇವೆ' ಎಂದು ಭರವಸೆ ನೀಡಿದ್ದಾರೆ.

ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತೀಕ್ ರೆಡ್ಡಿ, 'ಸಾವಿಗೆ ನಿಖರ ಕಾರಣ ಏನೆಂಬುದು ಮರಣೋತ್ತರ ಪರೀಕ್ಷೆ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ಬಂದ ಬಳಿಕವಷ್ಟೇ ತಿಳಿಯಲಿದೆ. ಕನಕಪುರದ ವೈದ್ಯರ ತಂಡವು ಇದ್ರೀಷ್ ಅವರ ಮರಣೋತ್ತರ ಪರೀಕ್ಷೆ ನಡೆಸಿದೆ. ಎಫ್‌ಎಸ್‌ಎಲ್ ವರದಿಯನ್ನೂ ಪಡೆಯಲಾಗುತ್ತದೆ. ಸದ್ಯ ತನಿಖೆ ಪ್ರಗತಿಯಲ್ಲಿದೆ' ಎಂದರು.

ದಳಕ್ಕೆ ಮುಳುವಾಗುವುದೇ 'ಕುಟುಂಬ' ಸೂತ್ರ

• ವಿ.ಎಸ್. ಸುಬ್ರಹ್ಮಣ್ಯ

ದೇವೇಗೌಡರ ಕುಟುಂಬ ರಾಜಕಾರಣದ ವಂಶವೃಕ್ಷ



ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿಯ 'ಆಪರೇಷನ್'ನಿಂದ ಪಕ್ಷವನ್ನು ಉಳಿಸಿಕೊಳ್ಳಲು ಜೆಡಿಎಸ್ ಆಯ್ದುಕೊಂಡಿದ್ದ 'ಕುಟುಂಬ ರಾಜಕಾರಣ'ದ ಮಾದರಿಯೇ ಈಗ ಆ ಪಕ್ಷಕ್ಕೆ ಮುಳುವಾಗಲಾರಂಭಿಸಿದೆ. ಹಲವು ವಿಘಟನೆಗಳ ನಂತರವೂ ಕೆಲವು ಜಿಲ್ಲೆಗಳಲ್ಲಿ ಪಕ್ಷದ ಬಲ ಕುಗ್ಗದಂತೆ ತಡೆದಿದ್ದ ಸಹೋದರರೇ ಈಗ ಟಿಕೆಟ್ ಹಂಚಿಕೆಯಲ್ಲಿ ಜಟಾಪಟಿಗೆ ಇಳಿದಿರುವುದು ಈ ಚುನಾವಣೆಯ ಹೊಸ ಬೆಳವಣಿಗೆ.

ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್‌ಗಾಗಿ ಎಚ್.ಡಿ. ರೇವಣ್ಣ ಕುಟುಂಬ ಮತ್ತು ಎಚ್.ಡಿ. ಕುಮಾರಸ್ವಾಮಿ ಮಧ್ಯೆ ನಡೆಯುತ್ತಿರುವ ಹಗ್ಗಜಗ್ಗಾಟ ಇಡೀ ಪಕ್ಷವನ್ನೇ ಸಂಕಷ್ಟದ ಸುಳಿಯಲ್ಲಿ ಕಟ್ಟಿ ಹಾಕುವ ಸೂಚನೆಗಳನ್ನು ನೀಡುತ್ತಿದೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರ ತವರು ಜಿಲ್ಲೆ ಹಾಸನ, ಒಕ್ಕಲಿಗರ ಬಾಹುಳ್ಯವಿರುವ ರಾಮನಗರ, ಮಂಡ್ಯ, ಕೋಲಾರ, ಮೈಸೂರು ಮತ್ತು ತುಮಕೂರು ಜಿಲ್ಲೆಗಳ ಕೆಲವು ಕ್ಷೇತ್ರಗಳಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಗೆಲುವು ಅನಾಯಾಸ ಎಂಬ ಪರಿಸ್ಥಿತಿ ಕೆಲವು ವರ್ಷಗಳ ಹಿಂದೆ ಇತ್ತು. ಆದರೆ, ಹಾಗೆ ಗೆದ್ದವರು ಎದುರಾಳಿ ಪಕ್ಷಗಳ 'ಆಪರೇಷನ್'ಗೆ ಸಿಲುಕಿ ಪಕ್ಷಾಂತರಗೊಳ್ಳುತ್ತಿದ್ದರು. ಪಕ್ಷದ ಶಾಸಕರ ಸಾಲು, ಸಾಲು ವಲಸೆಯಿಂದ ಕಂಗೆಟ್ಟ ಜೆಡಿಎಸ್ ವರಿಷ್ಠರು, ಗೆದ್ದೇ ಗೆಲ್ಲುತ್ತೇವೆ ಎಂಬ ವಿಶ್ವಾಸವಿದ್ದ ಕ್ಷೇತ್ರಗಳಲ್ಲಿ ಮನೆ ಮಂದಿಯನ್ನೇ ಕಣಕ್ಕಿಳಿಸಿ ಶಾಸನಸಭೆಗೆ ಕಳಿಸುವ ಮೂಲಕ ಬಲಾಬಲ ಕಾಯ್ದುಕೊಳ್ಳುವ ಸಂಕಷ್ಟ ಪರಿಹಾರ ಸೂತ್ರವೊಂದನ್ನು ನೆಚ್ಚಿಕೊಂಡಿದ್ದರು.

ಕೆಲವು ದಶಕಗಳವರೆಗೂ ದೇವೇಗೌಡರ ಕುಟುಂಬದ ಬೆರಳೆಣಿಕೆಯ ಸದಸ್ಯರು ಮಾತ್ರ ಸಕ್ರಿಯ ರಾಜಕಾರಣದಲ್ಲಿದ್ದರು. ಹಿರಿಯ ಮಗ ಎಚ್.ಡಿ. ರೇವಣ್ಣ ದೀರ್ಘಕಾಲದಿಂದ ಶಾಸಕರಾಗಿದ್ದು, ಹಾಸನ ಜಿಲ್ಲೆಯ ರಾಜಕಾರಣದ ಮೇಲೆ ಬಲವಾದ ಹಿಡಿತ ಸಾಧಿಸಿದ್ದಾರೆ. ನಂತರ ರಾಜಕೀಯ ಪ್ರವೇಶಿಸಿದ ಎಚ್.ಡಿ. ಕುಮಾರಸ್ವಾಮಿ, ಶಾಸಕ, ಸಂಸದರಾಗುವ ಜತೆಗೆ ಎರಡು ಬಾರಿ ಮುಖ್ಯಮಂತ್ರಿ ಹುದ್ದೆಗೇರಿದರು. ಈಗ ಗೌಡರ ಕುಟುಂಬದಲ್ಲಿ ಇಬ್ಬರು ಸಂಸದರು, ಮೂವರು ಶಾಸಕರು, ವಿಧಾನ ಪರಿಷತ್‌ನ ಒಬ್ಬ ಸದಸ್ಯ ಇದ್ದಾರೆ.

'ಬೇರೆಯವರನ್ನು ಕರೆತಂದು ಟಿಕೆಟ್ ನೀಡಿ, ಗೆಲ್ಲಿಸಬಹುದು. ಆದರೆ, ಗೆದ್ದ ನಂತರ ಅವರ ಪಕ್ಷಾಂತರ ತಡೆಯುವುದು ಕಷ್ಟ. ಹೀಗಾಗಿ ಪಕ್ಷ ಉಳಿಸಿಕೊಳ್ಳುವುದಕ್ಕಾಗಿ ಕುಟುಂಬದವರನ್ನೇ ಕಣಕ್ಕಿಳಿಸಿ, ಗೆಲ್ಲಿಸುತ್ತಿದ್ದೇವೆ' ಎಂದು ದೇವೇಗೌಡರು ಜೆಡಿಎಸ್‌ನ 'ಕುಟುಂಬ ರಾಜಕಾರಣ'ದ ನಡೆಯನ್ನು ಸಮರ್ಥಿಸಿಕೊಂಡಿದ್ದರು. ಅನಿತಾ ಕುಮಾರಸ್ವಾಮಿ, ಪ್ರಜ್ವಲ್ ರೇವಣ್ಣ, ನಿಖಿಲ್ ಕುಮಾರಸ್ವಾಮಿ, ಸೂರಜ್ ರೇವಣ್ಣ ಅವರಿಗೆ ಟಿಕೆಟ್ ನೀಡಿದಾಗಲೆಲ್ಲ ಇದೇ ಸೂತ್ರವನ್ನು ಮುಂದಿಟ್ಟುಕೊಂಡು ಜೆಡಿಎಸ್ ಸಮರ್ಥಿಸಿಕೊಂಡಿತ್ತು. ಕುಟುಂಬದ ಹಿರಿಯ ಸೊಸೆ ಭವಾನಿ ರೇವಣ್ಣ ಅವರು ಚುನಾವಣಾ ಅಖಾಡಕ್ಕೆ ಧುಮುಕಿ, ವಿಧಾನಸಭೆ ಪ್ರವೇಶಿಸಲು ಯತ್ನಿಸುತ್ತಿರುವುದು ಜೆಡಿಎಸ್ ಪಕ್ಷದೊಳಗೆ ಅಲ್ಲೋಲಕಲ್ಲೋಲ ಸೃಷ್ಟಿಸಿದೆ.

2008ರಲ್ಲಿ ನಡೆದ ಮಧುಗಿರಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅನಿತಾ ಕುಮಾರಸ್ವಾಮಿ, ಗೆಲುವು ಸಾಧಿಸಿದ್ದರು. ಆಗಿನಿಂದಲೂ ಭವಾನಿ ರೇವಣ್ಣ ವಿಧಾನಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗಳಲ್ಲಿ ಟಿಕೆಟ್ ಪಡೆಯಲು ಹಲವು ಬಾರಿ ಪ್ರಯತ್ನಿಸಿದ್ದಾರೆ. 2013ರಲ್ಲಿ ಕೆ.ಆರ್. ನಗರ ಕ್ಷೇತ್ರದಿಂದ 2016ರಲ್ಲಿ ವಿಧಾನ ಪರಿಷತ್ ಚುನಾವಣೆ, 2018ರ ವಿಧಾನಸಭಾ ಕ್ಷೇತ್ರದಲ್ಲಿ ಬೇಲೂರು ಅಥವಾ ಕೆ.ಆರ್. ನಗರ ಕ್ಷೇತ್ರದಿಂದ, 2021ರಲ್ಲಿ ವಿಧಾನ ಪರಿಷತ್‌ನ ಹಾಸನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಮೂರು ಬಾರಿಯೂ ಕುಟುಂಬದವರ ಮನವೊಲಿಸಿ ಟಿಕೆಟ್ ಪಡೆಯಲು ವಿಫಲವಾಗಿರುವ ಭವಾನಿ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಷ್ಟೇ ಪಕ್ಷದ ಅಭ್ಯರ್ಥಿಯಾಗಿ ಗೆಲುವು ಸಾಧಿಸಲು ಸಾಧ್ಯವಾಗಿತ್ತು. ಈ ಬಾರಿ ಚುನಾವಣಾ ಕಣಕ್ಕಿಳಿಯುವ ಉಮೇದಿನಿಂದ ಹಿಂದೆ ಸರಿಯುತ್ತಿಲ್ಲ.

ಈಗ ಮತ್ತೆ ಭವಾನಿ ಸ್ಪರ್ಧೆ ಕುಟುಂಬದೊಳಗೆ ಕಗ್ಗಂಟಾಗಿದೆ. ಕುಟುಂಬ ಮತ್ತು ಪಕ್ಷದ ವರಿಷ್ಠ ದೇವೇಗೌಡರೇ ಖುದ್ದಾಗಿ ಅಖಾಡಕ್ಕಿಳಿದರೂ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿಲ್ಲ. ಇದೇ ಮೊದಲ ಬಾರಿಗೆ ರೇವಣ್ಣ ಅವರು ತಮ್ಮ ಕುಮಾರಸ್ವಾಮಿ ವಿರುದ್ಧ ಬಹಿರಂಗವಾಗಿಯೇ ಅಸಹನೆ ಹೊರಹಾಕುವ ಹಂತ ತಲುಪಿದ್ದಾರೆ. ಮಕ್ಕಳಾದ ಪ್ರಜ್ವಲ್ ಮತ್ತು ಸೂರಜ್, ತಾಯಿಗೆ ಹಾಸನ ಕ್ಷೇತ್ರದಲ್ಲಿ ಅವಕಾಶ ನೀಡುವಂತೆ ಪಟ್ಟು ಹಿಡಿದಿದ್ದಾರೆ. ಅಮ್ಮನಿಗೆ ಟಿಕೆಟ್ ನೀಡದೇ ಇದ್ದರೆ, ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡುವ ಬೆದರಿಕೆಯನ್ನೂ ಪ್ರಜ್ವಲ್ ಹಾಕಿದ್ದಾರೆ.

ಮಾಜಿ ಶಾಸಕ ಎಚ್.ಎಸ್. ಪ್ರಕಾಶ್ ಅವರ ಮಗ ಎಚ್.ಪಿ. ಸ್ವರೂಪ್ ಅವರಿಗೆ ಟಿಕೆಟ್ ನೀಡುವ ಕುಮಾರಸ್ವಾಮಿ ಅವರ ಪ್ರಸ್ತಾವವನ್ನು ರೇವಣ್ಣ ಅವರ ಇಡೀ ಕುಟುಂಬ ಒಟ್ಟಾಗಿ ವಿರೋಧಿಸುತ್ತಿದೆ. ಹಾಸನ ಕ್ಷೇತ್ರದ ಟಿಕೆಟ್‌ಗಾಗಿ ಕುಟುಂಬದೊಳಗೆ ಎದ್ದಿರುವ ಭಿನ್ನಮತದಿಂದ ಎರಡನೇ ಪಟ್ಟಿ ಪ್ರಕಟಣೆಗೆ ಮುಂದಡಿ ಇಡಲಾಗದ ಇಕ್ಕಟ್ಟಿಗೆ ಸಿಲುಕಿದೆ.

ಹಿಡಿತ ತಪ್ಪುವ ಭೀತಿ

ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಹುದ್ದೆಗೇರಿದರೂ ಹಾಸನ ಜಿಲ್ಲೆಯ ರಾಜಕಾರಣ ಸಂಪೂರ್ಣವಾಗಿ ಎಚ್.ಡಿ. ರೇವಣ್ಣ ಅವರ ಹಿಡಿತದಲ್ಲೇ ಇದೆ. ಈಗ ಎಚ್.ಪಿ. ಸ್ವರೂಪ್ ಮೂಲಕ ಕುಮಾರಸ್ವಾಮಿ ಹಾಸನ ಜಿಲ್ಲೆಯ ರಾಜಕಾರಣದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಬಹುದು ಎಂಬ ಅನುಮಾನವೇ ರೇವಣ್ಣ ಅವರ ಕುಟುಂಬ ಹಾಸನ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಬಿಗಿ ನಿಲುವು ತಾಳುವುದಕ್ಕೆ ಕಾರಣ ಎಂಬ ಮಾತು ಜೆಡಿಎಸ್‌ನೊಳಗೆ ಚರ್ಚೆಯಲ್ಲಿದೆ.

ಇತ್ತ ಭವಾನಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ಕುಮಾರಸ್ವಾಮಿ ಖಂಡತುಂಡವಾಗಿ ವಿರೋಧಿಸುತ್ತಿರುವುದಕ್ಕೂ ಪಕ್ಷದ ಮೇಲಿನ ಹಿಡಿತದ ವಿಚಾರವೇ ಕಾರಣ ಎನ್ನಲಾಗುತ್ತಿದೆ. ಶಾಸಕಿಯಾಗಿ ಆಯ್ಕೆಯಾದರೆ ನಂತರದ ದಿನಗಳಲ್ಲಿ ಆಕ್ರಮಣಕಾರಿ ನಿಲುವು ತಾಳಿ ಪಕ್ಷದ ಮೇಲೆ ಹಿಡಿತ ಸಾಧಿಸಬಹುದು ಎಂಬ ಅನುಮಾನವೇ ಪ್ರಬಲ ವಿರೋಧದ ಕಾರಣ ಎಂಬ ಚರ್ಚೆಯೂ ಪಕ್ಷದ ಮುಖಂಡರ ಮಧ್ಯೆ ಇದೆ.

ಲೋಕಸಭೆ ಚುನಾವಣೆಯಲ್ಲೂ ಕುಟುಂಬ ವಿವಾದ

2019ರ ಲೋಕಸಭೆ ಚುನಾವಣೆ ವೇಳೆ ಗೌಡರ ಕುಟುಂಬ ಇಂತಹುದೇ ಸಂದಿಗ್ಧತೆಗೆ ಸಿಲುಕಿತ್ತು. ಹಾಸನ ಲೋಕಸಭಾ ಕ್ಷೇತ್ರವನ್ನು ಪ್ರಜ್ವಲ್ ರೇವಣ್ಣಗೆ ಬಿಟ್ಟುಕೊಡಬೇಕು ಎಂದು ರೇವಣ್ಣ ಕುಟುಂಬ ಪಟ್ಟು ಹಿಡಿದಿತ್ತು. ಅದೇ ಹೊತ್ತಿನೊಳಗೆ ಮಂಡ್ಯದಿಂದ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕೆ ಇಳಿಸಬೇಕು ಎಂಬ ವಾದ ಅಂದು ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಕುಟುಂಬದಲ್ಲಿ ಪ್ರಬಲವಾಗಿತ್ತು. ಅಕ್ಕಪಕ್ಕದ ಕ್ಷೇತ್ರದಲ್ಲಿ ಮೊಮ್ಮಕ್ಕಳೇ ನಿಂತಿದ್ದರಿಂದಾಗಿ, ಅನಿವಾರ್ಯವಾಗಿ ದೇವೇಗೌಡರು ತುಮಕೂರು ಆರಿಸಿಕೊಂಡಿದ್ದರು. ಕುಟುಂಬ ರಾಜಕಾರಣ ವಿಸ್ತರಿಸತೊಡಗಿದ್ದೇ ವಿವಾದಕ್ಕೆ ಎಡೆಯಾಗಿ, ದೇವೇಗೌಡರು ಹಾಗೂ ನಿಖಿಲ್ ಇಬ್ಬರೂ ಸೋತಿದ್ದರು.

ಮತ್ತೆ ಸ್ಪರ್ಧಿಸಲ್ಲ ಎಂದ ಅನಿತಾ ಬೆನ್ನಿಗೆ ನಿಂತ ಪುತ್ರ ನಿಖಿಲ್

ಪ್ರಜಾವಾಣಿ ವಾರ್ತೆ

ರಾಮನಗರ: ಶಾಸಕಿ ಅನಿತಾ ಕುಮಾರಸ್ವಾಮಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಸ್ಪರ್ಧೆಗೆ ಇಳಿಯಲಿದ್ದಾರೆ ಎಂಬ ಸುದ್ದಿ ಹಬ್ಬಿದ ಬೆನ್ನಲ್ಲೇ ಅವರು ಸರಣಿ ಟ್ವೀಟ್ ಮೂಲಕ ಇದೆಲ್ಲ ಗಾಳಿ ಸುದ್ದಿ ಎಂದು ಸ್ಪಷ್ಟನೆ ನೀಡಿದ್ದಾರೆ. ಮತ್ತೊಂದೆಡೆ ಪುತ್ರ ನಿಖಿಲ್ ಕೂಡ ತಾಯಿಯ ಸ್ಪರ್ಧೆ ಸಾಧ್ಯತೆಯನ್ನು ಸಾರಸಗಟಾಗಿ ತಳ್ಳಿ ಹಾಕಿದ್ದಾರೆ.

ಈ ಕುರಿತು ಮಂಗಳವಾರ ಸರಣಿ ಟ್ವೀಟ್ ಮಾಡಿರುವ ಅನಿತಾ, 'ಪುತ್ರ ನಿಖಿಲ್‌ಗೆ ರಾಮನಗರ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದು, ಈ ಬಾರಿಯ ಚುನಾವಣೆಯಲ್ಲಿ ನಾನು ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ಈ ಹಿಂದಿನ ಹಲವು ಚುನಾವಣೆಗಳಲ್ಲಿ ಪಕ್ಷದ ವರಿಷ್ಠರಾದ ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ಆದೇಶದ ಮೇರೆಗೆ ಸ್ಪರ್ಧೆ ಮಾಡಿದ್ದು, ಸೋಲು–ಗೆಲುವು ಕಂಡಿದ್ದೇನೆ. ಎಲ್ಲಾ ಚುನಾವಣೆಗಳಲ್ಲಿಯೂ ಪಕ್ಷದ ಆದೇಶವನ್ನಷ್ಟೇ ಪಾಲಿಸಿ ನಡೆದಿದ್ದೇನೆಯೇ ಹೊರತು ದೇವೇಗೌಡರು ಕಟ್ಟಿದ ಪಕ್ಷ ಮತ್ತು ಅದರ ವರ್ಚಸ್ಸಿಗೆ ಎಂದೂ ಧಕ್ಕೆ ತರುವ ಕೆಲಸ ಮಾಡಿಲ್ಲ. ಮುಂದೆ ಮಾಡುವುದೂ ಇಲ್ಲ' ಎಂದು ಪರೋಕ್ಷವಾಗಿ ಹಾಸನ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಭವಾನಿ ರೇವಣ್ಣಗೆ ಟಾಂಗ್ ನೀಡಿದ್ದಾರೆ.

ಅನಿತಾ ಸ್ಪರ್ಧೆ ಕುರಿತು ರಾಮನಗರದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ರಾಮನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ, 'ಅನಿತಾ ಕುಮಾರಸ್ವಾಮಿ ಮತ್ತೆ ಟಿಕೆಟ್ ಆಕಾಂಕ್ಷಿ ಅಲ್ಲ. ಅವರಿಗೆ ಚುನಾವಣೆಗೆ ಸ್ಪರ್ಧಿಸುವ ಆಸಕ್ತಿಯೂ ಇಲ್ಲ' ಎಂದು ಹೇಳಿದರು.

'ಇಂದು ಬೆಳಿಗ್ಗೆಯೂ ನಮ್ಮ ಮನೆಯಲ್ಲಿ ಇದೇ ವಿಚಾರ ಕುರಿತು ಚರ್ಚೆ ನಡೆಯಿತು. ಅನಿತಾ ಅವರು ಈಗಾಗಲೇ ಚುನಾವಣಾ ರಾಜಕೀಯದಿಂದ ಹಿಂದೆ ಸರಿದಿದ್ದಾರೆ. ಎಲ್ಲಾ ಪಕ್ಷದಲ್ಲಿಯೂ ಒಂದಿಷ್ಟು ಗೊಂದಲಗಳು ಇರುತ್ತವೆ. ಜೆಡಿಎಸ್ ಟಿಕೆಟ್ ವಿಚಾರದಲ್ಲಿ ದೇವೇಗೌಡರ ತೀರ್ಮಾನವೇ ಅಂತಿಮ' ಎಂದರು.

'ನನ್ನ ತಾಯಿ ಈ ಹಿಂದೆ ಮಧುಗಿರಿ, ಚನ್ನಪಟ್ಟಣ ಹಾಗೂ ರಾಮನಗರ ಕ್ಷೇತ್ರದಲ್ಲಿ ಅನಿವಾರ್ಯವಾಗಿ ಸ್ಪರ್ಧಿಸಿದ್ದರು. ಕಳೆದ ಬಾರಿಯ ಉಪ ಚುನಾವಣೆಯಲ್ಲಿ ರಾಮನಗರದಿಂದ ಸ್ಪರ್ಧೆಗೆ ನನಗೂ ಒತ್ತಡ ಇತ್ತು. ಆಗ ನಾನು ಸಿನಿಮಾದಲ್ಲಿ ಬ್ಯುಸಿ ಆಗಿದ್ದೆ. ಹೀಗಾಗಿ, ಅವರು ಅನಿವಾರ್ಯವಾಗಿ ಸ್ಪರ್ಧಿಸಿ ಗೆದ್ದರು. ಅದಕ್ಕೆ ತಕ್ಕಂತೆ ಕ್ಷೇತ್ರದಲ್ಲಿ ಉತ್ತಮವಾಗಿ ಕೆಲಸವನ್ನೂ ಮಾಡಿದ್ದಾರೆ' ಎಂದು ಹೇಳಿದರು.

'ಜೆಡಿಎಸ್ ಹೋರಾಟದ ಹಿನ್ನೆಲೆಯಲ್ಲಿ ಬೆಳೆದು ಬಂದ ಪಕ್ಷ. ಅದನ್ನು ಉಳಿಸಿಕೊಳ್ಳಲು ನಾವೆಲ್ಲ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಪಕ್ಷ ಬಯಸಿದರೆ, ಕಾರ್ಯಕರ್ತರು ತೀರ್ಮಾನ ಮಾಡಿದರೆ ನಾನೇ ಸ್ಪರ್ಧೆಯಿಂದ ಹಿಂದೆ ಸರಿಯುತ್ತೇನೆ' ಎಂದು ಸ್ಪಷ್ಟನೆ ನೀಡಿದರು.

ರಸ್ತೆಯಲ್ಲಿ ಮಾದರಿ ಮತಯಂತ್ರ...

ರಾಜ್ಯ ವಿಧಾನಸಭೆ ಚುನಾವಣೆಗಾಗಿ ರಾಜಕೀಯ ಪಕ್ಷಗಳ ಬಾವುಟ, ಶಾಲು ಮಾರಾಟ ಜೋರಾಗಿದೆ. ಇದೀಗ ಮಾದರಿ ಮತಯಂತ್ರವು ಬಂದಿದ್ದು ಬೆಂಗಳೂರಿನ ಆರ್‌ವಿ ರಸ್ತೆಯ ಅಂಗಡಿಯಲ್ಲಿ ವ್ಯಾಪಾರಿಯೊಬ್ಬರು ಮಾದರಿ ಮತಯಂತ್ರ(ಇವಿಎಂ)ವನ್ನು ಮಾರಾಟಕ್ಕೆ ಜೋಡಿಸುತ್ತಿದ್ದ ದೃಶ್ಯ

ಪ್ರಜಾವಾಣಿ ಚಿತ್ರ/ರಂಜು ಪಿ

'ತಮಿಳುನಾಡಿನ ಕುಟುಂಬ ರಾಜಕಾರಣ–ಮೌನವೇಕೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿನಲ್ಲಿ ಕರುಣಾನಿಧಿ ಕುಟುಂಬದವರು ಏಳು ಮಂದಿ ಜನಪ್ರತಿನಿಧಿಗಳಿದ್ದಾರೆ. ಆದರೆ, ಅದರ ಬಗ್ಗೆ ಕಾಂಗ್ರೆಸ್ ಹಾಗೂ ಬಿಜೆಪಿಯವರು ಪ್ರಶ್ನೆ ಮಾಡುತ್ತಿಲ್ಲ. ಆದರೆ, ಕರ್ನಾಟಕದ ಪ್ರಾದೇಶಿಕ ಪಕ್ಷದ ಕುರಿತು ಟೀಕೆ ಮಾಡಿ ದ್ವೇಷ ಸಾಧಿಸಲಾಗುತ್ತಿದೆ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಹಾಸನದ ಟಿಕೆಟ್ ಕುರಿತು ಬಿಟ್ಟು ಬಿಡಿ. ನಾವು ಕುಳಿತು ತೀರ್ಮಾನ ಮಾಡುತ್ತೇವೆ. ನೀವು ಹಾಸನದ ಬಗ್ಗೆ ಕೆದಕುವುದು ಏಕೆ. ಬಿಜೆಪಿ ಅಭ್ಯರ್ಥಿಗಳ ಒಂದೂ ಪಟ್ಟಿ ಮಾಡಿಲ್ಲ. ಎರಡನೇ ಪಟ್ಟಿ ಬಿಡುಗಡೆ ಮಾಡಲು ಕಾಂಗ್ರೆಸ್ ತಿಣುಕಾಡುತ್ತಿದೆ. ನಾವು ಈಗಾಗಲೇ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದೇವೆ ಎಂದರು.

ನಾನು ಯಾವುದೇ ಪಕ್ಷದ ಜತೆಗೆ ಮೈತ್ರಿ ಬಗ್ಗೆ ಚರ್ಚೆ ಮಾಡಿಲ್ಲ. ಎಚ್.ಡಿ.ಕುಮಾರಸ್ವಾಮಿ ಅವರು ಪಂಚರತ್ನ ಯಾತ್ರೆ ಮಾಡುತ್ತಿದ್ದಾರೆ. ಜೆಡಿಎಸ್ ಎಷ್ಟು ಸ್ಥಾನಗಳನ್ನು ಪಡೆಯಲಿದೆ ಎಂಬುದನ್ನು ಕಾದು ನೋಡಿ ಎಂದರು.

ವರುಣ ಕ್ಷೇತ್ರದಲ್ಲಿ ಬಿ.ವೈ. ವಿಜಯೇಂದ್ರ ಸ್ಪರ್ಧಿಸಬೇಕು ಎಂದು ಕಾರ್ಯಕರ್ತರು ಒತ್ತಾಯಿಸಿದ್ದರು. ವಿಜಯೇಂದ್ರ ನಿಲ್ಲುವುದಿಲ್ಲ ಎಂದು ಯಡಿಯೂರಪ್ಪ ಘೋಷಿಸಿದ್ದಾರೆ. ನನ್ನ ಬಾಯಿಯಿಂದ ಏನನ್ನೂ ಹೇಳಿಸಲು ಪ್ರಯತ್ನ ಮಾಡಬೇಡಿ. ಯಾರ ಒಪ್ಪಂದದ ಬಗ್ಗೆಯೂ ನಾನು ಮಾತನಾಡುವುದಿಲ್ಲ. ಅವರ ಪಕ್ಷದ ಹೈಕಮಾಂಡ್ ಇದೆ. ಪ್ರಧಾನಿ, ಗೃಹ ಸಚಿವರು ಇದ್ದಾರೆ' ಎಂದರು.

ಗಾಳಿ ಮಾತು

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ವಿರುದ್ಧ ಕಾಂಗ್ರೆಸ್ ಪಕ್ಷವು 'ಡಮ್ಮಿ' ಅಭ್ಯರ್ಥಿಯನ್ನು ಕಣಕ್ಕಿಳಿಸಲು ಮುಂದಾಗಿದೆಯೇ? ರಾಜ್ಯ ಕಾಂಗ್ರೆಸ್ ವರಿಷ್ಠರ ಜತೆಗೆ ಸಚಿವರು ಈ 'ವ್ಯವಹಾರ' ಕುದಿರಿಸಿದ್ದಾರೆಯೇ...

– ಹೀಗೊಂದು ಚರ್ಚೆ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ವ್ಯಾಪಕವಾಗಿದೆ.

ಸಚಿವರ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿ ಯಾರು ಆಗುತ್ತಾರೆ ಎನ್ನುವ ಗೊಂದಲ ಕ್ಷೇತ್ರದಲ್ಲಿ ಹೆಚ್ಚಿದೆ. ದಿನಕ್ಕೊಂದು ಹೆಸರು ಮುನ್ನೆಲೆಗೆ ಬರುತ್ತಿದೆ. ಈ ಹಿಂದೆ ಮುಳಬಾಗಿಲು ಮಾಜಿ ಶಾಸಕ ಕೊತ್ತೂರು ಮಂಜುನಾಥ್, ಚಿಕ್ಕಬಳ್ಳಾಪುರದಿಂದ ಸ್ಪರ್ಧಿಸುತ್ತಾರೆ ಎನ್ನುವ ಸುದ್ದಿಯೂ ಹಬ್ಬಿತ್ತು. ಅವರನ್ನು ಕಾಂಗ್ರೆಸ್ ನಾಯಕರು 'ಚಿರತೆ'ಗೆ ಹೋಲಿಸಿದ್ದರು. ಆದರೆ, ಕೊತ್ತೂರು ಮಂಜುನಾಥ್ ಅವರು, ಸುಧಾಕರ್ ಅವರನ್ನೇ ಹೊಗಳಿದರು.

ನಂತರ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷ ರಾಮಯ್ಯ ಹೆಸರು ಚರ್ಚೆಗೆ ಬಂದಿತು. ಅವರೂ ಕಣಕ್ಕೆ ಇಳಿಯುವುದಿಲ್ಲ ಎಂದು ಹೇಳಿದ್ದಾರೆ ಎನ್ನುವ ಮಾತು ಇದೆ.

ಕೆಪಿಸಿಸಿ ಸದಸ್ಯ ವಿನಯ್ ಎನ್. ಶ್ಯಾಮ್‌ಗೆ ಟಿಕೆಟ್ ನೀಡಲು ಪಕ್ಷ ಅಳೆದು ತೂಗುತ್ತಿದೆ. ಈ ನಡುವೆಯೇ ಸಚಿವರಿಗೆ ಆಪ್ತ ಎನಿಸಿರುವ 'ಪರಿಶ್ರಮ ನೀಟ್ ಅಕಾಡೆಮಿ'ಯ ಪ್ರದೀಪ್ ಈಶ್ವರ್ ಹೆಸರು ಕಾಂಗ್ರೆಸ್ ಟಿಕೆಟ್ ವಿಚಾರದಲ್ಲಿ ಏಕಾಏಕಿ ಕೇಳಿ ಬರುತ್ತಿದೆ.

ಸಚಿವರೇ ಪ್ರದೀಪ್ ಈಶ್ವರ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಿಸುತ್ತಿದ್ದಾರೆ ಎಂಬ ಗಾಳಿಸುದ್ದಿ ಕ್ಷೇತ್ರದಲ್ಲಿ ಜೋರಾಗಿಯೇ ಹಬ್ಬಿದೆ. ಇದಕ್ಕೆ ಪುಷ್ಟಿ ನೀಡುವಂತೆ ಪ್ರದೀಪ್, ಸಚಿವರನ್ನು ಹಾಡಿ ಹೊಗಳಿರುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಜೋರಾಗಿ ಸದ್ದು ಮಾಡುತ್ತಿವೆ.

ರಾಜ್ಯದಲ್ಲಿ ಕಾಂಗ್ರೆಸ್ ಬಹುಮತಕ್ಕೆ ಸಮೀಪ ಬಂದು, ಸ್ಥಾನಗಳ ಕೊರತೆ ಎದುರಾದರೆ 'ಆಪರೇಷನ್ ಹಸ್ತ' ನಡೆಯುತ್ತದೆ. ಕಾಂಗ್ರೆಸ್‌ನ ಆಪರೇಷನ್ ಪಟ್ಟಿಯಲ್ಲಿ ಡಾ.ಕೆ. ಸುಧಾಕರ್ ಅವರ ಹೆಸರೂ ಇದೆ. ಆದ್ದರಿಂದ ಡಮ್ಮಿ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಕಾಂಗ್ರೆಸ್ ಮುಂದಾಗಿದೆ ಎನ್ನುವುದು ಕ್ಷೇತ್ರದಲ್ಲಿ ಈಗಿನ ಬಹುಚರ್ಚಿತ ವಿಷಯ.

ಸ್ಥಳೀಯ ಸಂಸ್ಥೆಗಳಿಂದ ಹಿಡಿದು ಎಲ್ಲಾ ಹಂತದಲ್ಲಿಯೂ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ 'ಹೊಂದಾಣಿಕೆ' ರಾಜಕಾರಣ ಚೆನ್ನಾಗಿಯೇ ಇದೆ. ಈ ನಡುವೆಯೇ ನಾಯಕತ್ವದ ಕೊರತೆ ಕಾರಣ ಕೈ ಪಾಳಯ ತೊರೆದು ಮುಖಂಡರು ಕಮಲದತ್ತ ಹೆಜ್ಜೆ ಇಡುತ್ತಿದ್ದಾರೆ.

ಚಿಕ್ಕಮಗಳೂರು ಕ್ಷೇತ್ರ: ಅರ್ಜಿದಾರ ಗುಂಪಿನ ಬಿಗಿಪಟ್ಟು

ಟಿಕೆಟ್ ಗೊಂದಲ; ಕಾಂಗ್ರೆಸ್‌ನಲ್ಲಿ ಒಳಬೇಗುದಿ

• ಬಿ.ಜೆ.ಧನ್ಯಪ್ರಸಾದ್

ಚಿಕ್ಕಮಗಳೂರು: ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವವರು ತಮ್ಮಲ್ಲೇ ಒಬ್ಬರನ್ನು ಪರಿಗಣಿಸುವಂತೆ ಬಿಗಿಪಟ್ಟು ಹಿಡಿದಿದ್ದಾರೆ, ಈಚೆಗೆ ಕಾಂಗ್ರೆಸ್ ಸೇರಿರುವ ಎಚ್.ಡಿ.ತಮ್ಮಯ್ಯ ಅವರು ತೀವ್ರ ಕಸರತ್ತು ನಡೆಸಿದ್ದಾರೆ. ಪಕ್ಷದೊಳಗಿನ ಗುಂಪುಗಾರಿಕೆ ವರಿಷ್ಠರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ಈ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಅಲೆ ಇದೆ ಎಂದು ಪಕ್ಷವು ಬಲವಾಗಿ ನಂಬಿದೆ. ಕ್ಷೇತ್ರದ ಬಹುಸಂಖ್ಯಾತ ಸಮುದಾಯಗಳಲ್ಲಿ ಒಂದಾಗಿರುವ ಲಿಂಗಾಯತ ಸಮುದಾಯದ ವ್ಯಕ್ತಿಗೆ ಜಾತಿ ಸಮೀಕರಣ ಲೆಕ್ಕಾಚಾರದಲ್ಲಿ ಟಿಕೆಟ್ ಒಲಿಯಬಹುದು ಎಂಬ ನಿರೀಕ್ಷೆ ಇದೆ. ಸಮುದಾಯದ ಬಿ.ಎಚ್.ಹರೀಶ್, ಮಹಡಿಮನೆ ಸತೀಶ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಎಚ್.ಡಿ.ತಮ್ಮಯ್ಯ

ಬಿಜೆಪಿ ಶಾಸಕ ಸಿ.ಟಿ.ರವಿ ಅವರ ಆಪ್ತರಾಗಿದ್ದ ನಗರಸಭೆ ಮಾಜಿ ಅಧ್ಯಕ್ಷ ತಮ್ಮಯ್ಯ ಬಿಜೆಪಿಯಲ್ಲಿ ಟಿಕೆಟ್‌ಗೆ ಬೇಡಿಕೆ ಇಟ್ಟು ಸ್ಪಂದನೆ ಸಿಗದೆ ಇದ್ದಾಗ ಕಾಂಗ್ರೆಸ್‌ಗೆ ಜಿಗಿದಿದ್ದು, ಟಿಕೆಟ್‌ಗೆ ಲಾಬಿ ನಡೆಸಿದ್ದಾರೆ. ಅವರೂ ಲಿಂಗಾಯತ ಸಮುದಾಯದವರು.

ಒಕ್ಕಲಿಗರಾದ ಡಾ.ಡಿ.ಎಲ್. ವಿಜಯಕುಮಾರ್, ಕುರುಬ ಸಮುದಾಯದ ಎ.ಎನ್.ಮಹೇಶ್, ರೇಖಾ ಹುಲಿಯಪ್ಪಗೌಡ, ಮುಸ್ಲಿಂ ಸಮುದಾಯದ ನಯಾಜ್ ಅರ್ಜಿ ಸಲ್ಲಿಸಿದ್ದಾರೆ. ಬಹುತೇಕ ಅರ್ಜಿದಾರರು ಒಟ್ಟಾಗಿ ಒಗ್ಗಟ್ಟಿನ ಹೆಜ್ಜೆ ಇಟ್ಟಿದ್ದಾರೆ.

'ಹಲವು ವರ್ಷಗಳಿಂದ ಪಕ್ಷಕ್ಕೆ ದುಡಿದವರನ್ನು ಅಭ್ಯರ್ಥಿಯಾಗಿಸಬೇಕು, ತಮ್ಮಯ್ಯ ಅವರನ್ನು ಪರಿಗಣಿಸಬಾರದು' ಎಂಬುದು ಒಂದು ಗುಂಪಿನ ಒತ್ತಾಯ. ಈ ಪಾಳಯದವರು ಸಭೆಗಳನ್ನು ನಡೆಸಿ ಅಸಮಾಧಾನವನ್ನೂ ಹೊರಹಾಕಿದ್ದಾರೆ.

'ತಮ್ಮಯ್ಯಗೆ ಟಿಕೆಟ್ ಘೋಷಿಸಿದರೆ ವಿರೋಧಿಸುತ್ತೇವೆ' ಎಂದು ಮಹಡಿಮನೆ ಸತೀಶ್, ಡಾ.ವಿಜಯಕುಮಾರ್ ಇತರರು ಬಹಿರಂಗವಾಗಿಯೇ ಹೇಳಿಕೆ ನೀಡಿದ್ದಾರೆ. ಈ ಗುಂಪಿನ ಕೆಲವರು ಒಗ್ಗೂಡಿ ವರಿಷ್ಠರಿಗೆ ಅಹವಾಲು ಮುಟ್ಟಿಸಲು ದೆಹಲಿಗೆ ತೆರಳಿದ್ದಾರೆ.

'ಕಾಂಗ್ರೆಸ್‌ನ ಹಿರಿಯ ಮುಖಂಡರೊಬ್ಬರು ಎಚ್.ಡಿ. ತಮ್ಮಯ್ಯ ಬೆನ್ನಿಗೆ ನಿಂತಿದ್ದಾರೆ. ಬಿ.ಎಚ್.ಹರೀಶ್, ಎಚ್.ಡಿ.ತಮ್ಮಯ್ಯ ಪೈಕಿ ಒಬ್ಬರಿಗೆ ಟಿಕೆಟ್ ಒಲಿಯಬಹುದು' ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

> **ಪಕ್ಷದ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ಪಕ್ಷಕ್ಕೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ತೊಡಗಿದರೆ ಶಿಸ್ತು ಕ್ರಮ ಜರುಗಿಸುತ್ತೇವೆ.**
> **ಡಾ.ಕೆ.ಪಿ.ಅಂಶುಮಂತ್,** ಜಿಲ್ಲಾಧ್ಯಕ್ಷ, ಕಾಂಗ್ರೆಸ್, ಚಿಕ್ಕಮಗಳೂರು

'ಸಮೀಕ್ಷೆ ಆಧರಿಸಿ ಅಭ್ಯರ್ಥಿ ಘೋಷಣೆ'

'ಅಭ್ಯರ್ಥಿ ಆಖೈರು ನಿಟ್ಟಿನಲ್ಲಿ ಎಐಸಿಸಿ ಮತ್ತು ಕೆಪಿಸಿಸಿಯಿಂದ ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷೆ ವರದಿ ಆಧರಿಸಿ ಅಭ್ಯರ್ಥಿ ಘೋಷಣೆ ಮಾಡಲಾಗುತ್ತದೆ. ಅದಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂದು ಸೂಚನೆ ನೀಡಲಾಗಿದೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್ ಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಆರೂ ಮಂದಿ ಮತ್ತು ಆಕಾಂಕ್ಷಿ ಎಚ್.ಡಿ.ತಮ್ಮಯ್ಯ ಅವರನ್ನು ಒಟ್ಟಿಗೆ ಕರೆಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿದ್ದಾರೆ. ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಸೂಚನೆ ನೀಡಿದ್ದಾರೆ. ಸಣ್ಣಪುಟ್ಟ ಗೊಂದಲಗಳು ಇದ್ದರೆ ಪರಿಹರಿಸುತ್ತೇವೆ' ಎಂದು ಅವರು ಪ್ರತಿಕ್ರಿಯಿಸಿದರು.

ಪ್ರಜಾ ಪತ್ರ

ಆಮಿಷಗಳಿಂದ ಚುನಾವಣೆ ಮುಕ್ತವಾಗಿರಲಿ

ಯಾವ ಆಮಿಷಗಳಿಗೂ ಕಿವಿಗೊಡದಿರಿ, ಮತದಾನ ನಮ್ಮ ಹಕ್ಕು ಎಂದು ಘೋಷಣೆ ಕೂಗುವ ರಾಜಕಾರಣಿಗಳೇ ಚುನಾವಣೆ ಸಂದರ್ಭದಲ್ಲಿ ಕುಕ್ಕರ್, ಸೀರೆ, ಟೀ ಶರ್ಟ್, ಡೈನಿಂಗ್ ಸೆಟ್, ಗಡಿಯಾರ ಹೀಗೆ ಮೊದಲಾದ ಆಮಿಷಗಳನ್ನು ನೀಡಿ ಜನರನ್ನು ವಂಚಿಸುತ್ತಿದ್ದಾರೆ. ಮತದಾನದ ಸಮಯದಲ್ಲಿ ಆಮಿಷಕ್ಕೆ ಕೈ ಒಡ್ಡುವ ನಾವುಗಳು, ಚುನಾವಣೆಯ ನಂತರ ರಾಜಕಾರಣಿಗಳು ಮಾಡುವ ತಪ್ಪುಗಳನ್ನು ಪ್ರಶ್ನಿಸುವ ಅಧಿಕಾರವನ್ನೂ ಕಳೆದುಕೊಳ್ಳುತ್ತೇವೆ. ಆಮಿಷಗಳಿಗೆ ಬಲಿಯಾಗದೇ ದೇಶದ ಅಭಿವೃದ್ಧಿಯ ಹಿತದೃಷ್ಟಿಯಿಂದ ಮತ ಚಲಾಯಿಸೋಣ.

ಕಲಾವತಿ ಎಸ್., ತುಮಕೂರು

ಮತದಾನ ನ್ಯಾಯಯುತವಾಗಿರಲಿ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು. ಸಂವಿಧಾನ ಮತ್ತು ಅದರ ಆಶಯಗಳಿಗೆ ಅನುಗುಣವಾಗಿ ಇಂದಿನ ಪ್ರಜೆಗಳು ಮತದಾನ ಮಾಡಬೇಕಾಗಿದೆ. ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಮತದಾನ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ರಾಜಕೀಯ ಪಕ್ಷಗಳು ಪ್ರಣಾಳಿಕೆಗಳನ್ನು ಪ್ರಕಟಿಸುತ್ತವೆ. ಈ ಪ್ರಣಾಳಿಕೆಗಳನ್ನು ಯುವಸಮೂಹ ಮತ್ತು ಮಹಿಳೆಯರು ತುಂಬಾ ಜಾಗೃತಿಯಿಂದ ವಿಮರ್ಶಿಸಿ ಅದರಿಂದಾಗುವ ಅನುಕೂಲಗಳನ್ನು ಪರಿಶೀಲಿಸಿ, ಉತ್ತಮ ಸಮಾಜ ನಿರ್ಮಾಣ ಮಾಡಲು ಮುಂದಾಗುವ ಪಕ್ಷಗಳಿಗೆ ಹಾಗೂ ನಾಯಕರಿಗೆ ಮತದಾನ ಮಾಡಬೇಕು. ಕಡ್ಡಾಯವಾಗಿ ಮತದಾನ ಮಾಡುವಂತೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಮತದಾನದ ಮಹತ್ವದ ಕುರಿತು ಅರಿವು ಮೂಡಿಸಬೇಕಾಗಿದೆ.

ರಘು ಬೆಟ್ಟಳ್ಳಿ, ಮೈಸೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಸೆಲೆಬ್ರಿಟಿ ಮಾತು

ವಿವೇಚನೆಯಿಂದ ಮತ ಚಲಾಯಿಸಿ



ಮಂಜಮ್ಮ ಜೋಗತಿ, ಕರ್ನಾಟಕ ಜಾನಪದ ಅಕಾಡೆಮಿ, ಮಾಜಿ ಅಧ್ಯಕ್ಷೆ

ಯಾವುದೇ ಆಮಿಷಕ್ಕೆ ಒಳಗಾಗದೆ, ವಿವೇಚನೆಯಿಂದ ಮತ ಚಲಾಯಿಸಬೇಕು. ಮತದಾನದ ಹಕ್ಕನ್ನು ಯಾವುದೇ ಕಾರಣಕ್ಕೂ ಮಾರಿಕೊಳ್ಳಬಾರದು. ಸ್ವತಂತ್ರ ಭಾರತದಲ್ಲಿ ಮತ ಚಲಾಯಿಸುವ ದೊಡ್ಡ ಹಕ್ಕನ್ನು ನಮ್ಮ ಸಂವಿಧಾನ ನೀಡಿದೆ. ಅದನ್ನು ತಪ್ಪದೇ ಚಲಾಯಿಸಬೇಕು. ಅದರ ಬಗ್ಗೆ ಉದಾಸೀನ ತಾಳಬಾರದು. ಮತ ಮಾರಿಕೊಂಡರೆ ಪ್ರತಿನಿಧಿಗಳು ನಮ್ಮನ್ನು ಗೌರವಿಸುವುದಿಲ್ಲ. ಯುವಜನರು ಹೆಚ್ಚಿನ ಸಂಖ್ಯೆಯ ಮತದಾರರಿದ್ದು, ಯಾರು ಕೆಟ್ಟವರು, ಯಾರು ಒಳ್ಳೆಯವರು ಎಂದು ಪರಿಶೀಲಿಸಿ ಮತ ಹಾಕಬೇಕು.

ಮಾತಿನೇಟು

ಪರಿಶಿಷ್ಟ ಜಾತಿಯಲ್ಲಿರುವ ಸಮಾನ ಅವಕಾಶ ವಂಚಿತ ಶೋಷಿತ ತಳ ಸಮುದಾಯಗಳನ್ನು ಮರು ವರ್ಗೀಕರಿಸಲು ಅಧಿಕಾರ ಇಲ್ಲ. ಆದರೂ ರಾಜ್ಯ ಬಿಜೆಪಿ ಸರ್ಕಾರ ಚುನಾವಣೆಯ ಕಾರಣಕ್ಕೆ ಒಳಮೀಸಲಾತಿಯ ವರ್ಗೀಕರಣ ಕುರಿತು ಕೇಂದ್ರಕ್ಕೆ ಶಿಫಾರಸು ಮಾಡಿದೆ. ಸರ್ಕಾರದ ನಿರ್ಣಯವನ್ನು ಬಂಜಾರ ಸಮಾಜದ ಆಡಳಿತಾರೂಢ ಪಕ್ಷದ ಶಾಸಕರು ಸಮರ್ಥಿಸಿಕೊಂಡು ಸಮಾಜದ ಬೆನ್ನಿಗೆ ಚೂರಿ ಹಾಕಿದ್ದಾರೆ. ಈಗಿನ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಮತ ಹಾಕದಿದ್ದರೂ ತೊಂದರೆ ಇಲ್ಲ. ಬಿಜೆಪಿ ವಿರುದ್ಧ ಮತ ಹಾಕಿ.

ಪ್ರಕಾಶ್ ಕೆ. ರಾಠೋಡ್
ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ

ಮತ ಆಮಿಷ, ಸಿಕ್ಕಿದ್ದೇನು?

₹ 32 ಲಕ್ಷ ನಗದು
ದಾವಣಗೆರೆ ಜಿಲ್ಲೆಯ ಬೇತೂರು ಚೆಕ್‌ಪೋಸ್ಟ್

₹ 7.25 ಲಕ್ಷ ನಗದು
ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಹಿರೋಳಿ ಚೆಕ್‌ಪೋಸ್ಟ್

ಜಿಗಿ ನೆಗೆದಾಟ

ನಂದಿಹಳ್ಳಿ ಹಾಲಪ್ಪ ಮಾಜಿ ಶಾಸಕ

ಕಾಂಗ್ರೆಸ್ → ಬಿಜೆಪಿ → ಕಾಂಗ್ರೆಸ್ → ಬಿಜೆಪಿ

ಕ್ಷೇತ್ರದ ಕೂಗು

• **ಕ್ಷೇತ್ರ: ಚಿಕ್ಕಮಗಳೂರು**
• **ಶಾಸಕ: ಸಿ.ಟಿ.ರವಿ** (ಬಿಜೆಪಿ)
▸ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತ್ಯೇಕ ಹಾಲು ಒಕ್ಕೂಟ ಸ್ಥಾಪನೆ ಬಜೆಟ್ ಘೋಷಣೆಗೆ ಸೀಮಿತವಾಗಿದೆ. 2022–23ನೇ ಸಾಲಿನ ಬಜೆಟ್‌ನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಲು ಒಕ್ಕೂಟ ರಚನೆ ಪ್ರಸ್ತಾಪಿಸಲಾಗಿತ್ತು. ಆ ನಂತರ, ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ.
▸ ಚಿಕ್ಕಮಗಳೂರಿನಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಯ ಕನಸೂ ಈಡೇರಿಲ್ಲ. 'ಸ್ಪೈಸ್ ಪಾರ್ಕ್' ಸ್ಥಾಪನೆ ಪ್ರಕ್ರಿಯೆ ಆರು ವರ್ಷಗಳಿಂದ ಆಮೆಗತಿಯಲ್ಲಿ ಸಾಗಿದ್ದು, ಇನ್ನು ಸಾಕಾರಾವಾಗಿಲ್ಲ.

• **ಕ್ಷೇತ್ರ: ಶೃಂಗೇರಿ**
• **ಶಾಸಕ: ಟಿ.ಡಿ. ರಾಜೇಗೌಡ** (ಕಾಂಗ್ರೆಸ್)
▸ ಶೃಂಗೇರಿ ಸಮುದಾಯ ಆಸ್ಪತ್ರೆಯನ್ನು 100 ಹಾಸಿಗೆ ಸಾಮರ್ಥ್ಯದ ತಾಲ್ಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಬೇಕು ಎಂಬುದು ಬಹುವರ್ಷಗಳ ಬೇಡಿಕೆ. ಸಾಲದ ಸುಳಿಗೆ ಸಿಲುಕಿ ಮೂರು ವರ್ಷಗಳಿಂದ ಕಾರ್ಯ ಸ್ಥಗಿತಗೊಳಿಸಿರುವ ಕೊಪ್ಪದ ಸಹಕಾರ ಸಾರಿಗೆ ಸಂಸ್ಥೆ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆ ಇದೆ. ಇದು ಇನ್ನೂ ಕಾರ್ಯಗತಗೊಂಡಿಲ್ಲ.

• **ಕ್ಷೇತ್ರ: ಉಡುಪಿ**
• **ಶಾಸಕ: ಕೆ. ರಘುಪತಿ ಭಟ್** (ಬಿಜೆಪಿ)
▸ ಉಡುಪಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಬೇಕು ಎಂಬುದು ದಶಕಗಳ ಬೇಡಿಕೆ. ಅದಕ್ಕೆ ಬೇಕಾದ ಭೂಮಿ, ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ ಅಗತ್ಯ ಮೂಲಸೌಲಭ್ಯ ಇದ್ದರೂ ಬೇಡಿಕೆಗೆ ಸ್ಪಂದನೆ ಸಿಕ್ಕಿಲ್ಲ. ಪ್ರವಾಸೋದ್ಯಮವನ್ನು ಇನ್ನಷ್ಟು ಅಭಿವೃದ್ಧಿ ಪಡಿಸಿ ಉದ್ಯೋಗ ಸೃಷ್ಟಿಗೆ ಒತ್ತು ನೀಡಬೇಕಿದೆ.

• **ಕ್ಷೇತ್ರ: ಮಡಿಕೇರಿ**
• **ಶಾಸಕ: ಎಂ.ಪಿ.ಅಪ್ಪಚ್ಚು ರಂಜನ್** (ಬಿಜೆಪಿ)
▸ ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸಬೇಕೆಂಬ ಕೂಗು ಹಲವು ವರ್ಷಗಳಿಂದ ಹಾಗೇ ಇದೆ. ಹೃದಯಾಘಾತ, ಪಾರ್ಶ್ವವಾಯು ಪೀಡಿತರಾದವರು, ಅಪಘಾತಗಳಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದವರಿಗೆ ತುರ್ತು ಚಿಕಿತ್ಸೆ ಇಲ್ಲಿಲ್ಲ. ಅಂಥವರು ಮೈಸೂರು, ಮಂಗಳೂರಿಗೇ ಪ್ರಯಾಣಿಸುವ ಅನಿವಾರ್ಯ ಪರಿಸ್ಥಿತಿ ಇದೆ. ಬಹಳಷ್ಟು ಜನ ಪ್ರಯಾಣದ ನಡುವೆಯೇ ಮೃತಪಡುತ್ತಿದ್ದಾರೆ.

• **ಕ್ಷೇತ್ರ: ವಿರಾಜಪೇಟೆ**
• **ಶಾಸಕ: ಕೆ.ಜಿ.ಬೋಪಯ್ಯ** (ಬಿಜೆಪಿ)
▸ ವನ್ಯಜೀವಿ– ಮಾನವ ಸಂಘರ್ಷ ತಡೆಗೆ ಶಾಶ್ವತ ಪರಿಹಾರ ದೊರಕಿಸಿಕೊಡಬೇಕೆಂಬ ಕೂಗು ಹಾಗೇ ಉಳಿದಿದೆ. ಆನೆಗಳ ದಾಳಿಗೆ ಬೆಳೆ ಮಾತ್ರವಲ್ಲ ಮನುಷ್ಯರ ಜೀವಗಳೂ ಹೋಗುತ್ತಿವೆ. ಈಚೆಗಷ್ಟೇ ಒಂದೇ ಕುಟುಂಬದ ಇಬ್ಬರನ್ನು ಹುಲಿಯೊಂದು 24 ಗಂಟೆಗಳ ಅಂತರದಲ್ಲಿ ಕೊಂದಿತ್ತು. ಅರಣ್ಯ ಕಾಯ್ದೆಯು ಕ್ಷೇತ್ರದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಇಂದಿಗೂ ನೂರಾರು ಕುಟುಂಬಗಳು ಅರಣ್ಯಾಧಿಕಾರಿಗಳ ಕಚೇರಿ ಮುಂದೆ ಈ ಕಾಯ್ದೆಯ ಅನುಷ್ಠಾನಕ್ಕೆ ಒತ್ತಾಯಿಸಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಮನುಷ್ಯನು ಕಾರ್ಯಗಳಿಂದ ಶ್ರೇಷ್ಠನಾಗುತ್ತಾನೆಯೇ ವಿನಾ ಹುಟ್ಟಿನಿಂದಲ್ಲ.

–ಚಾಣಕ್ಯ

ಟೋಲ್ ದರ ನಿಗದಿಯಲ್ಲಿ ಪಾರದರ್ಶಕತೆ ಬರಲಿ

ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ಎಕ್ಸ್‌ಪ್ರೆಸ್ ಹೆದ್ದಾರಿಗಳು ಮತ್ತು ಸರ್ಕಾರಿ– ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಿರುವ ಕೆಲವು ರಾಜ್ಯ ಹೆದ್ದಾರಿಗಳಲ್ಲಿ ವಿಧಿಸುತ್ತಿರುವ ಬಳಕೆದಾರರ ಶುಲ್ಕ (ಟೋಲ್) ಜನರ ಪಾಲಿಗೆ ದುಬಾರಿಯಾಗಿ ಪರಿಣಮಿಸಿದೆ. ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಉದ್ಘಾಟನೆಯಾದ ಕೆಲವೇ ದಿನಗಳಲ್ಲಿ ಟೋಲ್ ದರ ಏರಿಸಲಾಗಿತ್ತು. ಜನರ ಪ್ರತಿರೋಧಕ್ಕೆ ಮಣಿದು ದರ ಹೆಚ್ಚಳವನ್ನು ತಾತ್ಕಾಲಿಕವಾಗಿ ಹಿಂದಕ್ಕೆ ಪಡೆಯಲಾಗಿದೆ. ಹೆದ್ದಾರಿ ಟೋಲ್ ಹೆಸರಿನಲ್ಲಿ ಬಳಕೆದಾರರ ಅತಿಯಾದ ಶೋಷಣೆಯ ವಿರುದ್ಧ ರಾಜ್ಯದಲ್ಲಿ ಈಗ ದೊಡ್ಡಮಟ್ಟದ ಚರ್ಚೆ ಆರಂಭವಾಗಿದೆ. ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಅನೇಕ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲಾಗಿದೆ. ಅದೇ ಪ್ರಮಾಣದಲ್ಲಿ ಟೋಲ್ ಸಂಗ್ರಹವೂ ಹೆಚ್ಚಾಗಿದೆ. ಪ್ರಮುಖ ಮಾರ್ಗಗಳೆಲ್ಲವೂ ಈಗ ಟೋಲ್ ಪಾವತಿಸಿ ಬಳಸುವ ವ್ಯವಸ್ಥೆಯಡಿ ಇವೆ. ಸರ್ಕಾರವೇ ಸಂಪೂರ್ಣ ವೆಚ್ಚ ಭರಿಸಿ ನಿರ್ಮಿಸಿದ ಹೆದ್ದಾರಿಗಳು ಹಾಗೂ ಸರ್ಕಾರಿ– ಖಾಸಗಿ ಸಹಭಾಗಿತ್ವದ ಯೋಜನೆಗಳ ಹೆಸರಿನಲ್ಲಿ ಖಾಸಗಿಯವರೇ ಸಂಪೂರ್ಣ ಹೂಡಿಕೆ ಮಾಡಿ ನಿರ್ಮಿಸುವ ಹೆದ್ದಾರಿಗಳಲ್ಲಿ ಟೋಲ್ ವಿಧಿಸಲು 'ರಾಷ್ಟ್ರೀಯ ಹೆದ್ದಾರಿ ಶುಲ್ಕ (ದರ ನಿಗದಿ ಮತ್ತು ಸಂಗ್ರಹ) ನಿಯಮಗಳು– 2008'ರಲ್ಲಿ ಅವಕಾಶ ಕಲ್ಪಿಸಲಾಗಿದೆ. ದೇಶವು ಅಭಿವೃದ್ಧಿಯ ಹಾದಿಯಲ್ಲಿರುವ ಕಾಲಘಟ್ಟದಲ್ಲಿ ಇತರ ಮೂಲಸೌಕರ್ಯಗಳಂತೆ ಅತ್ಯುತ್ತಮವಾದ ರಸ್ತೆಗಳೂ ಬೇಕು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಡಿಮೆ ಅವಧಿಯಲ್ಲಿ ಸುರಕ್ಷಿತವಾಗಿ ಪ್ರಯಾಣಿಸಲು ಅವಕಾಶ ಇರುವಂತಹ ಉತ್ತಮ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸುವುದು ಅಗತ್ಯ ಕೂಡ. ಸಮಯ ಮತ್ತು ಇಂಧನ ಉಳಿತಾಯಕ್ಕೆ ಪೂರಕವಾಗಿ ಕೈಗೆತ್ತಿಕೊಳ್ಳುವ ಈ ಯೋಜನೆಗಳು ಟೋಲ್ ಹೆಸರಿನಲ್ಲಿ ಬಳಕೆದಾರರ ಶೋಷಣೆಗೆ ಎಡೆಮಾಡುತ್ತಿವೆ ಎಂಬ ಅಸಹನೆ ಜನರಲ್ಲಿದೆ. ವಾಹನ ಖರೀದಿ ವೇಳೆ ಬೃಹತ್ ಮೊತ್ತದ ರಸ್ತೆ ತೆರಿಗೆ ಪಾವತಿಸಿ, ಇಂಧನ ಖರೀದಿಯಲ್ಲೂ ಸೆಸ್ ಪಾವತಿಸುವ ಜನರು, ಹೆದ್ದಾರಿಗಳನ್ನು ಬಳಸಲು ಪುನಃ ದೊಡ್ಡ ಮೊತ್ತದ ಟೋಲ್ ಪಾವತಿಸಬೇಕಿದೆ. ಶೇಕಡ 75ರಷ್ಟು ಕಾಮಗಾರಿ ಪೂರ್ಣಗೊಳ್ಳದೆ ಟೋಲ್ ವಿಧಿಸುವಂತಿಲ್ಲ. ಸರ್ವಿಸ್ ರಸ್ತೆ ಮತ್ತು ಪರ್ಯಾಯ ರಸ್ತೆಗಳಿಲ್ಲದ ಪ್ರದೇಶಗಳಲ್ಲಿ ಸ್ಥಳೀಯ ವಾಹನಗಳು ಹಾಗೂ ಆಟೊ, ದ್ವಿಚಕ್ರ ವಾಹನ, ಟ್ರ್ಯಾಕ್ಟರ್‌ಗಳಿಗೆ ಟೋಲ್ ವಿಧಿಸುವಂತಿಲ್ಲ. ಮೂಲ ಒಪ್ಪಂದಕ್ಕೆ ಅನುಗುಣವಾಗಿ ಸ್ಥಳೀಯ ಬಳಕೆದಾರರ ಅನುಕೂಲಕ್ಕಾಗಿ ಮೇಲ್ಸೇತುವೆ, ಅಂಡರ್‌ಪಾಸ್, ಪಾದಚಾರಿಗಳಿಗಾಗಿ ಸ್ಕೈವಾಕ್ ನಿರ್ಮಿಸುವುದು ಕಡ್ಡಾಯ. ಆದರೆ, ಬಹುತೇಕ ಕಡೆಗಳಲ್ಲಿ ಇಂತಹ ಯಾವ ನಿಯಮವನ್ನೂ ಸರಿಯಾಗಿ ಪಾಲಿಸುತ್ತಿಲ್ಲ. 'ಎಲ್ಲರೂ ಸರ್ವಿಸ್ ರಸ್ತೆಯಲ್ಲಿ ಓಡಾಡಿದರೆ ಟೋಲ್ ಕಟ್ಟುವವರು ಯಾರು?' ಎಂದು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಯೋಜನೆಯ ಅನುಷ್ಠಾನ ಘಟಕದ ಯೋಜನಾ ನಿರ್ದೇಶಕ ಶ್ರೀಧರ್ ಪ್ರಶ್ನಿಸಿರುವುದು ಟೋಲ್ ರಸ್ತೆಗಳ ನಿರ್ಮಾಣದ ಹಿಂದಿನ ಉದ್ದೇಶವನ್ನೇ ಅನುಮಾನಿಸುವಂತೆ ಮಾಡಿದೆ.

ಗುತ್ತಿಗೆದಾರರು ಮತ್ತು ರಾಜಕಾರಣಿಗಳ ಅನುಕೂಲಕ್ಕಾಗಿ ಸರ್ಕಾರದ ಹಣ ವ್ಯಯಿಸಿ, ಬೇಡಿಕೆ ಇಲ್ಲದೆಡೆಗೂ ಹೆದ್ದಾರಿಗಳನ್ನು ವಿಸ್ತರಿಸಿ ಟೋಲ್ ಸಂಗ್ರಹಕ್ಕೆ ಅವಕಾಶ ಕಲ್ಪಿಸುವ ಪ್ರವೃತ್ತಿಗೆ ಕಡಿವಾಣ ಹಾಕಬೇಕು

ಹೆದ್ದಾರಿಗಳ ಟೋಲ್ ನಿಗದಿಗೂ ಸ್ಪಷ್ಟವಾದ ನಿಯಮಗಳಿವೆ. ಆರಂಭಿಕ ಹಂತದ ಟೋಲ್ ದರ ಹಾಗೂ ವಾರ್ಷಿಕವಾಗಿ ಹೆಚ್ಚಳಕ್ಕೆ ಇರುವ ಮಿತಿಯನ್ನೂ ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಹೆದ್ದಾರಿ ನಿರ್ಮಾಣಕ್ಕೆ ಮಾಡಿದ ಸಂಪೂರ್ಣ ಮೊತ್ತ ಸಂಗ್ರಹವಾದ ಬಳಿಕ ಟೋಲ್ ದರವನ್ನು ಶೇಕಡ 60ರಷ್ಟು ಕಡಿಮೆ ಮಾಡಬೇಕು ಎಂಬುದು 2008ರ ನಿಯಮಗಳಲ್ಲಿ ಇದೆ. ಆದರೆ, ಯಾವುದೇ ಹೆದ್ದಾರಿಗಳಲ್ಲೂ ಈ ನಿಯಮದ ಪಾಲನೆ ಆಗುತ್ತಿಲ್ಲ. ನಿಗದಿತ ಮೊತ್ತ ಸಂಗ್ರಹವಾದ ಬಳಿಕ ಹಾಗೂ ಗುತ್ತಿಗೆ ಅವಧಿ ಮುಗಿದ ನಂತರವೂ ಟೋಲ್ ಸಂಗ್ರಹವನ್ನು ಯಥಾವತ್ತಾಗಿ ಮುಂದುವರಿಸಲಾಗುತ್ತಿದೆ. ಸರ್ಕಾರವೇ ನಿರ್ಮಿಸುವ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಕ್ಕೆ ಖಾಸಗಿ ಗುತ್ತಿಗೆದಾರರನ್ನು ನೇಮಿಸಲಾಗುತ್ತಿದೆ. ಖಾಸಗಿಯವರು ಹೆದ್ದಾರಿ ನಿರ್ಮಿಸಿದರೆ ತಮ್ಮದೇ ಸಿಬ್ಬಂದಿ ಮೂಲಕ ಟೋಲ್ ಸಂಗ್ರಹಿಸುತ್ತಾರೆ. ಗುತ್ತಿಗೆ ಅವಧಿ ಪೂರ್ಣಗೊಂಡ ಬಳಿಕವೂ ಟೋಲ್ ಸಂಗ್ರಹ ಯಥಾವತ್ತಾಗಿ ಮುಂದುವರಿಸುತ್ತಾರೆ. ಹೆದ್ದಾರಿ ನಿರ್ಮಾಣಕ್ಕೆ ಮಾಡಿದ ವೆಚ್ಚ, ಸಂಗ್ರಹವಾದ ಟೋಲ್ ಮೊತ್ತ, ಟೋಲ್ ದರ ಇಳಿಕೆ ಮಾಡಬೇಕಾದ ಅವಧಿ ಎಲ್ಲವನ್ನೂ ಗೋಪ್ಯವಾಗಿಟ್ಟುಕೊಂಡು ಬಳಕೆದಾರರನ್ನು ಶೋಷಿಸಲಾಗುತ್ತದೆ. ಇಂತಹ ಬಹುತೇಕ ಯೋಜನೆಗಳಲ್ಲಿ ಹೆದ್ದಾರಿಗಳ ನಿರ್ಮಾಣ ಮತ್ತು ಟೋಲ್ ಸಂಗ್ರಹದ ಗುತ್ತಿಗೆಗಳನ್ನು ಅಧಿಕಾರಾರೂಢ ರಾಜಕಾರಣಿಗಳ ನಂಟು ಹೊಂದಿರುವ ಪ್ರಭಾವಿ ಗುತ್ತಿಗೆದಾರರೇ ಪಡೆಯುತ್ತಾರೆ. ಟೋಲ್ ದರ ನಿಗದಿಯಲ್ಲಿನ ಲೋಪ, ಕಾಮಗಾರಿ ಪೂರ್ಣಗೊಳ್ಳದೇ ಟೋಲ್ ವಸೂಲಿ, ಸರ್ವಿಸ್ ರಸ್ತೆ ಮತ್ತು ಇತರ ಮೂಲಸೌಕರ್ಯ ಒದಗಿಸದೇ ಟೋಲ್ ಸಂಗ್ರಹಿಸುವುದು ಬಹುತೇಕ ಹೆದ್ದಾರಿಗಳಲ್ಲಿ ನಡೆಯುತ್ತಿದ್ದರೂ ಒಪ್ಪಂದ ಉಲ್ಲಂಘಿಸುವವರ ವಿರುದ್ಧ ಯಾವ ಕ್ರಮವೂ ಆಗುತ್ತಿಲ್ಲ. ಕೆಲವೆಡೆ ಟೋಲ್ ಸಂಗ್ರಹಕ್ಕೆ ಗೂಂಡಾ ಪಡೆಗಳನ್ನು ನೇಮಿಸಿಕೊಂಡು, ರಸ್ತೆ ಬಳಕೆದಾರರ ಮೇಲೆ ದೌರ್ಜನ್ಯ ನಡೆಸುತ್ತಿರುವ ಆರೋಪಗಳೂ ಇವೆ. ಇಂತಹ ಅಕ್ರಮಗಳ ವಿರುದ್ಧ ಕ್ರಮ ಜರುಗಿಸಬೇಕಾದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಜ್ಯದ ಲೋಕೋಪಯೋಗಿ ಇಲಾಖೆ ಹಾಗೂ ಇತರ ಸಕ್ಷಮ ಪ್ರಾಧಿಕಾರಗಳು ರಾಜಕೀಯ ಮರ್ಜಿಗೆ ಒಳಗಾಗಿ, ಜನರಿಗಾಗುವ ಶೋಷಣೆ ತಡೆಯಲು ಬಿಗಿಯಾದ ಕ್ರಮಗಳನ್ನೇ ಕೈಗೊಳ್ಳುತ್ತಿಲ್ಲ. ಗುತ್ತಿಗೆದಾರರು ಮತ್ತು ರಾಜಕಾರಣಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಸರ್ಕಾರದ ಬೊಕ್ಕಸದ ಹಣವನ್ನು ವ್ಯಯಿಸಿ ಬೇಡಿಕೆ ಇಲ್ಲದ ಕಡೆಗೂ ಹೆದ್ದಾರಿಗಳನ್ನು ವಿಸ್ತರಿಸಿ ಟೋಲ್ ಸಂಗ್ರಹಿಸುವುದಕ್ಕೆ ಅವಕಾಶ ಕಲ್ಪಿಸುವ ಪ್ರವೃತ್ತಿಗೆ ಕಡಿವಾಣ ಹಾಕಬೇಕು. ಹೆದ್ದಾರಿಗಳ ನಿರ್ಮಾಣ ಯೋಜನೆ, ಟೋಲ್ ದರ ನಿಗದಿ ಮತ್ತು ಸಂಗ್ರಹದ ಕುರಿತ ಮಾಹಿತಿಯನ್ನು ಜನರ ಮುಂದಿಡುವಂತಹ ಪಾರದರ್ಶಕ ವ್ಯವಸ್ಥೆಯನ್ನು ರೂಪಿಸಬೇಕು. ಗುತ್ತಿಗೆ ಅವಧಿ ಪೂರ್ಣಗೊಂಡ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹ ಸ್ಥಗಿತಗೊಳಿಸುವ ಮತ್ತು ಪೂರ್ಣ ಮೊತ್ತ ಸಂಗ್ರಹವಾಗಿರುವ ಮಾರ್ಗಗಳಲ್ಲಿ ನಿಯಮದಂತೆ ಶೇ 60ರಷ್ಟು ದರ ಇಳಿಸುವ ಮೂಲಕ ಜನರನ್ನು ಆರ್ಥಿಕ ಹೊರೆಯಿಂದ ಪಾರು ಮಾಡುವ ಕೆಲಸ ಆಗಬೇಕು.

ದಿನದ ಟ್ವೀಟ್

ಸಂಘಟನೆಗಳೇ ಆಯೋಜಿಸಲಿ

ತಾವು ಅನುಸರಿಸುವ ಹಬ್ಬಗಳಿಗೆ ಸಂಬಂಧಿಸಿದ ರ್‍ಯಾಲಿಗಳನ್ನು ಧಾರ್ಮಿಕ ಸಂಘಟನೆಗಳೇ ಆಯೋಜಿಸಲಿ. ರಾಜಕೀಯ ಪಕ್ಷಗಳು ಮತ್ತು ಅವುಗಳ ನಾಯಕರು ರಾಜಕೀಯ ಉದ್ದೇಶಕ್ಕಾಗಿ ಧರ್ಮವನ್ನು ಬಳಸಿಕೊಳ್ಳುವುದರಿಂದ ದೂರ ಉಳಿಯಬೇಕು. ನೆನಪಿಡಿ- ಕೋಮು ಸೌಹಾರ್ದ ಕಾಪಾಡಿಕೊಂಡರೆ ಮಾತ್ರ ಭಾರತ ಉಳಿಯುತ್ತದೆ!

ಚಂದ್ರಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

ಕಿಡಿನುಡಿ

ನಮ್ಮ ಪಕ್ಷವು ಆಂತರಿಕ ಪ್ರಜಾಪ್ರಭುತ್ವವನ್ನು ಗೌರವಿಸಿ, ಪಕ್ಷದ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸುತ್ತಿದೆ. ಈ ಸಮಯದಲ್ಲಿ ಅಭ್ಯರ್ಥಿಗಳ ಸುಳ್ಳು ಪಟ್ಟಿ ಹರಿಯಬಿಟ್ಟು ಕುತ್ಸಿತ ಮನಸ್ಸುಗಳು ರಾಜ್ಯದ ಜನತೆಯ ದಾರಿ ತಪ್ಪಿಸುತ್ತಿವೆ.

ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 5-4-1998

• ಸೋಮಶೇಖರ್‌ಗೆ ಕಂದಾಯ, ಮಂಜುನಾಥ್‌ಗೆ ಅರಣ್ಯ ಖಾತೆ

ಬೆಂಗಳೂರು, ಏ. 4– ಇಬ್ಬರ ಸೇರ್ಪಡೆಯೊಂದಿಗೆ ತಮ್ಮ ಇಪ್ಪತ್ತಮೂರು ತಿಂಗಳ ಸಚಿವ ಸಂಪುಟವನ್ನು ಪ್ರಥಮ ಬಾರಿಗೆ ವಿಸ್ತರಿಸಿರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಮೇ 18ಕ್ಕೆ ಪೂರ್ಣ ಪ್ರಮಾಣದಲ್ಲಿ ಸಂಪುಟ ಪುನರ್ ರಚಿಸಲಿದ್ದಾರೆ.

ಸಂಪುಟಕ್ಕೆ ಸೇರಿರುವ ಡಿ. ಮಂಜುನಾಥ್ ಮತ್ತು ಬಿ. ಸೋಮಶೇಖರ್ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪಟೇಲ್ ಅವರು, 'ಈ ತಿಂಗಳ 15ಕ್ಕೆ ಆರಂಭವಾಗಲಿರುವ ಬಜೆಟ್ ಅಧಿವೇಶನ ಮೇ 15ಕ್ಕೆ ಮುಗಿಯಲಿದ್ದು, 18ಕ್ಕೆ ಸಂಪುಟ ಪುನರ್‌ರಚಿಸಲಾಗುವುದು' ಎಂದು ಹೇಳಿದರು.

ಮಂಜುನಾಥ್ ಅವರಿಗೆ ಅರಣ್ಯ ಖಾತೆ ಹಾಗೂ ಸೋಮಶೇಖರ್ ಅವರಿಗೆ ಕಂದಾಯ ಖಾತೆ ನೀಡಿರುವುದಾಗಿ ಪಟೇಲ್ ತಿಳಿಸಿದರು.

ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ಪ್ರಮಾಣವಚನ ಬೋಧಿಸಿದರು.

• ಕೊಯಮತ್ತೂರು ಬಾಂಬ್ ಸ್ಫೋಟ: ರಾಜ್ಯ ಎಂಪಿ ಶಾಮೀಲು ಬಯಲಿಗೆ

ಚೆನ್ನೈ, ಏ. 4– ಕೊಯಮತ್ತೂರಿನಲ್ಲಿ ನಡೆದ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಮೈಸೂರಿನಿಂದ ಕೊಯಮತ್ತೂರಿಗೆ ಭಾರಿ ಪ್ರಮಾಣದ ಸ್ಫೋಟಕಗಳನ್ನು ಸಾಗಿಸಿದ ಘಟನೆಯಲ್ಲಿ ಕರ್ನಾಟಕದ ಸಂಸತ್ ಸದಸ್ಯರೊಬ್ಬರು ಶಾಮೀಲಾಗಿರುವುದಕ್ಕೆ ತಮಿಳುನಾಡು ಪೊಲೀಸರು ಪುರಾವೆಗಳನ್ನು ಸಂಗ್ರಹಿಸಿದ್ದಾರೆ.

ಅಲ್ ಉಮ್ಮ ಸಂಘಟನೆಯ ಜತೆ ಸಂಪರ್ಕ ಹೊಂದಿದ್ದಾರೆ ಎನ್ನಲಾದ ಕರ್ನಾಟಕದ ಈ ಸಂಸತ್ ಸದಸ್ಯರು, ಫೆಬ್ರುವರಿ 14ರಂದು ಕೊಯಮತ್ತೂರಿನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟ ಘಟನೆಯಲ್ಲೂ ಶಾಮೀಲಾಗಿದ್ದಾರೆ ಎಂಬುದು ವಿಚಾರಣೆಯಿಂದ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಸಿದು ಕೊಟ್ಟದ್ದು ನಮಗೆ ಬೇಡ ಎಂದ ಮಠಾಧಿಪತಿಗಳ ಮಾತಿಗೆ ಮಿಗಿಲಾದ ತತ್ವ ಬೇಕೇ?

ಮಠಾಧೀಶರು ಮಠಾಧೀಶರಂತೆ ಮಾತಾಡಿದಾಗ...

ಅನುರಣನ

ನಾರಾಯಣ ಎ.

ಬಹುತೇಕ ಮಠಾಧಿಪತಿಗಳೆಲ್ಲಾ ಅಧಿಕಾರದಲ್ಲಿದ್ದವರನ್ನು ಓಲೈಸುತ್ತಿರುವ, ಓಲೈಸಲು ಮುಂದಾಗದಿದ್ದರೂ ಎದುರು ಹಾಕಿಕೊಳ್ಳಲು ಹಿಂದೇಟು ಹಾಕುತ್ತಿರುವ ಇಂದಿನ ಕಾಲದಲ್ಲಿ, ನಾಡಿನ ಇಬ್ಬರು ಮಠಾಧಿಪತಿಗಳು ಅಧಿಕಾರಸ್ಥರಿಗೆ 'ಸತ್ಯ' ಹೇಳುವ ಕೆಲಸ ಮಾಡಿದ್ದಾರೆ. ಧರ್ಮಪೀಠದಲ್ಲಿ ಕುಳಿತ ಕಾರಣಕ್ಕಾಗಿ ಅವರ ಆಂತರ್ಯದ ಕರೆ ಅವರಿಂದ ಈ ಸತ್ಯವನ್ನು ಹೇಳಿಸಿತೋ ಅಥವಾ ಪ್ರಜಾತಾಂತ್ರಿಕ ರಾಜಕೀಯದ ಒತ್ತಡ ಅವರಿಂದ ಈ ಕೆಲಸವನ್ನು ಮಾಡಿಸಿತೋ ಗೊತ್ತಿಲ್ಲ. ಏನೇ ಇದ್ದರೂ ಇವರಿಬ್ಬರೂ ಹೇಳಬೇಕಾದುದನ್ನು ಹೇಳಬೇಕಾದವರಿಗೆ ಸೂಕ್ತ ಕಾಲದಲ್ಲಿ ಹೇಳಿ ನಾಡ ಹಿತ ಕಾಯುವ ಒಂದು ಕಾರ್ಯ ಮಾಡಿದ್ದಾರೆ.

ಈ ಇಬ್ಬರ ಈ ಹಿಂದಿನ ರಾಜಕೀಯ ನಿಲುವು, ಸಂಪರ್ಕ, ಸಾಮೀಪ್ಯ ಏನೇ ಇರಲಿ ಮತ್ತು ಮುಂದಿನ ಅವರ ರಾಜಕೀಯ ನಡೆ–ನುಡಿಗಳು ಏನೇ ಇರಲಿ, ಅವೆಲ್ಲವುಗಳಿಂದ ಪ್ರತ್ಯೇಕಿಸಿ ಮೇಲಿನ ಬೆಳವಣಿಗೆಯನ್ನು ನೋಡುವ ಅಗತ್ಯವಿದೆ. ಯಾಕೆಂದರೆ, ಸಂತತ್ವ ಎನ್ನುವುದು ಯಾರಲ್ಲೂ ಇಡಿಯಾಗಿ ಹುಡುಕುವ ಕಾಲ ಇದಲ್ಲ. ಯಾರೋ ಎಂದೋ ಮಾಡುವ ಒಂದು ಬಿಡಿ ಕಾರ್ಯದಲ್ಲಿ, ಒಂದು ಬಿಡಿ ಸತ್ಯದ ಹೇಳಿಕೆಯಲ್ಲಿ ಸಂತತ್ವವನ್ನು ಹುಡುಕಬೇಕಾಗಿರುವ ಕಾಲ ಇದು.

ಈ ಇಬ್ಬರು ಮಠಾಧಿಪತಿಗಳಲ್ಲಿ ಒಬ್ಬರು, ಬಿಜೆಪಿ ಸೃಷ್ಟಿಸಿದ ಉರಿಗೌಡ, ನಂಜೇಗೌಡ ಪಾತ್ರಗಳ ಕುರಿತು 'ಕಾಲ್ಪನಿಕ ವಿಚಾರಗಳನ್ನು ಚಾರಿತ್ರಿಕ ಎಂಬಂತೆ ಜನರ ಮುಂದಿಟ್ಟು ಗೊಂದಲ ಉಂಟುಮಾಡಬೇಡಿ' ಎಂದು ತಿಳಿಹೇಳಿದರು. ಮೈಸೂರನ್ನು ಹದಿನೆಂಟನೆಯ ಶತಮಾನದಲ್ಲಿ ಆಳಿದ ಮುಸ್ಲಿಂ ದೊರೆ ಟಿಪ್ಪುವನ್ನು ಮೊದಲಿಗೆ ಮನಸೋಇಚ್ಛೆ ಮತಾಂಧ ಎಂದು ಚಿತ್ರಿಸಿ, ಆನಂತರ ಆತನನ್ನು ಒಂದು ಸಮುದಾಯಕ್ಕೆ ಸೇರಿದ ಯೋಧರಾದ ಉರಿಗೌಡ ಮತ್ತು ನಂಜೇಗೌಡ ಎಂಬಿಬ್ಬರು ಕೊಂದರು ಎನ್ನುವ ಕತೆ ಕಟ್ಟಿ, ಆ ಸಮುದಾಯದಲ್ಲಿ ಮುಸ್ಲಿಮರ ಬಗ್ಗೆ ದ್ವೇಷ ಹುಟ್ಟಿಸುವ ಮೂಲಕ ಇಡೀ ಸಮುದಾಯವನ್ನು ರಾಜಕೀಯವಾಗಿ ಒಲಿಸಿಕೊಳ್ಳಬಹುದು ಎಂಬ ಭಾರತೀಯ ಜನತಾ ಪಕ್ಷದ ಕರಾಳ ವ್ಯೂಹವೊಂದು ಮಠಾಧಿಪತಿಯ ಸಕಾಲಿಕ ಮಧ್ಯಪ್ರವೇಶದಿಂದಾಗಿ ಹಿನ್ನಡೆ ಕಂಡಿತು.

ಇನ್ನೊಬ್ಬರು ಮಠಾಧಿಪತಿಯು ಬಿಜೆಪಿ ನೇತೃತ್ವದ ಸರ್ಕಾರ ಉರುಳಿಸಿದ ಇನ್ನೊಂದು ಮತದ್ವೇಷಿ ದಾಳದ ವಿರುದ್ಧ ಮಾತನಾಡಿದ್ದಾರೆ. ರಾಜ್ಯ ಸರ್ಕಾರವು ಮುಸ್ಲಿಮರಿಗೆ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಡಿಯಲ್ಲಿ ದೊರೆಯುತ್ತಿದ್ದ ಶೇಕಡ 4ರಷ್ಟು ಔದ್ಯೋಗಿಕ ಮತ್ತು ಶೈಕ್ಷಣಿಕ ಮೀಸಲಾತಿಯನ್ನು ಕಿತ್ತುಹಾಕಿ ಅದನ್ನು ರಾಜ್ಯದ ಪ್ರಬಲ ಸಮುದಾಯವಾದ ಒಕ್ಕಲಿಗರು ಹಾಗೂ ಇತರ ಕೆಲವು ಸಮುದಾಯಗಳು ಮತ್ತು ಲಿಂಗಾಯತ ಹಾಗೂ ಇತರ ಕೆಲವು ಸಮುದಾಯಗಳಿಗೆ ಸಮನಾಗಿ ಮರುಹಂಚಿಕೆ ಮಾಡಿದೆ. ಒಂದೆಡೆ, ಮುಸ್ಲಿಮರ ಮೀಸಲಾತಿ ಕಿತ್ತುಕೊಳ್ಳುವ ಮೂಲಕ 'ಓಲೈಕೆ ರಾಜಕಾರಣ'ದ ವಿರುದ್ಧ ಖಡಾಖಡಿ ಯುದ್ಧ ಸಾರಿದ್ದೇವೆ ಎನ್ನುವ ಸಂದೇಶವನ್ನು ಹಿಂದುತ್ವವಾದಿ ಮತದಾರರಿಗೆ ರವಾನಿಸಿ ಬಿಜೆಪಿಗೆ ಅವರ ಬೆಂಬಲವನ್ನು ಗಟ್ಟಿಗೊಳಿಸಿಕೊಳ್ಳುವುದು. ಇನ್ನೊಂದೆಡೆ, ಹಾಗೆ ಕಿತ್ತುಕೊಂಡದ್ದನ್ನು ಪ್ರಬಲ ಜಾತಿಗಳಿಗೆ ನೀಡಿ ಅವರನ್ನೂ ಒಲಿಸಿಕೊಳ್ಳುವ ಹುನ್ನಾರ ಈ ನಿರ್ಧಾರದಲ್ಲಿದೆ.

ಇದಕ್ಕೆ ಪ್ರತಿಕ್ರಿಯಿಸಿದ ಮಠಾಧೀಶರ ಮಾತುಗಳು ಮಾರ್ಮಿಕವಾಗಿವೆ. 'ಈ ರಾಜ್ಯದ ಒಕ್ಕಲು ಮಕ್ಕಳು ನಾವು, ಯಾರ ಅನ್ನವನ್ನೂ ಕಸಿದು ತಿನ್ನಬೇಕೆನ್ನುವವರಲ್ಲ. ನಾವೇ ದುಡಿದದ್ದನ್ನು ಕೂಡಾ ಮೊದಲು ಹಂಚಿ, ಉಳಿದದ್ದನ್ನು ನಾವು ತಿನ್ನಬೇಕು ಎಂದುಕೊಂಡವರು ನಾವು'. ಈ ಮಾತುಗಳ ನೈತಿಕ ಎತ್ತರ, ಸೇರಿದ್ದ ಸಭಿಕರಿಂದ ಕೇಳಿಬಂದ ಕರತಾಡನದ ಅಬ್ಬರ ಇವೆಲ್ಲವನ್ನೂ ಕೇಳುತ್ತಿದ್ದ ಯಾರಿಗಾದರೂ ಎಲ್ಲಿಂದಲೋ ಬಂದವರ ರಾಜಕೀಯ ವಿಕಾರ ಸ್ವರೂಪಗಳು ಏನೇ ಇದ್ದರೂ ಈ ನೆಲದ ವಿವೇಕ ಸಂಪೂರ್ಣ ಅಳಿದಿಲ್ಲ ಎನ್ನುವ ಭರವಸೆ ಮೂಡುತ್ತದೆ.

ಒಬ್ಬರು ಮಠಾಧೀಶರು ಸುಳ್ಳು ನಿರೂಪಣೆಯ ರಾಜಕೀಯಕ್ಕೊಂದು ಸಾತ್ವಿಕ ಪ್ರತಿರೋಧ ಒಡ್ಡಿದರೆ, ಇನ್ನೊಬ್ಬರು ಮಠಾಧೀಶರು ಒಬ್ಬರಿಂದ ಕಿತ್ತು ಇನ್ನೊಬ್ಬರನ್ನು ಓಲೈಸುವ ತಂತ್ರವನ್ನು ಈ ಮಣ್ಣಿನ ಗುಣ ಎಂದಿಗೂ ಒಪ್ಪುವುದಿಲ್ಲ ಎನ್ನುವ ಸಂದೇಶ ರವಾನಿಸಿದ್ದಾರೆ. ಮಠಾಧೀಶರೆಲ್ಲ ಸಂತರು ಹೌದೋ ಅಲ್ಲವೋ ಎನ್ನುವ ಪ್ರಶ್ನೆ ಬೇರೆ, ಆದರೆ ಅಧಿಕಾರಸ್ಥರನ್ನು ನೇರಾನೇರ ಎದುರು ಹಾಕಿಕೊಂಡು ಯಾರೇ ಇಂತಹದ್ದೊಂದು ನಿಲುವು ತಳೆದರೂ ಆ ನಿಲುವಿನಲ್ಲಿ ಸಂತತ್ವವನ್ನು ಕಂಡೇ ಕಾಣಬೇಕು. ಪೂರ್ಣ ಸಂತತ್ವವನ್ನು ಯಾರಲ್ಲೂ ಕಾಣಲಾಗದ ಈ ಕಾಲದಲ್ಲಿ ಸಂತತ್ವದ ಇಂತಹ ಬಿಡಿ ಪ್ರಕಟಣೆಗಳೇ ನಾಡನ್ನು ಕಾಯಬೇಕು.

ಅಧಿಕಾರ ಪಡೆದುಕೊಳ್ಳಲು ಮತ್ತು ಪಡೆದ ಅಧಿಕಾರವನ್ನು ಉಳಿಸಿಕೊಳ್ಳಲು ಏನು ಮಾಡಿದರೂ ಸರಿ ಎಂಬ ಭಾವನೆ ಪಕ್ಷಗಳಲ್ಲಿ ಇರಬಹುದು. ಅದಕ್ಕೆ ಒಂದು ಹಂತದ ಜನಸಮ್ಮತಿಯೂ ಇರಬಹುದು. ಆದರೆ ಏನು ಮಾಡಿದರೂ ಸರಿ ಎನ್ನುವಾಗಲೂ ಒಂದು ಹಂತಕ್ಕಿಂತ ಕೆಳಗಿಳಿದು ಏನನ್ನೂ ಮಾಡಬಾರದೆಂಬ ಅದ್ಯಾವುದೋ ಒಂದು ಅಲಿಖಿತ ನಿಯಮವೊಂದು ಈ ದೇಶದ ಕೆಟ್ಟುಹೋದ ರಾಜಕೀಯದಲ್ಲೂ ತೀರಾ ಇತ್ತೀಚಿನವರೆಗೂ ಇತ್ತು. ಭೂಗತ ಪಾತಕಿಗಳ ಲೋಕದವರ ಕಡಿಯುವ, ಕೊಲ್ಲುವ ದಂಧೆಯಲ್ಲೂ ಏನೋ ಕೆಲವೊಂದನ್ನೆಲ್ಲಾ ಮಾಡಬಾರದು ಎಂದೆಲ್ಲಾ ಇದೆಯಂತಲ್ಲ, ಹಾಗೆ. ಈಗಿನ ಆಡಳಿತ ಪಕ್ಷವು ಹೀಗೊಂದು ಕನಿಷ್ಠ ನೈತಿಕ ನಿಯಂತ್ರಣವೂ ಇಲ್ಲದ ರೀತಿಯ ರಾಜಕೀಯವನ್ನು ಮಾಡುತ್ತಿದೆ. ತಾನು ಹೇಳುವುದು ಸುಳ್ಳು ಎಂದು ಅದನ್ನು ಕೇಳಿಸಿಕೊಳ್ಳುವವರಿಗೆಲ್ಲ ಗೊತ್ತಾಗುತ್ತದೆ ಎಂಬ ಅರಿವಿದ್ದರೂ ಅದು ಸುಳ್ಳನ್ನೇ ಹೇಳಲು ಹಿಂಜರಿಯುವುದಿಲ್ಲ. ತಾನು ಅನ್ಯಾಯ ಮಾಡುತ್ತಿದ್ದೇನೆ ಅಂತ ಜನರಿಗೆ ಗೊತ್ತಾಗುತ್ತಿದೆ ಎಂದು ಗೊತ್ತಿದ್ದರೂ ಅನ್ಯಾಯ ಮಾಡಲು ಅವರು ಹೇಸುವುದಿಲ್ಲ. ಉರಿಗೌಡ, ನಂಜೇಗೌಡರ ಸೃಷ್ಟಿಸಿದವರಿಗೆ ಇವೆರಡೂ ನಕಲಿ ಪಾತ್ರಗಳು ಎಂದು ಗೊತ್ತಿರದೇ ಇರಲು ಸಾಧ್ಯವೇ ಇಲ್ಲ. ಮಾತ್ರವಲ್ಲ ಇವು ನಕಲಿ ಪಾತ್ರಗಳು ಎಂದು ಜನರಿಗೆ ತಿಳಿಯುತ್ತದೆ ಎಂದೂ ಅವರಿಗೆ ತಿಳಿಯದೇ ಇರಲು ಸಾಧ್ಯವೇ ಇರಲಿಲ್ಲ. ಕನಿಷ್ಠ ಬುದ್ಧಿಶಕ್ತಿ ಮತ್ತು ಯೋಚನಾಸಾಮರ್ಥ್ಯ ಇದ್ದವರಿಗೆಲ್ಲರಿಗೂ ಅರ್ಥವಾಗುವ ವಿಷಯ ಇದು.

ಈ ಪಾತ್ರಗಳ ನೈಜತೆಯ ಕುರಿತು ಅವರು ನೀಡುತ್ತಿದ್ದ ಪುರಾವೆಗಳನ್ನು ನ್ಯಾಯಾಲಯಗಳು ಬಿಡಿ, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಕೂಡಾ ಕಂಡೊಡನೆಯೇ ಕಸದ ಬುಟ್ಟಿಗೆ ಎಸೆಯುವಂತಹವು. ಆದರೂ, ಒಂದಿನಿತೂ ಅಳುಕಿಲ್ಲದೆ ಅವರು ನಕಲಿ ಪಾತ್ರಗಳನ್ನು ಅಸಲಿ ಎಂದು ಚುನಾವಣಾ ಮಾರುಕಟ್ಟೆಯಲ್ಲಿ ಬಿಕರಿಗಿಟ್ಟರು, ಖರೀದಿಸುವವರು ಖರೀದಿಸಲಿ ಎಂದು. ಮಾರುಕಟ್ಟೆಯಲ್ಲಿ ಒಂದಷ್ಟು ಕಾಲ ಉಳಿದುಬಿಟ್ಟರೆ ಇಂದಲ್ಲ ನಾಳೆ ಖರೀದಿಸಲು ಯಾರೋ ಬಂದೇ ಬರುತ್ತಾರೆ ಎಂದವರಿಗೆ ಗೊತ್ತಿತ್ತು. ಇದೇ ರೀತ್ಯ 'ಏನು ಮಾಡಿದರೂ ನಡೆಯುತ್ತದೆ' ಎನ್ನುವ ಧಾರ್ಷ್ಟ್ಯ ಮತ್ತು 'ಏನಾದರೂ ಮಾಡುತ್ತೇವೆ ಏನೀಗ' ಎನ್ನುವ ನಾಚಿಕೆಯೇ ಇಲ್ಲದ ಮನಃಸ್ಥಿತಿಯೇ ಮುಸ್ಲಿಮರ ಮೀಸಲಾತಿ ಕಿತ್ತುಕೊಳ್ಳುವುದರಲ್ಲೂ ಕೆಲಸ ಮಾಡಿದ್ದು. ಮೀಸಲಾತಿಯನ್ನು ಈ ರೀತಿ ಬೇಕಾಬಿಟ್ಟಿಯಾಗಿ ನೀಡಲು, ನೀಡಿದ್ದನ್ನು ಕಿತ್ತುಕೊಳ್ಳಲು, ಕಿತ್ತುಕೊಂಡದ್ದನ್ನು ಮರು ಹಂಚಲು ಸಂವಿಧಾನದ ಪ್ರಕಾರ, ಕಾನೂನು ಪ್ರಕಾರ ಆಗುವುದಿಲ್ಲ ಎಂದು ಗೊತ್ತಿದ್ದೂ ಅದನ್ನು ಮಾಡುವುದು ಒಂದೆಡೆಯಾದರೆ, ಇನ್ನೊಂದೆಡೆ, ಎಲ್ಲವನ್ನೂ ಸಂವಿಧಾನದ ಪ್ರಕಾರವೇ ಮಾಡಿದ್ದೇವೆ ಎನ್ನುವ ಅಸಂಗತ ಸಮಾಜಾಯಿಷಿ ಬೇರೆ. ಇದನ್ನೆಲ್ಲಾ ಏನೆಂದು ಕರೆಯುವುದು?

ಹೌದು, ಅಧಿಕಾರದಲ್ಲಿದ್ದವರು ಪಕ್ಷಾತೀತವಾಗಿ ಸುಳ್ಳು ಹೇಳುತ್ತಾರೆ, ಪಕ್ಷಾತೀತವಾಗಿ ಭಂಡತನ ತೋರುತ್ತಾರೆ. ಆದರೆ ಇದು ಬರಿ ಸುಳ್ಳುಗಳ ವಿಚಾರ ಮಾತ್ರವಲ್ಲ. ಇದು ಬರೀ ಭಂಡತನದ ವಿಚಾರ ಮಾತ್ರವಲ್ಲ. ಈ ವಿಕಾರಗಳನ್ನೆಲ್ಲ ವಿವರಿಸುವ ಪದಗಳು ಪ್ರಪಂಚದ ಯಾವ ಭಾಷೆಯಲ್ಲೂ ಸೃಷ್ಟಿಯಾಗಿಲ್ಲ.

ಇಂಥದ್ದೊಂದು ವಿಕೃತಿಯನ್ನು ಧರ್ಮಪೀಠದಲ್ಲಿ ಕುಳಿತವರಿಗಲ್ಲದೆ ಬೇರೆ ಯಾರಿಂದಲೂ ಎದುರು ಹಾಕಿಕೊಳ್ಳಲು ದೇಶದ ಇಂದಿನ ರಾಜಕೀಯ ಸ್ಥಿತಿಯಲ್ಲಿ ಸಾಧ್ಯವಿರಲಿಲ್ಲ. ಆದುದರಿಂದ ಈ ಕಾಲದ ಕರೆಗೆ ಓಗೊಟ್ಟು ಏನು ಹೇಳಬೇಕೋ ಅದನ್ನು ಈ ಮಠಾಧೀಶರಿಬ್ಬರಿಂದ ಹೇಳಿಸಿದ ಕನ್ನಡದ ಮಣ್ಣಿನ ಗುಣಕ್ಕೆ ಶರಣು ಎನ್ನಬೇಕು. ಅಷ್ಟೇ ಅಲ್ಲ, ಧರ್ಮದ್ವೇಷ ಬಿತ್ತಿ ರಾಜಕೀಯದ ಬೆಳೆ ತೆಗೆಯುವ ತಮ್ಮ ಕೆಲಸಕ್ಕೆ ಈ ರಾಜ್ಯದ ಕಾವಿಧಾರಿ ಸ್ವಾಮಿಗಳೆಲ್ಲಾ ಹೆಗಲೆಣೆಯಾಗಿ ಇರುತ್ತಾರೆ, ಇಲ್ಲದೇ ಹೋದರೆ ಮೌನ ಸಮ್ಮತಿಯನ್ನಾದರೂ ನೀಡುತ್ತಾರೆ ಎಂದುಕೊಂಡಿದ್ದ ಆಳುವ ಪಕ್ಷದವರ ಆಲೋಚನೆಗೆ ಕನ್ನಡದ ನೆಲದಲ್ಲಿ ಆದ ಮೊದಲ ಹಿನ್ನಡೆಯಾಗಿಯೂ ಈ ಇಬ್ಬರು ಮಠಾಧೀಶರ ಮಧ್ಯ ಪ್ರವೇಶವು ಪ್ರಾಮುಖ್ಯವನ್ನು ಪಡೆದುಕೊಳ್ಳುತ್ತದೆ.

ಚುರುಮುರಿ



ದೌಡ್ ಧನಾಧನ್!

• ಲಿಂಗರಾಜು ಡಿ.ಎಸ್.

'ರಾಜಕಾರಣಿಗಳದ್ದು ಪಕ್ಷದಿಂದ ಪಕ್ಷಕ್ಕೆ ದೌಡ್ ಕತೇನೇ ಆಯ್ತಲ್ಲಾ? ಇದು ಫನ್ ಆನ್ ದಿ ರನ್ ಅಲ್ಲವ್ರಾ!' ತುರೇಮಣೆಗೆ ತಿವಿದೆ.

'ರಾಜಕೀಯವೇ ಫನ್ ಅಂದ್ರೆ ದ್ವಂದ್ವಾರ್ಥ ಆಗೋಗ್ತದೆ. 'ದೇವರೇ ಈ ಸಾರಿ ನಮಗೇ ಮೆಜಾರಿಟಿ ಬರಂಗೆ ಮಾಡು ತಂದೆ. ನಮ್ಮ ಹೊಟ್ಟೆ ಮ್ಯಾಲೆ ಹೊಡಿಬ್ಯಾಡ!' ಅಂತ ಬಿ-ಸಿ ಟೀಂ ಕೆಮ್ಮುತಾವೆ. ಡಿ ಟೀಮು 'ಬಿ-ಸಿ ಟೀಮಿಗೆ ಮೆಜಾರಿಟಿ ಬರದಂಗೆ ಆಗಲಿ' ಅಂತ ರನ್ ರೇಟ್ ಲೆಕ್ಕ ಹಾಕ್ತಾ ಕೂತದೆ. ರೆಸಾರ್ಟ್ ಓನರುಗಳು 'ಮೂರೊರ್ಸದಿಂದ ಯಾಪಾರಿಲ್ಲದೇ ಬರಗೆಟ್ಟದೀವಿ. ಈ ಸಾರಿ ಯಾರಿಗೂ ಮೆಜಾರಿಟಿ ಬರದೇ ಇರ್ಲಪ್ಪ' ಅಂತ ಬಾಯಲ್ಲಿ ಅಕ್ಕಿ ಕಾಳು ಹಾಕ್ಕಂಡು ಕೂತವ್ರೆ' ಅನ್ನೋ ಹೊಸ ವಿಚಾರವನ್ನ ಯಂಟಪ್ಪಣ್ಣ ಹೇಳಿತು.

'ಚುನಾವಣೆ ಹತ್ತಿರಾಯ್ತಿದ್ದಂಗೇ ಟಿಕೇಟ್ ಸಿಕ್ದೆ ಇರೋರು ಬ್ಯಾರೆ ಪಾರ್ಟಿಗೆ ದೌಡಾಕಿ 'ನನಗೆ ಇಲ್ಲಿ ಉಸಿರು ಕಟ್ಟದಂಗೆ ಆಯ್ತಿತ್ತು. ಅವರ ಇಚಾರಗಳನ್ನ ಮೆಚ್ಚಿಕ್ಯಂಡು ಹೋಯ್ತಿದ್ದೀನಿ. ಯಾವುದೇ ಷರತ್ತು ಹಾಕಿಲ್ಲ. ಇದರ ಮ್ಯಾಲೆ ಜನ ನೋಡಿಕ್ಯತ್ತರೆ' ಅಂತ ಪೇರಿವಾದ್ಯ ಬಾರಿಸ್ತರ ಕನ್ರೋ' ತುರೇಮಣೆ ಮಾತು ನನಗೆ ಅರ್ಥಾಗಲಿಲ್ಲ.

'ರಾಜಕೀಯದಿಂದ ಪ್ರಾಮಾಣಿಕತೆ ಓಟ ಕಿತ್ತದೆ ಕಯ್ಯಾ. ರಾಜಕಾರಣಿಗಳು ದೇಸಕ್ಕೋಸ್ಕರ ಆಡದುನ್ನ ಯಾವತ್ತೋ ಮರತೋಗವ್ರೆ! 'ಜಾಸ್ತೀ ಕಾಸು ದೂಂಗಾ, ಟಿಕೇಟು ದೂಂಗಾ' ಅಂತ ಯಾರು ಆಫರ್ ಕೊಡ್ತರೋ ಅವರ ಬಾಗಿಲಿಗೆ ಬವನಾಸಿ ಹಿಡಕಂದು ಹೋಗೋ ವಿಧಾನ ಕನೋ' ಅಂತ ಯಂಟಪ್ಪಣ್ಣ ವಡಪು ಬಿಡಿಸಿತು.

'ಇದು ಎಲೆಕ್ಷನ್ ಟೇಮಿಗೆ ಆಡೋ ಗೇಮ್ಸ್ ಬಾಂಡ್ ಆಟ ಅಂತಿರಾ?' ಅಂದೆ.

'ದಿಟ ಕಪ್ಪ, 'ಈ ಆಟವು ಚಟವಾಗಿ ಪರಿಣಮಿಸುವ ಸಾಧ್ಯತೆ ಇರುತ್ತದೆ. ವಿವೇಚನೆಯನ್ನು ಬಳಸಿ ಆಟವಾಡಿ' ಅನ್ನೋದು ನನ್ನಂತ ಬಡಪಾಯಿ ಮತದಾರರ ವಿನಂತಿ!' ಅಂದ ಯಂಟಪ್ಪಣ್ಣನ ಮಾತನ್ನು ಎಲ್ಲರೂ ಒಪ್ಪಿಕೊಂಡರು.

ಸಂಗತ

ಮತಾಧಿಕಾರ: ಮಹತ್ವ ಅರಿಯುವ ಕಾಲ

ಜನತಂತ್ರದಲ್ಲಿ ತನ್ನ ಶಕ್ತಿಯೇನು ಎಂಬುದರ ಅರಿವು ಬಹುತೇಕ ಮತದಾರರಿಗೆ ಇಲ್ಲದಿರುವುದೇ ಇಂದಿನ ದುಃಸ್ಥಿತಿಗೆ ಕಾರಣವಾಗಿದೆ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಭಾರತ ಒಂದು ಗಣತಂತ್ರ ರಾಷ್ಟ್ರ. ಇಲ್ಲಿ ಸರ್ವೋಚ್ಚ ಅಧಿಕಾರ ಇರುವುದು ಜನರ ಕೈಯಲ್ಲಿ. ಇಲ್ಲಿ ಯಾರೂ ಜನನಾಯಕರಿಲ್ಲ. ಇರುವವರೆಲ್ಲಾ ಜನಪ್ರತಿನಿಧಿಗಳು. ದೇಶದ ನಾಗರಿಕರಿಗೆ ಸಂಪತ್ತನ್ನು ಸೃಷ್ಟಿಸುವ, ಸೇವೆಗಳನ್ನು ಒದಗಿಸುವ ಕ್ಷೇತ್ರದಲ್ಲಿ ಅವರು ದುಡಿಯ ಬೇಕಾಗುತ್ತದೆ. ದೇಶವನ್ನು ಆಳಿಕೊಳ್ಳುವ ಸಮಯವಾಗಲೀ ಸಾಮರ್ಥ್ಯವಾಗಲೀ ನಮ್ಮಲ್ಲಿ ಇರುವುದಿಲ್ಲ. ಅದಕ್ಕಾಗಿ ನಾವು ಆ ಕೆಲಸಕ್ಕಾಗಿ ನಮ್ಮ ಪ್ರತಿನಿಧಿಗಳನ್ನು ಆರಿಸುತ್ತೇವೆ. ಅವರಿಗೆ ಸಂಬಳ, ಸಾರಿಗೆ, ಮನೆ, ಆಳು, ಕಾಳು ಎಲ್ಲವನ್ನೂ ಒದಗಿಸಿ, ಎಲ್ಲರಿಗೂ ಒಳಿತಾಗುವಂತೆ ಆಡಳಿತವನ್ನು ನಡೆಸಿಕೊಂಡು ಹೋಗುವಂತೆ ಜನಾದೇಶವನ್ನು ನೀಡುತ್ತೇವೆ. ಹೀಗಾಗಿ, ಒಬ್ಬರ ಬಳಿ ಅರ್ಧ ದೇಶವನ್ನು ಕೊಂಡುಕೊಳ್ಳುವಷ್ಟು ಹಣವಿದ್ದರೂ ಅವರು ಕುಬೇರರಾಗಬಹುದು, ಆದರೆ ಒಬ್ಬ ಶಾಸಕರಾಗಲು ಸಾಧ್ಯವಿಲ್ಲ. ಭಾರತದ ಜನತೆಯಾದ ನಾವು ನಮ್ಮ ಸರ್ವೋಚ್ಚ ಅಧಿಕಾರವನ್ನು ಹಂಚಿಕೊಂಡಾಗಲೇ ಅವರು ಶಾಸಕರು, ಸಂಸದರು ಆಗಲು ಸಾಧ್ಯ.

ಮತಾಧಿಕಾರದ ಹಕ್ಕು ಸಾಂವಿಧಾನಿಕ ಹಕ್ಕಾಗಿದ್ದರೂ ಅದು ನಮ್ಮ ಮೂಲಭೂತ ಹಕ್ಕಲ್ಲ ಎಂದು ಹೇಳುವವರಿದ್ದಾರೆ. ಸರಿ, ಹಾಗಾದರೆ ಮೊದಲು 'ಮತ' ಎಂದರೇನು ಎಂಬುದನ್ನು ತಿಳಿದುಕೊಳ್ಳೋಣ. ಇಲ್ಲಿ, ಮತ ಎಂದರೆ 'ಅಭಿಪ್ರಾಯ', 'ಆಶಯ'. ಮತಾಧಿಕಾರ ಎಂದರೆ ನಮಗೆ ಯೋಗ್ಯರೆನಿಸಿದ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ನಮ್ಮ ನಿರಂಕುಶ ಹಕ್ಕು. ಆದ್ದರಿಂದ ನಾವು ಮಾಡುವುದು 'ಮತದಾನ'ವಲ್ಲ, 'ಮತ ಚಲಾವಣೆ'.

ನಮ್ಮ ದೇಶದಲ್ಲಿ ಯಾವುದೇ ಚುನಾವಣೆ ನಡೆಯುವುದು 'ಗುಪ್ತ ಮತ ಚಲಾವಣೆ'ಯ ಮೂಲಕ. ಎಂದರೆ, ಇಲ್ಲಿ ಮತದಾರನ ಆಯ್ಕೆಯು ಅನಾಮಧೇಯವಾಗಿರುತ್ತದೆ. ಇದರ ಉದ್ದೇಶವೇ ಧನ, ಕನಕ, ದವಸಧಾನ್ಯ, ವಸ್ತು, ಓಲೈಕೆ, ಬೆದರಿಕೆ ಯಾವುದರಿಂದಲೂ ಮತದಾರರ ಆಲೋಚನೆ, ಅಭಿಪ್ರಾಯವನ್ನು ಭ್ರಷ್ಟಗೊಳಿಸುವುದಕ್ಕೆ ಸಾಧ್ಯವಾಗಬಾರದು ಎಂಬುದನ್ನು ಖಚಿತಪಡಿಸಿಕೊಳ್ಳುವುದಾಗಿದೆ.

ಮತ ಎನ್ನುವುದು ನಮ್ಮ ಸ್ವಂತ ಅಭಿಪ್ರಾಯ, ಅದನ್ನು ಚಲಾಯಿಸುವುದು ಎಂದರೆ ನಮ್ಮ ಆಯ್ಕೆಯ ಅಭಿವ್ಯಕ್ತಿ. ಇದು ಅಬಾಧಿತವಾಗಿರಬೇಕು. ಆದರೆ, ಇಂದು ಸರ್ಕಾರದ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಬೇಕಾದ ಮತದಾರರು ಬೇಕಾದವರು ಬೇಕಾದ ಹಾಗೆ ಒದೆಯಬಹುದಾದ ಕಾಲ್ಚೆಂಡಾಗಿದ್ದಾರೆ. ಈಗ ಹದಿನೆಂಟು ದಾಟಿದ ಹರೆಯದವರಿಗೂ ಮತವನ್ನು ಚಲಾಯಿಸುವ ಅಧಿಕಾರ ಪ್ರಾಪ್ತವಾಗಿದೆ. ಈ ಎಳೆಯ ಮನಸ್ಸುಗಳನ್ನು ತಮ್ಮ ವಶಕ್ಕೆ ಸೆಳೆದುಕೊಂಡು ಅವರ ದೈಹಿಕ, ಮಾನಸಿಕ ಶಕ್ತಿಗಳನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇನ್ನೂ ಹೆಚ್ಚಾಗಿದೆ. ಇನ್ನೊಂದು ಕಡೆ, ಕೆಲವು ಮಾಧ್ಯಮಗಳು ಚುನಾವಣೆಯಂಥ ಸಾಂವಿಧಾನಿಕ ವಿದ್ಯಮಾನವನ್ನು ಕುರುಕ್ಷೇತ್ರ, ರಣರಂಗ, ರಣಕಹಳೆ, ದಂಗಲ್, ಅಖಾಡ, ಮತಬೇಟೆ ಎಂಬಂಥ ಉದ್ರೇಕಕಾರಿ ಪದಗಳಿಂದ ವರ್ಣಿಸಿ, ಅಷ್ಟೇ ಉದ್ರೇಕಕಾರಿ ಹಿನ್ನೆಲೆ ಸಂಗೀತ, ಧ್ವನಿ ವಿಶೇಷಗಳನ್ನು ಬಳಸಿ, ವ್ಯಕ್ತಿಯ ವಿವೇಚನೆಗೆ ಇಂಬುಕೊಡಬೇಕಾದ ವಾತಾವರಣವನ್ನು ಮಲಿನಗೊಳಿಸುವುದರಲ್ಲಿ ಸ್ಪರ್ಧೆಗೆ ಇಳಿದಿವೆ.

ಹಾಗೆಯೇ, ಅವರಿಂದಲೇ ಅಧಿಕಾರವನ್ನು ಪಡೆದುಕೊಳ್ಳುವ ಜನಪ್ರತಿನಿಧಿಗಳು ಮತ್ತು ಅವರ ಚೇಲಾಗಳು ತಮ್ಮ ಹಣ ಮತ್ತು ದರ್ಪವನ್ನು ಬಳಸಿ ಮತದಾರ ಮಾಲೀಕರನ್ನು ಭಿಕಾರಿಗಳನ್ನಾಗಿಸಿದ್ದಾರೆ. ಮತಾಕಾಂಕ್ಷಿತರು ಏನೇನೋ ನೆಪದಲ್ಲಿ ಆಯೋಜಿಸುವ ಪುಣ್ಯಕ್ಷೇತ್ರ ದರ್ಶನಗಳು, ಕುಕ್ಕರ್, ಟಿ.ವಿ, ದವಸ ಧಾನ್ಯ, ಸೀರೆಯಂತಹವುಗಳನ್ನು ಉಚಿತವಾಗಿ ಹಂಚುತ್ತಾರೆ ಎಂದಾಗ, ಅವನ್ನು ತೆಗೆದುಕೊಳ್ಳಲು ಮುಗಿಬೀಳುವ ಮತದಾರರನ್ನು ಕಂಡು ಕನಿಕರ ಎನ್ನಿಸುತ್ತದೆ. ಚುನಾವಣಾ ರ್‍ಯಾಲಿಗಳಿಗೆ ಹಣ ಪಡೆದು ಬಂದು, ಅವರು ಅಲ್ಲಿ ಕೊಡುವ ಬಿರಿಯಾನಿಯನ್ನು ತಿನ್ನಲು ಕಚ್ಚಾಡುವ ಮತದಾರರನ್ನು ನೋಡಿ ಬೇಸರ ಆಗುತ್ತದೆ. ಮತದಾರರನ್ನು ಈ ಮಟ್ಟಕ್ಕೆ ಭ್ರಷ್ಟರನ್ನಾಗಿ ಮಾಡಿದ್ದನ್ನು ನೋಡಿ ಬೀಗುವ ರಾಜಕಾರಣಿಗಳನ್ನು ನೋಡಿ ಅಸಹ್ಯವೆನಿಸುತ್ತದೆ. ನಾಗರಿಕರಲ್ಲಿ ಸಂವಿಧಾನದ ಕುರಿತು, ಜನತಂತ್ರದಲ್ಲಿನ ತಮ್ಮ ಹಕ್ಕು-ಬಾಧ್ಯತೆಗಳ ಕುರಿತು ಮೂಲಭೂತ ಸಾಕ್ಷರತೆಯನ್ನೂ ಪ್ರಸಾರ ಮಾಡದೇ ಇರುವ ಬಗ್ಗೆ ಪ್ರಜ್ಞಾವಂತರೆಂದು ಹೇಳಿಕೊಳ್ಳುವ ನಮ್ಮ ಬಗ್ಗೆಯೇ ಖೇದವೆನ್ನಿಸುತ್ತದೆ.



ಇರಲಿ, ತಕ್ಷಣ ಮಾಡಬೇಕಾಗಿರುವ ಮಹತ್ತರವಾದ ಕೆಲಸವೆಂದರೆ, ಎಲ್ಲ ಅರ್ಹ ನಾಗರಿಕರು ಸ್ವಯಂ ವಿವೇಚನೆಯಿಂದ ಆದಷ್ಟು ಅರ್ಹ ಪ್ರತಿನಿಧಿಯನ್ನು ಆಯ್ಕೆ ಮಾಡುವುದು. ಇದು ಮತವನ್ನು ಚಲಾಯಿಸುವುದರಿಂದ ಮಾತ್ರ ಸಾಧ್ಯ. ಆದ್ದರಿಂದ, ಜನತಂತ್ರದ ಶಕ್ತಿಕೇಂದ್ರಗಳೇ ಎದ್ದೇಳಿ, ನಿಮ್ಮ ಅಧಿಕಾರವನ್ನೊಮ್ಮೆ ಚಲಾಯಿಸಿ. ನಾನೊಬ್ಬ ಮತ ಚಲಾಯಿಸದೇ ಇದ್ದರೆ ಏನಂತೆ ಎನ್ನುವ ಉಪೇಕ್ಷೆ ಬಹಳ ದುಬಾರಿ. ಒಂದೇ ಮತದಿಂದ ಜನಪ್ರತಿನಿಧಿಗಳು ಆಯ್ಕೆಯಾಗಿರುವ ಉದಾಹರಣೆಗಳು ಅನೇಕ ಇವೆ. ಆದ್ದರಿಂದ, ಅಧಿಕಾರದಲ್ಲಿರುವ ಪಕ್ಷವು ಜನಪರವಾದ ಉತ್ಕೃಷ್ಟವಾದ ಕಾರ್ಯಗಳನ್ನು ಮಾಡಿದೆ ಎಂಬುದು ನಿಮ್ಮ ಪ್ರಾಮಾಣಿಕ ಅಭಿಪ್ರಾಯವಾಗಿದ್ದರೆ ಅದನ್ನು ಉಳಿಸಿಕೊಳ್ಳಲು ನೀವು ಮತ ಚಲಾಯಿಸಬೇಕು. ಇಲ್ಲ, ನಮ್ಮಿಂದ ಚುನಾಯಿತವಾದ ಸರ್ಕಾರವು ನಮ್ಮ ವಿಶ್ವಾಸಕ್ಕೆ ದ್ರೋಹ ಬಗೆದಿದೆ, ದುರಾಡಳಿತ, ಭ್ರಷ್ಟಾಚಾರ ತಾಂಡವವಾಡುತ್ತಿದೆ ಎನ್ನುವುದು ನಿಮ್ಮ ಅಭಿಪ್ರಾಯವಾಗಿದ್ದರೆ ಅದನ್ನು ಕಿತ್ತೊಗೆಯುವುದಕ್ಕೂ ನೀವು ಮತ ಚಲಾಯಿಸಬೇಕು. ನೆನಪಿಡಿ: ಜನತಂತ್ರದಲ್ಲಿ ಮತದಾರರ ಯೋಗ್ಯತೆಗೆ ತಕ್ಕ ಸರ್ಕಾರಗಳು ಇರುತ್ತವೆ.

ವಾಚಕರ ವಾಣಿ

ಚುನಾವಣಾ ರಾಜಕೀಯ: ಮಹಿಳೆಯ ಕಡೆಗಣನೆ

ಕರ್ನಾಟಕ ವಿಧಾನಸಭಾ ಚುನಾವಣೆ ಹತ್ತಿರ ಬಂದಿದೆ. ಅಭ್ಯರ್ಥಿಗಳಾಗಿ ಟಿಕೆಟ್ ಪಡೆಯಲು ಪ್ರತಿಯೊಂದು ಕ್ಷೇತ್ರದಲ್ಲೂ ತುರುಸಿನ ಸ್ಪರ್ಧೆ ಏರ್ಪಟ್ಟಿದೆ. ರಾಜಕೀಯ ಪಕ್ಷಗಳು ಕರ್ನಾಟಕದ ಎರಡೂವರೆ ಕೋಟಿ ಮಹಿಳಾ ಮತದಾರರನ್ನು ಇದುವರೆಗೂ ಹೇಗೆ ಪರಿಗಣಿಸಿವೆ? ಅವರಿಗೆ ಹುಸಿಹುಸಿ ಯೋಜನೆಗಳನ್ನು ಕಾಗದದ ಮೇಲೆ ತೋರಿಸುತ್ತ, ಮಹಿಳೆಯರ ಭಾವಪ್ರಪಂಚವನ್ನು ದುರ್ಬಳಕೆ ಮಾಡಿಕೊಳ್ಳುತ್ತ, ಪರಿಕರಗಳ ಆಮಿಷ ತೋರಿಸುತ್ತ, ಕೌಟುಂಬಿಕ ಆರೋಗ್ಯ, ನೆಮ್ಮದಿಯನ್ನು ಹಾಳು ಮಾಡುವ ಮದ್ಯ ಹಂಚುತ್ತ ಮತವನ್ನು ಪಡೆಯವ ಹುನ್ನಾರದಲ್ಲೇ ನಿಂತುಬಿಟ್ಟಿವೆ. ಮಹಿಳೆಯರನ್ನು ರಾಜಕೀಯ ಪ್ರಕ್ರಿಯೆಗಳಲ್ಲಿ ದುಡಿಮೆಗಷ್ಟೇ ಸೀಮಿತಗೊಳಿಸಿ, ನಾಯಕತ್ವದ ಅವಕಾಶಗಳಿಂದ ದೂರವೇ ಇರಿಸಿವೆ.

ಕಾಂಗ್ರೆಸ್ ಪಕ್ಷದ ಮೊದಲ ಪಟ್ಟಿಯ 124 ಸ್ಥಾನಗಳಲ್ಲಿ ಬರೀ ಆರು ಮಹಿಳಾ ಅಭ್ಯರ್ಥಿಗಳಿದ್ದಾರೆ! ಎಂದಿನಂತೆ ರಾಷ್ಟ್ರೀಯ, ಪ್ರಾದೇಶಿಕ, ಎಡ ಎನ್ನದೆ ಎಲ್ಲ ರಾಜಕೀಯ ಪಕ್ಷಗಳೂ ಈ ಬಾರಿಯೂ ಇದನ್ನೇ ಮುಂದುವರಿಸುವ ಸಾಧ್ಯತೆ ಕಣ್ಣಿಗೆ ರಾಚುತ್ತಿದೆ. ಹೀಗಿರುವಾಗ 'ಜಾಗೃತ' ಮತದಾರರಾಗಿ ಪ್ರತಿಯೊಂದು ಪಕ್ಷವೂ ಟಿಕೆಟ್ ಹಂಚಿಕೆಯಲ್ಲಿ ಮತ್ತು ಆಂತರಿಕ ರಚನೆ, ಸಮಿತಿ, ಯೋಜನೆಗಳಲ್ಲಿ ಮಹಿಳೆಯರಿಗೆ ಸಮಾನ ಗೌರವ, ಸಮಾನ ಅವಕಾಶ, ನಿರ್ಧಾರಕ ಸ್ಥಾನಮಾನ ನೀಡಬೇಕೆಂದು, ಕೇಂದ್ರ- ರಾಜ್ಯ ಶಾಸನಸಭೆಗಳಲ್ಲೂ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕೊಡಲೇಬೇಕೆಂದು ಹಕ್ಕೊತ್ತಾಯ ಹೇರೋಣ ಬನ್ನಿ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪರವಾಗಿ: ಗುಲಾಬಿ ಬಿಳಿಮಲೆ, ಎಂ.ಎನ್.ಸುಮನಾ ನೆಟ್ಟಾರ್, ವಾಣಿ ಪೆರಿಯೋಡಿ, ರತಿ ರಾವ್, ಸಬಿಹಾ ಭೂಮಿಗೌಡ, ಶಾಂತಮ್ಮ ಕೋಲಾರ, ಲಿನೆಟ್ ಡಿಸಿಲ್ವಾ, ಸಬಿತಾ ಬನ್ನಾಡಿ, ಅಖಿಲಾ ವಿದ್ಯಾಸಂದ್ರ, ಆರ್.ಪ್ರತಿಭಾ, ಗೌರಿ, ರೇಖಾಂಬಾ ಶಿವಮೊಗ್ಗ, ಬಾ.ಹ.ರಮಾಕುಮಾರಿ, ಡಿ.ಅರುಂಧತಿ, ಎಚ್.ಎಸ್.ಅನುಪಮಾ

ಎಸ್‌ಎಸ್‌ಎಲ್‌ಸಿ ಕೃಪಾಂಕ: ಮರುಪರಿಶೀಲನೆ ಆಗಲಿ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಿಸಲು ಭಾಷಾ ವಿಷಯಗಳಿಗೆ ಶೇಕಡ 10 ಮತ್ತು ಐಚ್ಛಿಕ ವಿಷಯಗಳಿಗೆ ಶೇಕಡ 8ರಂತೆ ಒಟ್ಟು ಮೂರು ವಿಷಯಗಳಿಗೆ ಕೃಪಾಂಕ ನೀಡಲು ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿರುವುದು (ಪ್ರ.ವಾ., ಏ. 4) ಅಸಮಂಜಸವಾಗಿದೆ. ಈ ವರ್ಷ ಹೀಗೆ ಕೃಪಾಂಕ ನೀಡಲು ಯಾವುದೇ ಕಾರಣಗಳಿಲ್ಲ. ಒಂದು ಕಡೆ ಪ್ರಾಥಮಿಕ ಹಂತದಲ್ಲಿ ಗುಣಮಟ್ಟ ಸುಧಾರಣೆಗೆ ಐದು ಮತ್ತು ಎಂಟನೇ ತರಗತಿಗಳಿಗೆ ಸರ್ಕಾರ ಬೋರ್ಡ್ ಪರೀಕ್ಷೆ ನಡೆಸುತ್ತಿದ್ದರೆ, ಮತ್ತೊಂದು ಕಡೆ ಕೃಪಾಂಕಗಳ ಅನುಗ್ರಹ ಆಗುತ್ತಿದೆ. ಫಲಿತಾಂಶ ಹೆಚ್ಚಿಸುವುದೊಂದೇ ಮಂಡಳಿಯ ಉದ್ದೇಶವಾಗಿದ್ದರೆ ಪಾಸ್ ಆಗಲು ಕನಿಷ್ಠ ಅಂಕಗಳನ್ನು ಪಡೆಯದ ಎಲ್ಲ ಮಕ್ಕಳಿಗೆ ಪಾಸ್ ಆಗುವಷ್ಟು ಅಂಕಗಳನ್ನು ನೀಡಿ ನೂರಕ್ಕೆ ನೂರರಷ್ಟು ಫಲಿತಾಂಶ ತರಬಹುದಲ್ಲವೇ?

ಇಂದು ಶಿಕ್ಷಣದ ಎಲ್ಲ ಹಂತಗಳಲ್ಲಿ ಕಳಪೆ ಗುಣಮಟ್ಟದ ಬೋಧನೆ ಮತ್ತು ಕಲಿಕೆಯೇ ಮುಖ್ಯ ಪ್ರಶ್ನೆ ಆಗಿರುವಾಗ ಇಂಥ ಕ್ರಮಗಳು ಮತ್ತಷ್ಟು ವ್ಯತಿರಿಕ್ತ ಪರಿಣಾಮ ಬೀರುತ್ತವೆ. ವಿದ್ಯಾರ್ಥಿಗಳು ಮತ್ತು ಪಾಲಕರಿಗೆ ಇದರಿಂದ ತಪ್ಪು ಸಂದೇಶ ರವಾನೆ ಆಗುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಕಲಿಕೆ ಗಟ್ಟಿಗೊಂಡಾಗಲೇ ಮುಂದಿನ ಶಿಕ್ಷಣಕ್ಕೆ ಭದ್ರ ಅಡಿಪಾಯ ಒದಗುತ್ತದೆ. ಆದ್ದರಿಂದ ಈ ಬಗ್ಗೆ ಮರುಚಿಂತನೆ ಆಗಲಿ.

ವೆಂಕಟೇಶ ಮಾಚಕನೂರ, ಧಾರವಾಡ

ತೊಗಲುಗೊಂಬೆಯ ಮಾಯಕಾರ

ಅಪಘಾತದಲ್ಲಿ ಮೃತಪಟ್ಟಿರುವ ಬೆಳಗಲ್ ವೀರಣ್ಣ ಅಪಾರ ಪ್ರತಿಭಾವಂತ, ಅಷ್ಟೇ ವಿನಯಮೂರ್ತಿ. ಎಲ್ಲರನ್ನೂ ತುಂಬಾ ಪ್ರೀತಿ ಹಾಗೂ ಅಭಿಮಾನದಿಂದ ಆದರಿಸುತ್ತಿದ್ದ ಅದ್ಭುತ ಕಲಾಕಾರ. ಪರಂಪರೆಯ ಕಲೆಯನ್ನು ಪ್ರಯೋಗಶೀಲತೆಯ ಪರಿವೇಶದಲ್ಲಿ ಕಟ್ಟಿಕೊಡುತ್ತಾ ಬೃಹತ್ ಗೊಂಬೆಗಳನ್ನು ದೇಶ ವಿದೇಶದಲ್ಲಿ ಅದ್ಭುತವಾಗಿ ಪ್ರದರ್ಶಿಸಿ ಕರ್ನಾಟಕದ ಜನಪದ ರಂಗಭೂಮಿಯ ತೊಗಲು ಗೊಂಬೆಯಾಟ ಪ್ರಕಾರಕ್ಕೆ ಮನ್ನಣೆ ತಂದುಕೊಡುವಲ್ಲಿ ಬಹುಮುಖ್ಯ ಪಾತ್ರ ವಹಿಸಿದವರು. ಜಾನಪದ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಕೂಡ ಅವರ ಸೇವೆ ಗಮನಾರ್ಹ.

ಸಜ್ಜನಿಕೆ, ಸಾಂಸ್ಕೃತಿಕತೆ, ಸಾತ್ವಿಕತೆ ಹಾಗೂ ಸರಳತೆ ಮೇಳೈಸಿದ ವ್ಯಕ್ತಿತ್ವವನ್ನು ಸಹಜವಾಗಿಯೇ ರೂಢಿಸಿಕೊಂಡಿದ್ದ ವೀರಣ್ಣ ಅವರ ಅಗಲಿಕೆ ಖಂಡಿತವಾಗಿಯೂ ತುಂಬಲಾರದ ನಷ್ಟ. ಪೌರಾಣಿಕ ಕಥಾನಕಗಳ ಜೊತೆಗೆ ಸಮಕಾಲೀನ ವಸ್ತುಗಳನ್ನು ಗೊಂಬೆಯಾಟಕ್ಕೆ ಅಳವಡಿಸಿದ ಪ್ರಯೋಗಶೀಲರು ಅವರು. ರಂಗದ ಮೇಲೆ ಅಭಿನಯಿಸುತ್ತಿದ್ದ ಪಾತ್ರಗಳು, ಅವರ ಗಾಯನ, ಸ್ಫುಟವಾದ ಮಾತಿನ ಶಕ್ತಿ ಹಾಗೂ ಅವರ ಮುಖದಲ್ಲಿ ಸದಾ ಇರುತ್ತಿದ್ದ ಮೆಲುನಗೆ ಇನ್ನು ನೆನಪು ಮಾತ್ರ. ಅವರು ಉಳಿಸಿ, ಬೆಳೆಸಿ ಕಟ್ಟಿದ ಗೊಂಬೆಯಾಟ ಪರಂಪರೆಯನ್ನು ಉಳಿಸುವ ಜವಾಬ್ದಾರಿ ನಮ್ಮದಾಗಿದೆ. ಹಿರಿಯ ಜೀವ ರಸ್ತೆ ಅಪಘಾತದಲ್ಲಿ ನಿಧನರಾದದ್ದು ಅತ್ಯಂತ ನೋವಿನ ಸಂಗತಿ.

ಶಶಿಧರ ಭಾರಿಘಾಟ್, ಬೆಂಗಳೂರು

ಇಚ್ಛಾನುಸಾರ ಬಳಸಲು ಅವಕಾಶ ಇಲ್ಲ

'ಶ್ರೀಕಂಠೇಶ್ವರನ ಹುಂಡಿಗೆ ಶಾಸಕನ ಕೈ' ವರದಿ (ಪ್ರ.ವಾ., ಏ. 4) ನೋಡಿ ಅಚ್ಚರಿಯಾಯಿತು. ಆಯಾ ದೇವಾಲಯದ ಆದಾಯ ಅದೇ ದೇವಾಲಯದ ಅಭಿವೃದ್ಧಿಗೆ ಅಥವಾ ಭೇಟಿ ನೀಡುವ ಭಕ್ತಾದಿಗಳಿಗೆ ಮೂಲ ಸೌಕರ್ಯ ಕಲ್ಪಿಸುವುದಕ್ಕೆ ಮಾತ್ರವಾಗಿರುತ್ತದೆ ಎಂಬುದು ಸಾಮಾನ್ಯ ತಿಳಿವಳಿಕೆಯಾಗಿದ್ದರೂ ಇದಕ್ಕೆ ಪೂರಕವಾದ ಕಾನೂನು ಇರುವುದನ್ನು ಗಮನಿಸಬಹುದು. ಸಾಮಾನ್ಯ ಭಕ್ತ ಆ ದೇವಾಲಯಕ್ಕೆ ಹರಕೆ ಹೊತ್ತು ತಾನು ಸಲ್ಲಿಸುವ ಕಾಣಿಕೆ ಆಯಾ ದೇವಾಲಯಕ್ಕೆ ಸಲ್ಲಬೇಕೆಂಬ ಸದ್ಭಾವನೆ ಹೊಂದಿರುತ್ತಾನೆಯೇ ವಿನಾ ಚುನಾಯಿತ ಪ್ರತಿನಿಧಿಗಳು ತಮ್ಮ ಇಚ್ಛಾನುಸಾರ ಖರ್ಚು ಮಾಡುವ ಉದ್ದೇಶಕ್ಕಲ್ಲ. ಈ ರೀತಿಯ ಹಣವನ್ನು ಸಾರ್ವಜನಿಕ ಅಗತ್ಯಕ್ಕೆ ಬಳಸುತ್ತಿದ್ದೇವೆ, ಇದರಲ್ಲಿ ತಪ್ಪೇನಿದೆ ಎಂಬ ಅಸಂಬದ್ಧ ಸಮರ್ಥನೆಯನ್ನು ಶಾಸಕರು ನೀಡಿದ್ದಾರೆ. ಹೌದು ಸ್ವಾಮಿ, ಸಾರ್ವಜನಿಕ ಅಗತ್ಯಕ್ಕೆ ನೀವು ಹಲವಾರು ರೀತಿಯ ತೆರಿಗೆಯನ್ನು ಸಾರ್ವಜನಿಕರ ಮೇಲೆ ವಿಧಿಸಿ ಸಂಗ್ರಹಿಸುತ್ತಿದ್ದೀರಲ್ಲಾ, ಅದರಲ್ಲಿ ವಿನಿಯೋಗಿಸಬೇಕೆ ವಿನಾ ದೇವಾಲಯದ ಭಕ್ತರ ಹರಕೆಯ ಹುಂಡಿಯ ದುಡ್ಡಿನಲ್ಲಲ್ಲ. ಸಮುದಾಯ ಭವನ ನಿರ್ಮಿಸಿ ನೀವು ಹೆಸರು ಗಳಿಸಬೇಕಾಗಿದ್ದರೆ ನಿಮ್ಮ ಹಣದಿಂದ ಅಥವಾ ಆಯಾ ಸಮುದಾಯದ ಹಣದಿಂದ ಇಲ್ಲವೇ ಸಾರ್ವಜನಿಕರ ತೆರಿಗೆ ಹಣದಿಂದ ಕಟ್ಟಿಸಿ.

ಕೆ.ಎಂ.ನಾಗರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೀವ್ರ ಹೃದಯಾಘಾತಕ್ಕೂ ಕೋವಿಡ್‌ಗೂ ಸಂಬಂಧವಿದೆಯೇ?



ಪ್ರಜಾವಾಣಿ ವಾರ್ತೆ

ಯುವಜನರು ಮತ್ತು ಮಧ್ಯವಯಸ್ಕರು ತೀವ್ರ ಹೃದಯಾಘಾತದಿಂದ ಮೃತಪಡುವ ಘಟನೆಗಳು ಮತ್ತೆ ಮತ್ತೆ ವರದಿಯಾಗುತ್ತಿವೆ. ಸಿನಿಮಾ ನಟರು, ಕಲಾವಿದರು, ಕ್ರೀಡಾಪಟುಗಳು ತೀವ್ರ ಹೃದಯಾಘಾತಕ್ಕೆ ಬಲಿಯಾದ ಸುದ್ದಿಗಳು ಇನ್ನೂ ನೆನಪಿನಿಂದ ಮಾಸಿಲ್ಲ. ಒಂದು ಘಟನೆ ಮಾಸುವ ಮುನ್ನ ಇಂತಹ ಮತ್ತೊಂದು ಸಾವು ಸಂಭವಿಸುತ್ತಿದೆ. ಕೋವಿಡ್‌ಗೂ ಇಂತಹ ತೀವ್ರ ಹೃದಯಾಘಾತಕ್ಕೂ ಸಂಬಂಧವಿದೆಯೇ ಎಂಬ ಪ್ರಶ್ನೆ, ಇಂತಹ ಸಾವು ಸಂಭವಿಸಿದಾಗಲೆಲ್ಲಾ ಮುನ್ನೆಲೆಗೆ ಬರುತ್ತದೆ. ಈ ಬಗ್ಗೆ ಸಂಶೋಧನೆ ನಡೆಯಬೇಕು ಎಂಬ ಕೂಗೂ ಜೋರಾಗೇ ಕೇಳಿಬಂದಿದೆ. ಅಂತಹ ಸಂಶೋಧನೆಯನ್ನು ಈಗಷ್ಟೇ ಆರಂಭಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಮಂಗಳವಾರವಷ್ಟೇ ಹೇಳಿದ್ದಾರೆ. ಆದರೆ, ಕೋವಿಡ್‌ಗೂ ತೀವ್ರ ಹೃದಯಾಘಾತಕ್ಕೂ ಸಂಬಂಧ ಇರಬಹುದು ಎಂಬುದರತ್ತ ಪಾಶ್ಚಾತ್ಯ ದೇಶಗಳಲ್ಲಿ ಈಗಾಗಲೇ ನಡೆದಿರುವ ಸಂಶೋಧನೆಗಳು ಬೊಟ್ಟು ಮಾಡುತ್ತಿವೆ.

2020ರಲ್ಲಿ ಕೋವಿಡ್ ವಿಶ್ವಕ್ಕೆಲ್ಲಾ ವ್ಯಾಪಿಸಿದಾಗ, ಉಸಿರಾಟದ ಸಮಸ್ಯೆಯಿಂದ ಸಂಭವಿಸುತ್ತಿದ್ದ ಸಾವು ತಕ್ಷಣದ ಪರಿಣಾಮ ಎಂಬುದು ಗೊತ್ತಾಗಿತ್ತು. ಮಾನವನ ನರವ್ಯೂಹ, ಹೃದಯ, ರಕ್ತನಾಳಗಳು ಮತ್ತು ಮೂತ್ರಪಿಂಡದ ಮೇಲೂ ಕೋವಿಡ್ ಪರಿಣಾಮ ಬೀರುತ್ತದೆ ಎಂಬುದು ಪತ್ತೆಯಾಗಿತ್ತು. ಆದರೆ, ಈ ಪರಿಣಾಮಗಳ ತೀವ್ರತೆ ಏನು ಎಂಬುದು ಗೊತ್ತಿರಲಿಲ್ಲ ಹಾಗೂ ಕೋವಿಡ್‌ನ ದೀರ್ಘಾವಧಿ ಪರಿಣಾಮಗಳೇನು ಎಂಬುದು ಪತ್ತೆಯಾಗಿರಲಿಲ್ಲ. ಆದರೆ, ಕೋವಿಡ್‌ನಿಂದ ಗುಣಮುಖರಾದವರೂ ತೀವ್ರ ಹೃದಯಾಘಾತದಿಂದ ಮೃತಪಡುವ ಹಲವು ಪ್ರಕರಣಗಳು ವರದಿಯಾದವು. ಹೀಗಾಗಿ ಕೋವಿಡ್ ಮತ್ತು ತೀವ್ರ ಹೃದಯಾಘಾತಕ್ಕೂ ಸಂಬಂಧವಿದೆಯೇ ಎಂಬುದನ್ನು ಪರಿಶೀಲಿಸಲು ಅಮೆರಿಕದಲ್ಲಿ 2020ರ ಅಂತ್ಯದ ವೇಳೆಗೇ ಸಂಶೋಧನೆ ಆರಂಭಿಸಲಾಗಿತ್ತು. ಅಮೆರಿಕದಲ್ಲಿ, ಕೋವಿಡ್ ರೋಗಿಗಳಲ್ಲಿ ಒಟ್ಟು 4.65 ಲಕ್ಷ ಜನರನ್ನು ಈ ಸಂಶೋಧನೆಗೆ ಒಳಪಡಿಸಲಾಗಿತ್ತು. 20 ವರ್ಷದಿಂದ 60 ವರ್ಷದೊಳಗಿನ ಗಂಡಸರು ಮತ್ತು ಹೆಂಗಸರನ್ನು ಸಂಶೋಧನೆಗೆ ಒಳಪಡಿಸಲಾಗಿತ್ತು. ಕೋವಿಡ್ ಸೋಂಕು ದೃಢಪಟ್ಟ ಒಂದು ತಿಂಗಳಿನಿಂದ 12 ತಿಂಗಳವರೆಗೆ ಅವರ ಮೇಲೆ ನಿಗಾ ಇರಿಸಲಾಗಿತ್ತು. ಆನಂತರ ಸಂಶೋಧನಾ ವರದಿಯನ್ನು ಬಿಡುಗಡೆ ಮಾಡಲಾಗಿತ್ತು. ಈ ಅಧ್ಯಯನಕ್ಕೆ ಒಳಪಟ್ಟವರನ್ನು ಕೋವಿಡ್ ತಗಲುವ ಮುನ್ನವೇ ಹೃದಯಸಂಬಂಧಿ ಕಾಯಿಲೆಗಳಿಂದ ಬಳಲುತ್ತಿದ್ದವರು ಮತ್ತು ಹೃದಯ ಸಂಬಂಧಿ ಕಾಯಿಲೆ ಇಲ್ಲದೇ ಇದ್ದವರು ಎಂದು ವರ್ಗೀಕರಿಸಲಾಗಿತ್ತು.

ಹೃದಯಸಂಬಂಧಿ ಕಾಯಿಲೆ ಮೊದಲೇ ಇದ್ದವರಲ್ಲಿ ಕೋವಿಡ್ ತಗುಲಿದ ನಂತರ, ಆ ಸಮಸ್ಯೆಗಳ ತೀವ್ರತೆ ಹೆಚ್ಚಾಗಿತ್ತು ಎಂಬುದನ್ನು ಈ ಸಂಶೋಧನೆ ಹೇಳುತ್ತದೆ. ಜತೆಗೆ, ಇಂತಹ ಸಮಸ್ಯೆ ಇಲ್ಲದೇ ಇದ್ದವರಲ್ಲೂ ಹೃದಯ ಸಂಬಂಧಿ ಕಾಯಿಲೆಗಳು ತಲೆದೋರಿದ್ದನ್ನು ಸಂಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. 20ರಿಂದ 50 ವರ್ಷ ವಯೋಮಾನದವರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಿನ ಪ್ರಮಾಣದಲ್ಲಿ ತಲೆದೋರಿದ್ದವು. ಹೀಗೆ ಹೊಸದಾಗಿ ಹೃದಯ ಕಾಯಿಲೆಗಳಿಗೆ ಒಳಗಾದವರಲ್ಲಿ ಮರಣ ದರವೂ ಹೆಚ್ಚು ಇತ್ತು. ಕೋವಿಡ್ ತಗುಲಿದ್ದವರಲ್ಲಿ, ದೀರ್ಘಾವಧಿಯಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಮಾತ್ರವಲ್ಲ ಪಾರ್ಶ್ವವಾಯುವಿನ ಸಮಸ್ಯೆಗಳೂ ಕಂಡುಬಂದಿವೆ ಎಂಬುದರತ್ತ ಸಂಶೋಧನಾ ವರದಿಯು ಬೊಟ್ಟುಮಾಡುತ್ತದೆ.

ಬ್ರಿಟನ್‌ನಲ್ಲಿ 2020ರಿಂದ 2022ರ ಅಕ್ಟೋಬರ್ ಮಧ್ಯೆ ಬ್ರಿಟನ್ ಮತ್ತು ಅಮೆರಿಕದ ಆರೋಗ್ಯ ಸಂಸ್ಥೆಗಳು ಜಂಟಿಯಾಗಿ ಮತ್ತೊಂದು ಅಧ್ಯಯನವನ್ನು ನಡೆಸಿದ್ದವು. ಈ ಅಧ್ಯಯನದಲ್ಲಿ 17,761 ಜನರನ್ನು ಒಳಗೊಳ್ಳಲಾಗಿತ್ತು. ಕೋವಿಡ್ ಬಾಧಿತರು ಮತ್ತು ಕೋವಿಡ್‌ನಿಂದ ಗುಣಮುಖರಾದವರು ನಂತರದ ದಿನಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಗೆ ಒಳಗಾದರು ಎಂಬುದನ್ನು ಈ ಸಂಶೋಧನೆಯೂ ಸಾಬೀತು ಮಾಡಿತ್ತು. ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚು ಇರುವ ಕುಟುಂಬದ ಸದಸ್ಯರಲ್ಲಿ, ಕೋವಿಡ್ ನಂತರ ಅಂತಹ ಕಾಯಿಲೆಗಳಿಗೆ ಒಳಗಾಗುವ ಪ್ರಮಾಣ ಹೆಚ್ಚು ಎಂಬುದನ್ನು ಈ ಸಂಶೋಧನಾ ವರದಿಯಲ್ಲಿ ಹೇಳಲಾಗಿತ್ತು.

ಭಾರತದಲ್ಲಿ ತಡವಾಗಿ ಕ್ರಮ?

ಕೋವಿಡ್ ಮತ್ತು ತೀವ್ರ ಹೃದಯಾಘಾತಗಳಿಗೆ ಸಂಬಂಧವಿದೆಯೇ ಎಂಬುದನ್ನು ಪತ್ತೆ ಮಾಡಲು ಸಂಶೋಧನೆ ಆರಂಭಿಸುವಲ್ಲಿ ಕೇಂದ್ರ ಸರ್ಕಾರ ತಡ ಮಾಡಿತೇ ಎಂಬ ಚರ್ಚೆ ನಡೆಯುತ್ತಿದೆ. ಈಗ ಸಂಶೋಧನೆ ಆರಂಭಿಸಲಾಗಿದೆ ಎಂಬುದನ್ನು ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಬಹಿರಂಗಪಡಿಸಿದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಈ ಚರ್ಚೆ ಬಿರುಸು ಪಡೆದಿದೆ.

ಈ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆಯೇ ಎಂದು ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸಂಸದರು ಸರ್ಕಾರವನ್ನು ಪ್ರಶ್ನಿಸಿದ್ದರು. ಆದರೆ, ಅಂತಹ ಯಾವುದೇ ಸಂಶೋಧನೆ ಆರಂಭಿಸಿಲ್ಲ ಎಂದು ಆರೋಗ್ಯ ಸಚಿವ ಉತ್ತರಿಸಿದ್ದರು. ಸಂಶೋಧನೆ ಆರಂಭಿಸದೇ ಇರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಆದರೆ, ಈಗ ಅಂತಹ ಸಂಶೋಧನೆ ನಡೆಸಲಾಗುತ್ತಿದೆ ಎಂದು ಎನ್‌.ಡಿ.ಟಿವಿ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು ಹೇಳಿದ್ದಾರೆ. ಕೋವಿಡ್ ಮತ್ತು ಪಾರ್ಶ್ವವಾಯುವಿನ ನಡುವೆ ಸಂಬಂಧವಿದೆಯೇ ಎಂಬುದನ್ನು ಪತ್ತೆ ಮಾಡುವುದನ್ನೂ ಈ ಸಂಶೋಧನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಸಂಶೋಧನೆ ಆರಂಭವಾಗಿರುವ ಮತ್ತು ನಡೆಯುತ್ತಿರುವ ಬಗ್ಗೆ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನಲ್ಲಿ (ಐಸಿಎಂಆರ್) ಯಾವುದೇ ದಾಖಲೆ ಲಭ್ಯವಿಲ್ಲ. ಈ ಬಗ್ಗೆ ಐಸಿಎಂಆರ್ ಯಾವುದೇ ಪ್ರಕಟಣೆಗಳನ್ನು ಹೊರಡಿಸಿಲ್ಲ. ಹೀಗಾಗಿ ಸಂಶೋಧನೆಯ ವ್ಯಾಪ್ತಿ ಮತ್ತು ಗಾತ್ರದ ಮಾಹಿತಿ ಲಭ್ಯವಿಲ್ಲ.

‘ಕಡೆಗಣನೆ ಅಪಾಯಕಾರಿ’

ಎದೆ ನೋವು, ಉಸಿರಾಟದ ಸಮಸ್ಯೆ, ಏದುಸಿರು, ಹೃದಯ ಬಡಿತದಲ್ಲಿನ ಏರಿಳಿತದಂತಹ ಸಮಸ್ಯೆಗಳು ಕಂಡುಬಂದರೆ ಅವನ್ನು ಕಡೆಗಣಿಸಬಾರದು. ಆದರೆ, ಹೆದರುವ ಅವಶ್ಯಕತೆಯೂ ಇಲ್ಲ ಎಂದು ಈ ಸಂಶೋಧನಾ ವರದಿಗಳಲ್ಲಿ ಶಿಫಾರಸು ಮಾಡಲಾಗಿದೆ.

ಈ ಎಲ್ಲಾ ಸಮಸ್ಯೆಗಳನ್ನು ಕೋವಿಡ್ ಲಕ್ಷಣಗಳು ಎಂದು ಪಟ್ಟಿ ಮಾಡಲಾಗಿದೆ. ಕೋವಿಡ್‌ನ ತೀವ್ರತೆ ಕಡಿಮೆಯಾದ ನಂತರ ಈ ಸಮಸ್ಯೆಗಳೂ ನಿವಾರಣೆಯಾಗಬೇಕು. ಆದರೆ, ದೀರ್ಘಾವಧಿಯ ನಂತರ ಈ ಸಮಸ್ಯೆಗಳು ತಲೆದೋರಿದರೆ ವೈದ್ಯರನ್ನು ಕಾಣುವುದು ಒಳಿತು ಎಂದು ಶಿಫಾರಸು ಮಾಡಲಾಗಿದೆ.

ಕೋವಿಡ್ ಮತ್ತು ತೀವ್ರ ಹೃದಯಾಘಾತದ ಮಧ್ಯೆ ಸಂಬಂಧವಿದೆಯೇ ಮತ್ತು ಸಂಬಂಧವಿದ್ದರೆ ಅದರ ಸ್ವರೂಪ ಎಂಥದ್ದು ಎಂಬುದನ್ನು ಪತ್ತೆ ಮಾಡಲು ಮತ್ತಷ್ಟು ಸಂಶೋಧನೆಗಳು ನಡೆಯುತ್ತಿವೆ. ಈ ಸಂಶೋಧನೆಗಳ ವರದಿಗಳು ಲಭ್ಯವಾದರೆ, ತೀವ್ರ ಹೃದಯಾಘಾತ ಸಂಭವಿಸದಂತೆ ಎಚ್ಚರವಹಿಸಲು ಅನುಕೂಲವಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಲಸಿಕೆ ಕಾರಣವೇ?

ಕೋವಿಡ್ ಬರುವುದನ್ನು ತಡೆಗಟ್ಟಲು ನೀಡಿದ್ದ ಲಸಿಕೆಗಳ ಕಾರಣದಿಂದ ತೀವ್ರ ಹೃದಯಾಘಾತದ ಸಮಸ್ಯೆ ತಲೆದೋರುತ್ತಿದೆಯೇ ಎಂಬುದರ ಬಗ್ಗೆಯೂ ಜನರು ಆತಂಕ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿಯೂ ಈ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ, ಲಸಿಕೆಗಳ ಕಾರಣದಿಂದ ತೀವ್ರ ಹೃದಯಾಘಾತ ಸಂಭವಿಸುತ್ತಿದೆಯೇ ಎಂಬುದನ್ನು ಯಾವುದೇ ಸಂಶೋಧನೆ ದೃಢಪಡಿಸಿಲ್ಲ.

ಅಮೆರಿಕ ಮತ್ತು ಬ್ರಿಟನ್‌ನಲ್ಲಿ ನಡೆದ ಸಂಶೋಧನೆಗಳಲ್ಲೂ ಈ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಈ ಬಗ್ಗೆ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ ಎಂದಷ್ಟೇ ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಕೇಂದ್ರ ಸರ್ಕಾರವು ಈಗ ಆರಂಭಿಸಿರುವ ಸಂಶೋಧನೆಯು, ಈ ಆಯಾಮದಲ್ಲೂ ಪರಿಶೀಲನೆ ನಡೆಸಲಿದೆಯೇ ಎಂಬುದರ ಮಾಹಿತಿ ಲಭ್ಯವಾಗಿಲ್ಲ.

ಹಠಾತ್ ನಿಂತ ಹೃದಯ...

ಕೋವಿಡ್ ನಂತರದ ದಿನಗಳಲ್ಲಿ ಕಲಾವಿದರು, ಕ್ರೀಡಾಪಟುಗಳೂ ಸೇರಿದಂತೆ ಸಾವಿರಾರು ಜನರು ಹೃದಯಾಘಾತಕ್ಕೆ ಬಲಿಯಾಗಿದ್ದಾರೆ. ಇವರಲ್ಲಿ ಹೆಚ್ಚಿನವರಿಗೆ ಹೃದಯ ಸಂಬಂಧಿ ಸಮಸ್ಯೆಗಳು ಇರಲಿಲ್ಲ. 40–50 ವರ್ಷದೊಳಗಿನವರೇ ಹೆಚ್ಚಾಗಿ ಮೃತಪಟ್ಟಿದ್ದಾರೆ. 30 ವರ್ಷದ ಆಸುಪಾಸಿನವರೂ ಹೃದಯಾಘಾತಕ್ಕೆ ಬಲಿಯಾಗಿದ್ದಾರೆ

ಪುನೀತ್ ರಾಜ್‌ಕುಮಾರ್ (46): ಕನ್ನಡ ಚಿತ್ರರಂಗದ ಜನಪ್ರಿಯ ನಟ ಪುನೀತ್ ರಾಜ್‌ಕುಮಾರ್ ಅವರು ಜಿಮ್‌ನಲ್ಲಿ ಕಸರತ್ತು ನಡೆಸುವಾಗ ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಅಸ್ವಸ್ಥತೆಗೆ ಕಾರಣವಾಗಿದ್ದು ತೀವ್ರ ಸ್ವರೂಪದ ಹೃದಯಾಘಾತ. ವೈದ್ಯರ ಅವಿರತ ಯತ್ನದ ಹೊರತಾಗಿಯೂ ಪುನೀತ್ ಮೃತಪಟ್ಟರು



ಸಿದ್ಧಾರ್ಥ್ ಸೂರ್ಯವಂಶಿ (46): ಹಿಂದಿಯ ಪ್ರಸಿದ್ಧ ನಟ ಸಿದ್ಧಾರ್ಥ್ ವೀರ್ ಸೂರ್ಯವಂಶಿ ಅವರು ಕಳೆದ ವರ್ಷ ಜಿಮ್‌ನಲ್ಲಿ ಕಸರತ್ತು ಮಾಡುವಾಗ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟರು. ಆಸ್ಪತ್ರೆಗೆ ದಾಖಲಿಸಿದ್ದರೂ ಅವರು ಬದುಕುಳಿಯಲಿಲ್ಲ

ಸಿದ್ಧಾರ್ಥ ಶುಕ್ಲಾ (40): ಅತ್ಯುತ್ತಮ ದೇಹದಾರ್ಢ್ಯ ಕಾಪಾಡಿಕೊಂಡಿದ್ದ ನಟ ಸಿದ್ಧಾರ್ಥ ಶುಕ್ಲಾ ಅವರು 2021ರಲ್ಲಿ ಹೃದಯಾಘಾತಕ್ಕೆ ಬಲಿಯಾಗಿದ್ದರು. ಅವರಿಗೆ ಅಲ್ಲಿಯವರೆಗೆ ಯಾವುದೇ ರೀತಿಯ ಹೃದಯ ಸಂಬಂಧಿ ಸಮಸ್ಯೆಗಳು ಇರಲಿಲ್ಲ

ಹಾಸ್ಯ ಕಲಾವಿದ ರಾಜು ಶ್ರೀವಾಸ್ತವ್ (58): ಜಿಮ್‌ನಲ್ಲಿ ಕಸರತ್ತು ನಡೆಸುತ್ತಿದ್ದ ವೇಳೆ ರಾಜು ಶ್ರೀವಾಸ್ತವ್ ತೀವ್ರ ಹೃದಯಾಘಾತಕ್ಕೆ ಒಳಗಾಗಿದ್ದರು. ದೆಹಲಿಯ ಏಮ್ಸ್‌ನಲ್ಲಿ 41 ದಿನಗಳ ಕಾಲ ಜೀವನ್ಮರಣ ಹೋರಾಟ ನಡೆಸಿ, ನಿಧನರಾದರು

ಕೆ.ಕೆ. (53): ಕೆ.ಕೆ. ಎಂದೇ ಖ್ಯಾತರಾಗಿದ್ದ ಗಾಯಕ ಕೃಷ್ಣಕುಮಾರ್ ಕುನ್ನತ್ ಅವರು ಕಳೆದ ಮೇ ತಿಂಗಳಲ್ಲಿ ಕೋಲ್ಕತ್ತದಲ್ಲಿ ನಡೆಯುತ್ತಿದ್ದ ಸಂಗೀತ ಕಾರ್ಯಕ್ರಮದ ವೇದಿಕೆಯಲ್ಲಿಯೇ ಅಸ್ವಸ್ಥರಾಗಿದ್ದರು. ಆಸ್ಪತ್ರೆಗೆ ಕರೆದೊಯ್ದರೂ ಅವರು ಬದುಕುಳಿಯಲಿಲ್ಲ. ಕೆ.ಕೆ. ಅವರು ತೀವ್ರ ಹೃದಯಾಘಾತಕ್ಕೆ ಒಳಗಾಗಿದ್ದಾರೆ ಎಂದು ಮರಣೋತ್ತರ ಪರೀಕ್ಷಾ ವರದಿ ಹೇಳಿತ್ತು

ಪ್ರವೀಣ್ ಪಟವರ್ಧನ್ (64): ಮರಾಠಿ ಚಿತ್ರರಂಗದ ಖ್ಯಾತ ನಟ ಪ್ರವೀಣ್ ಪಟವರ್ಧನ್ ಅವರು ತೀವ್ರ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿದ್ದರು. ಅವರಿಗೆ ಅದಕ್ಕೂ ಮೊದಲು ಬೇರೆ ಆರೋಗ್ಯದ ಸಮಸ್ಯೆ ಇರಲಿಲ್ಲ

- ತೆಲಂಗಾಣದಲ್ಲಿ ಇದೇ ಫೆಬ್ರುವರಿ ಹಾಗೂ ಮಾರ್ಚ್‌ನಲ್ಲಿ ಸರಣಿಯ ಹಾಗೆ ಹೃದಯಾಘಾತದ ಘಟನೆಗಳು ವರದಿಯಾಗಿದ್ದವು. ಮದುವೆ ಮನೆಯಲ್ಲಿ ಅರಿಸಿನ ಶಾಸ್ತ್ರದ ವೇಳೆ ಅತಿಥಿಯೊಬ್ಬರು ಕುಸಿದುಬಿದ್ದಿದ್ದರು. 30 ವರ್ಷದ ಕಾನ್‌ಸ್ಟೆಬಲ್ ವಿಶಾಲ್ ಎಂಬವರು ಜಿಮ್‌ನಲ್ಲೇ ಮೃತಪಟ್ಟರು. 19 ವರ್ಷದ ಯುವಕ ತಮ್ಮ ಸಂಬಂಧಿಯ ಮದುವೆಯಲ್ಲಿ ನೃತ್ಯ ಮಾಡುತ್ತಲೇ ಹೃದಯಾಘಾತಕ್ಕೆ ಒಳಗಾಗಿದ್ದರು. 38 ವರ್ಷದ ಶ್ಯಾಮ್ ಯಾದವ್ ಎಂಬವರು ಬ್ಯಾಡ್ಮಿಂಟನ್ ಆಡುತ್ತಿದ್ದಾಗಲೇ ಹೃದಯಾಘಾತಕ್ಕೆ ಈಡಾಗಿ ಮೃತಪಟ್ಟಿದ್ದರು
- ಯಕ್ಷಗಾನ ಪ್ರದರ್ಶನದ ವೇಳೆಯೇ ಇಬ್ಬರು ಕಲಾವಿದರು ತೀವ್ರ ಹೃದಯಾಘಾತಕ್ಕೆ ಒಳಗಾದ ಘಟನೆಗಳು ರಾಜ್ಯದಲ್ಲಿ ಇತ್ತೀಚೆಗೆ ನಡೆದಿವೆ. ಮಂದಾರ್ತಿ ಮೇಳದ ಸಾಧು ಕೊಠಾರಿ (58) ಅವರು ಹೃದಯಾಘಾತದಿಂದ ರಂಗಸ್ಥಳದಲ್ಲೇ ಅಸ್ವಸ್ಥಗೊಂಡು ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟಿದ್ದರು. ಕಟೀಲು ಮೇಳದ ಕಲಾವಿದ ಗುರುವಪ್ಪ ಬಾಯಾರು (58) ಅವರೂ ರಂಗಸ್ಥಳದಲ್ಲೇ ಹೃದಯಾಘಾತಕ್ಕೆ ಈಡಾಗಿದ್ದರು
- ಇದೇ ಜನವರಿಯಲ್ಲಿ ದೆಹಲಿಯ ರಾಮ್‌ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ವೈದ್ಯ ಸಹೀಲ್ ಮಾಷಲ್ ಅವರು ಹೃದಯಾಘಾತಕ್ಕೆ ಬಲಿಯಾಗಿದ್ದರು. ರೋಗಿಗಳ ತಪಾಸಣೆಗೆ ಹೋಗಿದ್ದ ಅವರಲ್ಲಿ ಇದ್ದಕ್ಕಿದ್ದಂತೆ ಎದೆನೋವು ಕಾಣಿಸಿಕೊಂಡು ಕುಸಿದುಬಿದ್ದರು. 30 ವರ್ಷದ ಅವರಿಗೆ ಯಾವುದೇ ಆರೋಗ್ಯ ಸಮಸ್ಯೆ ಇರಲಿಲ್ಲ
- ಕಳೆದ ಡಿಸೆಂಬರ್‌ನಲ್ಲಿ, ಉತ್ತರ ಪ್ರದೇಶದ ವಾರಾಣಸಿಯಲ್ಲಿ ಮದುವೆ ಸಮಾರಂಭದಲ್ಲಿ ಭಾಗಿಯಾಗಿದ್ದ ಮನೋಜ್ ಕುಮಾರ್ ವಿಶ್ವಕರ್ಮ ಎಂಬ 40 ವರ್ಷದ ವ್ಯಕ್ತಿಯೊಬ್ಬರು ನೃತ್ಯ ಮಾಡುತ್ತಲೇ ನೆಲಕ್ಕೆ ಕುಸಿದು ಬಿದ್ದಿದ್ದರು. ತೀವ್ರವಾದ ಹೃದಯಾಘಾತದಿಂದ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಹೇಳಿದ್ದರು. ಆದರೆ, ಮೃತ ವ್ಯಕ್ತಿಗೆ ಯಾವುದೇ ಅನಾರೋಗ್ಯ ಸಮಸ್ಯೆ ಇರಲಿಲ್ಲ
- ಇಂದೋರ್‌ನಲ್ಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗಿಯಾಗಿದ್ದ 16ರ ಬಾಲೆ ವೃಂದಾ ತ್ರಿಪಾಠಿ ತೀವ್ರ ಅಸ್ವಸ್ಥಗೊಂಡು ಮೃತಪಟ್ಟಿದ್ದರು. ವಿಪರೀತ ಚಳಿಯಿಂದಾಗಿ ಮೃತಪಟ್ಟಿರಬಹುದು ಎಂದು ಆರಂಭದಲ್ಲಿ ಶಂಕಿಸಲಾಗಿತ್ತು. ಆದರೆ, ಬಾಲಕಿ ಮೃತಪಟ್ಟಿದ್ದು ಹೃದಯಾಘಾತದಿಂದ ಎಂದು ಮರಣೋತ್ತರ ವರದಿಯಲ್ಲಿ ಉಲ್ಲೇಖಿಸಲಾಗಿತ್ತು
- ವಸಂತ್ ರಾಠೋಡ್ ಎಂಬವರು ಅಹಮದಾಬಾದ್‌ನಲ್ಲಿ ಇದೇ ಫೆಬ್ರುವರಿಯಲ್ಲಿ ಕ್ರಿಕೆಟ್ ಆಡುತ್ತಿದ್ದಾಗ ಮೃತಪಟ್ಟಿದ್ದರು. 38 ವರ್ಷದ ಇವರ ಸಾವಿಗೆ ಹೃದಯಾಘಾತ ಕಾರಣವಾಗಿತ್ತು

ಆಧಾರ: ಬ್ರಿಟನ್‌ನ ‘ಕಾರ್ಡಿಯೋವ್ಯಾಸ್ಕುಲರ್ ಡಿಸೀಸ್ ಅಂಡ್ ಮಾರ್ಟಾಲಿಟಿ ಸೀಕ್ವೆಲ್ ಆಫ್ ಕೋವಿಡ್–19’ ಸಂಶೋಧನಾ ವರದಿ, ಅಮೆರಿಕದ ಸಿಎಸ್‌ಡಿಎಸ್‌ನ ‘ಲಾಂಗ್‌ಟರ್ಮ್ ಕಾರ್ಡಿಯೋವ್ಯಾಸ್ಕುಲರ್ ಔಟ್‌ಕಮ್ ಇನ್ ಕೋವಿಡ್–19’ ಸಂಶೋಧನಾ ವರದಿ, ಲೋಕಸಭೆ ಪ್ರಶ್ನೋತ್ತರಗಳು, ಪಿಟಿಐ

ಸಿನಿ ಬಿಟ್ಸ್

ವಿಧಾನಸೌಧ ಮಾರಿ ಸಾಲ ತೀರಿಸುತ್ತಾರಂತೆ ರಿಷಿ!

‘ಆಪರೇಷನ್ ಅಲಮೇಲಮ್ಮ’ ಚಿತ್ರದಿಂದಲೇ ಪ್ರೇಕ್ಷಕರನ್ನು ನಗಿಸುತ್ತ ಬಂದಿರುವ ನಟ ರಿಷಿ, ತಮ್ಮ ಪ್ರತಿ ಸಿನಿಮಾದಲ್ಲಿಯೂ ಹೊಸತೇನೋ ಹುಡುಕಿ ತರುತ್ತಾರೆ.‘ರಾಮನ ಅವತಾರ’ ಚಿತ್ರದಲ್ಲಿ ಜಂಟಲ್‌ಮ್ಯಾನ್ ರಾಮನಾಗಿ ಕಾಣಿಸಿಕೊಂಡಿರುವ ಅವರು, ವಿಭಿನ್ನ ವಿಧಾನದಲ್ಲಿ ಚಿತ್ರದ ಪ್ರಚಾರ ಆರಂಭಿಸಿದ್ದಾರೆ.

ರಾಜ್ಯದಲ್ಲೀಗ ಚುನಾವಣೆ ಕಾವು ಜೋರಾಗಿದೆ. ಎಲ್ಲ ಪಕ್ಷಗಳು ಭರಪೂರ ಭರವಸೆ ನೀಡುತ್ತಿವೆ. ಇದನ್ನೇ ಬಂಡವಾಳವಾಗಿಸಿಕೊಂಡಿರುವ ರಿಷಿ, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಹಾಸ್ಯಮಯ ವಿಡಿಯೊವೊಂದು ಈಗ ಎಲ್ಲೆಡೆ ಹರಿದಾಡುತ್ತಿದೆ.

‘ನಮ್ಮ ರಾಜ್ಯದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬೇಕಿದ್ದರೆ ಮೊದಲು ನಾವು ವಿಧಾನಸೌಧ ಮಾರಬೇಕು. ಈ ಮಾತು ಹೇಳಲು ನಾನು ಯಾರು ಎಂದು ಕೇಳುತ್ತಿದ್ದೀರಾ? ನನ್ನ ಹೆಸರು ರಾಮಕೃಷ್ಣ. ಊರಲ್ಲಿ ಎಲ್ಲರೂ ನನ್ನ ಜಂಟಲ್‌ಮ್ಯಾನ್ ರಾಮ ಅಂತ ಕರೀತಾರೆ. ಚಾಟ್ ಜಿಪಿಟಿ ಬಂದಮೇಲೆ ನನ್ನನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಎಲ್ಲೇ ಕೆಲಸ ಹುಡುಕಿಕೊಂಡು ಹೋದರೂ, ಏನ್ ಓದಿದೀಯಾ ಅಂತ ಕೇಳ್ತಾರೆ. ಯಾರೂ ಈ ಪ್ರಶ್ನೆ ಕೇಳಬಾರದು. ಅಂತಹ ಕೆಲಸ ಮಾಡುತ್ತೇನೆ. ಮೊನ್ನೆ ತಾನೇ ದಿನಾಂಕ ಘೋಷಣೆಯಾಗಿದೆ ತಾನೆ? ಎಲೆಕ್ಷನ್‌ಗೆ ನಿಲ್ಲುತ್ತೇನೆ’ ಎಂದು ಹಾಸ್ಯಮಯವಾಗಿ ವಿವರಿಸಿದ್ದಾರೆ.

‘ಈಗ ಎಲ್ಲ ಕಡೆ ವರ್ಕ್ ಫ್ರಂ ಹೋಂ ಇದೆ. ನಮ್ಮಂಥ ದೊಡ್ಡ ನಾಯಕರಿಗೆ ಬೆಂಗಳೂರಿನ ಪ್ರಮುಖ ಭಾಗದಲ್ಲಿ ಅಷ್ಟು ದೊಡ್ಡ ಕಚೇರಿ ಯಾಕೆ ಬೇಕು? ನಾನು ಚುನಾವಣೆಯಲ್ಲಿ ಗೆದ್ದು ಬಂದರೆ ಎಲ್ಲ ರಾಜಕಾರಣಿಗಳಿಗೂ ವರ್ಕ್ ಫ್ರಂ ಹೋಂ ನೀಡಿ, ವಿಧಾನಸೌಧವನ್ನೇ ಮಾರಿ ಎಲ್ಲರ ಸಾಲ ತೀರಿಸುತ್ತೇನೆ’ ಎಂದು ರಿಷಿ ವಿಡಿಯೊದ ಮೂಲಕ ಎಲ್ಲರನ್ನು ನಗಿಸಿದ್ದಾರೆ. ಸಿಂಪಲ್ ಸುನಿ ಜತೆಗಿದ್ದ ವಿಕಾಸ್ ‘ರಾಮನ ಅವತಾರ’ ಚಿತ್ರದ ನಿರ್ದೇಶಕರು. ‘ಆಪರೇಷನ್ ಅಲಮೇಲಮ್ಮ’ ತಂಡದಿಂದ ನಿರ್ಮಾಣಗೊಂಡ ಈ ಚಿತ್ರ ಜೂನ್ ವೇಳೆಗೆ ತೆರೆಗೆ ಬರುವ ನಿರೀಕ್ಷೆಯಿದ್ದು, ಚಿತ್ರತಂಡ ಪ್ರಚಾರ ಕಾರ್ಯ ಪ್ರಾರಂಭಿಸಿದೆ.

ರಾಮನ ಅವತಾರ ಚಿತ್ರದಲ್ಲಿ ನಟ ರಿಷಿ

‘ದೈವ’ಕ್ಕೆ ಡಾಲಿ ಧನಂಜಯ ಬೆಂಬಲ

‘ಬಡವರು ಮಕ್ಕಳು ಬೆಳೆಯಬೇಕು ಕಣ್ರಯ್ಯ’ ಎಂದು ಈ ಹಿಂದೆ ನಟ ಡಾಲಿ ಧನಂಜಯ್ ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದ ಪೋಸ್ಟ್ ಬಹಳ ಜನಪ್ರಿಯವಾಗಿತ್ತು. ಆಡಿದ ಮಾತಿನಂತೆ ಡಾಲಿ ಹೊಸಬರ ಚಿತ್ರಗಳಿಗೆ ಸಾಥ್ ನೀಡುತ್ತ ಬಂದಿದ್ದಾರೆ. ಹೊಸಬರ ಚಿತ್ರವಾದ ‘ದೈವ’ಕ್ಕೂ ಡಾಲಿ ಬಲ ಲಭಿಸಿದೆ.

’ಕಾಂತಾರ‘ದಲ್ಲಿ ದೈವ ಅಬ್ಬರಿಸಿತ್ತು. ಅದನ್ನೇ ಶೀರ್ಷಿಕೆಯನ್ನಾಗಿಟ್ಟುಕೊಂಡು ಸಿನಿಮಾ ಸಿದ್ಧಗೊಳ್ಳುತ್ತಿದೆ. ಚಿತ್ರದ ಪೋಸ್ಟರ್ ಅನ್ನು ನಟ ಧನಂಜಯ್ ಬಿಡುಗಡೆಗೊಳಿಸಿ, ಚಿತ್ರ ತಂಡಕ್ಕೆ ಶುಭ ಹಾರೈಸಿದರು.

ಜಯಮ್ಮ ಪದ್ಮರಾಜ್ ನಿರ್ಮಿಸುತ್ತಿರುವ ಈ ಚಿತ್ರವನ್ನು ಎಂ.ಜೆ ನಿರ್ದೇಶಿಸುತ್ತಿದ್ದಾರೆ. ಹೊಸಬರೇ ಕೂಡಿರುವ ಚಿತ್ರದಲ್ಲಿ ಎಂ.ಜೆ, ಅರುಣ್ ಬಚ್ಚನ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕಥೆ, ಚಿತ್ರಕಥೆಯನ್ನು ನಿರ್ದೇಶಕರೆ ಬರೆದಿದ್ದಾರೆ. ಮೇ ಎರಡನೇ ವಾರದಲ್ಲಿ ಮಲೆನಾಡಿನಲ್ಲಿ ಚಿತ್ರೀಕರಣ ನಡೆಯಲಿದೆ. ನವೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದು ಚಿತ್ರತಂಡ ಹೇಳಿದೆ. ಚಿತ್ರಕ್ಕೆ ’ಸೀಕ್ರೆಟ್ ಆಫ್ ಬರ್ತ್‘ ಎಂಬ ಅಡಿಬರಹವಿದ್ದು, ವಿಜೇತ್ ಮಂಜಯ್ಯ ಸಂಗೀತ ನೀಡುತ್ತಿದ್ದಾರೆ. ರಾಜು ಶಿರಾ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಕಾಂಗ್ರೆಸ್ ನಾಯಕ** ರಾಹುಲ್ ಗಾಂಧಿ ಅವರು ಸಾವರ್ಕರ್ ಕುರಿತಂತೆ ತಾವು ಮಾಡಿದ್ದ ಇತ್ತೀಚಿನ ಟ್ವೀಟ್‌ಗಳನ್ನು ಅಳಿಸಿಹಾಕಿದ್ದಾರೆ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ‘ಸಾವರ್ಕರ್ ಅವಹೇಳನ ನಿಲ್ಲಿಸದಿದ್ದರೆ, ರಾಹುಲ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿ ಎಫ್‌ಐಆರ್ ದಾಖಲಿಸಲಾಗುವುದು ಎಂದು ಸಾವರ್ಕರ್ ಮೊಮ್ಮಗ ರಂಜಿತ್ ಸಾವರ್ಕರ್ ಅವರು ಬೆದರಿಸಿದ್ದರಿಂದ ರಾಹುಲ್ ತಮ್ಮ ಟ್ವೀಟ್‌ಗಳನ್ನು ಡಿಲೀಟ್ ಮಾಡಿದ್ದಾರೆ’ ಎಂದು ಟ್ವಿಟರ್ ಬಳಕೆದಾರ ಅಮಿತಾಭ್ ಚೌಧರಿ ಎಂಬವರು ಹೇಳಿದ್ದಾರೆ. ಇದೇ ಧಾಟಿಯ ಹಲವು ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ರಾಹುಲ್ ಅವರು ಬೆದರಿಕೆಗೆ ಅಂಜಿದ್ದಾರೆ ಎಂದು ಹೇಳಲಾಗಿದೆ. ಆದರೆ ಇದು ಸುಳ್ಳು

✓ **ರಾಹುಲ್ ಅವರು** ಸಾವರ್ಕರ್ ಕುರಿತಂತೆ ಇತ್ತೀಚೆಗೆ ಯಾವ ಟ್ವೀಟ್‌ಗಳನ್ನೂ ಅಳಿಸಿಹಾಕಿಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಸೋಷಿಯಲ್ ಆ್ಯಕ್ಟಿವಿಟಿ ಟ್ರ್ಯಾಕಿಂಗ್ ವೆಬ್‌ಸೈಟ್ ‘ಸೋಷಿಯಲ್ ಬ್ಲೇಡ್’ ಮೂಲಕ ಪರಿಶೀಲಿಸಿದಾಗ ಇದು ದೃಢಪಟ್ಟಿದೆ. ರಂಜಿತ್ ಸಾವರ್ಕರ್ ಅವರು ಹೇಳಿಕೆ ನೀಡಿದ ಬಳಿಕ ಅಂದರೆ, ಮಾರ್ಚ್ 27ರಿಂದ ಮಾರ್ಚ್30ರ ನಡುವೆ ರಾಹುಲ್ ಅವರು ಮೂರು ಟ್ವೀಟ್‌ಗಳನ್ನು ಮಾಡಿದ್ದಾರೆ. ಆದರೆ ಈ ಅವಧಿಯಲ್ಲಿ ಒಂದೂ ಟ್ವೀಟ್ ಅಳಿಸಿಲ್ಲ ಎಂಬುದು ಪರಿಶೀಲನೆಯಲ್ಲಿ ಕಂಡುಬಂದಿದೆ. ‘ಗೂಗಲ್ ಕ್ಯಾಷ್’ನಲ್ಲಿ ಪರಿಶೀಲಿಸಿದಾಗ, ಟ್ವೀಟ್‌ಗಳು ಡಿಲೀಟ್ ಆಗಿಲ್ಲ ಎಂಬುದು ಸ್ಪಷ್ಟಗೊಂಡಿದೆ. ಸಾಮಾಜಿಕ ಜಾಲತಾಣದಲ್ಲಿ ಆಗುತ್ತಿರುವ ಚರ್ಚೆ ಸತ್ಯಕ್ಕೆ ದೂರವಾದುದು ಎಂದು ಪಿಟಿಐ ವರದಿ ಮಾಡಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಜಗತ್ತಿನ ಕ್ಷೇಮ- ಮೃಗಜಲ

ರಾಮ ಕಾರ್ಮುಕ, ಕೃಷ್ಣಯುಕ್ತಿ, ಗೌತಮಕರುಣೆ |
ಭೂಮಿಭಾರವನಿಳುಹೆ ಸಾಲದಾಗಿರಲು ||
ಸಾಮಾನ್ಯರೆನಿತು ತಾಂ ಪೆಣಗಿದೊಡಮೇನಹುದು ? |
ಕ್ಷೇಮವೆಂದುಂ ಮೃಗ್ಯ – ಮಂಕುತಿಮ್ಮ || **856** ||

ಪದ-ಅರ್ಥ: ರಾಮಕಾರ್ಮುಕ = ರಾಮ + - ಕಾರ್ಮುಕ(ಬಿಲ್ಲು), ಭೂಮಿಭಾರವನಿಳುಹ = ಭೂಮಿಭಾರವನು + ಇಳುಹೆ(ಇಳಿಸಲು), ಸಾಮಾನ್ಯರೆನಿತು = ಸಾಮಾನ್ಯರು + ಎನಿತು, ಪೆಣಗಿದೊಡಮೇನಹುದು = ಪೆಣಗಿದೊಡಮ್(ಹೆಣಗಿದರೆ) + ಏನು + ಅಹುಂ ಕ್ಷೇಮವೆಂದುಂ = ಕ್ಷೇಮವು- + ಎಂದುಂ(ಎಂದಿಗೂ), ಮೃಗ್ಯ = ಮರೀಚಿಕೆ.

ವಾಚ್ಯಾರ್ಥ: ರಾಮನ ಶಕ್ತಿ, ಕೃಷ್ಣನ ಯುಕ್ತಿ, ಗೌತಮನ ಕರುಣೆ ಇವೆಲ್ಲವೂ ದುಷ್ಟನಾಶಕ್ಕೆಂದು ಪ್ರಯತ್ನಿಸಿ, ಜನಹಿತಕ್ಕಾಗಿ ಭೂಮಿಭಾರವನ್ನು ಇಳುಹಲು ಸಾಧ್ಯವಾಗದೆ ಹೋದಾಗ ಸಾಮಾನ್ಯರು ಎಷ್ಟೆಲ್ಲ ಹೆಣಗಿದರೆ ಏನು ಪ್ರಯೋಜನ? ಪ್ರಪಂಚದ ಹಿತವೆನ್ನುವುದು ಮರೀಚಿಕೆಯೇ.

ವಿವರಣೆ: ಹಿಂದೂ ಧರ್ಮಕ್ಕೆ ತುಂಬ ವಿಶಿಷ್ಟವಾದದ್ದು ಅವತಾರದ ಕಲ್ಪನೆ. ಯಾವ ಯಾವ ಸಂದರ್ಭದಲ್ಲಿ ಧರ್ಮದ ಅವನತಿಯಾಗುತ್ತದೋ, ಅಧಾರ್ಮಿಕ ಮತ್ತು ರಾಕ್ಷಸೀ ಬುದ್ಧಿಯ ಜನ ಹೆಚ್ಚಾಗುತ್ತಾರೋ ಆಗ ಭಗವಂತ ಭೂಮಿಗಿಳಿದು ಬಂದು ದುಷ್ಟರನ್ನು ಸದೆಬಡಿದು, ಶಿಷ್ಟರನ್ನು ರಕ್ಷಿಸುತ್ತಾನೆ. ದುಷ್ಟರೇ ಹೆಚ್ಚಿನ ಪಾಲಿನಲ್ಲಿ ಇರುವುದರಿಂದ ಭೂಭಾರಹರಣ, ಎಂದರೆ ಭೂಮಿಯ ಭಾರ ಕಡಿಮೆಯಾಗುತ್ತದೆ. ಇದನ್ನೇ ಕೃಷ್ಣ ಭಗವದ್ಗೀತೆಯಲ್ಲಿ, “ಯದಾ ಯದಾ ಹಿ ಧರ್ಮಸ್ಯ.....” ಎಂದು ಹೇಳುತ್ತಾನೆ. ಈ ಮಾತಿಗೆ ಕಗ್ಗ ಪ್ರಶ್ನೆಯನ್ನು ಒಡ್ಡುತ್ತದೆ. ಹೌದು, ಪ್ರತಿಯೊಂದು ಅವತಾರ ದುಷ್ಟರನ್ನು ಹೊಡೆದು ಭೂಭಾರವನ್ನು ಕಡಿಮೆ ಮಾಡುತ್ತದೆ ಎಂದು ನಂಬಿದರೂ, ಇಂದಿಗೂ ಅಂತಹ ದುಷ್ಟರ ಸಂಖ್ಯೆ ಕಡಿಮೆಯಾಗಿಲ್ಲವಲ್ಲ. ಬದಲಾಗಿ ಅದು ಹೆಚ್ಚುತ್ತಲೇ ಇದೆ. ಶ್ರೀರಾಮ ಬಂದ. ತನ್ನ ಅತ್ಯದ್ಭುತವಾದ, ಅಜೇಯವಾದ ಕೋದಂಡವನ್ನು ತಂದ. ಅವನ ಕಾರ್ಮುಕಕ್ಕೆ ಎದುರಾಗುವ ಶಕ್ತಿ ಯಾರಿಗಾದರೂ ಇತ್ತೇ? ಆತ ರಾವಣನನ್ನು, ಕುಂಭಕರ್ಣನನ್ನು, ಇಂದ್ರಜಿತ್ತನನ್ನು ಅಷ್ಟೇಕೆ ಬಹುಪಾಲು ಲಂಕೆಯನ್ನೇ ನಾಶಮಾಡಿದ. ಆದರೆ ಅವನ ಪ್ರೀತಿಯ ಆಯೋಧ್ಯೆಯಲ್ಲೇ ಅವನನ್ನು ಸಂಶಯಿಸುವವರು ಇದ್ದರಲ್ಲ! ಶ್ರೀ ಕೃಷ್ಣನ ಯುಕ್ತಿ ಸಾಮಾನ್ಯವೆ? ಅವನ ಪೌರುಷ, ಮಾತುಗಾರಿಕೆ, ಯುಕ್ತಿಗಳು ಎಂದಿಗೂ ಮುಟ್ಟಲಾರದ ಮಾದರಿಗಳು. ಆತ ದುಷ್ಟರನ್ನು ನಾಶಮಾಡಲು ನಿರ್ಧರಿಸಿ ಯುದ್ಧವನ್ನು ಯೋಜಿಸಿದ. ಹದಿನೆಂಟು ದಿನಗಳ ಕಾಲ ನಡೆದ, ಪ್ರಪಂಚವೆಂದೂ ಕಂಡರಿಯದ ಮಾರಣ ಹೋಮಕ್ಕೆ ಅಧ್ಯಕ್ಷನಾದ. ಕುರುವಂಶವನ್ನೇ ಸವರಿ ಧರ್ಮರಾಜನನ್ನು ಸಿಂಹಾಸನದ ಮೇಲೆ ಕೂಡ್ರಿಸಿದ. ಆದರೆ ಧರ್ಮಪ್ರತಿಷ್ಠಾಪನೆಯಾಯಿತೆ? ಅದು ಕೆಲ ಕಾಲ ಆದಂತೆ ತೋರಿತು. ಮುಂದೆ ತನ್ನ ಮನೆತನದ ಯಾದವೀ ಕಲಹದಲ್ಲಿ ಆತ ನೊಂದುಕೊಳ್ಳುವುದು ಅನಿವಾರ್ಯವಾಯಿತು. ಭಗವಾನ್ ಬುದ್ಧ ತನ್ನ ಅಪಾರವಾದ ಕರುಣೆಯಿಂದ ತನ್ನ ಶಿಷ್ಯರನ್ನು, ಜನಪದವನ್ನು ಪ್ರೇರೇಪಿಸಿದ. ಬುದ್ಧನ ನಿರ್ವಾಣದ ಕೆಲವೇ ಶತಕಗಳಲ್ಲಿ ಹಿಂಸೆ ತಾಂಡವವಾಡಿತಲ್ಲ! ಕಗ್ಗ ಹೇಳುತ್ತದೆ, ರಾಮಲ ಬಿಲ್ಲು, ಕೃಷ್ಣನ ಯುಕ್ತಿ, ಬುದ್ಧನ ಕರುಣೆ ಇಂತಹ ಮಹಾನ್ ಶಕ್ತಿಗಳೇ ದುಷ್ಟಸಂತತಿಯನ್ನು ಸಂಪೂರ್ಣವಾಗಿ ನಾಶಮಾಡಲು ಅಸಪಮರ್ಥವಾದಾಗ, ಸಾಮಾನ್ಯ ಮನುಷ್ಯನೊಬ್ಬ ಎಷ್ಟು ಹೆಣಗಿದರೆ ಫಲವೇನು? ಒಟ್ಟಿನಲ್ಲಿ ಹೇಳುವುದಾದರೆ, ಪ್ರಪಂಚದ ಶಾಶ್ವತ ಸುಖವೆನ್ನುವುದೊಂದು ಮೃಗಜಲವಿದ್ದಂತೆ. ದೊರೆತಂತೆ ಭಾಸವಾಗುತ್ತದೆ, ಹತ್ತಿರ ಹೋದರೆ ಮರೆಯಾಗುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಏಪ್ರಿಲ್ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಚತುರ್ದಶಿ ಗಂ. 09-20 ನಕ್ಷತ್ರ: ಉತ್ತರಫಲ್ಗುನಿ ಗಂ. 11-23 ಯೋಗ: ಧ್ರುವ ಗಂ. 27-16, ಕರಣ: ವಣಿಜ ಗಂ. 09-20, ಮೀನ ಮಾಸದ 21 ನೇ ದಿನ, ಮಳೆನಕ್ಷತ್ರ: ರೇವತಿ 2. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-27 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 13 ರಂಜಾನ್, ದಿನ ವಿಶೇಷ : ಸ್ವಾಮಿ ಲೀಲಾ ಷಾಹ್ ಜನ್ಮದಿನಾಚರಣೆ (ಸಿಂಧಿ), ತ್ರಿವೆಂಡ್ರಮ್ ಅರತ್ (ಕೇರಳ)
ಅದೃಷ್ಟ ಸಂಖ್ಯೆ : 3, 7

ಮೇಷ: ವಿದ್ಯುನ್ಮಾನ ಕ್ಷೇತ್ರದ ಸಿಬ್ಬಂದಿಗೆ ಹೆಚ್ಚಿನ ವೇತನ ಸಿಗಲಿದೆ. ನೇರ ನುಡಿಯ ಸ್ವಭಾವದಿಂದಾಗಿ ಸಹೋದ್ಯೋಗಿಗಳಲ್ಲಿ ವಿಶ್ವಾಸ ಹೆಚ್ಚಲಿದೆ. ಆಟಿಕೆ ವಸ್ತುಗಳನ್ನು ಮಾರಾಟ ಮಾಡುವವರಿಗೆ ಶುಭದಿನ.

ವೃಷಭ: ಕೌಟುಂಬಿಕ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಲು ಕಾರ್ಯ ಪ್ರವೃತ್ತರಾಗುವಿರಿ. ಕೆಲಸದಲ್ಲಿನ ಅಡೆತಡೆ ನಿವಾರಣೆಯಾಗಿ ಸಮಯ ಉಳಿತಾಯವಾಗಲಿದೆ. ಸ್ನೇಹಿತರ ಮನೆಯ ಔತಣಕ್ಕೆ ಭೇಟಿ ನೀಡುವಿರಿ.

ಮಿಥುನ: ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಗುವಿರಿ. ಕೆಲಸದಲ್ಲಿ ಪ್ರಮುಖ ಬೆಳವಣಿಗೆ ನಿಮ್ಮ ಗಮನಕ್ಕೆ ಬರಲಿದೆ. ಬಯಕೆಗಳು ಸುಲಭವಾಗಿ ಈಡೇರುವುದು. ಮನರಂಜನೆಗಾಗಿ ಖರ್ಚು ಮಾಡುವಿರಿ.

ಕರ್ಕಾಟಕ: ಈ ದಿನ ನೀವು ಆಡಿದ ಮಾತುಗಳು ತಿರುಗಿ ನಿಮಗೆ ಮುಳ್ಳಾಗುವ ರೀತಿಯಲ್ಲಿ ಇರಲಿದೆ. ಪಿತ್ರಾರ್ಜಿತ ಆಸ್ತಿ ವಿಚಾರದಲ್ಲಿ ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ.

ಸಿಂಹ: ಅಧಿಕಾರಿ ಹಾಗೂ ಹಿರಿಯರಿಂದ ಸಹಾಯ ಸಹಕಾರಗಳನ್ನು ಅಪೇಕ್ಷಿಸುವಂತಹ ದಿನ. ನಿಮ್ಮ ವೃತ್ತಿ ಜೀವನಕ್ಕೆ ಬಹಳ ಅವಶ್ಯಕ ನಿರ್ಧಾರವೊಂದನ್ನು ಇಂದು ತೆಗೆದುಕೊಳ್ಳುವಿರಿ. ಲೇವಾದೇವಿ ವ್ಯವಹಾರ ಲಾಭ ತರಲಿದೆ.

ಕನ್ಯಾ: ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ಪ್ರಾಪಂಚಿಕ ಅನುಭವಕ್ಕಾಗಿ ಕಾನೂನಿನ ಬಗ್ಗೆ ಅಧ್ಯಯನ ಮಾಡುವ ಮನಸ್ಸಾಗುತ್ತದೆ. ನೀಲಿ ಬಣ್ಣ ಶುಭ ಉಂಟುಮಾಡುತ್ತದೆ.

ತುಲಾ: ವಾತ-ಪಿತ್ತಗಳ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ. ಕರ-ಕುಶಲ ವಸ್ತುಗಳ ತಯಾರಿಕೆಯಲ್ಲಿ ಆಸಕ್ತಿ ಹೆಚ್ಚುವುದು, ಜತೆಗೆ ಲಾಭವೂ ಇದೆ. ತಂದೆ-ತಾಯಿಯ ಆರೋಗ್ಯದ ಕಡೆಗೆ ಗಮನ ಕೊಡಿ.

ವೃಶ್ಚಿಕ: ಕುಟುಂಬ ಕಲಹಗಳು ರಾಜಿಯಲ್ಲಿ ತೀರ್ಮಾನಗೊಳ್ಳಲಿದೆ. ಬಂಧುಗಳ ಸಲಹೆ-ಸಹಕಾರ ನೂತನ ಕಾರ್ಯಗಳಿಗೆ ಉತ್ತಮ ಫಲ ಕೊಡುವುದು. ಊರಿನ ಅಭಿವೃದ್ಧಿಗೆ ನಿಮ್ಮಿಂದ ಅಡಿಪಾಯ ಹಾಕುವಂತಹ ಕೆಲಸ ಆಗಲಿದೆ.

ಧನು: ಮುತ್ತುರತ್ನಗಳ ಆಭರಣದ ಖರೀದಿ ಮಾಡುವ ಸಂದರ್ಭದಲ್ಲಿ ಸ್ನೇಹಿತೆಯ ಅಭಿರುಚಿ ಸರಿ ಎನ್ನಿಸಬಹುದು. ಮಾತನಾಡುವಾಗ ನೀವು ಬಳಸುವ ಪದಗಳಿಂದಾಗಿ ಕೆಲವರು ವ್ಯಕ್ತಿತ್ವವನ್ನು ಲೆಕ್ಕ ಹಾಕುತ್ತಾರೆ..

ಮಕರ: ರಾಜಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವು ಘಟನೆಗಳು ಪರಿಣಾಮ ಬೀರುವ ಸಾಧ್ಯತೆ ಇದೆ. ವಾಹನ ಖರೀದಿಗಾರರಿಗೆ ಇದು ಸೂಕ್ತ ಸಮಯವಲ್ಲದಿದ್ದರೂ ಮಾರಾಟಗಾರರಿಗೆ ಲಾಭದ ದಿನ.

ಕುಂಭ: ಹಠವು ನಿಮ್ಮ ಹತ್ತವರನ್ನು ಕಂಗಾಲು ಪಡಿಸುತ್ತದೆ. ಕ್ರೀಡಾಪಟುಗಳು ಇಷ್ಟು ದಿನ ಛಲ ಬಿಡದೆ ಪರಿಶ್ರಮ ವಹಿಸಿದ್ದಕ್ಕಾಗಿ ಉತ್ತಮ ಅವಕಾಶಗಳೊಂದಿಗೆ ಉತ್ತಮ ಮಾರ್ಗದರ್ಶಕರು ದೊರೆತು ಜಯದ ಪಥದಲ್ಲಿ ನಡೆಯುವಿರಿ.

ಮೀನ: ಸೂತ್ರಧಾರನು ನಡೆಸುತ್ತಿರುವ ಕೈವಾಡವು ನಿಮಗೆ ಕಷ್ಟವಾಗುತ್ತಿದ್ದರು ಏನೂ ಮಾಡದ ಪರಿಸ್ಥಿತಿ ಎದುರಾ ಗುತ್ತದೆ. ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಪರ ಊರಿಗೆ ಕಳುಹಿಸುವ ವಿಚಾರ ಅರಗಿಸಿಕೊಳ್ಳಲಾಗದ ತುತ್ತಾಗುತ್ತದೆ.

ಪದಬಂಧ 5279

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಲಗುವ ಮನೆಯಿದು (5)
4.ಈತ ಎಲ್ಲವನ್ನೂ ತಿಳಿದವನು (3)
5.ವರ ಮಾಡಿರುವ ಒತ್ತಾಯ (3)
6.ದನಕ್ಕಾಗಿ ನಡೆದ ಕಾಳಗ (3)
7.ನೂಲು ತೆಗೆಯುವ ಸಾಧನ (3)
9.ಗಣಿತದಲ್ಲಿ ಗುಣಿಸುವ ಸಂಖ್ಯೆ (3)
10.ಮಣ್ಣು ಬೆರೆತ ನೀರು (3)
13.ದಾಸರು ನೀಚ ಬುದ್ಧಿಯ ಬಿಡಲು ಹೇಳಿದ ಅಂಗ! (3)
15.ಹೊನ್ನು ಇಲ್ಲಿದೆ (3)
16.ಅಧಿಕವಾದುದನ್ನು ಹೀಗೆನ್ನಿ (3)
17.ಗುರುಗಳು ತೋರಿಸಿದ ನಖ (3)
18.ಬಾಣಹಿಡಿದಿರುವ ಶೈವ ಭಕ್ತರ ಕೂಡುವಿಕೆ (5)

ಮೇಲಿಂದ ಕೆಳಕ್ಕೆ
1.ನೂರು ವರ್ಷಗಳ ಅವಧಿಯಿದು (4)
2.ಹಳೆಯದನ್ನು ಹೊಸದು ಮಾಡುವಿಕೆ (5)
3.ವನದ ಕೊನೆಗೆ ಮಾಡಿದ ಹೋಮ (3)
4.ನಿರಂತರ ಎಂದು ಹೀಗೆ ಹೇಳಿ (3)
8.ಧಾನ್ಯದ ತೆನೆ (3)
9.ನೆಲವನ್ನು ಅಗೆಯುವ ಕಬ್ಬಿಣದ ಸಾಧನ (3)
11.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
12.ಕೊನೆಗೆ ರಾಳವಿದ್ದಾಗಿನ ನಡುವಣ ವಸ್ತು (4)
14.ಬರುವಾಗ ಹೀಗೆ ಪರಚು! (3)
15.ಪೂಜಾ ಸಮಯದಲ್ಲಿ ನೀರು ತುಂಬಿದ ಚೊಂಬು (3)

1		2		3	■	4		
	■		■	5			■	■
	■	6			■	7	8	
	■		■	■	■	■		■
■	9			■	10	11		■
■		■	■	■	■		■	12
13		14	■	15			■	
■	■	16			■		■	
17			■	18				

5278ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ತರಬೇತಿ 3.ಅಂಗರಾಗ 5.ಮಿಡಿತ 6.ವನಚರ 8.ರಕುತ 10.ಆನನ 11.ಮಹಿಳೆ 12.ಸುಮ್ಮಾನ 14.ಮಧುಕರಿ 17.ವಿಯೋಗ 18.ತಾರುಮಾರು 19.ಉಪಕಾರಿ

ಮೇಲಿಂದ ಕೆಳಕ್ಕೆ: 1.ತನಿವ 2.ತಿಮಿರ 3.ಅಂತರ 4.ಗತ್ತು 7.ನಳನಳಿಸು 9.ತಲೆಹಿಡುಕ 13.ನವಿರು 14.ಮಗಲು 15.ರಿಪೇರಿ 16.ತಾತಾ

ಸುಡೊಕು 5665

		5	8				1	
2							7	
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5664 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1710(1690)
ಸೋಯಾ (ರಿಫೈನ್ಡ್)	₹1075(1070)
ಸೂರ್ಯಕಾಂತಿ (ರಿಫೈನ್ಡ್)	₹1080(1075)
ಪಾಮೋಲಿನ್	₹990 (985)

ವ್ಯಾಗನ್‌ಆರ್, ಆಲ್ಟೊ ಕೆ10ಗೆ ಕಡಿಮೆ ರೇಟಿಂಗ್

ಗ್ಲೋಬಲ್ ಎನ್‌ಸಿಎಪಿ ಹೇಳಿಕೆ ಅಲ್ಲಗಳೆದ ಮಾರುತಿ ಸುಜುಕಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಕಂಪನಿಯ ಜನಪ್ರಿಯ ಕಾರುಗಳಾದ ವ್ಯಾಗನ್‌ಆರ್ ಮತ್ತು ಆಲ್ಟೊ ಕೆ10, ವಯಸ್ಕ ಪ್ರಯಾಣಿಕರ ಸುರಕ್ಷತಾ ಪರೀಕ್ಷೆಯಲ್ಲಿ ಕ್ರಮವಾಗಿ 'ಒನ್ ಸ್ಟಾರ್' ಹಾಗೂ 'ಟೂ ಸ್ಟಾರ್' ರೇಟಿಂಗ್ ಪಡೆದಿವೆ ಎಂದು ವಾಹನಗಳ ಸುರಕ್ಷತೆಯನ್ನು ಅಳೆಯುವ ಗ್ಲೋಬಲ್ ಎನ್‌ಸಿಎಪಿ ಸಂಸ್ಥೆ ಹೇಳಿದೆ.

ಪ್ರಯಾಣಿಕರು ಮಕ್ಕಳಾಗಿದ್ದರೆ, ಅವರ ಸುರಕ್ಷತೆಯ ವಿಚಾರದಲ್ಲಿ ಎರಡೂ ಮಾದರಿಗಳು ಶೂನ್ಯ ರೇಟಿಂಗ್ ಪಡೆದಿವೆ. ಆದರೆ, ತಾನು ತಯಾರಿಸುವ ಕಾರುಗಳು ಭಾರತದ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿ ಇವೆ, ಈ ಮಾನದಂಡಗಳು ಯುರೋಪಿನ ಮಾನದಂಡಗಳಿಗೆ ಹೋಲುವಂತಿವೆ ಎಂದು ಕಂಪನಿ ಸ್ಪಷ್ಟನೆ ನೀಡಿದೆ.

ಗ್ಲೋಬಲ್ ಎನ್‌ಸಿಎಪಿ ಸಂಸ್ಥೆಯು ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿವಾಹನಗಳಿಗೆಶೂನ್ಯದಿಂದ5ಸ್ಟಾರ್‌ವರೆಗೆ ರೇಟಿಂಗ್ ನೀಡುತ್ತದೆ. ಹೆಚ್ಚು ರೇಟಿಂಗ್ ಇರುವ ವಾಹನಗಳು ಹೆಚ್ಚು ಸುರಕ್ಷಿತ ಎಂದು ಪರಿಗಣಿಸಲಾಗಿದೆ.

'ಮಾರುತಿ ಸುಜುಕಿ ಪಾಲಿಗೆ ಸುರಕ್ಷತೆಯು ಆದ್ಯತೆಯ ವಿಷಯಗಳಲ್ಲೊಂದು. ಭಾರತದಲ್ಲಿನ ಸುರಕ್ಷತಾ ಮಾನದಂಡಗಳು ಯುರೋಪಿನ ಮಾನದಂಡಗಳಿಗೆ ಸರಿಹೊಂದುವಂತೆ ಇವೆ. ನಮ್ಮ ಎಲ್ಲ ಮಾದರಿಯ ವಾಹನಗಳು ಭಾರತದ ಮಾನದಂಡಗಳಿಗೆ ಅನುಗುಣವಾಗಿವೆ. ನಮ್ಮ ವಾಹನಗಳನ್ನು ಕೇಂದ್ರ ಸರ್ಕಾರವು ಪರೀಕ್ಷಿಸಿ, ಪ್ರಮಾಣಪತ್ರ ನೀಡುತ್ತಿದೆ' ಎಂದು ಮಾರುತಿ ಸುಜುಕಿ ವಕ್ತಾರರು ಹೇಳಿದ್ದಾರೆ.

ವಯಸ್ಕ ಹಾಗೂ ಮಕ್ಕಳ ವಿಭಾಗಗಳಲ್ಲಿ ಗ್ಲೋಬಲ್ ಎನ್‌ಸಿಎಪಿ ನಡೆಸಿದ ಪರೀಕ್ಷೆಯಲ್ಲಿ ಫೋಕ್ಸ್‌ವ್ಯಾಗನ್ ವರ್ಟುಸ್, ಸ್ಕೋಡಾ ಸ್ಲಾವಿಯಾ ಫೈವ್ ಸ್ಟಾರ್ ರೇಟಿಂಗ್ ಪಡೆದಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಇ–ವಾಣಿಜ್ಯ ಪ್ರವೇಶಕ್ಕೆ ಒಎನ್‌ಡಿಸಿ ನೆರವು

ಸಣ್ಣ ವ್ಯಾಪಾರಿಗಳಿಗೆ ಶಕ್ತಿ • ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ವಾಣಿಜ್ಯಕ್ಕಾಗಿನ ಮುಕ್ತ ವ್ಯವಸ್ಥೆಯು (ಒಎನ್‌ಡಿಸಿ) ಸಣ್ಣ ವ್ಯಾಪಾರಿಗಳಿಗೆ ಇ-ವಾಣಿಜ್ಯದ ಜಗತ್ತನ್ನು ಪ್ರವೇಶಿಸಲು ನೆರವಾಗುತ್ತದೆ ಎಂದು ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ಅಭಿಪ್ರಾಯಪಟ್ಟರು.

ಯುಪಿಐ ಆಧರಿಸಿ ವಿವಿಧ ಬಗೆಯ ಪಾವತಿ ಸೇವೆಗಳನ್ನು ಒದಗಿಸುವ ಫೋನ್‌ಪೆ ಆರಂಭಿಸಿರುವ 'ಪಿನ್‌ಕೋಡ್' ಇ-ವಾಣಿಜ್ಯ ವೇದಿಕೆಯು ಒಎನ್‌ಡಿಸಿ ಜಾಲಕ್ಕೆ ಸೇರ್ಪಡೆ ಆಗುವ ಸಂದರ್ಭದಲ್ಲಿ ಮಾತನಾಡಿದ ನಿಲೇಕಣಿ, 'ಒಎನ್‌ಡಿಸಿ ವ್ಯವಸ್ಥೆಯು ಇ-ವಾಣಿಜ್ಯ ವಹಿವಾಟಿನಲ್ಲಿ ಹಲವು ವರ್ಗಗಳಿಗೆ ಶಕ್ತಿ ತುಂಬುವ ಕೆಲಸವನ್ನು ಮಾಡುತ್ತದೆ' ಎಂಬ ಭರವಸೆ ವ್ಯಕ್ತಪಡಿಸಿದರು.

ಒಎನ್‌ಡಿಸಿ ವೇದಿಕೆಯನ್ನು ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿದೆ. ಪ್ರಬಲ ಇ-ವಾಣಿಜ್ಯ ವೇದಿಕೆಗಳು ಒದಗಿಸುವ ಎಲ್ಲ ಅನುಕೂಲಗಳು ಸಣ್ಣ ವರ್ತಕರಿಗೂ ಲಭ್ಯವಾಗುವಂತೆ ಮಾಡುವ ಉದ್ದೇಶವನ್ನು ಒಎನ್‌ಡಿಸಿ ಹೊಂದಿದೆ.

ನಂದನ್ ನಿಲೇಕಣಿ

'ಪಿನ್‌ಕೋಡ್' ಹೆಸರಿನ ಇ-ವಾಣಿಜ್ಯ ಆ್ಯಪ್ ಈಗ ಬೆಂಗಳೂರಿನಲ್ಲಿ ಸೇವೆ ಆರಂಭಿಸಿದೆ. ಇದನ್ನು ಮುಂದಿನ ದಿನಗಳಲ್ಲಿ ಇತರ ನಗರಗಳಿಗೂ ವಿಸ್ತರಿಸಲಾಗುವುದು ಎಂದು ಫೋನ್‌ಪೆ ಸಿಇಒ ಸಮೀರ್ ನಿಗಮ್ ಹೇಳಿದರು. ಡಿಸೆಂಬರ್ ವೇಳೆಗೆ ದಿನವೊಂದಕ್ಕೆ ಈ ಆ್ಯಪ್ ಮೂಲಕ 1 ಲಕ್ಷ ಖರೀದಿ ವಹಿವಾಟುಸಾಧ್ಯವಾಗಿಸುವಗುರಿಹೊಂದಲಾಗಿದೆ ಎಂದು ಅವರು ತಿಳಿಸಿದರು.

ಸ್ಥಳೀಯ ಗ್ರಾಹಕರು ಹಾಗೂ ವ್ಯಾಪಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲಿರುವ ಈ ಆ್ಯಪ್ ಮೂಲಕ ಸಣ್ಣ ಅಂಗಡಿಗಳಿಂದಲೂ ದಿನಸಿ ವಸ್ತುಗಳನ್ನು ತರಿಸಿಕೊಳ್ಳಬಹುದು.

ಕಾರ್ಯಕ್ರಮದಲ್ಲಿ ವರ್ಚುವಲ್ ಆಗಿ ಮಾತನಾಡಿದ ಕೇಂದ್ರ ಕೈಗಾರಿಕೆ ಹಾಗೂ ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ ಕಾರ್ಯದರ್ಶಿ ಅನುರಾಗ್ ಜೈನ್, 'ಒಎನ್‌ಡಿಸಿ ವ್ಯವಸ್ಥೆಯು ಇ-ವಾಣಿಜ್ಯ ವಹಿವಾಟುಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡುತ್ತದೆ. ಗ್ರಾಹಕರಿಗೆ ಹೆಚ್ಚಿನ ಆಯ್ಕೆಗಳು ಸಿಗುವಂತೆ ನೋಡಿಕೊಳ್ಳುತ್ತದೆ' ಎಂದರು.

ಸಣ್ಣ ವ್ಯಾಪಾರಿಗಳು ಇ-ವಾಣಿಜ್ಯ ವಲಯದ ಬೃಹತ್ ಕಂಪನಿಗಳ ಮೇಲೆ ಅವಲಂಬಿತ ಆಗುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಒಎನ್‌ಡಿಸಿ ವೇದಿಕೆಯನ್ನು ಆರಂಭಿಸಿದೆ. ಇದು 2022ರಲ್ಲಿ ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಪರೀಕ್ಷಾರ್ಥವಾಗಿ ಚಾಲನೆ ಪಡೆದಿತ್ತು. ಹಲವು ಕಂಪನಿಗಳು ಈಗಾಗಲೇ ಒಎನ್‌ಡಿಸಿ ಭಾಗವಾಗಿವೆ. ಕ್ಯಾಬ್ ಸೇವೆಗಳನ್ನು ನೀಡುವ 'ನಮ್ಮ ಯಾತ್ರಿ' ತೀರಾ ಈಚೆಗೆ ಒಎನ್‌ಡಿಸಿ ಜಾಲವನ್ನು ಸೇರಿದೆ.

ಒಎನ್‌ಡಿಸಿ ಸೇರಲಿರುವ ಹೋಟೆಲ್‌ಗಳು

ಬೆಂಗಳೂರಿನ ಹಲವು ಹೋಟೆಲ್‌ಗಳು 'ಪಿನ್‌ಕೋಡ್' ಮೂಲಕ ಒಎನ್‌ಡಿಸಿ ವೇದಿಕೆ ಸೇರಲಿವೆ ಎಂದು ಬೃಹತ್ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್ ಕಾರ್ಯಕ್ರಮದಲ್ಲಿ ತಿಳಿಸಿದರು.

ಕೋವಿಡ್ ಆವರಿಸಿದ್ದ ಸಂದರ್ಭದಲ್ಲಿ, ಸೇವಾ ಶುಲ್ಕವನ್ನು ಕಡಿಮೆ ಮಾಡುವಂತೆ ಹೋಟೆಲ್ ಮಾಲೀಕರು, ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ತಲುಪಿಸುವ ಕೆಲವು ಕಂಪನಿಗಳ ಬಳಿ ಮನವಿ ಮಾಡಿದ್ದರು. ಆದರೆ ಮನವಿಗೆ ಕಂಪನಿಗಳು ಒಪ್ಪಿರಲಿಲ್ಲ. ಆ ಸಂದರ್ಭದಲ್ಲಿ ಒಎನ್‌ಡಿಸಿ ಇರಲಿಲ್ಲ. ಈಗ ಒಎನ್‌ಡಿಸಿ ಕಾರಣದಿಂದಾಗಿ ಹೋಟೆಲ್ ಮಾಲೀಕರಿಗೆ ಹೆಚ್ಚು ಬಲ ಬಂದಿದೆ ಎಂದು ರಾವ್ ಹೇಳಿದರು.

ಒಎನ್‌ಡಿಸಿ ವ್ಯವಸ್ಥೆಯಲ್ಲಿ ಹೋಟೆಲ್‌ಗಳು ಬಹಳ ಕಡಿಮೆ ಪ್ರಮಾಣದ ಕಮಿಷನ್ ಪಾವತಿಸಿ ಗ್ರಾಹಕರನ್ನು ತಲುಪಲು ಸಾಧ್ಯವಿದೆ ಎಂದು ರಾವ್ ತಿಳಿಸಿದರು.

ಚಿರಸ್ಮರಣೆ

ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿ
ನಿಧನ 5.4.1993
ನೀವು ನಮ್ಮನ್ನಗಲಿ ಇಂದಿಗೆ 30 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ
ಸೊಸೆ: ಶ್ರೀಮತಿ ಕೆ.ಜಿ. ಯಶೋದ, ಎಸ್.ಆರ್. ನಾಗರಾಜ ರೆಡ್ಡಿ, ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ

4-4-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720(1740)
ಒಂದು ವಾರದ ಡೆಲಿವರಿ	1715(1695)
ಸೋಯಾ ಕಚ್ಚಾ	1000(980)
ಪಾಮ್ ವಾರದ ಡೆಲಿವರಿ	988(983)
ಸೂರ್ಯಕಾಂತಿ ಎಣ್ಣೆ ಕಚ್ಚಾ	960(950)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59750(59500)
ಬೆಳ್ಳಿ ಕೆ.ಜಿ 71850(71600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹450
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹453

ಜಿಡಿಪಿ ಬೆಳವಣಿಗೆ ಅಂದಾಜು ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 6.3ಕ್ಕೆ ತಗ್ಗುವ ಸಾಧ್ಯತೆ ಇದೆ ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ. ವಿಶ್ವ ಬ್ಯಾಂಕ್ ಈ ಮೊದಲು, ದೇಶದ ಜಿಡಿಪಿ ಶೇ 6.6ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂದಾಜಿಸಿತ್ತು.

ಪ್ರಸಕ್ತ ಹಣಕಾಸು ವರ್ಷದಲ್ಲಿ ಬೇಡಿಕೆಗಳು ತುಸು ಕಡಿಮೆ ಆಗುವ ಕಾರಣದಿಂದಾಗಿ ಜಿಡಿಪಿ ಬೆಳವಣಿಗೆ ಕೂಡತಗ್ಗಬಹುದು ಎಂದು ಮಂಗಳವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಿದೆ.

'ಸಾಲವು ದುಬಾರಿ ಆಗುತ್ತಿದೆ. ಆದಾಯ ಏರಿಕೆಯು ನಿಧಾನವಾಗಿದೆ. ಇವು ಮಾರುಕಟ್ಟೆಯಲ್ಲಿ ಸಾರ್ವಜನಿಕರ ಕಡೆಯಿಂದ ಬರುವ ಬೇಡಿಕೆಗಳು ವೇಗವಾಗಿ ಹೆಚ್ಚದಂತೆ ಮಾಡಬಹುದು. ಕೋವಿಡ್ ಸಂದರ್ಭದಲ್ಲಿ ಜಾರಿಗೆ ತಂದಿದ್ದ ಆರ್ಥಿಕ ನೆರವಿನ ಯೋಜನೆಗಳನ್ನು ಹಿಂದಕ್ಕೆ ಪಡೆಯುತ್ತಿರುವ ಕಾರಣ ಸರ್ಕಾರದ ಕಡೆಯಿಂದ ಬರುವ ಬೇಡಿಕೆಗಳು ತ್ವರಿತ ಏರಿಕೆ ಕಾಣದಿರಬಹುದು' ಎಂದು ಹೇಳಲಾಗಿದೆ.

ಬಿಗಿ ಹಣಕಾಸಿನ ನೀತಿ ಹಾಗೂ ಕಚ್ಚಾ ತೈಲ ಬೆಲೆ ಏರಿಕೆಯು ದೇಶದ ಜಿಡಿಪಿ ಬೆಳವಣಿಗೆಯನ್ನು ಶೇ 6.4ಕ್ಕೆ ಮಿತಿಗೊಳಿಸಬಹುದು ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಂದಾಜಿಸಿದೆ. ಈ ಮೊದಲು, ಜಿಡಿಪಿ ಬೆಳವಣಿಗೆ ಶೇ 6.8ರಷ್ಟು ಆಗಬಹುದು ಎಂದು ಎಡಿಬಿ ಅಂದಾಜಿಸಿತ್ತು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಲ್ಲಪ್ಪ ಎನ್, ಊರು ಬೇಡ

• **ಪ್ರಶ್ನೆ:** ನನ್ನ ಮಗ ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದಾನೆ. ಪ್ರತಿ ತಿಂಗಳು ₹ 40 ಸಾವಿರವನ್ನು ನನ್ನ ಹೆಂಡತಿಯ ಹೆಸರಲ್ಲಿ ಮ್ಯೂಚುವಲ್ ಫಂಡ್ ಹಾಗೂ ಷೇರು ಖರೀದಿಗೆ ಬಳಸುತ್ತಿದ್ದಾನೆ. ಈ ವ್ಯವಹಾರಕ್ಕೆ ಸಂಬಂಧಿಸಿ ನನ್ನ ಹೆಂಡತಿ ಆದಾಯ ತೆರಿಗೆ ವಿವರ ಸಲ್ಲಿಸಬೇಕೇ?

ಉತ್ತರ: ಅನ್ಯ ವ್ಯಕ್ತಿಗಳ ಖಾತೆಯಿಂದ ಮ್ಯೂಚುವಲ್ ಫಂಡ್ ವಹಿವಾಟುಗಳಿಗೆ ಅನುಮತಿಸದೆ ಇರುವುದು ಹಣದ ಅಕ್ರಮ ವರ್ಗಾವಣೆ ಕಾಯ್ದೆಗೆ ಅನುಗುಣವಾಗಿ, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮತ್ತು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ ಹೊರಡಿಸಿರುವ ಮಾರ್ಗಸೂಚಿಗಳ ಒಂದು ಭಾಗ. ಗ್ರಾಹಕರು ನಿಯಮಗಳಿಗೆ ಅನುಗುಣವಾಗಿ ಕೆವೈಸಿ ದಾಖಲೆಗಳನ್ನು ಸಲ್ಲಿಸಬೇಕು.

ನಿಮ್ಮ ಮಗ, ತಾಯಿಯ ಹೆಸರಲ್ಲಿರುವ ಖಾತೆಗೆ ಹಣ ವರ್ಗಾಯಿಸಿ, ಅಲ್ಲಿಂದ ಅವರ ಹೆಸರಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಯಾರ ಹೆಸರಲ್ಲಿ ಹೂಡಿಕೆ ಮಾಡಲಾಗಿದೆಯೋ ಅವರೇ ತೆರಿಗೆ ಪಾವತಿಸಲು ಬಾಧ್ಯಸ್ಥರು. ಇದು ಡಿವಿಡೆಂಡ್ ಆದಾಯಕ್ಕೂ ಅನ್ವಯವಾಗುತ್ತದೆ, ಯೂನಿಟ್‌ಗಳನ್ನು ಮಾರಾಟ ಮಾಡಿ ಗಳಿಸಿದ ಲಾಭಾಂಶಕ್ಕೂ ಅನ್ವಯ ಆಗುತ್ತದೆ. ನಿಮ್ಮ ಮಾಹಿತಿಯಂತೆ ವರ್ಷದಲ್ಲಿ ಈ ಹೂಡಿಕೆಯ ಮೊತ್ತ ₹ 4.80 ಲಕ್ಷ ಆಗುತ್ತದೆ. ಆದಾಯ ತೆರಿಗೆ ನಿಯಮಗಳ ಪ್ರಕಾರ ಯಾವುದೇ ಆಸ್ತಿ/ಹಣ ಇತ್ಯಾದಿಯನ್ನು ಅದರ ಸರಿಯಾದ ಮೌಲ್ಯಕ್ಕೆ ವರ್ಗಾಯಿಸದೆ, ಉಚಿತವಾಗಿ ಅಥವಾ ಅಲ್ಪ ಬೆಲೆಗೆ ಹಸ್ತಾಂತರಿಸಿದಾಗ ಅಂತಹ ವ್ಯತ್ಯಾಸವು ಪಡೆದವರ ಪಾಲಿಗೆ ಆದಾಯವಾಗುತ್ತದೆ. ನಿಮ್ಮ ವಿಚಾರದಲ್ಲಿ, ಹಣವನ್ನು ಮಗ ನೀಡುತ್ತಿರುವ ಕಾರಣ ಅದನ್ನು ವಿನಾಯಿತಿ ವರ್ಗದಲ್ಲಿ ಪರಿಗಣಿಸಲಾಗುತ್ತದೆ. ಆದರೂ ಅದಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳು ನಿಮ್ಮಲ್ಲಿ ಇರಲಿ. ಗಿಫ್ಟ್ ಡೀಡ್ (ದಾನಪತ್ರ) ದಾಖಲೆ ಇರಿಸಿಕೊಂಡಾಗ ವರ್ಗಾಯಿಸಿದವರಿಗೂ, ಸ್ವೀಕರಿಸಿದವರಿಗೂ ಹೆಚ್ಚು ಭದ್ರತೆ.

ಆದಾಯ ತೆರಿಗೆ ವಿಚಾರವಾಗಿ ಹೇಳುವುದಾದರೆ, ಪ್ರಸ್ತುತ ಆರ್ಥಿಕ ವರ್ಷದಿಂದ (2023-24) ಹೊಸ ಆದಾಯ ತೆರಿಗೆ ಪದ್ಧತಿಯಂತೆ ₹ 7.00 ಲಕ್ಷ ವಾರ್ಷಿಕ ಆದಾಯದವರೆಗೆ ವಿನಾಯಿತಿ ಇರುವ ಕಾರಣ ತೆರಿಗೆ ಬರುವುದಿಲ್ಲ. ಹಾಗೂ ಆದಾಯವು ₹ 3 ಲಕ್ಷಕ್ಕಿಂತ ಅಧಿಕವಿದ್ದಾಗ ವಿವರ ಸಲ್ಲಿಸಿ, ಸಿಗುವ ತೆರಿಗೆ ವಿನಾಯಿತಿಗಳನ್ನು ಸರಿಯಾಗಿ ಭರ್ತಿಮಾಡಿ ಪಡೆದುಕೊಳ್ಳಬೇಕು. ನೀವು ಕೊಟ್ಟ ಮಾಹಿತಿಯಂತೆ ಅವರಿಗೆ ಬೇರಾವ ಆದಾಯವಿಲ್ಲದಿದ್ದರೆ ಏನೂ ತೆರಿಗೆ ಬರಲಾರದು.

ಕೆ. ಜಮುನ, ಮೈಸೂರು

• **ಪ್ರಶ್ನೆ:** ನಾನು ಮೈಸೂರು ತಾಲ್ಲೂಕಿನ ಹಳ್ಳಿಯೊಂದರಲ್ಲಿ 19 ಗುಂಟೆ ಕೃಷಿ ಜಮೀನನ್ನು 1993ರಲ್ಲಿ ₹ 28 ಸಾವಿರಕ್ಕೆ ಖರೀದಿಸಿದ್ದೆ. ಅದನ್ನು 1998ರಲ್ಲಿ ಮುಡಾ (MUDA) ವತಿಯಿಂದ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡರು. ಆದರೆ, 2001ರಲ್ಲಿ ಅದು ಡಿನೋಟಿಫೈ ಆಯಿತು. 'ಮುಡಾ' 2022 ಜುಲೈನಲ್ಲಿ 19 ಗುಂಟೆಗೆ ಬದಲಾಗಿ ಅಭಿವೃದ್ಧಿಪಡಿಸಿದ 30X40 ಅಡಿ ಅಳತೆಯ 5 ನಿವೇಶನಗಳನ್ನು ನನ್ನ ಹೆಸರಿಗೆ ಮಂಜೂರು ಮಾಡಿತ್ತು. ಈ 5 ನಿವೇಶನಗಳನ್ನು ನಾನು ಡಿಸೆಂಬರ್ 2022ರಲ್ಲಿ ಒಟ್ಟು ₹ 90 ಲಕ್ಷಕ್ಕೆ ಮಾರಾಟ ಮಾಡಿರುತ್ತೇನೆ. ಈಗ ನಾನು ಈ ಹಣಕ್ಕೆ ಲಾಭ ಹೇಗೆ ಲೆಕ್ಕ ಮಾಡಬೇಕು? ಆದಾಯ ತೆರಿಗೆ ಎಷ್ಟು ಕಟ್ಟಬೇಕು? ತೆರಿಗೆ ಉಳಿಸಲು ಹೊಸ ಮನೆ ಖರೀದಿಸಬಹುದೇ? ನಾನು ಇದುವರೆಗೆ ಆದಾಯ ತೆರಿಗೆ ಪಾವತಿದಾರ ಅಲ್ಲ.

ಉತ್ತರ: ಯಾವುದೇ ಬಂಡವಾಳ ಆಸ್ತಿಯ ಮಾರಾಟದ ಸಂದರ್ಭದಲ್ಲಿ ಬಂದ ಆದಾಯ ತೆರಿಗೆಗೊಳಪಡುತ್ತದೆ. ಸ್ಥಿರ ಆಸ್ತಿಯನ್ನು 2 ವರ್ಷಕ್ಕಿಂತ ಅಧಿಕ ಸಮಯ ಖರೀದಿದಾರರ ಹೆಸರಲ್ಲಿ ಹೊಂದಿದಾಗ ಅಂತಹ ಆಸ್ತಿ 'ದೀರ್ಘಾವಧಿ ಬಂಡವಾಳ ಆಸ್ತಿ'ಯಾಗಿ ಪರಿಗಣಿತವಾಗುತ್ತದೆ. ಈ ಅವಧಿಯನ್ನು ಲೆಕ್ಕ ಹಾಕುವಾಗ ಮೂಲ ಆಸ್ತಿಯ ಖರೀದಿಯ ಸಮಯ ಪರಿಗಣಿಸಿ ಲೆಕ್ಕ ಹಾಕಬೇಕು. ನೀವು ಜಮೀನು ಖರೀದಿಸಿದಾಗ ಅದು 19 ಗುಂಟೆ ಕೃಷಿ ಜಮೀನಾಗಿತ್ತು. ಮಾರಾಟದ ಸಂದರ್ಭದಲ್ಲಿ ಅದು ಕೃಷಿ ಜಮೀನಾಗಿದ್ದರೆ ಮಾತ್ರ ಅದಕ್ಕೆ ತೆರಿಗೆ ವಿನಾಯಿತಿ ಇರುತ್ತದೆ.

ಜಮೀನನ್ನು ನಿಮ್ಮಿಂದ ಪಡೆದು ಭೂಪರಿವರ್ತನೆ ಹಾಗೂ ಅಭಿವೃದ್ಧಿ ಮಾಡಿ ಡಿನೋಟಿಫಿಕೇಷನ್ ಕಾರಣದಿಂದ ಮತ್ತೆ ಬದಲಿ ನಿವೇಶನಗಳನ್ನು ನಿಮಗೆ ನೀಡಲಾಗಿದೆ. ಅದೇ ವರ್ಷ ನೀವು ಜಮೀನನ್ನು ಮಾರಾಟ ಮಾಡಿದ್ದೀರಿ. ನಿಮ್ಮ ಮೂಲ ಜಮೀನು 2001ಕ್ಕಿಂತ ಹಿಂದೆ ಖರೀದಿಸಿದ್ದ ಕಾರಣ, ಹಾಗೂ ಆ ವರ್ಷದಿಂದ ಆದಾಯ ತೆರಿಗೆಗೆ ಸಂಬಂಧಿಸಿ ಹಣದುಬ್ಬರ ಸೂಚ್ಯಂಕ ಮರು ಮೌಲ್ಯೀಕರಣ ಆಗಿದ್ದರಿಂದ ನಿಮ್ಮ ಜಮೀನಿಗೆ ಆ ಸಮಯದಲ್ಲಿ ನ್ಯಾಯೋಚಿತ ಮಾರುಕಟ್ಟೆ ಮೌಲ್ಯ (ಸರ್ಕಾರಿ ಬೆಲೆ) ಎಷ್ಟಿತ್ತು ಎನ್ನುವುದನ್ನು ಗುರುತಿಸಿ. ಇದು ನಿಮ್ಮ ಖರೀದಿ ಬೆಲೆಗಿಂತ ಅಧಿಕ ಇರುತ್ತದೆ. ಈ ಬೆಲೆಗೆ ಮಾರಾಟವಾದ ವರ್ಷದ ಹಣದುಬ್ಬರ ಸೂಚ್ಯಂಕ (331) ಹಾಗೂ 2001ನೇ ಸಾಲಿನ ಸೂಚ್ಯಂಕ (100) ಬಳಸಿ ಪ್ರಸ್ತುತ ಮೌಲ್ಯ ನಿರ್ಧರಿಸಬೇಕು. ಉದಾಹರಣೆಗೆ, ಅಂದಿನ ಮೌಲ್ಯ ₹ 10 ಲಕ್ಷವಾಗಿದ್ದರೆ, ಜಮೀನಿನ ಪ್ರಸಕ್ತ ಬೆಲೆ ₹ 33.10 ಲಕ್ಷ. ಮಾರಾಟ ಮೌಲ್ಯ ಇದಕ್ಕಿಂತ ಎಷ್ಟು ಅಧಿಕ ಇದೆಯೋ ಅದುವೇ ನಿಮ್ಮ ಲಾಭಾಂಶ. ಬಂದ ಲಾಭಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 112ಎ ಅಡಿ ಶೇಕಡ 20.8ರ ಸೆಸ್ ಸಹಿತ ತೆರಿಗೆ ಇರುತ್ತದೆ.

ತೆರಿಗೆ ಉಳಿತಾಯದ ವಿಚಾರವಾಗಿ ಹೊಸ ಮನೆ ಖರೀದಿ, ಮನೆ ನಿರ್ಮಾಣ ಅಥವಾ ಬಂಡವಾಳ ವೃದ್ಧಿ ಖಾತೆ ಯೋಜನೆಯಲ್ಲಿ ಬ್ಯಾಂಕಿನಲ್ಲಿ ಠೇವಣಿ ಮಾಡಿ ಮುಂದೆ ಮನೆ ಖರೀದಿಗೆ ಉಪಯೋಗಿಸುವುದು ಅಥವಾ ಬಾಂಡ್‌ಗಳಲ್ಲಿ ಐದು ವರ್ಷಗಳ ಅವಧಿಗೆ ಗರಿಷ್ಠ ₹ 50 ಲಕ್ಷದವರೆಗೆ, ಆಸ್ತಿ ಮಾರಾಟವಾದ 6 ತಿಂಗಳೊಳಗೆ ಹೂಡಿಕೆ ಮಾಡುವ ಮೂಲಕ ತೆರಿಗೆ ವಿನಾಯಿತಿ ಪಡೆಯ ಬಹುದು. ನಿಮ್ಮ ವಿಚಾರದಲ್ಲಿ ಹೆಚ್ಚಿನ ದಾಖಲೆ ಹಾಗೂ ವಿವರಗಳೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಖುದ್ದಾಗಿ ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ಹೋಮ್ ಥಿಯೇಟರ್ ಮ್ಯೂಸಿಕ್ ಸಿಸ್ಟಮ್ ಸ್ಫೋಟ: ಇಬ್ಬರ ಸಾವು

ಕವರ್ಧಾ, ಛತ್ತೀಸಗಢ (ಪಿಟಿಐ): ಛತ್ತೀಸಗಢದ ಕಬಿರ್ಧಾಮ ಜಿಲ್ಲೆಯ ಚಮಾರಿ ಗ್ರಾಮದಲ್ಲಿ ಮದುವೆಗೆ ಉಡುಗೊರೆಯಾಗಿ ನೀಡಿದ್ದ ಹೋಮ್ ಥಿಯೇಟರ್ ಮ್ಯೂಸಿಕ್ ಸಿಸ್ಟಮ್ ಅನ್ನು ಬಳಸುವ ವೇಳೆ ಸ್ಫೋಟಗೊಂಡು ನವವಿವಾಹಿತ ಮತ್ತು ಆತನ ಅಣ್ಣ ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ಸೋಮವಾರ ಈ ದುರಂತ ಸಂಭವಿಸಿದೆ. ಎಲೆಕ್ಟ್ರಾನಿಕ್ ಸಾಧನದಲ್ಲಿಯೇ ಸ್ಫೋಟಕವನ್ನು ಅಳವಡಿಸಿರುವ ಶಂಕೆ ಇದೆ ಎಂದು ಮಂಗಳವಾರ ಪೊಲೀಸರು ಹೇಳಿದ್ದಾರೆ.

ಅಂಜನಾ ಎಂಬ ಗ್ರಾಮದ ನಿವಾಸಿ ಹೇಮೇಂದ್ರ ಮೆರಾವಿ (22) ಅವರ ಮದುವೆ ಕಳೆದ ವಾರ ನಡೆದಿತ್ತು. ಉಡುಗೊರೆಯಾಗಿ ಬಂದಿದ್ದ ಮ್ಯೂಸಿಕ್ ಸಿಸ್ಟಮ್ ಅನ್ನು ಬಳಸಲು ಪ್ರಯತ್ನಿಸಿದಾಗ ಅದು ಸ್ಫೋಟಗೊಂಡಿದೆ. ಇದರ ಪರಿಣಾಮ ಹೋಮ್ ಥಿಯೇಟರ್ ಮ್ಯೂಸಿಕ್ ಸಿಸ್ಟಮ್ ಇಟ್ಟಿದ್ದ ಕೊಠಡಿಯ ಗೋಡೆ ಮತ್ತು ಚಾವಣಿ ಕುಸಿದಿದೆ ಎಂದು ಇಲ್ಲಿಯ ಪೊಲೀಸ್ ವರಿಷ್ಠಾಧಿಕಾರಿ ಲಾಲ್ ಉಮೇದ್ ಸಿಂಗ್ ಪಿಟಿಐಗೆ ತಿಳಿಸಿದ್ದಾರೆ.

'ಬಿಹಾರ ಕೋಮು ಸಂಘರ್ಷ; ಒಳ್ಳೆಯ ಸರ್ಕಾರಕ್ಕೆ ಎದುರಾದ ಸವಾಲು'

ಪಟ್ನಾ (ಪಿಟಿಐ): ರಾಮನವಮಿ ಮೆರವಣಿಗೆ ಸಂದರ್ಭದಲ್ಲಿ ಬಿಹಾರದ ಸಸರಂ ಮತ್ತು ಬಿಹಾರ ಶರೀಫ್‌ನಲ್ಲಿ ಉದ್ಭವಿಸಿದ ಕೋಮು ಗಲಭೆಗಳು 'ಒಳ್ಳೆಯ ಸರ್ಕಾರಕ್ಕೆ ಎದುರಾದ ನೇರ ಸವಾಲುಗಳು' ಎಂದು ಸಿಪಿಐ(ಎಂ)–ಎಲ್ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಮಂಗಳವಾರ ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅವರು, 'ಮುಂದಿನ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಹಾರವನ್ನು ಗುಜರಾತ್ ಆಗಿ ಪರಿವರ್ತಿಸಲು ಬಿಜೆಪಿ ಪ್ರಯತ್ನಿಸುತ್ತಿದೆ' ಎಂದು ಆರೋಪಿಸಿದರು.

'ಇದು 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ವಿರೋಧ ಪಕ್ಷಗಳ ಒಂದಾಗಬೇಕು ಎನ್ನುವುದನ್ನು ಒತ್ತಿ ಹೇಳಿದೆ. ಬಿಜೆಪಿಯೇತರ ಎಲ್ಲ ಪಕ್ಷಗಳು ಒಂದಾಗಿ ದೇಶದಲ್ಲಿ ಎನ್‌ಡಿಎ ಸರ್ಕಾರದ ಫ್ಯಾಸಿಸ್ಟ್ ಮತ್ತು ಕೋಮುವಾದಿ ಆಡಳಿತಕ್ಕೆ ಕೊನೆ ಹಾಡಬೇಕು. ಬಿಜೆಪಿಯನ್ನು ಪರಾಭವಗೊಳಿಸಲು ಮತ್ತು ಮೋದಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯಲು ಪ್ರತಿಪಕ್ಷಗಳು ಒಂದಾಗಲೇಬೇಕು' ಎಂದು ಹೇಳಿದರು.

'ನಮ್ಮ ಪಕ್ಷದ ಶಾಸಕರು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಮಂಗಳವಾರ ಅಥವಾ ಬುಧವಾರ ಭೇಟಿಯಾಗಿ ಘಟನೆ ಬಗ್ಗೆ ಮಾತುಕತೆ ನಡೆಸಲಿದ್ದಾರೆ' ಎಂದರು.

ಈ ಮಧ್ಯೆ ಎರಡೂ ನಗರಗಳಲ್ಲಿ ಪರಿಸ್ಥಿತಿ ಸುಧಾರಿಸಿದೆ. ಘಟನೆ ಸಂಬಂಧಿಸಿದಂತೆ ಈವರೆಗೆ 173 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನರೇಗಾ: ಜನವರಿ– ಫೆಬ್ರವರಿ ಅವಧಿಯಲ್ಲಿ ಕೆಲಸದ ದಿನ ಕುಸಿತ

ನವದೆಹಲಿ (ಪಿಟಿಐ): ಆ್ಯಪ್ ಆಧಾರಿತ ಹಾಜರಾತಿ ವ್ಯವಸ್ಥೆ ಜಾರಿಗೆ ಬಂದ ಬಳಿಕ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿ ಜನವರಿ ಮತ್ತು ಫೆಬ್ರುವರಿಯಲ್ಲಿ ಸೃಷ್ಟಿಯಾದ ಕೆಲಸದ ದಿನಗಳ ಸಂಖ್ಯೆಯಲ್ಲಿ, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ಇಳಿಕೆ ಕಂಡುಬಂದಿದೆ ಎಂದು ನರೇಗಾ ಸಂಘರ್ಷ ಮೋರ್ಚಾ ತಿಳಿಸಿದೆ.

ನೂತನ ಆ್ಯಪ್ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ವಿರೋಧಿಸಿ ಇಲ್ಲಿನ ಜಂತರ್–ಮಂತರ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯ ನೇತೃತ್ವ ವಹಿಸಿರುವ ಮೋರ್ಚಾ, ಈ ಕುರಿತ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಿದೆ.

ಮೋರ್ಚಾ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಕಳೆದ ವರ್ಷ ಜನವರಿ ಮತ್ತು ಫೆಬ್ರುವರಿ ಅವಧಿಯಲ್ಲಿ 53.07 ಕೋಟಿ ಕೆಲಸದ ದಿನಗಳು ಸೃಷ್ಟಿಯಾಗಿದ್ದವು. ಈ ವರ್ಷದ ಅದೇ ಅವಧಿಯಲ್ಲಿ 34.59 ಕೋಟಿ ಕೆಲಸದ ದಿನಗಳು ಸೃಷ್ಟಿಯಾಗಿವೆ.

2021ರಲ್ಲಿ ಇದೇ ಅವಧಿಯಲ್ಲಿ 56.94 ಕೋಟಿ ಕೆಲಸದ ದಿನಗಳು ಸೃಷ್ಟಿಯಾಗಿದ್ದವು ಎಂದೂ ಮೋರ್ಚಾ ಹೇಳಿದೆ.

ಯುಪಿಎ ಅವಧಿಯಲ್ಲಿ ಅತಿ ಹೆಚ್ಚು ಭ್ರಷ್ಟರಿಗೆ ಶಿಕ್ಷೆ: ಸಿಬಲ್

ನವದೆಹಲಿ (ಪಿಟಿಐ): 'ಯುಪಿಎ ಆಡಳಿತಾವಧಿಯಲ್ಲಿ ಭ್ರಷ್ಟರ ಪೈಕಿ ಅತಿ ಹೆಚ್ಚು ಮಂದಿಗೆ ಶಿಕ್ಷೆ ವಿಧಿಸಲಾಗಿದೆ. ಲೋಕಪಾಲ ಸ್ಥಾಪನೆಯಾದ ದಿನದಿಂದಲೂ ಆ ಸಂಸ್ಥೆ ಮೌನದ ಮೊರೆ ಹೋಗಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವ ವಿಚಾರದಲ್ಲಿ ಈಗಿನ ಕೇಂದ್ರ ಸರ್ಕಾರ ಎಷ್ಟು ಗಂಭೀರವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ' ಎಂದು ರಾಜ್ಯಸಭೆ ಸದಸ್ಯ ಕಪಿಲ್ ಸಿಬಲ್ ಮಂಗಳವಾರ ತಿಳಿಸಿದ್ದಾರೆ.

ಸೋಮವಾರ ನಡೆದಿದ್ದ ಸಿಬಿಐನ ವಜ್ರಮಹೋತ್ಸವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, 'ಭ್ರಷ್ಟಾಚಾರದ ವಿರುದ್ಧ ಕೆಲಸ ಮಾಡುವ ದಿಸೆಯಲ್ಲಿ ಈಗ ರಾಜಕೀಯ ಇಚ್ಛಾಶಕ್ತಿಗೇನೂ ಕೊರತೆ ಇಲ್ಲ. ಭ್ರಷ್ಟರು ಎಷ್ಟೇ ಪ್ರಭಾವಿಗಳಾಗಿರಲಿ. ಅವರ ವಿರುದ್ಧ ಅಧಿಕಾರಿಗಳು ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದ್ದರು.

ವಿದೇಶ ಪ್ರವಾಸ: ಕೋರ್ಟ್ ಅನುಮತಿ

ನವದೆಹಲಿ (ಪಿಟಿಐ): ಸಿಬಿಐ ಮತ್ತು ಇ.ಡಿ ದಾಖಲಿಸಿರುವ ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ಆರೋಪಿಯಾಗಿರುವ ಕಾಂಗ್ರೆಸ್ ನಾಯಕ ಕಾರ್ತಿ ಪಿ.ಚಿದಂಬರಂ ಅವರಿಗೆ ಏಪ್ರಿಲ್ 9 ರಿಂದ ವಿದೇಶ ಪ್ರವಾಸ ತೆರಳಲು ಇಲ್ಲಿನ ನ್ಯಾಯಾಲಯವೊಂದು ಮಂಗಳವಾರ ಅನುಮತಿ ನೀಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

Teju READY MIX MASALA
REQUIRED
RECEPTIONIST
ACCOUNTANT
LAB TECHNICIAN
PREFERRED ONLY LADIES & SURROUNDING KAMAKSHIPALYA
Contact :
J.S. Masala Company
#. 61/7, Petechannappa Industrial Estate, Magadi Main Road, Kamakshipalya, Bangalore - 79.
e-mail : tejumasala@yahoo.com
Ph: 7022609501
7022609504

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು -54 ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ 9148525233, 7899235388

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ,ITI ನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ಸೌತ್ ಇಂಡಿಯನ್ ವೆಜ್ / ನಾನ್ ವೆಜ್ ಕುಕ್‌ಗಳು ಮತ್ತು ಹೆಲ್ಪರ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ: 9845618105, 9900098105, E-Mail: thomas.george575@gmail.com

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Wanted

ಬೆಂಗಳೂರಿನ ಮನೆಗಳಲ್ಲಿ ಚಿಕ್ಕಮಕ್ಕಳನ್ನು /ವಯಸ್ಕರನ್ನು ನೋಡಿಕೊಳ್ಳಲು/ ಮನೆಕೆಲಸ / ಅಡಿಗೆ ಮಾಡಲು ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 13000-20000 ಉಚಿತ ಆಹಾರ, ವಸತಿ ನೀಡಲಾಗುತ್ತದೆ. 7338556119, 7259450815, 8197566700

ಪ್ರವಾಸ

Travel

ಸರ್ವೋದಯ ಟ್ರಾವೆಲ್ಸ್ ಕಲಾಸಿಪಾಳ್ಯಂ ನಮ್ಮ ಸ್ವಂತ ಬಸ್ಸಿನಲ್ಲಿ ಪ್ರತಿ ಶುಕ್ರವಾರ 5ದಿನಗಳ ಪಂಡರಾಪುರ ಶನಿಸಿಂಗನಾಪುರ,ಶಿರಡಿ,ಪಂಚವಟಿ ತ್ರಯಂಬಕೇಶ್ವರ್,ಕೊಲ್ಲಾಪುರ್ ಇತ್ಯಾದಿ ಊಟ ವಸತಿಯೊಂದಿಗೆ ಸೀಟ್‌ಯೊಂದಕ್ಕೆ 5,500 ಅಮರನಾಥ್,ಚಾರ್‌ಧಾಮ್ ಕಾಶಿಯಾತ್ರೆ ಪ್ರವಾಸ ಏರ್ಪಡಿಸಲಾಗುವುದು ಸಂಪರ್ಕಿಸಿ: 9886941955 8277755695

TRAVEL CORNER ಕ್ಲಾಸಿಫೈಡ್ಸ್

ಜೀರೊ ಕ್ಯಾಶ್ ಕ್ಯಾರಿ ಪ್ರವಾಸಗಳು
ಶ್ರೀ ಮಲ್ಲಿಕಾರ್ಜುನ ಟ್ರಾವೆಲ್ಸ್ shree mallikarjuna travels explore the world with comfort
ಚಾರಧಾಮ್ ಯಾತ್ರಾ 13 ದಿನಗಳು, ಮೇ-3, 17 ಜೂನ್-7, 21, ಒಬ್ಬರಿಗೆ: 49,000 /- ರೂ.
ನಾರ್ತ್ ಈಸ್ಟ್ ಯಾತ್ರಾ 7/12 ದಿನಗಳು, ಮೇ-12 ಒಬ್ಬರಿಗೆ: 63,000 /- ರೂ. ಹಾಗೂ 70,000 /- ರೂ.
ಗುಜರಾತ್ ಪ್ರವಾಸ 9 ದಿನಗಳು, ಏಪ್ರಿಲ್- 28, ಮೇ- 24 ಒಬ್ಬರಿಗೆ: 35,000 /- ರೂ.
ಅಮರನಾಥ ಯಾತ್ರಾ 11 ದಿನಗಳು, ಜೂನ್-26, ಜುಲೈ- 10, 24 ಒಬ್ಬರಿಗೆ: 54,000 /- ರೂ.
ಮುಕ್ತಿನಾಥ ಯಾತ್ರಾ 13 ದಿನಗಳು, ಮೇ-8, 26 ಒಬ್ಬರಿಗೆ: 59,000 /- ರೂ.
ಪುರಿ-ಕಲ್ಕತ್ತಾ-ಡಾರ್ಜಿಲಿಂಗ್ ಪ್ರವಾಸ 11 ದಿನಗಳು, ಮೇ- 11 ಒಬ್ಬರಿಗೆ: 48,000 /- ರೂ.
ಕಾಶಿ ಯಾತ್ರಾ 6 ದಿನಗಳು, ಏಪ್ರಿಲ್-24, ಮೇ-8 ಒಬ್ಬರಿಗೆ: 32,000 /- ರೂ.
ಕಾಶ್ಮೀರ ಪ್ರವಾಸ 6 /9 ದಿನಗಳು, ಮೇ-15, 29 ಒಬ್ಬರಿಗೆ: 45,000 /- ರೂ. ಹಾಗೂ 54,000 /- ರೂ.
* 5%Gst ಪ್ರತ್ಯೇಕ
ಪ್ರತಿ ತಿಂಗಳು ದಕ್ಷಿಣ ಕನ್ನಡ, ಉತ್ತರ ಕರ್ನಾಟಕ, ಗೋವಾ, ಶಿರಡಿ, ಕೇರಳ, ಮಂತ್ರಾಲಯ, ತಮಿಳುನಾಡು ಮತ್ತು ಇತ್ಯಾದಿ
ಪ್ರವಾಸದ ದರದಲ್ಲಿ ಸೇರಿರುತ್ತದೆ: ವಿಮಾನ ದರ | ಎಸಿ ಬಸ್ | ಎಸಿ ರೂಮ್ | ತಿಂಡಿ, ಊಟ, ಸ್ನ್ಯಾಕ್ಸ್ | ಪ್ರವೇಶ ಶುಲ್ಕಗಳು | ಆಟೋ ಶುಲ್ಕಗಳು
Tour Cost Includes: Air Tickets*, 2X2 A/C Bus Transportation, Food, Twin Sharing Rooms, Entry Fees* *T&C apply
Office Address: 19/1, 1st Main Road, Opp Vijaynagar Club, Vijaynagar, Bangalore-560040
Mob: 9902008056, 9880847001, 9342848791

ಶಿವನಂದಿ ಟ್ರಾವೆಲ್ಸ್ ಹನುಮಂತನಗರ,ಬೆಂಗಳೂರು ಅಮರನಾಥ್ ಯಾತ್ರೆ,ಕಟ್ರಾ ವೈಷ್ಣೋದೇವಿ,ದೆಹಲಿ,ಶ್ರೀನಗರ 12ದಿನಗಳು 1.7.2023, 14.7.2023. ಕಾಶಿಯಾತ್ರೆ, ದೆಹಲಿ,ಆಗ್ರಾ,ಅಯೋಧ್ಯ 13ದಿನಗಳು 17.5.2023. ದುಬೈ,ಅಬುಧಾಬಿ 5ದಿನಗಳು 17.4.2023, 15.5.2023 ಸಂಪರ್ಕಿಸಿ 9036056352 9481027363

22.4.2023ರಿಂದ 4 ದಿನ 2x2`A/C`ಬಸ್ಸಿನಲ್ಲಿ ರೂಮ್ ವಸತಿಯೊಂದಿಗೆ ಶಿರಡಿ, ಪಂಡರಾಪುರ,ಕೂಡಲಸಂಗಮ ಕೊಲ್ಲಾಪುರ,ಶನಿಸಿಂಗನಾಪುರ ಬಿಜಾಪುರ.`27.4.2023`ಮತ್ತು 5.5.2023ರಿಂದ 5ದಿನ ಕಾಶಿ, ಅಯೋಧ್ಯ,ಅಲಹಾಬಾದ್`, ಗಯಾ,ಬುದ್ಧಗಯಾ. 13.5.2023ರಿಂದ 6ದಿನಗಳು 2x2 A/C`ಬಸ್ಸಿನಲ್ಲಿ ರೂಮ್ ವಸತಿಯೊಂದಿಗೆ`ರಾಮೇಶ್ವರ, ತ್ರಿವೇಂಡ್ರಮ್`ಕನ್ಯಾಕುಮಾರಿ ಅಲಪಿಬೋಟಿಂಗ್ ಕೋವಲಂಬೀಚ್ ಗುರುವಾಯೂರು ಮಧುರೈ. ಶ್ರೀ.ಗುರುರಾಜ`ಟ್ರಾವೆಲ್ಸ್. ಕೋಲಾರ:-9449652555, 9611082432, 8123099913.

★ವಿಮಾನದಲ್ಲಿ ಪ್ರವಾಸ★ 14.05.2023 9/13ದಿನಗಳು ಆಗ್ರಾ,ದೆಹಲಿ,ಕಾಶಿ,ಗಯಾ, ಪ್ರಯಾಗ,.19.06.2023 13ದಿನಗಳು ಕಾಶಿ,ನೇಪಾಳ ಮುಕ್ತಿನಾಥ,ಗಜೇಂದ್ರಮೋಕ್ಷ, ಜನಕಪುರ್ ಪ್ರವಾಸ. ಆರ್.ಗಾಂಧಿ ಟೂರ್ಸ್.(ರಿ).ತ್ಯಾಗರಾಜನಗರ. 9945445809/ 9902433500

13 ದಿನಗಳ ಉತ್ತರಭಾರತ ಪ್ರವಾಸ. 8 ದಿನಗಳ ಸಿಕ್ಕಿಂ,ಡಾರ್ಜಿಲಿಂಗ್ ಹಾಗು ಚಾರ್ ಧಾಮ್‌ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ ಬೆಂಗಳೂರು. 9740228186, 9980270467

Pilgrimage Tours

ಸುವರ್ಣ ಯಾತ್ರ.130423 ನೇಪಾಳ, ಮುಕ್ತಿನಾಥ ಪ್ರವಾಸ 9 ದಿನಗಳು. 240423.ಕಾಶಿ ಪ್ರವಾಸ 7 ದಿನಗಳು.9008381022, 9019462508.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
conditions apply*
@ 803/-* Per Sqcm Single Column
@ 825/-* Per Sqcm Multi Column
For more information Contact:
9845114560 : 9731810277
9901641752 : 9886213331
080 - 45557163 / 164

ರಿಶಾರಾದಲ್ಲಿ ರಾಮನವಮಿ ವೇಳೆ ನಡೆದಿದ್ದ ಘರ್ಷಣೆ ● ಗಲಭೆ ಪೀಡಿತ ಪ್ರದೇಶಗಳಿಗೆ ರಾಜ್ಯಪಾಲರ ಭೇಟಿ

ಹಿಂಸಾಚಾರ: ವರದಿ ಕೇಳಿದ ಹೈಕೋರ್ಟ್

ಕೋಲ್ಕತ್ತ/ರಿಶಾರಾ, ಪಶ್ಚಿಮ ಬಂಗಾಳ (ಪಿಟಿಐ): ಹೂಗ್ಲಿ ಜಿಲ್ಲೆಯ ರಿಶಾರಾ ಪ್ರದೇಶದಲ್ಲಿ ನಡೆದಿರುವ ಹಿಂಸಾಚಾರದ ಕುರಿತು ವರದಿ ಸಲ್ಲಿಸುವಂತೆ ಕಲ್ಕತ್ತಾ ಹೈಕೋರ್ಟ್, ಪಶ್ಚಿಮ ಬಂಗಾಳ ಸರ್ಕಾರಕ್ಕೆ ನಿರ್ದೇಶಿಸಿದೆ. ವಿಚಾರಣೆಯನ್ನು ಇದೇ 5ಕ್ಕೆ ಮುಂದೂಡಿದೆ.

ಮಂಗಳವಾರ ನಡೆದ ವಿಚಾರಣೆ ವೇಳೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಪರ ವಕೀಲರು, ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ ನೇತೃತ್ವದ ವಿಭಾಗೀಯ ಪೀಠದ ಎದುರು ಗಲಭೆಯ ವಿಚಾರ ಪ್ರಸ್ತಾಪಿಸಿದರು.

ಆಗ ದ್ವಿಸದಸ್ಯ ಪೀಠವು ಘಟನೆ ಕುರಿತ ವರದಿಯೊಂದನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು. ಈ ಸಂಬಂಧ ಪೂರಕ ಅಫಿಡವಿಟ್ ಸಲ್ಲಿಸುವಂತೆ ಸುವೇಂದು ಅಧಿಕಾರಿಯವರಿಗೂ ಸೂಚಿಸಿತು.

ಸುವೇಂದು ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ಜೊತೆಗೆ ಈ ಪ್ರಕರಣದ ಹೆಚ್ಚುವರಿ ವಿಚಾರಣೆಯನ್ನು ಇದೇ 5ರಂದು ನಡೆಸುವುದಾಗಿ ನ್ಯಾಯಮೂರ್ತಿ ಹಿರಣ್ಮಯ್ ಭಟ್ಟಾಚಾರ್ಯ ಅವರನ್ನೊಳಗೊಂಡ ಪೀಠ ಹೇಳಿತು.

> **ಹೂಗ್ಲಿ ಮತ್ತು ಹೌರಾದಲ್ಲಿ ನಡೆದ ಹಿಂಸಾಚಾರದ ಹಿಂದೆ ಬಿಜೆಪಿ ಕೈವಾಡವಿದೆ. ದಂಗೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ**
> **ಮಮತಾ ಬ್ಯಾನರ್ಜಿ** ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ರಾಮನವಮಿ ನಿಮಿತ್ತ ಭಾನುವಾರ ರಾತ್ರಿ ರಿಶಾರಾದಲ್ಲಿ ನಡೆದಿದ್ದ ಮೆರವಣಿಗೆ ವೇಳೆ ಎರಡು ಗುಂಪುಗಳ ನಡುವೆ ಘರ್ಷಣೆ ಏರ್ಪಟ್ಟಿತ್ತು. ಹೀಗಾಗಿ ಪೊಲೀಸರು ಮುಂಜಾಗ್ರತಾ ದೃಷ್ಟಿಯಿಂದ ಗಲಭೆ ಪೀಡಿತ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಅಂತರ್ಜಾಲ ಸೇವೆಯನ್ನೂ ನಿರ್ಬಂಧಿಸಿದ್ದರು.

ರಿಶಾರಾದಲ್ಲಿನ ರೈಲ್ವೆ ಗೇಟ್–4ರ ಬಳಿ ಸೋಮವಾರ ರಾತ್ರಿ ನಡೆದಿದ್ದ ಗುಂಪು ಘರ್ಷಣೆಯಿಂದಾಗಿ ರೈಲು ಸೇವೆಯಲ್ಲಿ ವ್ಯತ್ಯಯ ಉಂಟಾಗಿತ್ತು.

ಕಾನೂನು ಕೈಗೆತ್ತಿಕೊಳ್ಳಲು ಬಿಡೆವು: 'ಗೂಂಡಾಗಳು ಕಾನೂನು ಕೈಗೆತ್ತಿಕೊಳ್ಳುವುದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಹೇಳಿದ್ದಾರೆ.

ಗಲಭೆ ಪೀಡಿತ ಪ್ರದೇಶದ ಹತ್ತಿರ ಪ್ರತಿಭಟನೆ ಕೈಗೊಂಡಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಹೂಗ್ಲಿಯ ದಾಂಕುನಿ ಬಳಿ ಮಂಗಳವಾರ ತಡೆದರು–ಪಿಟಿಐ ಚಿತ್ರ

ಗಲಭೆ ಪೀಡಿತ ಪ್ರದೇಶಗಳಿಗೆ ಮಂಗಳವಾರ ಭೇಟಿ ನೀಡಿದ್ದ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

'ದೊಂಬಿಗೆ ಅವಕಾಶ ನೀಡುವುದಿಲ್ಲ. ದುಷ್ಕೃತ್ಯದಲ್ಲಿ ಪಾಲ್ಗೊಳ್ಳುವವರನ್ನು ಸದೆಬಡಿಯುವುದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರ, ರಾಜಕೀಯ ಪಕ್ಷಗಳು, ಮಾಧ್ಯಮದವರು ಹಾಗೂ ನಾಗರಿಕರು ಕೈಜೋಡಿಸಲಿದ್ದಾರೆ' ಎಂದು ತಿಳಿಸಿದ್ದಾರೆ.

ಭೇಟಿಗೆ ನಿರಾಕರಣೆ: ಗಲಭೆ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲು ಮುಂದಾಗಿದ್ದ ಬಿಜೆಪಿಯ ಬಂಗಾಳ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಅವರನ್ನು ಪೊಲೀಸರು ಮಂಗಳವಾರವೂ ತಡೆದರು.

ಬಲೂರ್‌ಘಾಟ್ ಕ್ಷೇತ್ರದ ಸಂಸದರಾಗಿರುವ ಮಜುಂದಾರ್ ಅವರು ಪಕ್ಷದ ಮತ್ತೊಬ್ಬ ಸಂಸದ ಜ್ಯೋತಿರ್ಮಯ ಸಿಂಗ್ ಮಹತೊ ಅವರೊಂದಿಗೆ ಪ್ರತಿಭಟನೆಯೊಂದರಲ್ಲಿ ಪಾಲ್ಗೊಳ್ಳಲು ಶ್ರೀರಾಂಪುರ ಲೋಕಸಭೆ ಕ್ಷೇತ್ರ ವ್ಯಾಪ್ತಿಯ ಬಟ್ಟಾಲಕ್ಕೆ ಹೊರಟಿದ್ದರು. ಇವರನ್ನು ಪೊಲೀಸರು ದಾಂಕುನಿ ರಸ್ತೆಯ ಬಳಿ ತಡೆದರು.

ಓಲೈಕೆ ರಾಜಕಾರಣ (ನವದೆಹಲಿ ವರದಿ): 'ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಅಲ್ಪಸಂಖ್ಯಾತರ ಮತ ಗಳಿಸುವುದಕ್ಕಾಗಿ ಓಲೈಕೆ ರಾಜಕಾರಣ ನಡೆಸುತ್ತಿದ್ದಾರೆ' ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಮಂಗಳವಾರ ವಾಗ್ದಾಳಿ ನಡೆಸಿದ್ದಾರೆ.

ವರದಿ ಕೇಳಿದ ಗೃಹ ಸಚಿವಾಲಯ: 'ರಾಮನವಮಿ ಮೆರವಣಿಗೆ ವೇಳೆ ಹೌರಾದಲ್ಲಿ ನಡೆದಿದ್ದ ಹಿಂಸಾಚಾರದ ಕುರಿತು ಸವಿವರವಾದ ವರದಿ ನೀಡುವಂತೆ ಕೇಂದ್ರ ಗೃಹ ಸಚಿವಾಲಯವು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚಿಸಿದೆ' ಎಂದು ಮೂಲಗಳು ತಿಳಿಸಿವೆ.

ರಿವಾಲ್ವರ್ ಹಿಡಿದಿದ್ದ ವ್ಯಕ್ತಿ ಬಂಧನ

ಕೋಲ್ಕತ್ತ (ಪಿಟಿಐ): ರಾಮನವಮಿ ಪ್ರಯುಕ್ತ ಕಳೆದ ವಾರ ಹೌರಾ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಮೆರವಣಿಗೆಯಲ್ಲಿ ರಿವಾಲ್ವರ್ ಹಿಡಿದು ಸಾಗಿದ್ದ ಯುವಕನೊಬ್ಬನನ್ನು ಪಶ್ಚಿಮ ಬಂಗಾಳ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಯುವಕನು ಧಾರ್ಮಿಕ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಬಿಹಾರದ ಮುಂಗೇರ್ ಎಂಬಲ್ಲಿ ಆತನನ್ನು ಬಂಧಿಸಲಾಗಿದೆ. ಮೆರವಣಿಗೆಯಲ್ಲಿ ತಾನು ರಿವಾಲ್ವರ್ ಹಿಡಿದು ಸಾಗಿದ್ದಾಗಿ ವಿಚಾರಣೆ ವೇಳೆ ಆತ ಒಪ್ಪಿಕೊಂಡಿದ್ದಾನೆ. ಆತನನ್ನು ಸಿಐಡಿ ವಶಕ್ಕೆ ಒಪ್ಪಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ರಾಮನವಮಿ ನಿಮಿತ್ತ ಹಮ್ಮಿಕೊಂಡಿದ್ದ ಮೆರವಣಿಗಾಗಿ ಬಿಜೆಪಿಯು ಹೊರ ರಾಜ್ಯಗಳಿಂದ ಗೂಂಡಾಗಳನ್ನು ಕರೆದುಕೊಂಡು ಬಂದಿದೆ. ಯುವಕನೊಬ್ಬನ ಬಂಧನವು ನಮ್ಮ ಈ ಆರೋಪಕ್ಕೆ ಪುಷ್ಟಿ ನೀಡುವಂತಿದೆ. ಆದರೆ ಬಿಜೆಪಿ ಇದನ್ನು ನಿರಾಕರಿಸುತ್ತಲೇ ಇದೆ. ಸಿಐಡಿ ಅಧಿಕಾರಿಗಳು ಇದೆಲ್ಲದರ ಕುರಿತೂ ತನಿಖೆ ಕೈಗೊಳ್ಳಲಿ' ಎಂದು ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ವಕ್ತಾರರೊಬ್ಬರು ತಿಳಿಸಿದ್ದಾರೆ.

'ಐ ಡ್ರಾಪ್ಸ್'ನಲ್ಲಿ ಕಲಬೆರಕೆ ಕಂಡುಬಂದಿಲ್ಲ'

ನವದೆಹಲಿ (ರಾಯಿಟರ್ಸ್): 'ಅಮೆರಿಕದಲ್ಲಿ ಮೂವರ ಸಾವು ಹಾಗೂ ಕೆಲವರಲ್ಲಿ ದೃಷ್ಟಿ ಹಾನಿಗೆ ಕಾರಣವಾಗಿತ್ತು ಎಂಬ ಆರೋಪ ಎದುರಿಸುತ್ತಿದ್ದ, ಭಾರತದ ಕಂಪನಿ ಉತ್ಪಾದಿಸಿರುವ ಕಣ್ಣಿನ ಔಷಧಿಯ (ಐ ಡ್ರಾಪ್) ಮಾದರಿಗಳಲ್ಲಿ ಯಾವುದೇ ಕಲ್ಮಶ ಅಥವಾ ಕಲಬೆರಕೆ ಕಂಡುಬಂದಿಲ್ಲ' ಎಂದು ಎನ್‌ಡಿಟಿವಿ ಮಂಗಳವಾರ ವರದಿ ಮಾಡಿದೆ.

'ಆರೋಗ್ಯ ಸಚಿವಾಲಯದ ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ' ಎಂದು ರಾಯಿಟರ್ಸ್ ಸುದ್ದಿಸಂಸ್ಥೆ ತಿಳಿಸಿದೆ.

ಚೆನ್ನೈ ಮೂಲದ ಗ್ಲೋಬಲ್ ಫಾರ್ಮಾ ಹೆಲ್ತ್‌ಕೇರ್ ಈ 'ಐ ಡ್ರಾಪ್' ಅನ್ನು ಉತ್ಪಾದಿಸುತ್ತಿದೆ.

'ಐ ಡ್ರಾಪ್ಸ್'ನ ಮಾದರಿಗಳು ಉತ್ತಮ ಗುಣಮಟ್ಟದಿಂದ ಕೂಡಿವೆ ಎಂಬುದು ಭಾರತದಲ್ಲಿ ನಡೆಸಿರುವ ಪರೀಕ್ಷೆಗಳು ದೃಢಪಡಿಸಿವೆ' ಎಂದು ಎನ್‌ಡಿಟಿವಿ ವರದಿಯಲ್ಲಿ ಹೇಳಲಾಗಿದೆ. ಆದರೆ, ಈ ಕುರಿತು ಗ್ಲೋಬಲ್ ಫಾರ್ಮಾ ಹೆಲ್ತ್‌ಕೇರ್ ಮತ್ತು ಆರೋಗ್ಯ ಸಚಿವಾಲಯದ ವಕ್ತಾರರು ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ ಎಂದೂ ರಾಯಿಟರ್ಸ್ ಹೇಳಿದೆ.

ಈ 'ಐ ಡ್ರಾಪ್' ಬಳಕೆ ಕುರಿತು ಕೆಲ ತಿಂಗಳ ಹಿಂದೆ ಅಮೆರಿಕದ ಆರೋಗ್ಯ ನಿಯಂತ್ರಕ ಸಂಸ್ಥೆಗಳು ಎಚ್ಚರಿಕೆ ನೀಡಿದ್ದವು. ಔಷಧಿ ನಿರೋಧಕ ಬ್ಯಾಕ್ಟೀರಿಯಾದಿಂದ ಈ 'ಐ ಡ್ರಾಪ್ಸ್' ಕಲುಷಿತಗೊಂಡಿದೆ ಎಂದೂ ಆರೋಪಿಸಿದ್ದವು.

'ಕಂಪನಿಯು (ಗ್ಲೋಬಲ್ ಫಾರ್ಮಾ ಹೆಲ್ತ್‌ಕೇರ್) ಗುಣಮಟ್ಟದ ಉತ್ಪಾದನೆಗೆ ಸಂಬಂಧಿಸಿದ ವೃತ್ತಿಪರತೆಯನ್ನು ಪಾಲನೆ ಮಾಡಿಲ್ಲ' ಎಂದೂ ಆರೋಪಿಸಲಾಗಿತ್ತು. ಈ ಆರೋಪಗಳ ಬೆನ್ನಲ್ಲೇ, ಕಂಪನಿಯು ಮಾರುಕಟ್ಟೆಗಳಿಂದ ತನ್ನ ಉತ್ಪನ್ನವನ್ನು (ಐ ಡ್ರಾಪ್ಸ್) ಹಿಂದಕ್ಕೆ ಪಡೆದಿತ್ತು.

'ಈ ಐ ಡ್ರಾಪ್ಸ್ ಬಳಸಿದ್ದ ರೋಗಿಗಳ ಪೈಕಿ, 16 ರಾಜ್ಯಗಳಲ್ಲಿನ 68 ರೋಗಿಗಳಲ್ಲಿ ಔಷಧ ನಿರೋಧಕ ಬ್ಯಾಕ್ಟೀರಿಯಾದ ಅಪರೂಪದ ತಳಿ ಇರುವುದು ಕಂಡು ಬಂದಿತ್ತು' ಎಂದು ಅಮೆರಿಕದ 'ರೋಗ ನಿಯಂತ್ರಣ ಕೇಂದ್ರ' (ಸಿಡಿಸಿ) ಮಾರ್ಚ್ 14ರಂದು ಹೇಳಿತ್ತು.

ಕೋವಿಡ್: ಸಕ್ರಿಯ ಪ್ರಕರಣಗಳ ಸಂಖ್ಯೆ 21,179ಕ್ಕೆ ಏರಿಕೆ

ನವದೆಹಲಿ (ಪಿಟಿಐ): 'ದೇಶದಲ್ಲಿ ಹೊಸದಾಗಿ 3,038 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 21,179ಕ್ಕೆ ಏರಿಕೆಯಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಮಂಗಳವಾರ ತಿಳಿಸಿದೆ.

ಸೋಂಕಿನಿಂದಾಗಿ ಕಳೆದ 24 ಗಂಟೆಗಳಲ್ಲಿ ಒಂಬತ್ತು ಮಂದಿ ಸಾವಿಗೀಡಾಗಿದ್ದು, ಇಲ್ಲಿಯವರೆಗೆ ಕೋವಿಡ್ ಸಾಂಕ್ರಾಮಿಕದಿಂದ ಸತ್ತವರ ಸಂಖ್ಯೆ 5,30,901ಕ್ಕೆ ಏರಿದೆ.

ಜೈಪುರ ವರದಿ: ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹಾಗೂ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಅವರಿಗೆ ಕೋವಿಡ್ ದೃಢಪಟ್ಟಿರುವುದು ಮಂಗಳವಾರ ತಿಳಿದುಬಂದಿದೆ.

ಮಾಧ್ಯಮ ಪ್ರತಿನಿಧಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಶ್ನೆ

'ಬಿಜೆಪಿ ಹೇಳಿದ್ದನ್ನೇ ಯಾಕೆ ಹೇಳುತ್ತೀರಿ'

ನವದೆಹಲಿ (ಪಿಟಿಐ): 'ನೀವು ಯಾವಾಗಲೂ ಬಿಜೆಪಿ ಹೇಳಿದ್ದನ್ನೇ ಯಾಕೆ ಹೇಳುತ್ತೀರಿ...?'

– ಇದು, ಮಾಧ್ಯಮ ಪ್ರತಿನಿಧಿಯೊಬ್ಬರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ಮರು ಪ್ರಶ್ನೆ ಹಾಕಿದ ಪರಿ.

ಮಾಧ್ಯಮ ಪ್ರತಿನಿಧಿಗಳನ್ನು ಈ ರೀತಿ ಪ್ರಶ್ನಿಸಿದ್ದಕ್ಕಾಗಿ ರಾಹುಲ್ ವಿರುದ್ಧ ಬಿಜೆಪಿ ಟೀಕಾಪ್ರಹಾರ ಮಾಡಿದೆ.

ಇಲ್ಲಿ, ಪಕ್ಷದ ಕೇಂದ್ರ ಕಚೇರಿಯನ್ನು ಪ್ರವೇಶಿಸುತ್ತಿದ್ದ ರಾಹುಲ್ ಅವರಿಗೆ ಮಾಧ್ಯಮ ಪ್ರತಿನಿಧಿಯೊಬ್ಬರು, 'ಮಾನನಷ್ಟ ಮೊಕದ್ದಮೆಯಲ್ಲಿ ಜೈಲು ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ ಸೂರತ್‌ನ ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ವೇಳೆ ಪಕ್ಷದ ಮುಖಂಡರು, ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ಇದು ನ್ಯಾಯಾಂಗದ ಮೇಲೆ ಒತ್ತಡ ಹೇರುವ ತಂತ್ರವಾಗಿತ್ತು ಎಂಬುದಾಗಿ ಬಿಜೆಪಿ ಆರೋಪಿಸಿದೆ. ಇದಕ್ಕೆ ಏನು ಹೇಳುತ್ತೀರಿ' ಎಂದು ಕೇಳಿದರು.

ದೆಹಲಿಯಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಸಭೆ ಮುಗಿಸಿ ಹೊರಬಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ –ಪಿಟಿಐ ಚಿತ್ರ

ಆಗ, ಒಂದೆರಡು ಹೆಜ್ಜೆ ಹಿಂದಕ್ಕೆ ಬಂದ ರಾಹುಲ್, 'ಬಿಜೆಪಿ ಹೇಳಿದ್ದನ್ನೇ ನೀವು ಯಾಕೆ ಹೇಳುತ್ತೀರಿ? ಪ್ರತಿ ಬಾರಿಯೂ ಬಿಜೆಪಿ ಏನು ಹೇಳುತ್ತದೆಯೋ ನೀವೂ ಅದನ್ನೇ ಹೇಳುತ್ತೀರಲ್ಲ' ಎಂದು ಮರುಪ್ರಶ್ನೆ ಹಾಕಿದರು.

'ನನ್ನ ಪ್ರಶ್ನೆ ಬಹಳ ಸರಳ. ಅದಾನಿಗೆ ಸೇರಿದ ಶೆಲ್ ಕಂಪನಿಗಳಲ್ಲಿ ಹೂಡಿಕೆಯಾಗಿರುವ ₹ 20 ಸಾವಿರ ಕೋಟಿ ಯಾರಿಗೆ ಸೇರಿದ್ದು? ಇದು ಬೇನಾಮಿ ಹಣ' ಎನ್ನುವ ಮೂಲಕ ರಾಹುಲ್ ಅವರು ತಮ್ಮ ಆರೋಪಗಳನ್ನು ಪುನರುಚ್ಚರಿಸಿದರು. ನಂತರ, ಟ್ವೀಟ್ ಮಾಡಿದ ಅವರು, 'ಇದೇ ವಿಷಯವಾಗಿ ಪ್ರಧಾನಿ ನರೇಂದ್ರ ಮೋದಿ ಯಾಕೆ ಮೌನಕ್ಕೆ ಶರಣಾಗಿದ್ದಾರೆ? ಯಾಕೆ ಹೆದರಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

ಟೀಕೆ: ಮಾಧ್ಯಮ ಪ್ರತಿನಿಧಿಯೊಬ್ಬರಿಗೆ ಮರುಪ್ರಶ್ನೆ ಹಾಕಿದ ರಾಹುಲ್ ವಿರುದ್ಧ ವಾಗ್ದಾಳಿ ನಡೆಸಿರುವ ಬಿಜೆಪಿಯ ರಾಜ್ಯಸಭಾ ಸದಸ್ಯ ಹಾಗೂ ಮುಖ್ಯ ವಕ್ತಾರ ಅನಿಲ್ ಬಲೂನಿ, 'ಪ್ರಜಾಪ್ರಭುತ್ವದ ನಾಲ್ಕನೇ ಅಂಗದ ಮೇಲೆ ರಾಹುಲ್ ಗಾಂಧಿ ಮತ್ತೊಮ್ಮೆ ಆಕ್ರಮಣ ನಡೆಸಿದ್ದಾರೆ. ದೇಶದ ಹಿಂದುಳಿದ ವರ್ಗಗಳು ಹಾಗೂ ಮಾಧ್ಯಮವನ್ನು ಅವಮಾನಿಸುವುದು ರಾಹುಲ್ ಮನಸ್ಥಿತಿಯಾಗಿದೆ' ಎಂದಿದ್ದಾರೆ.

'ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಪದೇಪದೇ ಆಕ್ರಮಣ ಮಾಡುವ ಮೂಲಕ ರಾಹುಲ್ ಅವರು ತಮ್ಮ ಅಜ್ಜಿ ಸಾಗಿದ ದಾರಿಯಲ್ಲೇ ಹೆಜ್ಜೆ ಹಾಕುತ್ತಿದ್ದಾರೆ' ಎಂದೂ ಛೇಡಿಸಿದ್ದಾರೆ.

'ರಾಹುಲ್ ಒಬ್ಬ ರಾಜಮನೆತನಕ್ಕೆ ಸೇರಿದ ಒಬ್ಬ ದುರಹಂಕಾರಿ' ಎಂದು ಬಿಜೆಪಿಯ ಮತ್ತೊಬ್ಬ ವಕ್ತಾರ ಶೆಹಜಾದ್ ಪೂನಾವಾಲಾ ಟೀಕಿಸಿದ್ದಾರೆ.

'ಗ್ರಾಮದ ಬಳಿ ಕಾಣಿಸಿಕೊಂಡ ಕುನೊ ಉದ್ಯಾನದ ಚೀತಾ'

ಶಿಯೋಪುರ, ಮಧ್ಯಪ್ರದೇಶ (ಪಿಟಿಐ): ಕುನೊ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಿಂದ ಹೊರಹೋಗಿದ್ದ ಒಬನ್ ಹೆಸರಿನ ಚೀತಾವು ಉದ್ಯಾನದಿಂದ 15ರಿಂದ 20ಕಿ.ಮೀ. ದೂರದ ಬರೋಡಾ ಗ್ರಾಮದ ಸಮೀಪ ಕಾಣಿಸಿಕೊಂಡಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ನದಿಯಲ್ಲಿ ನೀರು ಕುಡಿಯುತ್ತಿರುವ ವೇಳೆ ಚೀತಾವನ್ನು ಕಂಡಿರುವುದಾಗಿ ಹೇಳಿದ್ದಾರೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಮೀಬಿಯಾದಿಂದ ತಂದಿದ್ದ ಎಂಟು ಚೀತಾಗಳ ಪೈಕಿ ಇದೂ ಒಂದಾಗಿದೆ.

'ಚೀತಾವು ಗ್ರಾಮದಿಂದ ದೂರ ನೆಲೆಸಿದ್ದು, ಅದರ ಚಲನವಲನಗಳ ಮೇಲೆ ರೇಡಿಯೊ ಕಾಲರ್ ಮೂಲಕ ನಿಗಾ ಇರಿಸಿದ್ದೇವೆ' ಎಂದು ಶಿಯೋಪುರ ವಿಭಾಗದ ಅರಣ್ಯಾಧಿಕಾರಿ ಪಿ.ಕೆ. ವರ್ಮಾ ತಿಳಿಸಿದ್ದಾರೆ.

ಒಬನ್ ಮತ್ತು ಆಶಾ ಹೆಸರಿನ ಎರಡು ಚೀತಾಗಳನ್ನು ಮಾರ್ಚ್ 11ರಂದು ಅರಣ್ಯಕ್ಕೆ ಬಿಡಲಾಗಿತ್ತು.

ಸಿಯುಇಟಿ–ಯುಜಿ: 14 ಲಕ್ಷ ಅರ್ಜಿ ಸಲ್ಲಿಕೆ

ನವದೆಹಲಿ (ಪಿಟಿಐ): ಈ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ–ಯುಜಿ) ಸುಮಾರು 14 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ.

ಕಳೆದ ಶೈಕ್ಷಣಿಕ ಸಾಲಿನಲ್ಲಿ ಸಲ್ಲಿಕೆಯಾಗಿದ್ದ ಒಟ್ಟು ಅರ್ಜಿಗಳ ಸಂಖ್ಯೆಗೆ ಹೋಲಿಸಿದರೆ ಈ ಬಾರಿ ಶೇ 41ರಷ್ಟು ಅರ್ಜಿಗಳು ಹೆಚ್ಚಾಗಿವೆ ಎಂದು ಯುಜಿಸಿ ಮುಖ್ಯಸ್ಥ ಎಂ. ಜಗದೇಶ್ ಕುಮಾರ್ ಹೇಳಿದ್ದಾರೆ.

ದೆಹಲಿ ವಿ.ವಿಗೆ ಅತಿ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ ಎಂದಿದ್ದಾರೆ.

ಭೂತಾನ್ ದೊರೆ– ಮೋದಿ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಭೂತಾನ್ ದೊರೆ ಜಿಗ್ಮೆ ಖೇಸರ್ ನಾಂಗೇಲ್ ವಾಂಗ್‌ಚುಕ್ ಅವರೊಂದಿಗೆ ಮಂಗಳವಾರ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಆರ್ಥಿಕ ಸಹಕಾರ ಸೇರಿದಂತೆ ಇನ್ನಿತರ ಮಹತ್ವದ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಸುವುದರೆಡೆ ಗಮನ ಹರಿಸುವ ನಿಟ್ಟಿನಲ್ಲಿ ಉಭಯ ನಾಯಕರು ಚರ್ಚಿಸಿದ್ದಾರೆ ಎಂದು ಗೊತ್ತಾಗಿದೆ.

ಚೀನಾವು ಭೂತಾನ್‌ನ ಮೇಲೆ ತನ್ನ ಪ್ರಭಾವ ವಿಸ್ತರಿಸುತ್ತಿರುವ ಹೊತ್ತಿನಲ್ಲೇ ಎರಡು ದಿನಗಳ ಪ್ರವಾಸ ಕೈಗೊಳ್ಳುವ ಸಲುವಾಗಿ ವಾಂಗ್‌ಚುಕ್ ಅವರು ಸೋಮವಾರ ಭಾರತಕ್ಕೆ ಭೇಟಿ ನೀಡಿದ್ದಾರೆ.

'ಭೂತಾನ್‌ನ ಭವಿಷ್ಯಕ್ಕಾಗಿ ಹಾಗೂ ಭಾರತದೊಂದಿಗಿನ ಬಾಂಧವ್ಯ ಬಲಗೊಳಿಸುವ ದಿಸೆಯಲ್ಲಿ ವಾಂಗ್‌ಚುಕ್ ಅವರು ಹೊಂದಿರುವ ದೂರದೃಷ್ಟಿಯು ಮೆಚ್ಚುವಂತಹದ್ದು' ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಸೋಮವಾರ ತಿಳಿಸಿದ್ದರು.

ರಕ್ಷಣೆಗೆ ಸಂಬಂಧಿಸಿದಂತೆ ಭಾರತದ ಪಾಲಿಗೆ ಭೂತಾನ್ ಪ್ರಮುಖ ರಾಷ್ಟ್ರವಾಗಿದೆ. ಹಿಂದಿನ ಕೆಲ ವರ್ಷಗಳಲ್ಲಿ ರಕ್ಷಣೆ ಮತ್ತು ಭದ್ರತಾ ವಲಯಗಳಲ್ಲಿ ಉಭಯ ದೇಶಗಳ ನಡುವಣ ಸಹಕಾರವು ಗಣನೀಯವಾಗಿ ವಿಸ್ತರಣೆಯಾಗಿರುವುದು ಇದಕ್ಕೊಂದು ನಿದರ್ಶನ.

ಈ ಹಿಂದೆ ಭೂತಾನ್ ಗಡಿಯಲ್ಲಿರುವ ದೋಖಲಾ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು ಮುಂದಾಗಿದ್ದ ಚೀನಾಕ್ಕೆ ಭಾರತ ಪ್ರತಿರೋಧವೊಡ್ಡಿತ್ತು. ಹೀಗಾಗಿ ಉಭಯ ದೇಶಗಳ ಸೇನೆಗಳ ನಡುವೆ 73 ದಿನಗಳ ಕಾಲ ಸಂಘರ್ಷ ಏರ್ಪಟ್ಟಿತ್ತು. ಅನಂತರ ಭಾರತ ಮತ್ತು ಭೂತಾನ್ ನಡುವಣ ಸೇನಾ ಸಂಬಂಧವು ಮತ್ತಷ್ಟು ಬಲಗೊಂಡಿತ್ತು.

ಹಲವು ಸುತ್ತುಗಳ ಮಾತುಕತೆ ಬಳಿಕ ಭಾರತ ಮತ್ತು ಚೀನಾ ನಡುವಣ ಸಂಘರ್ಷವು ಕೊನೆಗೊಂಡಿತ್ತು.

ನವದೆಹಲಿಯಲ್ಲಿ ಮಂಗಳವಾರ ಭೂತಾನ್ ದೊರೆ ಜಿಗ್ಮೆ ಖೇಸರ್ ನಾಂಗೇಲ್ ವಾಂಗ್‌ಚುಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಕೈ ಕುಲುಕಿದರು–ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಅಮೇಠಿಯಿಂದ ಎಸ್‌ಪಿ ಅಭ್ಯರ್ಥಿ ಕಣಕ್ಕೆ?

ಲಖನೌ: 2024ರ ಲೋಕಸಭಾ ಚುನಾವಣೆಯಲ್ಲಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಲೋಕಸಭಾ ಕ್ಷೇತ್ರವಾದ ರಾಯ್ ಬರೇಲಿಯಲ್ಲಿ ಮತ್ತು 2019ರ ಚುನಾವಣೆಯಲ್ಲಿ ಸೋಲುವವರೆಗೆ ರಾಹುಲ್ ಗಾಂಧಿ ಪ್ರತಿನಿಧಿಸಿದ್ದ ಅಮೇಠಿ ಕ್ಷೇತ್ರದಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಸೂಚನೆಯನ್ನು ಸಮಾಜವಾದಿ ಪಕ್ಷದ (ಎಸ್.ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ನೀಡಿದ್ದಾರೆ.

ಅಖಿಲೇಶ್

ಮುಂದಿನ ಲೋಕಸಭಾ ಚುನಾವಣೆಗೆ ಸಿದ್ಧತೆ ನಡೆಸುವಂತೆ ರಾಯ್‌ಬರೇಲಿ ಮತ್ತು ಅಮೇಠಿ ಕ್ಷೇತ್ರಗಳ ಸ್ಥಳೀಯ ಸಮಾಜವಾದಿ ಪಕ್ಷದ ಮುಖಂಡರಿಗೆ ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದ 80 ಲೋಕಸಭಾ ಕ್ಷೇತ್ರಗಳಲ್ಲೂ ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ) ಮತ್ತು ಸಮಾಜವಾದಿ ಪಕ್ಷದ ಮೈತ್ರಿಕೂಟವು ಅಭ್ಯರ್ಥಿಗಳನ್ನು ಕಣಕ್ಕಳಿಸಲಿದೆ ಎಂದು ಸೋಮವಾರ ಉಂಚಾಹಾರ್‌ಗೆ ಭೇಟಿ ನೀಡಿದ್ದ ವೇಳೆ ಅಖಿಲೇಶ್ ಅವರು ಹೇಳಿದ್ದರು.

ದೆಹಲಿ ಗಲಭೆ: ಎಂಟು ಮಂದಿಗೆ ಜಾಮೀನು

ನವದೆಹಲಿ (ಪಿಟಿಐ): ಈಶಾನ್ಯ ದೆಹಲಿ ಗಲಭೆ ಪ್ರಕರಣದ ಆರೋಪಿಯೊಬ್ಬರ ಜಾಮೀನು ಅರ್ಜಿಯನ್ನು ಇಲ್ಲಿನ ನ್ಯಾಯಾಲಯ ತಿರಸ್ಕರಿಸಿದೆ. ಈ ಗಲಭೆಯಲ್ಲಿ ಹತ್ಯೆಗೀಡಾಗಿದ್ದ ಎನ್ನಲಾದ ವ್ಯಕ್ತಿಯೊಬ್ಬರ ಮೊಬೈಲ್ ಫೋನ್‌ನನ್ನು ಈ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದ ಇತರ 8 ಆರೋಪಿಗಳಿಗೆ ನ್ಯಾಯಾಲಯ ಜಾಮೀನು ನೀಡಿದೆ.

2020ರ ಫೆಬ್ರವರಿ 25 ಮತ್ತು 26ರಂದು ಕಾನೂನುಬಾಹಿರವಾಗಿ ಗುಂಪು ಸೇರಿದ್ದಾಗ, ಮುರ್ಸಲೀನ್ ಎಂಬ ವ್ಯಕ್ತಿಯ ಹತ್ಯೆಗೆ ಸಂಬಂಧಿಸಿದ ಪ್ರಕರಣ ಇದಾಗಿದೆ.

'ಆರೋಪಿ ಹಿಮಾಂಶು ಠಾಕೂರ್‌ನಿಂದ ಮೃತ ಮುರ್ಸಲೀನ್ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಅಲ್ಲದೇ ಆರೋಪಿ ವಿರುದ್ಧ ಸಾಕಷ್ಟು ಸಾಂದರ್ಭಿಕ ಸಾಕ್ಷ್ಯಗಳು ಇರುವ ಕಾರಣ, ಜಾಮೀನು ನೀಡಲು ಸಾಧ್ಯ ಇಲ್ಲ' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಪುಲಸ್ತ್ಯ ಪ್ರಮಾಚಲ ಅವರು ಮಾಹಿತಿ ನೀಡಿದರು.

ನ್ಯಾಯದಾನ: ರಾಜ್ಯ ಪ್ರಥಮ

ಒಂದನೇ ಪುಟದಿಂದ...

ಡಿಸೆಂಬರ್ 2022ರ ಅಂಕಿ ಅಂಶದ ಅನುಸಾರ, ದೇಶದಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 19 ನ್ಯಾಯಾಧೀಶರಿದ್ದಾರೆ. ಬಾಕಿ ಇರುವ ವ್ಯಾಜ್ಯಗಳ ಸಂಖ್ಯೆ 4.8 ಕೋಟಿ ಆಗಿದೆ. ಕಾನೂನು ಆಯೋಗವು ಒಂದು ದಶಕದಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ ನ್ಯಾಯಾಧೀಶರ ಸಂಖ್ಯೆಯು 50ಕ್ಕೆ ಏರುವಂತೆ ಕ್ರಮ ಕೈಗೊಳ್ಳಬೇಕು ಎಂದು 1987ರಲ್ಲಿಯೇ ಸಲಹೆ ನೀಡಿತ್ತು.

ಒಂದು ಕೋಟಿಗೂ ಕಡಿಮೆ ಜನ ಸಂಖ್ಯೆ ಇರುವ ಏಳು ಸಣ್ಣ ರಾಜ್ಯಗಳ ಪಟ್ಟಿಯಲ್ಲಿ ಮೊದಲ 3 ಸ್ಥಾನಗಳಲ್ಲಿ ಸಿಕ್ಕಿಂ, ಅರುಣಾಚಲ ಪ್ರದೇಶ, ತ್ರಿಪುರಾ ಇವೆ.

ನ್ಯಾಯಾಂಗ ಕ್ಷೇತ್ರಕ್ಕೆ ಕಡಿಮೆ ಬಜೆಟ್ ಹಂಚಿಕೆ ಆಗುತ್ತಿದೆ. ದೆಹಲಿ, ಚಂಡೀಗಢ ಬಿಟ್ಟು ಇತರೆ ರಾಜ್ಯಗಳು ವಾರ್ಷಿಕ ಬಜೆಟ್ ಅನುದಾನದಲ್ಲಿ ಶೇ 1ರಷ್ಟನ್ನೂ ವ್ಯಯಿಸಿಲ್ಲ ಎಂದು ವರದಿ ಪ್ರಮುಖವಾಗಿ ಉಲ್ಲೇಖಿಸಿದೆ.

ಪೊಲೀಸ್ ಇಲಾಖೆ, ಕಾರಾಗೃಹ ಸಿಬ್ಬಂದಿ, ಕಾನೂನು ನೆರವು, ನ್ಯಾಯಾಂಗ ಕ್ಷೇತ್ರದಲ್ಲಿ ಖಾಲಿ ಹುದ್ದೆಗಳಿವೆ. ದೇಶದಲ್ಲಿ ಸದ್ಯ 20,076 ನ್ಯಾಯಾಧೀಶರಿದ್ದಾರೆ. ಇದು, ಮಂಜೂರಾದ ಹುದ್ದೆಗಳ ಶೇ 22ರಷ್ಟು ಮಾತ್ರ. ಹೈಕೋರ್ಟ್‌ಗಳಲ್ಲಿ ಖಾಲಿ ಹುದ್ದೆಗಳ ಪ್ರಮಾಣ ಶೇ 30ರಷ್ಟು ಆಗಿದೆ.

ಪೊಲೀಸ್ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿ ಸಂಖ್ಯೆ ಒಂದು ದಶಕದಲ್ಲಿ ದುಪ್ಪಟ್ಟಾಗಿದ್ದರೂ ಈಗಲೂ ಅವರ ಪ್ರಮಾಣ ಶೇ 11.75ರಷ್ಟು ಮಾತ್ರ. ಶೇ 29ರಷ್ಟು ಹುದ್ದೆಗಳು ಖಾಲಿ ಇವೆ. ಜನಸಂಖ್ಯೆಗನುಗುಣವಾಗಿ ಸಿಬ್ಬಂದಿ ಅನುಪಾತ ಪ್ರತಿ ಲಕ್ಷಕ್ಕೆ 152.8ರಷ್ಟಿರಬೇಕು ಎಂಬ ಗುರಿ ನಿಗದಿ ಮಾಡಲಾಗಿದೆ. ಅಂತರರಾಷ್ಟ್ರೀಯ ಮಾನದಂಡ 222 ಆಗಿದೆ ಎಂದು ವರದಿ ಉಲ್ಲೇಖಿಸಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮದನ್ ಬಿ.ಲೋಕೂರ್ ಅವರು, 'ಕೆಲ ರಾಜ್ಯಗಳಲ್ಲಿ ಪರಿಸ್ಥಿತಿಯು ಗಣನೀಯವಾಗಿ ಸುಧಾರಿಸಿದೆ. ಆದರೆ, ಒಟ್ಟಾರೆಯಾಗಿ ಸಾಧಿಸಬೇಕಾಗಿರುವುದು ಬಹಳ ಇದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ನ್ಯಾಟೊಗೆ ಫಿನ್ಲೆಂಡ್ ಸೇರ್ಪಡೆ

ಹೆಲ್ಸಿಂಕಿ/ಬ್ರಸೆಲ್ಸ್ (ಎಪಿ/ಎಎಫ್‌ಪಿ): ರಷ್ಯಾದ ತೀವ್ರ ವಿರೋಧ ಮತ್ತು ಆಕ್ರಮಣ ಭೀತಿಯ ನಡುವೆ ಫಿನ್ಲೆಂಡ್ ಮಂಗಳವಾರ ಅಧಿಕೃತವಾಗಿ ನ್ಯಾಟೊ ಸದಸ್ಯತ್ವ ಪಡೆದಿದೆ. ಫಿನ್ಲೆಂಡ್ ರಾಜಧಾನಿ ಹೆಲ್ಸಿಂಕಿಯಲ್ಲಿ ನ್ಯಾಟೊದ ನೀಲಿ ಮತ್ತು ಶ್ವೇತ ವರ್ಣದ ಧ್ವಜಗಳು ಮೊದಲ ಬಾರಿಗೆ ಹಾರಾಡಿದವು.

ರಷ್ಯಾದೊಂದಿಗೆ ಸುಮಾರು 1,300 ಕಿ.ಮೀ. ಗಡಿ ಹಂಚಿಕೊಂಡಿರುವ ಫಿನ್ಲೆಂಡ್, ಅಮೆರಿಕ ನೇತೃತ್ವದ, ನ್ಯಾಟೊದ 31ನೇ ಸದಸ್ಯ ರಾಷ್ಟ್ರವಾಗಿ ಗುರುತಿಸಿಕೊಂಡಿತು. ಪಶ್ಚಿಮದ ರಾಷ್ಟ್ರಗಳ ಸೇನಾ ಮೈತ್ರಿಕೂಟಕ್ಕೆ ಇದರಿಂದ ಇನ್ನಷ್ಟು ಬಲ ಸಿಕ್ಕಿದೆ.

ನ್ಯಾಟೊ ವಿಸ್ತರಣೆಯನ್ನು ಮೊದಲಿನಿಂದಲೂ ವಿರೋಧಿಸುತ್ತಿದ್ದ ರಷ್ಯಾ, ತನ್ನ ಭದ್ರತೆಗೆ ಅಪಾಯ ಎದುರಾಗಬಹುದೆಂಬ ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ಕೈಗೊಂಡು ಕೆಲವು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡಿದೆ. ಎರಡನೇ ವಿಶ್ವ ಸಮರದ ನಂತರ ಸಿಡಿದು ಹೋದ ಸೋವಿಯತ್ ಒಕ್ಕೂಟ ಮರುಒಗ್ಗೂಡಿಸುವ ಮಹತ್ವಾಕಾಂಕ್ಷೆಯಿಂದ ಉಕ್ರೇನ್ ಮೇಲೆ ಆಕ್ರಮಣ ಆರಂಭಿಸಿದ್ದ ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ಈ ಬೆಳವಣಿಗೆ ದೊಡ್ಡ ಹೊಡೆತ ನೀಡಿದೆ.

> **ಫಿನ್ಲೆಂಡ್ ನ್ಯಾಟೊ ಸೇರ್ಪಡೆಯಾಗಿರುವುದು ಸದ್ಯದ ಉಕ್ರೇನ್ ಸಂಘರ್ಷವನ್ನು ಮತ್ತಷ್ಟು ಹೆಚ್ಚಿಸುವ ಅಪಾಯವಿದೆ**
> **ಸೆರ್ಗಿ ಶೋಯಿಗು,** ರಷ್ಯಾ ರಕ್ಷಣಾ ಸಚಿವ

ನ್ಯಾಟೊ ಸದಸ್ಯತ್ವ ಘೋಷಣೆಯ ಔಪಚಾರಿಕ ಸಭೆಯಲ್ಲಿ ಭಾಗವಹಿಸಲು ಫಿನ್ಲೆಂಡ್ ವಿದೇಶಾಂಗ ಸಚಿವ ಪೆಕ್ಕಾ ಹ್ಯಾವಿಸ್ಟೋ ಸೋಮವಾರ ರಾತ್ರಿಯೇ ಬ್ರಸೆಲ್ಸ್‌ಗೆ ಪ್ರಯಾಣಿಸಿದ್ದರು. ಸದಸ್ಯತ್ವ ಪ್ರಕ್ರಿಯೆ ಕಡತಕ್ಕೆ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಅಧಿಕೃತ ಮೊಹರು ಹಾಕಿದರು.

ಫಿನ್ಲೆಂಡ್ ಸೇರ್ಪಡೆಯಿಂದ ರಷ್ಯಾ ಭದ್ರತೆಗೆ ಯಾವುದೇ ಅಪಾಯವಿಲ್ಲವೆಂದು ನ್ಯಾಟೊ ಸ್ಪಷ್ಟಪಡಿಸಿದೆ. ಆದರೆ, ಇದು ರಷ್ಯಾ ವಿರುದ್ಧದ ಸೇನಾ ಮೈತ್ರಿ ವಿಸ್ತರಣೆಯ ಕಾರ್ಯತಂತ್ರ ಎಂದು ಮೂಲಗಳು ಹೇಳಿವೆ.

'ಇದುವರೆಗೆ ನಾವು ಏಕಾಂಗಿಯಾಗಿ ನಮ್ಮ ದೇಶ ರಕ್ಷಿಸಿದ್ದೇವೆ. ಇನ್ನು ಮುಂದೆ ಮಿತ್ರರ ನೆರವೂ ಪಡೆಯಲಿದ್ದೇವೆ' ಎಂದು ಫಿನ್ಲೆಂಡ್ ರಕ್ಷಣಾ ಸಚಿವ ಅಂಟಿ ಕೈಕೋನೆನ್ ತಿಳಿಸಿದ್ದಾರೆ.

'ನ್ಯಾಟೊ ವಿಸ್ತರಣೆಗೆ ಪುಟಿನ್ ಕಾರಣ'

ಪ್ಯಾರಿಸ್: 'ರಷ್ಯಾ ಅಧ್ಯಕ್ಷ ಪುಟಿನ್ ಅವರು ಉಕ್ರೇನ್ ಮೇಲೆ ಆಕ್ರಮಣ ನಡೆಸುವ ಮೂಲಕ ನ್ಯಾಟೊ ವಿಸ್ತರಣೆಗೆ ಕಾರಣರಾಗಿದ್ದಾರೆ. ಸ್ವೀಡನ್ ಕೂಡ ಶೀಘ್ರವೇ ನ್ಯಾಟೊ ಸೇರಲಿದೆ' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೇನ್ಸ್ ಸ್ಟೋಲ್ಟೆನ್ ಬರ್ಗ್ ಹೇಳಿದ್ದಾರೆ.

ರಷ್ಯಾ ರಕ್ಷಣಾ ಸಚಿವ ಸೆರ್ಗಿ ಶೋಯಿಗು, 'ತನ್ನ ಮಿತ್ರ ರಾಷ್ಟ್ರ ಬೆಲರೂಸ್‌ನ ಯುದ್ಧ ವಿಮಾನಗಳು ಈಗ ಅಣ್ವಸ್ತ್ರ ಸಿಡಿತಲೆಗಳನ್ನು ಸಾಗಿಸುವ ಸಾಮರ್ಥ್ಯ ಹೊಂದಿವೆ. ಅಲ್ಲದೆ, ಅಣ್ವಸ್ತ್ರ ಸಿಡಿತಲೆಗಳನ್ನು ಉಡಾಯಿಸುವ ಇಸ್ಕಾಂಡರ್ ಕ್ಷಿಪಣಿ ವ್ಯವಸ್ಥೆಗಳನ್ನೂ ಅದಕ್ಕೆ ಹಸ್ತಾಂತರಿಸಿದ್ದೇವೆ' ಎಂದು ನ್ಯಾಟೊಗೆ ಎಚ್ಚರಿಕೆ ನಿಡಿದರು.

'ಎಲಿಫೆಂಟ್ ವಿಸ್ಪರರ್ಸ್' ತಂಡದೊಂದಿಗೆ ಮೋದಿ ಸಂವಾದ

ಮೈಸೂರು/ ಗುಂಡ್ಲುಪೇಟೆ: ಹುಲಿ ಯೋಜನೆ 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಏ.9ರಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಬಂಡೀಪುರದಲ್ಲಿ ಅರಣ್ಯ ಇಲಾಖೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ.

ಏ.8ರಂದು ರಾತ್ರಿ 8ಕ್ಕೆ ಮೈಸೂರಿಗೆ ಆಗಮಿಸುವ ಅವರು, ಖಾಸಗಿ ಹೋಟೆಲ್‌ನಲ್ಲಿ ತಂಗಲಿದ್ದಾರೆ. ಎಸ್‌ಪಿಜಿ (ವಿಶೇಷ ಭದ್ರತಾ ಪಡೆ) ತಂಡ ಬಂದಿದ್ದು ಭದ್ರತೆ ಕುರಿತು ಅಧಿಕಾರಿಗಳ ಸಭೆ ನಡೆಸಿದೆ. ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಮೈಸೂರಿಗೆ ಭೇಟಿ ನೀಡಿ, ಕೈಗೊಳ್ಳಬೇಕಿರುವ ಭದ್ರತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

9ರಂದು ಬೆಳಿಗ್ಗೆ 6ಕ್ಕೆ ಹೆಲಿಕಾಪ್ಟರ್ ಮೂಲಕ ಬಂಡೀಪುರ ಸಮೀಪದ ಮೇಲುಕಾಮುನಹಳ್ಳಿಗೆ ತೆರಳುವ ಪ್ರಧಾನಿ, 50ನೇ ವರ್ಷದ ಸಂಭ್ರಮಾಚರಣೆಯಲ್ಲಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ, ಅರಣ್ಯ ಇಲಾಖೆಯ ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ. ತೆಪ್ಪಕಾಡು, ಮಧುಮಲೈಗೆ ಭೇಟಿ ನೀಡಲಿದ್ದಾರೆ. 'ಆಸ್ಕರ್' ಪುರಸ್ಕೃತ 'ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರದಲ್ಲಿ ನಟಿಸಿರುವ ಕಾವಾಡಿ ದಂಪತಿ ಬೊಮ್ಮ ಹಾಗೂ ಬೆಳ್ಳಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಬಳಿಕ ಹೆಲಿಕಾಪ್ಟರ್ ಮೂಲಕ ಮೈಸೂರಿಗೆ ಬಂದು, ಬೆಳಿಗ್ಗೆ 10ರ ಸುಮಾರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಹುಲಿ ಗಣತಿ ವರದಿಯನ್ನು ಬಿಡುಗಡೆ ಮಾಡಲಿದ್ದಾರೆ. 'ಎರಡು ತಾಸುಗಳ ಕಾರ್ಯಕ್ರಮದಲ್ಲಿ ರಾಜ್ಯ, ದೇಶ ಹಾಗೂ ವಿದೇಶದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಮಧ್ಯಾಹ್ನ 1ರ ಸುಮಾರಿಗೆ ಮೋದಿ ಇಲ್ಲಿಂದ ದೆಹಲಿಗೆ ತೆರಳಲಿದ್ದಾರೆ' ಎಂದು ಅರಣ್ಯ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.

ಬಂಡೀಪುರದಲ್ಲಿ ಸಿದ್ಧತೆ

ಪ್ರಧಾನಿ ಆಗಮನದ ಹಿನ್ನೆಲೆಯಲ್ಲಿ, ಅಲೋಕ್‌ಕುಮಾರ್ ಮಂಗಳವಾರ ಬಂಡೀಪುರಕ್ಕೂ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ಎಸ್ಪಿ ಪದ್ಮಿನಿ ಸಾಹು ಅವರೊಂದಿಗೆ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಬಳಿ ನಿರ್ಮಾಣವಾಗುತ್ತಿರುವ ಹೆಲಿಪ್ಯಾಡ್ ಸ್ಥಳವನ್ನು ಪರಿಶೀಲಿಸಿದರು. 'ಭದ್ರತಾ ಲೋಪ ಉಂಟಾಗದಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿದರು.

ಬಂಡೀಪುರ ಸಫಾರಿ ಕೌಂಟರ್ ಸಮೀಪವೇ 3 ಹೆಲಿಪ್ಯಾಡ್ ನಿರ್ಮಿಸಲಾಗುತ್ತಿದೆ. 'ಸಾರ್ವಜನಿಕರು, ಅಭಿಮಾನಿಗಳನ್ನು ನಿಯಂತ್ರಿಸಲು ಬ್ಯಾರಿಕೇಡ್ ವ್ಯವಸ್ಥೆ ಮಾಡಬೇಕು' ಎಂದು ನಿರ್ದೇಶನ ನೀಡಿದರು. ನಂತರ ಮಧುಮಲೈಗೂ ಭೇಟಿ ನೀಡಿದರು.

ದರಕ್ಕೆ ಮಿತಿ: 651 ಅಗತ್ಯ ಔಷಧ ಅಗ್ಗ

ಒಂದನೇ ಪುಟದಿಂದ...

ಕೇಂದ್ರ ಆರೋಗ್ಯ ಸಚಿವಾಲಯವು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಎನ್‌ಎಲ್‌ಇಎಂಗೆ ತಿದ್ದುಪಡಿ ಮಾಡಿತ್ತು.

'651 ಅಗತ್ಯ ಔಷಧಗಳ ದರವು ಶೇ 12.12ರಷ್ಟು ಹೆಚ್ಚಳವಾಗಬೇಕಿತ್ತು. ಆದರೆ, ಕೇಂದ್ರ ಸರ್ಕಾರವು ದರ ಹೆಚ್ಚಳಕ್ಕೆ ಸಂಬಂಧಿಸಿ ಮಿತಿ ಹೇರಿದ್ದರಿಂದಾಗಿ ಅವುಗಳ ದರಗಳು ಏಪ್ರಿಲ್ 1ರಿಂದ ಶೇ 6.73ರಷ್ಟು ಕಡಿಮೆಯಾಗಿವೆ' ಎಂದು ಎನ್‌ಪಿಪಿಎ ಹೇಳಿದೆ.

ಸಗಟು ದರ ಸೂಚ್ಯಂಕದ (ಡಬ್ಲ್ಯುಪಿಐ) ಆಧಾರದ ಮೇಲೆ ಔಷಧಗಳ ದರಗಳಲ್ಲಿ ವಾರ್ಷಿಕ ಶೇ 12.12ರಷ್ಟು ಹೆಚ್ಚಳವಾಗಬೇಕಿತ್ತು. ಆದರೆ, ದರಗಳಲ್ಲಿನ ಈ ಕಡಿತದಿಂದಾಗಿ ಗ್ರಾಹಕರಿಗೆ ಲಾಭವಾಗಲಿದೆ ಎಂದೂ ಎನ್‌ಪಿಪಿಎ ಹೇಳಿದೆ.

ಮಾರ್ಚ್ 25ರಂದು ಪ್ರಕಟಣೆಯೊಂದನ್ನು ಬಿಡುಗಡೆ ಮಾಡಿದ್ದ ಎನ್‌ಪಿಪಿಎ, '2022ಕ್ಕೆ ಸಂಬಂಧಿಸಿ ಸಗಟು ದರ ಸೂಚ್ಯಂಕವು (ಡಬ್ಲ್ಯುಪಿಐ) ಶೇ 12.12ರಷ್ಟಿತ್ತು' ಎಂದು ಹೇಳಿತ್ತು.

ಟೀಕೆ–ತಿರುಗೇಟು

ಅಗತ್ಯ ಔಷಧಗಳ ದರವು, ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಡುವೆ ವಾಗ್ಯುದ್ಧಕ್ಕೆ ಕಾರಣವಾಗಿತ್ತು.

ಕೆಲ ಅಗತ್ಯ ಔಷಧಗಳ ದರಗಳನ್ನು ಹೆಚ್ಚಿಸಲಾಗಿದೆ ಎಂಬ ವರದಿಗಳನ್ನು ಮುಂದಿಟ್ಟುಕೊಂಡು ಖರ್ಗೆ ಅವರು ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದ್ದರು.

'ಜನರ ಕಿಸೆಗಳನ್ನು ಲೂಟಿ ಮಾಡುವ ಸಲುವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸುಪಾರಿ (ಗುತ್ತಿಗೆ) ಪಡೆದಿದ್ದಾರೆ' ಎಂದು ಟೀಕಿಸಿದ್ದರು.

ಸರಣಿ ಟ್ವೀಟ್‌ಗಳ ಮೂಲಕ ಖರ್ಗೆ ಅವರಿಗೆ ತಿರುಗೇಟು ನೀಡಿರುವ ಸಚಿವ ಮಾಂಡವೀಯ, 'ಎನ್‌ಎಲ್‌ಇಎಂನಲ್ಲಿರುವ ಔಷಧಗಳ ಪೈಕಿ 651 ಅಗತ್ಯ ಔಷಧಗಳು ಅಗ್ಗವಾಗಿದ್ದು, ಈ ಸಂಬಂಧ ಅಧಿಸೂಚನೆಯನ್ನು ಸಹ ಹೊರಡಿಸಲಾಗಿದೆ' ಎಂದಿದ್ದಾರೆ. 'ಈ ಕ್ರಮದಿಂದಾಗಿ, ಗ್ರಾಹಕರ ಜೇಬಿಗೆ ಹೊರೆ ಕಡಿಮೆಯಾಗಿ, ವಾರ್ಷಿಕ ಅಂದಾಜು ₹ 3,500 ಕೋಟಿಯಷ್ಟು ಉಳಿತಾಯವಾಗಲಿದೆ' ಎಂದೂ ತಿರುಗೇಟು ನೀಡಿದ್ದಾರೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ತನಿಖೆಗೆ ಸಮಿತಿ

ಚೆನ್ನೈ (ಪಿಟಿಐ): ಸಹಾಯಕ ನೃತ್ಯ ಪ್ರಾಧ್ಯಾಪಕ ಮತ್ತು ಮೂವರು ರಂಗಭೂಮಿ ಕಲಾವಿದರ ವಿರುದ್ಧ ವಿದ್ಯಾರ್ಥಿಗಳು ಮಾಡಿರುವ ಲೈಂಗಿಕ ಕಿರುಕುಳ ಆರೋಪದ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ರಚನೆ ಮಾಡಲಾಗಿದೆ ಎಂದು ಕಲಾಕ್ಷೇತ್ರ ಪ್ರತಿಷ್ಠಾನ ಮಂಗಳವಾರ ತಿಳಿಸಿದೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಕಣ್ಣನ್ ನೇತೃತ್ವದ ಸಮಿತಿಯಲ್ಲಿ, ತಮಿಳುನಾಡು ಮಾಜಿ ಡಿಜಿಪಿ ಲತಿಕಾ ಸರಣ್ ಅವರಿದ್ದಾರೆ ಎಂದು ಪ್ರತಿಷ್ಠಾನ ತಿಳಿಸಿದೆ.

ಹಿಮಪಾತ: 7 ಮಂದಿ ಸಾವು

ಒಂದನೇ ಪುಟದಿಂದ...

ಪ್ರಾಕೃತಿಕ ಸೌಂದರ್ಯದಿಂದ ಕೂಡಿದ ಈ ಪ್ರದೇಶವು ದೇಶದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದು.

'ಪ್ರತಿಕೂಲ ಹವಾಮಾನದ ಕಾರಣ ಪ್ರವಾಸಿಗರ ಭೇಟಿಯನ್ನು 13ನೇ ಮೈಲಿಗಲ್ಲಿನವರೆಗೆ ಸೀಮಿತಗೊಳಿಸಲಾಗಿದೆ. ಹೀಗಿದ್ದರೂ ಪ್ರವಾಸಿಗರು 17ನೇ ಮೈಲಿಗಲ್ಲಿನವರೆಗೂ ಕರೆದುಕೊಂಡು ಹೋಗುವಂತೆ ಚಾಲಕರಿಗೆ ದುಂಬಾಲು ಬೀಳುತ್ತಾರೆ. ಅತ್ಯಂತ ಅಪಾಯಕಾರಿ ಎನಿಸಿರುವ ಈ ಪ್ರದೇಶದಲ್ಲೇ ಹಿಮಪಾತ ಉಂಟಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ದಟ್ಟ ಹಿಮ ಆವರಿಸಿದ್ದರಿಂದ 80 ವಾಹನಗಳು ರಸ್ತೆಯಲ್ಲೇ ಸಿಲುಕಿದ್ದವು. ಅವುಗಳಲ್ಲಿ ಸುಮಾರು 350 ಮಂದಿ ಇದ್ದರು. ಮಧ್ಯಾಹ್ನದ ಹೊತ್ತಿಗೆ ಹಿಮವನ್ನು ತೆರವುಗೊಳಿಸಿ ವಾಹನಗಳನ್ನು ಸುರಕ್ಷಿತವಾಗಿ ಇಲ್ಲಿಗೆ ಕರೆತರಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಾಜ್ಯದ ಪೂರ್ವ ಭಾಗದ ಜಿಲ್ಲೆಗಳ ಅತಿ ಎತ್ತರದ ಪ್ರದೇಶಗಳಲ್ಲಿ ಶುಕ್ರವಾರದಿಂದಲೂ ಹಿಮಪಾತ ಉಂಟಾಗುತ್ತಿದ್ದು, ಮಳೆಯೂ ಸುರಿಯುತ್ತಿದೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ವಿಪತ್ತು ತಡೆ ಪ್ರಯತ್ನ: ಭಾರತಕ್ಕೆ ಅಮೆರಿಕ ಶ್ಲಾಘನೆ

ವಾಷಿಂಗ್ಟನ್ (ಪಿಟಿಐ): ವಿಪತ್ತು ತಡೆ ಮೂಲಸೌಕರ್ಯ ಒಕ್ಕೂಟ (ಸಿಡಿಆರ್‌ಐ) ಸ್ಥಾಪಿಸುವ ಪ್ರಸ್ತಾವದಲ್ಲಿ ಭಾರತದ ನಾಯಕತ್ವ ಮತ್ತು ಪ್ರಯತ್ನಗಳನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಸರ್ಕಾರದ ಉನ್ನತ ಅಧಿಕಾರಿಗಳು ಮಂಗಳವಾರ ಶ್ಲಾಘಿಸಿದ್ದಾರೆ.

ಸಮಂತಾ ಪವಾರ್

ಅಲ್ಲದೆ, ಭಾರತವು ಎಲ್ಲ ಕ್ಷೇತ್ರಗಳಲ್ಲೂ ಬೆಳವಣಿಗೆ ಕಂಡಿದೆ ಮತ್ತು ಅಭಿವೃದ್ಧಿಯನ್ನೂ ಸಾಧಿಸಿದೆ ಎಂದೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಚುನಾವಣೆಗೆ ಭಾರತೀಯ ವಿದ್ಯಾರ್ಥಿ ಅನರ್ಹಗೊಳಿಸಿದ ಲಂಡನ್ ವಿವಿ'

ಲಂಡನ್ (ಪಿಟಿಐ): 'ಭಾರತೀಯ ಪ್ರಜೆ ಮತ್ತು ಹಿಂದೂ ಆದ ಕಾರಣಕ್ಕೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ (ಎಲ್‌ಎಸ್‌ಇ) ಸ್ಟೂಡೆಂಟ್ಸ್ ಯೂನಿಯನ್ ಚುನಾವಣೆಯಲ್ಲಿ ಸ್ಪರ್ಧಿಸದಂತೆ ನನ್ನನ್ನು ಅನರ್ಹಗೊಳಿಸಲಾಗಿದೆ' ಎಂದು ಭಾರತೀಯ ಮೂಲದ ಕಾನೂನು ವಿದ್ಯಾರ್ಥಿಯೊಬ್ಬರು ಆರೋಪಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕಾನೂನು ಪದವಿ ಶಿಕ್ಷಣ ಪಡೆಯುತ್ತಿರುವ ಹರಿಯಾಣದ ಕರಣ್ ಕಠಾರಿಯಾ ಈ ಆರೋಪ ಮಾಡಿದ್ದಾರೆ.

'ಸ್ಟೂಡೆಂಟ್ಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಲು ನನ್ನ ಗೆಳೆಯರ ಬೆಂಬಲ, ಪ್ರೋತ್ಸಾಹ ಇದೆ. ದುರದೃಷ್ಟಕರ ಸಂಗತಿ ಎಂದರೆ ಭಾರತೀಯ, ಹಿಂದೂ ವಿದ್ಯಾರ್ಥಿಯೊಬ್ಬ ವಿವಿಯ ವಿದ್ಯಾರ್ಥಿ ಸಂಘಟನೆ ಮುನ್ನಡೆಸುವದನ್ನು ಕೆಲವರು ವೈಯಕ್ತಿಕವಾಗಿ ಸಹಿಸುವುದಿಲ್ಲ. ಹೀಗಾಗಿ ವಿವಿಯು ಆಧಾರ ರಹಿತ ಆರೋಪಗಳನ್ನು ಹೊರಿಸಿ, ಚುನಾವಣೆಗೆ ಸ್ಪರ್ಧಿಸದಂತೆ ಕಳೆದ ವಾರ ಅನರ್ಹಗೊಳಿಸಿದೆ' ಎಂದು ದೂರಿದ್ದಾರೆ.

ಕರಣ್

ಕರಣ್ ಕಳೆದ ವರ್ಷ ತಮ್ಮ ಸಮೂಹದ ಶೈಕ್ಷಣಿಕ ಪ್ರತಿನಿಧಿ ಮತ್ತು ಬ್ರಿಟನ್ ನ್ಯಾಷನಲ್ ಯೂನಿಯನ್ ಫಾರ್ ಸ್ಟೂಡೆಂಟ್ಸ್ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು.

ಡೆಲ್ಲಿ ಕ್ಯಾಪಿಟಲ್ಸ್ ಮಣಿಸಿದ ಟೈಟನ್ಸ್; ಶಮಿ, ರಶೀದ್ ಅಮೋಘ ಬೌಲಿಂಗ್

ಸುದರ್ಶನ್ ಬ್ಯಾಟಿಂಗ್ ಸೊಬಗು

ನವದೆಹಲಿ (ಪಿಟಿಐ): ಯುವ ಆಟಗಾರ ಸಾಯ್ ಸುದರ್ಶನ್ ಅವರ ಸೊಗಸಾದ ಬ್ಯಾಟಿಂಗ್ ಮತ್ತು ಮೊಹಮ್ಮದ್ ಶಮಿ ಹಾಗೂ ರಶೀದ್ ಖಾನ್ ಅವರ ಅಮೋಘ ಬೌಲಿಂಗ್ ನೆರವಿನಿಂದ ಗುಜರಾತ್ ಟೈಟನ್ಸ್ ತಂಡ ಐಪಿಎಲ್ ಟೂರ್ನಿಯಲ್ಲಿ ಸತತ ಎರಡನೇ ಜಯ ಸಾಧಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಬಳಗ 6 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 162 ರನ್ ಗಳಿಸಿದರೆ, ಟೈಟನ್ಸ್ 18.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 163 ರನ್ ಗಳಿಸಿ ಗೆದ್ದಿತು. ಡೇವಿಡ್ ವಾರ್ನರ್ ನೇತೃತ್ವದ ಡೆಲ್ಲಿಗೆ ಎದುರಾದ ಎರಡನೇ ಸೋಲು ಇದು.

ಅಜೇಯ 62 ರನ್ ಗಳಿಸಿದ ಸುದರ್ಶನ್, ಟೈಟನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. 48 ಎಸೆತಗಳನ್ನು ಎದುರಿಸಿದ ಅವರು 4 ಬೌಂಡರಿ ಮತ್ತು 2 ಸಿಕ್ಸರ್ ಹೊಡೆದರು.

ವೃದ್ಧಿಮಾನ್ ಸಹಾ, ಶುಭಮನ್ ಗಿಲ್ ಮತ್ತು ಹಾರ್ದಿಕ್ ಪಾಂಡ್ಯ (5) ಬೇಗನೇ ಔಟಾದರು. ಸುದರ್ಶನ್ ಹಾಗೂ ವಿಜಯ್ ಶಂಕರ್ (29 ರನ್, 23 ಎ.) ನಾಲ್ಕನೇ ವಿಕೆಟ್‌ಗೆ 53 ರನ್ ಸೇರಿಸಿದರು. ವಿಜಯ್ ಔಟಾದ ಬಳಿಕ ಬಂದ ಡೇವಿಡ್ ಮಿಲ್ಲರ್ (ಔಟಾಗದೆ 31, 16 ಎ., 4X2, 6X2) ಬಿರುಸಿನ ಆಟವಾಡಿ ಜಯದ ಹಾದಿಯನ್ನು ಸುಗಮಗೊಳಿಸಿದರು.

ಶಮಿ, ರಶೀದ್ ಮಿಂಚು: ಇದಕ್ಕೂ ಮುನ್ನ ಟಾಸ್ ಗೆದ್ದ ಟೈಟನ್ಸ್ ಬಳಗವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಮಿ (41ಕ್ಕೆ3) ಹಾಗೂ ರಶೀದ್ ಖಾನ್ (31ಕ್ಕೆ3) ಮಿಂಚಿದರು.

ಡೆಲ್ಲಿ ತಂಡದ ಆರಂಭಿಕ ಬ್ಯಾಟರ್ ವಾರ್ನರ್ (37; 32ಎ), ಮಧ್ಯಮ ಕ್ರಮಾಂಕದಲ್ಲಿ ಸರ್ಫರಾಜ್ ಖಾನ್ (30; 34ಎ) ಹಾಗೂ ಕೆಳಕ್ರಮಾಂಕದಲ್ಲಿ ಅಕ್ಷರ್ ಪಟೇಲ್ (36; 22ಎ) ಕಾಣಿಕೆ ನೀಡಿದರು. ಇದರಿಂದಾಗಿ ತಂಡದ ಮೊತ್ತ 150ರ ಗಡಿ ದಾಟಿತು.

ಗುಜರಾತ್ ಟೈಟನ್ಸ್ ತಂಡದ ಸಾಯ್ ಸುದರ್ಶನ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಪ್ರಮುಖ ಬ್ಯಾಟರ್‌ಗಳಾದ ಪೃಥ್ವಿ ಶಾ, ಮಿಚೆಲ್ ಮಾರ್ಷ್ ಹಾಗೂ ಸೊನ್ನೆ ಸುತ್ತಿದ ರೀಲಿ ರೊಸೊ ಅವರ ವೈಫಲ್ಯ ತಂಡವನ್ನು ಕಾಡಿತು.

ವಾರ್ನರ್ ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಪೃಥ್ವಿ ಶಾ ಕೇವಲ ಏಳು ರನ್ ಗಳಿಸಿ ಔಟಾದರು. ಶಮಿ ಹಾಕಿದ ಮೂರನೇ ಓವರ್‌ನಲ್ಲಿ ಪೃಥ್ವಿ ಅವರು ಅಲ್ಜಾರಿ ಜೋಸೆಫ್‌ಗೆ ಕ್ಯಾಚಿತ್ತರು. ಐದನೇ ಓವರ್‌ನಲ್ಲಿ ಶಮಿ ಎಸೆತದ ವೇಗ ಗುರುತಿಸುವಲ್ಲಿ ವಿಫಲರಾದರು ಮಿಚೆಲ್ ಮಾರ್ಷ್ ಕ್ಲೀನ್‌ಬೌಲ್ಡ್ ಆದರು.

ಪಂದ್ಯ ವೀಕ್ಷಿಸಿದ ರಿಷಭ್ ಪಂತ್ –ಪಿಟಿಐ ಚಿತ್ರ

ಬೌಲರ್‌ಗಳ ನಿಖರ ದಾಳಿಯಿಂದಾಗಿ ಡೆಲ್ಲಿ ತಂಡವು 67 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಕೊನೆಯ ಹಂತದ ಓವರ್‌ಗಳಲ್ಲಿ ಅಕ್ಷರ್ ಪಟೇಲ್ ಮೂರು ಸಿಕ್ಸರ್ ಹಾಗೂ ಅಭಿಷೇಕ್ ಪೊರೆಲ್ ಎರಡು ಸಿಕ್ಸರ್ ಬಾರಿಸಿದರು.

ಪಂದ್ಯ ವೀಕ್ಷಿಸಿದ ಪಂತ್: ಕಾರು ಅಪಘಾತದಲ್ಲಿ ಗಾಯಗೊಂಡು ಚೇತರಿಸಿಕೊಂಡಿರುವ ಡೆಲ್ಲಿ ತಂಡದ ರಿಷಭ್ ಪಂತ್ ಅವರು ಪಂದ್ಯ ವೀಕ್ಷಿಸಿದರು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 162 (ಡೇವಿಡ್ ವಾರ್ನರ್ 37, ಸರ್ಫರಾಜ್ ಖಾನ್ 30, ಅಭಿಷೇಕ್ ಪೊರೆಲ್ 20, ಅಕ್ಷರ್ ಪಟೇಲ್ 36, ಮೊಹಮ್ಮದ್ ಶಮಿ 41ಕ್ಕೆ3, ಅಲ್ಜಾರಿ ಜೋಸೆಫ್ 29ಕ್ಕೆ2, ರಶೀದ್ ಖಾನ್ 31ಕ್ಕೆ3)
ಗುಜರಾತ್ ಟೈಟನ್ಸ್: 18.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 163 (ವೃದ್ಧಿಮಾನ್ ಸಹಾ 14, ಶುಭಮನ್ ಗಿಲ್ 14, ಸಾಯ್ ಸುದರ್ಶನ್ ಔಟಾಗದೆ 62, ವಿಜಯ್ ಶಂಕರ್ 29, ಡೇವಿಡ್ ಮಿಲ್ಲರ್ ಔಟಾಗದೆ 31, ಎನ್ರಿಕ್ ನಾರ್ಕಿಯಾ 39ಕ್ಕೆ 2, ಖಲೀಲ್ ಅಹ್ಮದ್ 38ಕ್ಕೆ 1, ಮಿಷೆಲ್ ಮಾರ್ಷ್ 24ಕ್ಕೆ 1) ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 6 ವಿಕೆಟ್ ಗೆಲುವು

ಬೌಲರ್‌ಗಳ ಮೇಲೆ ಧೋನಿ ಕಿಡಿ

ಚೆನ್ನೈ (ಪಿಟಿಐ): ಮಹೇಂದ್ರಸಿಂಗ್ ಧೋನಿ ತಮ್ಮ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬೌಲರ್‌ಗಳ ಮೇಲೆ ಅಸಮಾಧಾನಗೊಂಡಿದ್ದಾರೆ.

ಸೋಮವಾರ ಚೆಪಾಕ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಚೆನ್ನೈ 12 ರನ್‌ಗಳಿಂದ ಗೆದ್ದಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ಚೆನ್ನೈ ತಂಡವು 217 ರನ್‌ಗಳ ಗುರಿಯನ್ನು ಎದುರಾಳಿ ತಂಡಕ್ಕೆ ಕೊಟ್ಟಿತ್ತು.

ಆದರೆ ಆತಿಥೇಯ ತಂಡದ ಬೌಲರ್‌ಗಳು 13 ವೈಡ್ ಮತ್ತು ಮೂರು ನೋಬಾಲ್‌ಗಳನ್ನು ಹಾಕಿದರು. ಮಧ್ಯಮವೇಗಿಗಳಾದ ದೀಪಕ್ ಚಾಹರ್ ಐದು, ತುಷಾರ್ ದೇಶಪಾಂಡೆ ನಾಲ್ಕು ಮತ್ತು ರಾಜವರ್ಧನ್ ಹಂಗರಗೇಕರ್ ಮೂರು ವೈಡ್‌ಗಳನ್ನು ಹಾಕಿದ್ದರು. ಇದು ನಾಯಕ ಧೋನಿಯ ಅಸಮಾಧಾನಕ್ಕೆ ಕಾರಣವಾಗಿದೆ.

‘ಬೌಲರ್‌ಗಳು ನೋಬಾಲ್‌ಗಳನ್ನು ಹಾಕಬಾರದು ಮತ್ತು ವೈಡ್‌ಗಳೂ ಕಡಿಮೆಯಾಗಬೇಕು. ಇಲ್ಲದಿದ್ದರೆ ಅವರೆಲ್ಲರೂ ಮುಂದಿನ ಬಾರಿ ಹೊಸ ನಾಯಕನ ಅಡಿಯಲ್ಲಿ ಆಡಬೇಕಾಗುತ್ತದೆ’ ಎಂದು ಧೋನಿ ಪಂದ್ಯದ ನಂತರದ ಪತ್ರಿಕಾಗೋಷ್ಠಿಯಲ್ಲಿ ಖಾರವಾಗಿ ಹೇಳಿದರು.

ಚೆನ್ನೈನ ಕ್ರೀಡಾಂಗಣದಲ್ಲಿ ರನ್‌ಗಳ ಹೊಳೆ ಹರಿದಿದ್ದರ ಕುರಿತು ಪ್ರತಿಕ್ರಿಯಿಸಿದ ಧೋನಿ, ‘ದೊಡ್ಡ ಸ್ಕೋರ್‌ಗಳು ದಾಖಲಾದ ಅಮೋಘ ಪಂದ್ಯ ಇದು. ಇಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ರನ್‌ಗಳು ಹರಿಯುವುದಿಲ್ಲವೆಂಬ ಅನುಮಾನ ನಮಗಿತ್ತು. ಆದರೆ, ಹೌಸ್‌ಫುಲ್ ಆಗಿದ್ದ ಕ್ರೀಡಾಂಗಣದಲ್ಲಿ ನಡೆದ ಮೊದಲ ಪಂದ್ಯವು ಅದ್ಭುತವಾಗಿತ್ತು’ ಎಂದರು.

ಸಂಜು ಬಳಗಕ್ಕೆ ಶಿಖರ್ ಪಡೆ ಸವಾಲು

ಗುವಾಹಟಿಯಲ್ಲಿ ರಾಜಸ್ಥಾನ–ಪಂಜಾಬ್ ಹಣಾಹಣಿ

ಗುವಾಹಟಿ (ಪಿಟಿಐ): ಎರಡನೇ ಜಯದ ಮೇಲೆ ಕಣ್ಣಿಟ್ಟಿರುವ ರಾಜಸ್ಥಾನ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಬುಧವಾರ ಮುಖಾಮುಖಿಯಾಗಲಿವೆ.

ಎಲ್ಲ ವಿಭಾಗಗಳಲ್ಲಿಯೂ ಉತ್ತಮ ಆಟಗಾರರ ಸಂಯೋಜನೆಯನ್ನು ಹೊಂದಿರುವ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ಬಳಗವು ತನ್ನ ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಜಯಿಸಿತ್ತು. ಕಳೆದ ಬಾರಿಯ ರನ್ನರ್ಸ್ ಅಪ್ ತಂಡವಾಗಿರುವ ರಾಜಸ್ಥಾನದ ಪರ ಯಶಸ್ವಿ ಜೈಸ್ವಾಲ್, ಇಂಗ್ಲೆಂಡ್‌ನ ಜಾಸ್ ಬಟ್ಲರ್ ಹಾಗೂ ಸಂಜು ಅವರು ಅಬ್ಬರದ ಬ್ಯಾಟಿಂಗ್ ಮಾಡಿದ್ದರು.

ತಂಡದ ಸ್ಪಿನ್ನರ್ ಯಜುವೇಂದ್ರ ಚಾಹಲ್ (17ಕ್ಕೆ4) ಹಾಗೂ ನ್ಯೂಜಿಲೆಂಡ್‌ನ ಅನುಭವಿ ವೇಗಿ ಟ್ರೆಂಟ್ ಬೌಲ್ಟ್ (21ಕ್ಕೆ2) ಪರಿಣಾಮಕಾರಿ ಬೌಲಿಂಗ್ ಮಾಡಿದ್ದರು.

ರಾಜಸ್ಥಾನ ತಂಡವು ತನ್ನ ಆತಿಥ್ಯದ ಎರಡು ಪಂದ್ಯಗಳನ್ನು ಗುವಾಹಟಿಯಲ್ಲಿ ನಡೆಸುತ್ತಿದೆ. ಅಭಿಮಾನಿಗಳ ಬಳಗದ ವಿಸ್ತರಣೆಗಾಗಿ ಹಾಗೂ ಕ್ರಿಕೆಟ್‌ನತ್ತ ಈಶಾನ್ಯ ರಾಜ್ಯಗಳ ಜನರನ್ನು ಆಕರ್ಷಿಸಲು ರಾಜಸ್ಥಾನ ಈ ಪಂದ್ಯಗಳನ್ನು ಆಯೋಜಿಸುತ್ತಿದೆ.

ಅದೇ ಪಂಜಾಬ್ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ಡಕ್ವರ್ಥ್ –ಲೂಯಿಸ್ ನಿಯಮದನ್ವಯ 7 ರನ್‌ಗಳಿಂದ ಗೆದ್ದಿತ್ತು. ಶಿಖರ್ ಧವನ್ ನಾಯಕತ್ವದ ಪಂಜಾಬ್ ತಂಡದಲ್ಲಿರುವ ‘ದುಬಾರಿ’ ಮೌಲ್ಯದ ಆಲ್‌ರೌಂಡರ್ ಸ್ಯಾಮ್ ಕರನ್ (₹ 18.50 ಕೋಟಿ) ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ಜೋಡಿಯು ರಾಜಸ್ಥಾನ ತಂಡಕ್ಕೆ ಸವಾಲೊಡ್ಡುವ ಪ್ರಮುಖರು. ಅವರಿಗೆ ಜೊತೆ ನೀಡಲು ಎಡಗೈ ಮಧ್ಯಮವೇಗಿ ಅರ್ಷದೀಪ್ ಸಿಂಗ್ ಕೂಡ ಇದ್ದಾರೆ.

ಶಿಖರ್ ಧವನ್ –ಪಿಟಿಐ ಚಿತ್ರ

ತಂಡಗಳು: ರಾಜಸ್ಥಾನ ರಾಯಲ್ಸ್: ಸಂಜು ಸ್ಯಾಮ್ಸನ್ (ನಾಯಕ), ಅಬ್ದುಲ್ ಬಾಸಿತ್, ಮುರುಗನ್ ಅಶ್ವಿನ್, ಆರ್. ಅಶ್ವಿನ್, ಕೆ.ಎಂ. ಆಸಿಫ್, ಟ್ರೆಂಟ್ ಬೌಲ್ಟ್, ಜಾಸ್ ಬಟ್ಲರ್, ಕೆ.ಸಿ. ಕಾರ್ಯಪ್ಪ, ಯಜುವೇಂದ್ರ ಚಾಹಲ್, ಡೊನೊವನ್ ಫೆರೀರಾ, ಶಿಮ್ರಾನ್ ಹೆಟ್ಮೆಯರ್, ಜೇಸನ್ ಹೋಲ್ಡರ್, ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್, ಒಬೆದ್ ಮೆಕಾಯ್, ದೇವದತ್ತ ಪಡಿಕ್ಕಲ್, ರಿಯಾನ್ ಪರಾಗ್, ಕುನಾಲ್ ಸಿಂಗ್ ರಾಥೋಡ್, ಜೋ ರೂಟ್, ನವದೀಪ್ ಸೈನಿ, ಸಂದೀಪ್ ಶರ್ಮಾ, ಕುಲದೀಪ್ ಸೇನ್, ಆಕಾಶ್ ವಸಿಷ್ಠ, ಕುಲದೀಪ್ ಯಾದವ್, ಆ್ಯಡಂ ಜಂಪಾ.

ಪಂಜಾಬ್ ಕಿಂಗ್ಸ್: ಶಿಖರ್ ಧವನ್ (ನಾಯಕ), ಅರ್ಷದೀಪ್ ಸಿಂಗ್, ಬಲ್ತೇಜ್ ಸಿಂಗ್, ರಾಜ್ ಬಾವಾ, ರಾಹುಲ್ ಚಾಹರ್, ಸ್ಯಾಮ್ ಕರನ್, ರಿಷಿ ಧವನ್, ನೇಥನ್ ಎಲಿಸ್, ಹರಪ್ರೀತ್ ಬ್ರಾರ್, ಹರಪ್ರೀತ್ ಸಿಂಗ್, ವಿದ್ವತ್ ಕಾವೇರಪ್ಪ, ಲಿಯಾಮ್ ಲಿವಿಂಗ್‌ಸ್ಟೋನ್, ಮೋಹಿತ್ ರಾಠಿ, ಪ್ರಭಸಿಮ್ರನ್ ಸಿಂಗ್, ಕಗಿಸೊ ರಬಾಡ, ಭಾನುಕಾ ರಾಜಪಕ್ಸ, ಎಂ. ಶಾರೂಖ್ ಖಾನ್, ಜಿತೇಶ್ ಶರ್ಮಾ, ಶಿವಂ ಸಿಂಗ್, ಮ್ಯಾಥ್ಯೂ ಶಾರ್ಟ್, ಸಿಕಂದರ್ ರಝಾ, ಅಥರ್ವ ತೈಡೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್. ಜಿಯೋ ಸಿನಿಮಾ ಆ್ಯಪ್.

ನಿಷೇಧಿತ ಉದ್ದೀಪನ ಮದ್ದು ಸೇವನೆ ಸಾಬೀತು

ಸಂಜಿತಾಗೆ 4 ವರ್ಷ ನಿಷೇಧ

ನವದೆಹಲಿ (ಪಿಟಿಐ): ನಿಷೇಧಿತ ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾದ ಹಿನ್ನೆಲೆಯಲ್ಲಿ, ಎರಡು ಬಾರಿಯ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ವೇಟ್‌ಲಿಫ್ಟರ್ ಸಂಜಿತಾ ಚಾನು ಅವರಿಗೆ ನಾಲ್ಕು ವರ್ಷಗಳ ನಿಷೇಧ ಹೇರಲಾಗಿದೆ.

ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು (ನಾಡಾ), ಕಳೆದ ವರ್ಷದ ಸೆಪ್ಟೆಂಬರ್ 20ರಂದು ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದ ಸಂದರ್ಭದಲ್ಲಿ ಸಂಜಿತಾ ಅವರಿಂದ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಿತ್ತು.

ಮಣಿಪುರದ, 29 ವರ್ಷದ ಸಂಜಿತಾ ಅವರಿಗೆ ಕಳೆದ ವರ್ಷ ನವೆಂಬರ್ 12ರಂದು ತಾತ್ಕಾಲಿಕವಾಗಿ ನಿಷೇಧ ಹೇರಲಾಗಿತ್ತು. ಅಂದಿನಿಂದಲೇ ಅವರ ನಾಲ್ಕು ವರ್ಷಗಳ ನಿಷೇಧ ಶಿಕ್ಷೆ ಆರಂಭವಾಗಿದೆ.

ಸಂಜಿತಾ ಚಾನು

ನಿಷೇಧದ ಪರಿಣಾಮ ಸಂಜಿತಾ ಅವರು, ರಾಷ್ಟ್ರೀಯ ಕೂಟದಲ್ಲಿ ಗೆದ್ದ ಬೆಳ್ಳಿ ಪದಕವನ್ನು ಕಳೆದುಕೊಳ್ಳಲಿದ್ದಾರೆ.

2014ರ ಗ್ಲಾಸ್ಗೊ ಕಾಮನ್‌ವೆಲ್ತ್ ಕೂಟದ 48 ಕೆಜಿ ವಿಭಾಗದಲ್ಲಿ ಮತ್ತು 2018ರ ಗೋಲ್ಡ್‌ಕೋಸ್ಟ್ ಕೂಟದ 53 ಕೆಜಿ ವಿಭಾಗದಲ್ಲಿ ಸಂಜಿತಾ ಅವರು ಚಿನ್ನದ ಪದಕ ಜಯಿಸಿದ್ದರು.

ನಿಷೇಧದ ವಿರುದ್ಧ ಮೇಲ್ಮನವಿ ಸಲ್ಲಿಸಲು ಸಂಜಿತಾ ಅವರಿಗೆ 21 ದಿನಗಳ ಕಾಲಾವಕಾಶ ನೀಡಲಾಗಿದೆ.

2011ರ ಏಷ್ಯನ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಸಂಜಿತಾ, ಉದ್ದೀಪನ ಮದ್ದು ವಿವಾದಕ್ಕೆ ಸಿಲುಕಿರುವುದು ಇದು ಮೊದಲೇನಲ್ಲ. 2017ರಲ್ಲಿ ಅಮೆರಿಕದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ಗೂ ಮೊದಲು ಅನಬಾಲಿಕ್ ಸ್ಟಿರಾಯ್ಡ್ ಸೇವಿಸಿದ್ದು ಸಾಬೀತಾದ ಕಾರಣ ಅಂತರರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಫೆಡರೇಷನ್‌ನಿಂದ ನಿಷೇಧಕ್ಕೊಳಗಾಗಿದ್ದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	2	2	0	0	4	0.700
ರಾಜಸ್ಥಾನ	1	1	0	0	2	3.600
ಬೆಂಗಳೂರು	1	1	0	0	2	1.981
ಲಖನೌ	2	1	1	0	2	0.950
ಪಂಜಾಬ್	1	1	0	0	2	0.438
ಚೆನ್ನೈ	2	1	1	0	2	0.036
ಕೋಲ್ಕತ್ತ	1	0	1	0	0	-0.438
ಡೆಲ್ಲಿ	2	0	2	0	0	-1.703
ಮುಂಬೈ	1	0	1	0	0	-1.981
ಹೈದರಾಬಾದ್	1	0	1	0	0	-3.600

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ವುಡ್	ಲಖನೌ	8

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಋತುರಾಜ್	ಚೆನ್ನೈ	149

ರಜತ್, ಶ್ರೇಯಸ್ ಅಯ್ಯರ್ ‘ಔಟ್’

ನವದೆಹಲಿ/ಬೆಂಗಳೂರು (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ರಜತ್ ಪಾಟೀದಾರ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಶ್ರೇಯಸ್ ಅಯ್ಯರ್ ಅವರು ಈ ಬಾರಿಯ ಐಪಿಎಲ್ ಟೂರ್ನಿಯಿಂದ ಹೊರಗುಳಿದಿದ್ದಾರೆ.

ರಜತ್ ಅವರು ಹಿಮ್ಮಡಿ ಗಾಯದಿಂದ ಬಳಲುತ್ತಿದ್ದಾರೆ. 29 ವರ್ಷದ ಅವರು ಕಳೆದ ಆವೃತ್ತಿಯಲ್ಲಿ ಆರ್‌ಸಿಬಿ ಪರ ಅತ್ಯಧಿಕ ರನ್ ಗಳಿಸಿದ ಮೂರನೇ ಆಟಗಾರ ಎನಿಸಿಕೊಂಡಿದ್ದರು. ಎಂಟು ಪಂದ್ಯಗಳಿಂದ 333 ರನ್ ಕಲೆಹಾಕಿದ್ದರು. ಹೀಗಾಗಿ ಅವರ ಅನುಪಸ್ಥಿತಿ ತಂಡಕ್ಕೆ ದೊಡ್ಡ ಹಿನ್ನಡೆಯಾಗುವ ಸಾಧ್ಯತೆಯಿದೆ.

‘ದುರದೃಷ್ಟವಶಾತ್ ರಜತ್ ಅವರು ಟೂರ್ನಿಯಿಂದ ಹೊರಗುಳಿಯಲಿದ್ದಾರೆ. ಅವರು ಶೀಘ್ರ ಗುಣಮುಖರಾಗಲಿ. ರಜತ್ ಅವರ ಸ್ಥಾನಕ್ಕೆ ಇನ್ನೂ ಯಾರನ್ನೂ ಹೆಸರಿಸಿಲ್ಲ’ ಎಂದು ಆರ್‌ಸಿಬಿ ಫ್ರಾಂಚೈಸ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಶ್ರೇಯಸ್ ಅಯ್ಯರ್



ರಜತ್ ಪಾಟಿದಾರ್

ಡಬ್ಲ್ಯುಟಿಸಿ ಫೈನಲ್‌ಗೂ ಶ್ರೇಯಸ್ ಇಲ್ಲ: ಭಾರತ ತಂಡದ ಆಟಗಾರ ಶ್ರೇಯಸ್ ಅಯ್ಯರ್ ಬೆನ್ನುನೋವಿನ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿದ್ದು, ಸಂಪೂರ್ಣ ಐಪಿಎಲ್ ಹಾಗೂ ಜೂನ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ಗೆ ಲಭ್ಯರಿರುವುದಿಲ್ಲ.

‘ಐಪಿಎಲ್ ಟೂರ್ನಿಯಲ್ಲಿ ಕೋಲ್ಕತ್ತ ತಂಡದ ನಾಯಕರಾಗಿರುವ ಶ್ರೇಯಸ್ ಅವರು ಶಸ್ತ್ರಚಿಕಿತ್ಸೆಗಾಗಿ ಆಸ್ಟ್ರೇಲಿಯಾಕ್ಕೆ ತೆರಳಲಿದ್ದು, ಕನಿಷ್ಠ ಐದು ತಿಂಗಳು ಕ್ರಿಕೆಟ್‌ನಿಂದ ದೂರ ಉಳಿಯಬಹುದು’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಡಬ್ಲ್ಯುಟಿಸಿ ಫೈನಲ್ ಪಂದ್ಯವು ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವೆ ಜೂನ್ 7ರಿಂದ ಲಂಡನ್‌ನಲ್ಲಿ ನಡೆಯಲಿದೆ.

ಟೆಸ್ಟ್ ಕ್ರಿಕೆಟ್: ತೈಜುಲ್ ದಾಳಿಗೆ ಕುಸಿದ ಐರ್ಲೆಂಡ್

ಢಾಕಾ (ಎಎಫ್‌ಪಿ): ಎಡಗೈ ಸ್ಪಿನ್ನರ್ ತೈಜುಲ್ ಇಸ್ಲಾಂ (58ಕ್ಕೆ 5) ಅವರ ಚುರುಕಿನ ದಾಳಿಗೆ ಕುಸಿತ ಕಂಡ ಐರ್ಲೆಂಡ್ ತಂಡ, ಬಾಂಗ್ಲಾದೇಶ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಸಾಧಾರಣ ಮೊತ್ತ ಪೇರಿಸಿದೆ.

ಮೀರ್‌ಪುರದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನ ಮಂಗಳವಾರದ ಆಟದಲ್ಲಿ ಐರ್ಲೆಂಡ್ 214 ರನ್‌ಗಳಿಗೆ ಆಲೌಟಾಯಿತು.

ಆರಂಭಿಕ ಆಘಾತ ಅನುಭವಿಸಿರುವ ಆತಿಥೇಯ ತಂಡ ದಿನದಾಟದ ಅಂತ್ಯಕ್ಕೆ 2 ವಿಕೆಟ್ ನಷ್ಟಕ್ಕೆ 34 ರನ್ ಗಳಿಸಿದೆ. ಇನಿಂಗ್ಸ್ ಹಿನ್ನಡೆ ತಪ್ಪಿಸಲು ಇನ್ನೂ 180 ರನ್ ಗಳಿಸಬೇಕಿದೆ.

ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಐರ್ಲೆಂಡ್ ತಂಡ ತೈಜುಲ್ ಅವರ ಕೈಚಳಕದ ಮುಂದೆ ಪರದಾಟ ನಡೆಸಿತು. ಹ್ಯಾರಿ ಟೆಕ್ಟರ್ (50) ಅರ್ಧಶತಕ ಗಳಿಸಿದರು. ಇತರ ಬ್ಯಾಟರ್‌ಗಳು ವಿಫಲರಾದರು.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್ ಮೊದಲ ಇನಿಂಗ್ಸ್ 77.2 ಓವರ್‌ಗಳಲ್ಲಿ 214 (ಹ್ಯಾರಿ ಟೆಕ್ಟರ್ 50, ಕರ್ಟಿಸ್ ಕ್ಯಾಂಫರ್ 34, ಲೋರ್ಕನ್ ಟಕರ್ 37, ಮಾರ್ಕ್ ಅಡೇರ್ 32, ತೈಜುಲ್ ಇಸ್ಲಾಂ 58ಕ್ಕೆ 5, ಮೆಹಿದಿ ಹಸನ್ ಮಿರಾಜ್ 43ಕ್ಕೆ 2, ಎಬಾದತ್ ಹೊಸೇನ್ 54ಕ್ಕೆ 2) ಬಾಂಗ್ಲಾದೇಶ ಮೊದಲ ಇನಿಂಗ್ಸ್ 10 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 34

ಬಾಕ್ಸರ್ ಅಮೀರ್ ಖಾನ್‌ಗೆ ನಿಷೇಧ

ಲಂಡನ್ (ಎಎಫ್‌ಪಿ): ನಿಷೇಧಿತ ಮದ್ದು ಸೇವಿಸಿದ ಕಾರಣ, ಲೈಟ್ ವೆಲ್ಟರ್‌ವೇಟ್ ವಿಭಾಗದ ಮಾಜಿ ವಿಶ್ವ ಚಾಂಪಿಯನ್ ಬಾಕ್ಸರ್, ಬ್ರಿಟನ್‌ನ ಅಮೀರ್ ಖಾನ್ ಅವರ ಮೇಲೆ ಎರಡು ವರ್ಷಗಳ ನಿಷೇಧ ಹೇರಲಾಗಿದೆ. ಇಂಗ್ಲೆಂಡ್‌ನ ಉದ್ದೀಪನ ಮದ್ದು ತಡೆ ಘಟಕ ಮಂಗಳವಾರ ಈ ವಿಷಯ ತಿಳಿಸಿದೆ.

ಅಮೀರ್

36 ವರ್ಷದ ಅಮೀರ್ ಅವರು, 2022ರ ಫೆಬ್ರುವರಿಯಲ್ಲಿ ಕೆಲ್ ಬ್ರೂಕ್ ವಿರುದ್ಧದ ಬೌಟ್‌ನಲ್ಲಿ ಸೋತಿದ್ದರು. ಅದಾದ ಬಳಿಕ ಮದ್ದು ಸೇವಿಸಿದ್ದು ಪತ್ತೆಯಾಗಿತ್ತು.

ಕಳೆದ ವರ್ಷ ಮೇ ತಿಂಗಳಲ್ಲಿ ನಿವೃತ್ತಿ ಹೇಳಿದ್ದ ಅವರು, ಉದ್ದೀಪನ ಮದ್ದು ಸೇವನೆ ನಿಯಮ ಉಲ್ಲಂಘಿಸಿದ್ದನ್ನು ಒಪ್ಪಿಕೊಂಡಿದ್ದಾರೆ.

ತಮ್ಮ 17ನೇ ವಯಸ್ಸಿನಲ್ಲಿ 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಅಮೀರ್ ಬ್ರಿಟನ್‌ನಲ್ಲಿ ಮನೆಮಾತಾಗಿದ್ದರು. 2009ರಲ್ಲಿ ಡಬ್ಲ್ಯುಬಿಎ ಲೈಟ್ ವೆಲ್ಟರ್‌ವೇಟ್ ವಿಭಾಗದ ಚಾಂಪಿಯನ್ ಆಗಿದ್ದರು.

ಫುಟ್‌ಬಾಲ್: ಕರ್ನಾಟಕ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವ್ಯಾ ಫಕ್ಕೀರಸ್ವಾಮಿ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಕರ್ನಾಟಕ ತಂಡವು ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ನಾಲ್ಕನೇ ಗುಂಪಿನ ಹಣಾಹಣಿಯಲ್ಲಿ ಮಂಗಳವಾರ ಕರ್ನಾಟಕ 8–0ಯಿಂದ ಬಿಹಾರ ತಂಡವನ್ನು ಪರಾಭವಗೊಳಿಸಿತು. ಕಾವ್ಯಾ 27, 51 ಮತ್ತು 58ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದರು.

ಆತಿಥೇಯ ತಂಡದ ಸೋನಿಯಾ ಮರಕ್ (44 ಮತ್ತು 64ನೇ ನಿ.) ಎರಡು ಗೋಲು ದಾಖಲಿಸಿ ಮಿಂಚಿದರು. ತಾರಾ ಆನಂದ್ (28ನೇ ನಿ.), ಮೈತ್ರೇಯಿ ಪಾಲಸಮುದ್ರಂ (42ನೇ ನಿ.) ಮತ್ತು ಅರುಣಾ ಬಾಗ್ (45 + 3ನೇ ನಿ.) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಮತ್ತೊಂದು ಪಂದ್ಯದಲ್ಲಿ ಮಣಿಪುರ 3–2ರಿಂದ ಅಸ್ಸಾಂ ತಂಡವನ್ನು ಮಣಿಸಿತು. ವಿಜೇತ ತಂಡಕ್ಕಾಗಿ ಮೊಯಿರಂಗದೆಮ್ ಮಂದಾಕಿನಿ ದೇವಿ (15ನೇ ನಿ.), ಸಲಾಮ್ ರೀನಾ ರಾಯ್ ದೇವಿ (61ನೇ ನಿ.) ಮತ್ತು ಎಸ್. ಲಿಂಡಾ ಕೋಮ್ (89ನೇ ನಿ.) ಗೋಲು ಹೊಡೆದರು. ಅಸ್ಸಾಂ ಪರ ನಿಂಗ್‌ತೊಜಮ್ ರಾಣಿ ದೇವಿ (30ನೇ ನಿ.) ಮತ್ತು ಯುಮ್‌ಕಾಯಿಬಮ್ ಹೇಮಲತಾ ದೇವಿ (36ನೇ ನಿ.) ಗೋಲು ಗಳಿಸಿದರು.

ಕರ್ನಾಟಕದ ಕಾವ್ಯಾ ಫಕ್ಕೀರಸ್ವಾಮಿ (ಬಲ) ಮತ್ತು ಬಿಹಾರ ತಂಡದ ಆರತಿ ಕುಮಾರಿ ನಡುವೆ ಪೈಪೋಟಿ– ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಬುಧವಾರ ವಿರಾಮದ ದಿನವಾಗಿದೆ. ಗುರುವಾರ ನಡೆಯುವ ಪಂದ್ಯಗಳಲ್ಲಿ ಕರ್ನಾಟಕ–ಮಣಿಪುರ, ಗುಜರಾತ್–ಅಸ್ಸಾಂ ಮುಖಾಮುಖಿಯಾಗಲಿವೆ.

ಆ್ಯಷಸ್ ಸರಣಿಗೆ ಮೆನನ್ ಅಂಪೈರ್

ನವದೆಹಲಿ (ಪಿಟಿಐ): ಭಾರತದ ನಿತಿನ್ ಮೆನನ್ ಅವರಿಗೆ ಆ್ಯಷಸ್ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಅಂಪೈರಿಂಗ್ ಕಾರ್ಯನಿರ್ವಹಿಸುವ ಅವಕಾಶ ಲಭಿಸಿದೆ.

ಇಂದೋರ್‌ನ 39 ವರ್ಷದ ನಿತಿನ್ ಅವರ ಬಹುದಿನಗಳ ಕನಸು ಈಡೇರಿದಂತಾಗಲಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ಯಾನಲ್‌ನಲ್ಲಿರುವ ನಿತಿನ್ ಜೂನ್ –ಜುಲೈನಲ್ಲಿ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಕಾರ್ಯನಿರ್ವಹಿಸುವರು.

ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ನಡುವಣ ನಡೆಯುವ ಈ ಸರಣಿಯ ಮೂರು ಮತ್ತು ನಾಲ್ಕನೇ ಪಂದ್ಯಗಳಲ್ಲಿ ಅವರು ಫೀಲ್ಡ್ ಅಂಪೈರ್ ಆಗಲಿರುವರು. ಈ ಪಂದ್ಯಗಳು ಕ್ರಮವಾಗಿ ಲೀಡ್ಸ್ ಹಾಗೂ ಮ್ಯಾಂಚೆಸ್ಟರ್ ನಲ್ಲಿ ನಡೆಯಲಿವೆ.

ಸರಣಿಯ ಕೊನೆಯ ಪಂದ್ಯವು ಲಂಡನ್‌ನ ಓವಲ್‌ನಲ್ಲಿ ನಡೆಯಲಿದ್ದು, ನಿತಿನ್ ಟಿ.ವಿ. ಅಂಪೈರ್ ಆಗಿ ಕಾರ್ಯನಿರ್ವಹಿಸುವರು ಎಂದು ಐಸಿಸಿ ತಿಳಿಸಿದೆ.

ಕುಲ್ಲೇಟಿರ ಮತ್ತು ಪೆಮ್ಮಂಡ ತಂಡಗಳ ನಡುವಿನ ಸೆಣಸಾಟ

ನೆಲ್ಲಮಕ್ಕಡ ತಂಡಕ್ಕೆ ಗೆಲುವು

ನಾಪೋಕ್ಲು (ಕೊಡಗು ಜಿಲ್ಲೆ): ನೆಲ್ಲಮಕ್ಕಡ ಸೋಮಯ್ಯ ಗಳಿಸಿದ ಮೂರು ಗೋಲುಗಳ ನೆರವಿನೊಂದಿಗೆ ನೆಲ್ಲಮಕ್ಕಡ ತಂಡ, ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬೊವ್ವೇರಿಯಂಡ ತಂಡದ ಮೇಲೆ 8–0 ಗೋಲುಗಳ ಭರ್ಜರಿ ಜಯಗಳಿಸಿತು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಈ ಪಂದ್ಯದಲ್ಲಿ ಆಕಾಶ್, ಅಯ್ಯಪ್ಪ, ಪ್ರತೀಕ್ ಪೂವಣ್ಣ ,ಮುತ್ತಪ್ಪ, ಮ್ಯಾಕ್ ಮೊಣ್ಣಪ್ಪ ಅವರು ನೆಲ್ಲಮಕ್ಕಡ ತಂಡದ ಉಳಿದ ಗೋಲುಗಳನ್ನು ಗಳಿಸಿದರು.

ಇತರ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಕುಲ್ಲೇಟಿರ, ಕಂಬೀರಂಡ, ಪುದಿಯೊಕ್ಕಡ ತಂಡಗಳು ಜಯಗಳಿಸಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

ಪುದಿಯೊಕ್ಕಡ ತಂಡವು 3–2ರಲ್ಲಿ ಚೌರೀರ ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಸೂರಜ್ ಬೋಪಣ್ಣ, ಅಂತರರಾಷ್ಟ್ರೀಯ ಆಟಗಾರ ಪ್ರಧಾನ್ ಸೋಮಣ್ಣ ಮತ್ತು ವಿಪಿನ್ ಸೋಮಣ್ಣ ಗೋಲುಗಳನ್ನು ಗಳಿಸಿದರು. ಚೌರೀರ ತಂಡಕ್ಕೆ ಹರ್ಷ ಮತ್ತು ಪೊನ್ನಣ್ಣ ಗೋಲು ತಂದುಕೊಟ್ಟರು.

ಕುಲ್ಲೇಟಿರ ತಂಡ 4–2 ಗೋಲುಗಳಿಂದ ಪೆಮ್ಮಂಡ ತಂಡದ ವಿರುದ್ಧ ಜಯ ಸಾಧಿಸಿತು.

ಟಿವಿಎಸ್ ತಂಡ ‘ಕ್ಲೀನ್‌ಸ್ವೀಪ್’ ಸಾಧನೆ

ಕೊಯಮತ್ತೂರು: ಪೆಟ್ರೊನಾಸ್ ಟಿವಿಎಸ್ ತಂಡದ ಸ್ಪರ್ಧಿಗಳು 2023ರ ಸಾಲಿನ ಇಂಡಿಯನ್ ನ್ಯಾಷನಲ್ ಸೂಪರ್‌ಕ್ರಾಸ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ರೇಸ್‌ನ ಎಲ್ಲ ಮೂರೂ ವಿಭಾಗಗಳಲ್ಲಿ ಚಾಂಪಿಯನ್ ಆಗಿ ‘ಕ್ಲೀನ್‌ಸ್ವೀಪ್’ ಸಾಧನೆ ಮಾಡಿದ್ದಾರೆ.

ಕೊಯಮತ್ತೂರಿನಲ್ಲಿ ಶನಿವಾರ ಮತ್ತು ಭಾನುವಾರ ನಡೆದ ರೇಸ್‌ನಲ್ಲಿ ಋಗ್ವೇದ್ ಬಿ. ಅವರು 500 ಸಿಸಿ ವರೆಗಿನ ಬೈಕ್‌ಗಳ ಫಾರಿನ್ ಓಪನ್ ಕ್ಲಾಸ್ ವಿಭಾಗದಲ್ಲಿ ಅಗ್ರಸ್ಥಾನ ಪಡೆದರು. ಅವರು ‘ಟಿಆರ್ 300 ಎಕ್ಸ್’ ಬೈಕ್ ರೈಡ್ ಮಾಡಿದ್ದರು. ಟಿವಿಎಸ್ ತಂಡದವರೇ ಆದ ವಿ.ಪ್ರಜ್ವಲ್ ಮತ್ತು ಇಕ್‌ಶಾನ್ ಶಾನ್‌ಭಾಗ್ ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

260 ಸಿಸಿ ವರೆಗಿನ ಇಂಡಿಯನ್ ಎಕ್ಸ್‌ಪರ್ಟ್ಸ್ ವಿಭಾಗದಲ್ಲಿ ಬಂತೆಯಿಲಾಂಗ್ ಜೈರ್ವಾ ಚಾಂಪಿಯನ್ ಆದರೆ, ನೋವಿಸ್ ವಿಭಾಗದಲ್ಲಿ ಡಿ.ಸಚಿನ್ ಅಗ್ರಸ್ಥಾನ ಪಡೆದರು. ಇವರಿಬ್ಬರೂ ‘ಟಿವಿಎಸ್ ಅಪಾಚೆ ಆರ್‌ಟಿಆರ್ 200’ ಬೈಕ್‌ನಲ್ಲಿ ಸ್ಪರ್ಧಿಸಿದ್ದರು ಎಂದು ಟಿವಿಎಸ್ ತಂಡದ ಪ್ರಕಟಣೆ ತಿಳಿಸಿದೆ.

ಫುಟ್‌ಬಾಲ್: ಕಿರ್ಗಿಸ್ತಾನ ಮಣಿಸಿದ ಭಾರತ

ಬಿಷ್ಕೆಕ್, ಕಿರ್ಗಿಸ್ತಾನ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡದವರು ಎಎಫ್‌ಸಿ ಒಲಿಂಪಿಕ್ ಅರ್ಹತಾ ಹಂತದ ರೌಂಡ್–1 ಪಂದ್ಯದಲ್ಲಿ ಮಂಗಳವಾರ 5–0 ಗೋಲುಗಳಿಂದ ಕಿರ್ಗಿಸ್ತಾನ ತಂಡವನ್ನು ಮಣಿಸಿದರು.

ಭಾರತ ಮಹಿಳಾ ತಂಡಕ್ಕೆ ಈ ವರ್ಷ ದೊರೆತ ಮೊದಲ ಜಯ ಇದು. ಈ ಹಿಂದೆ ಐದು ಪಂದ್ಯಗಳನ್ನು ಆಡಿದ್ದರೂ, ಗೆಲುವು ಲಭಿಸಿರಲಿಲ್ಲ.

ಕೋಲ್ಕತ ರೇಸ್

ಥೌಸಂಡ್ ವರ್ಡ್ಸ್ ಗೆಲ್ಲುವ ನಿರೀಕ್ಷೆ

ಡೇರ್ ಡು ಡ್ರೀಮ್ ಹ್ಯಾಂಡಿಕ್ಯಾಪ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಥೌಸಂಡ್ ವರ್ಡ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಲ್ಗೋಸ್ 2, ಅವರ್ ಚಾಯ್ಸ್ 5, ರೀಗಾನ್ 1
2ನೇ ರೇಸ್: ಮ್ಯಾಜಿಕ್ ಮೊಮೆಂಟ್ 2, ಯುವಿ 3, ಐಲ್ಯಾಂಡ್ ಲಾಸ್ 4
3ನೇ ರೇಸ್: ಬಿಗ್ ಬ್ರೌನ್ 5, ಮಾರ್ಕ್ ಒನ್ 1, ಅಫ್ರೆನ್ 4
4ನೇ ರೇಸ್: ಲಾ ಡಾಮಿನೇಟ್ 1, ಜಮೈಕ 6, ಟ್ವೆಂಟಿ ಸಿಕ್ಸ್ ಬ್ಲ್ಯಾಕ್ 2
5ನೇ ರೇಸ್: ಫ್ರೀ ಸ್ಪಿರಿಟೆಡ್ 8, ಸ್ವಿಫ್ಟ್ ಲೇಡಿ 5, ಟೈಮ್ 1
6ನೇ ರೇಸ್: ಥೌಸಂಡ್ ವರ್ಡ್ಸ್ 5, ಪೆಪ್ಪರ್ 1, ಮಾರ್ನಿಂಗ್ ಸ್ಟಾರ್ 2
7ನೇ ರೇಸ್: ರೀಜೆನ್ಸಿ ಗೋಲ್ಡ್ 8, ಸಿನ್ನರ್ 5, ಮಕ್ತೂಬ್ 1
8ನೇ ರೇಸ್: ಪ್ರಾಸ್ಪರಸ್ ಪ್ರಿನ್ಸ್ 5, ಬ್ಯಾಂಕ್ಸಿ 2, ಗೋಸ್ಟ್ 1

ಉತ್ತಮ ಬೆಟ್: ಲಾ ಡಾಮಿನೇಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8